
ಗ್ರಾಮ ಸಂಸ್ಕೃತಿ ಮಾಲೆ - ೫

ಕೊಪ್ಪಳ ಜಿಲ್ಲೆಯ ಜಾತ್ರೆಗಳು

ಪ್ರೊ. ಎಸ್. ಎಸ್. ಹಿರೇಮಠ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಗ್ರಾಮ ಸಂಸ್ಕೃತಿ ಮಾಲೆ

ಕೊಪ್ಪಳ ಜಿಲ್ಲೆಯ ಜಾತ್ರೆಗಳು

ಪ್ರೊ. ಎಸ್. ಎಸ್. ಹಿರೇಮಠ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು - ೧೮

KOPPALA JILLEYA JATHREGALU : **(Car festivals of Koppala District)** by Prof. Sri S.S. Hirematt, A.D.B. College, Harapanahhally, Published by the Administrative Officer, Pustaka Pradhikara (Kannada Book Authority), Pampa Mahakavi Road, Chamarajpet, Bangalore - 560018

Pages : xxvi + 104

ಮೊದಲನೆಯ ಮುದ್ರಣ : 2000

ISBN : 81-7713-045-5

ಬೆಲೆ : ರೂ. 40/-

ಮುಖಪುಟ ವಿನ್ಯಾಸ : ಕೆ. ಕೆ. ಮಕಾಳಿ

ಮುದ್ರಣ :
ಶ್ರೀ ವೆಂಕಟೇಶ್ವರ ಪ್ರಿಂಟರ್ಸ್
ಕೆಂಪೇಗೌಡನಗರ, ಬೆಂಗಳೂರು - 19
✆ : 6606088

ಮುನ್ನುಡಿ

ಭಾರತ ದೇಶ ಬಹು ಅರ್ಥಗಳಲ್ಲಿ ಗ್ರಾಮೀಣ ಭಾರತ ಎಂಬ ಹೆಸರಿಗೆ ಅನ್ವರ್ಥವಾಗಿದೆ. ಭಾರತದ ಪ್ರಗತಿ ಮತ್ತು ಅಭಿವೃದ್ಧಿಗಳು ಮುಖ್ಯವಾಗಿ ಇಲ್ಲಿಯ ಹಳ್ಳಿಗಳ ಪ್ರಗತಿ ಮತ್ತು ಅಭಿವೃದ್ಧಿಯನ್ನೇ ಅವಲಂಬಿಸಿವೆ. ಶೇಕಡ ೭೦ ಕ್ಕಿಂತ ಹೆಚ್ಚು ಜನ ಗ್ರಾಮಾಂತರ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ. ಆದರೆ ಆದಿಮ ಕಾಲದ ಗ್ರಾಮೀಣ ಜೀವನ ಪರಿಸ್ಥಿತಿಯನ್ನು ಇತಿಹಾಸದ ದಾರಿಯಲ್ಲಿ ಹಿನ್ನಡೆದು ಅವಲೋಕಿಸಿದಾಗ ಈ ಜೀವನ ಸಂಪೂರ್ಣವಾಗಿ ಸ್ವತಂತ್ರವೂ, ಸ್ವಾವಲಂಬನಶೀಲವೂ ಆಗಿತ್ತೆಂಬುದು ಮನವರಿಕೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಬಹು ಮಟ್ಟಿಗೆ ಸ್ವತಂತ್ರ ಘಟಕಗಳೇ ಆಗಿದ್ದ ಗ್ರಾಮಗಳು ತಮಗೆ ಅಗತ್ಯವಾದ ಆಹಾರ ಬೆಳೆಯುವ ಭೂಮಿಯನ್ನು, ನೀರು ದೊರೆಯುವ ನೆಲೆಯನ್ನು, ಸಹಜವಾಗಿ ವಾಸಿಸಲು ಅನುಕೂಲಕರವಾದ ಪರಿಸರವನ್ನು ಹುಡುಕಿಕೊಂಡು ಅಲೆದಾಡುತ್ತ ಕೊನೆಗೊಮ್ಮೆ ಸ್ಥಾಯಿಯಾಗಿ ನೆಲೆ ನಿಂತವು. ಅಲ್ಲಿಯ ಭೂಮಿ, ನೀರು, ಗಾಳಿಗಳಿಗೆ ಅನುಸಾರವಾಗಿ ಆಹಾರವನ್ನು ಬೆಳೆಯುತ್ತಾ, ತಮಗೆ ವಾಸಿಸಲು ಅಗತ್ಯವಾದ ವಸತಿಗಳನ್ನು ನಿರ್ಮಿಸಿಕೊಳ್ಳುತ್ತಾ, ತಮ್ಮ ದೈನಂದಿನ ಆಗು-ಹೋಗುಗಳಿಗೆ ಅನಿವಾರ್ಯವಾದ ಕೌಟುಂಬಿಕ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾ, ತಮಗೆ ಆಧಾರವಾಗುವ ನಿಸರ್ಗವನ್ನು ಅದರ ಬಹುಮುಖಗಳಲ್ಲಿ ಆರಾಧಿಸುತ್ತಾ ಬಂದು, ವಿಶಿಷ್ಟವಾದ ಜೀವನ ಪದ್ಧತಿಯನ್ನು ರೂಢಿಸಿಕೊಂಡವು. ತಮ್ಮ ದೈನಂದಿನ ಬದುಕನ್ನು ರೂಪಿಸುವ ನಿಸರ್ಗ ಶಕ್ತಿಗಳನ್ನು ದೈವಗಳೆಂದು ಆರಾಧಿಸುತ್ತಾ ಪ್ರತೀಕಗಳನ್ನು ಕಲ್ಪಿಸಿಕೊಂಡರು. ಅವುಗಳನ್ನು ಪೂಜಿಸುವ ವಿಧಿ-ವಿಧಾನಗಳನ್ನು ಅನುಭವದ ಆಧಾರದ ಮೇಲೆ ಸೃಷ್ಟಿಸಿಕೊಂಡರು. ಕೃಷಿಗೆ ಮತ್ತು ಆಹಾರಕ್ಕೆ ಅಗತ್ಯವಾದ ಸಾಧನಗಳನ್ನು ಹಂತ-ಹಂತವಾಗಿ ನಿರ್ಮಿಸಿಕೊಂಡರು. ಮುಖ್ಯವಾಗಿ ಮಾಂಸವೇ ಆಹಾರದ ಪ್ರಮುಖ ಭಾಗವಾಗಿದ್ದ ಕಾಲದಲ್ಲಿ ಪ್ರಾಣಿಗಳ ಬೇಟೆಗೆ ಅಗತ್ಯವಾದ ಉಪಕರಣಗಳನ್ನು ಪ್ರಾಯೋಗಿಕ ಆಧಾರದಲ್ಲಿ ರೂಢಿಸಿಕೊಂಡರು. ಒಂದೆಡೆ ನೆಲೆಸಿದ ಹೆಣ್ಣು-ಗಂಡುಗಳ ಕಾರಣದಿಂದ ಅಂತಃ ಕಲಹ ಆರಂಭವಾಗದಂತೆ ತಮ್ಮ ತಮ್ಮಲ್ಲೇ ಕೆಲವು ಒಡಂಬಡಿಕೆಗಳನ್ನು ಮಾಡಿಕೊಂಡರು. ಮಳೆ,

ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು ವಾತಾವರಣಕ್ಕನು ಗುಣವಾದ ವಸತಿಗಳ ನಿರ್ಮಾಣ ಆರಂಭವಾಗಿ ಕಾಲಕ್ರಮೇಣ ಅವುಗಳಲ್ಲಿ ಸೌಂದರ್ಯ ದೃಷ್ಟಿಯೂ ನೆಲೆಗೊಂಡಿತು. ಸಮಾನ ವೃತ್ತಿ, ಸಮಾನ ಮನಸ್ಸು, ಸಮಾನ ಅಭಿರುಚಿಗಳಿಂದ ಕೂಡಿದ ಜನ ಪ್ರತ್ಯೇಕ ಪ್ರತ್ಯೇಕ ಗುಂಪುಗಳಾದರು. ಆ ಗುಂಪುಗಳಿಗೆ ಸಮಾನವಾದ ನಂಬಿಕೆಗಳೂ, ಆಚರಣೆಗಳೂ ಚಾಲ್ತಿಗೆ ಬಂದವು. ಹೀಗೆಯೇ ಜೀವನದ ಸಂಕಷ್ಟಗಳನ್ನು ಮರೆಯಲು ಮನಸ್ಸಿಗೆ ಮತ್ತು ಅನುಭವಕ್ಕೆ ಸಹಜವಾದ ಹಾಡು, ಕಥೆ, ಚಿತ್ರ, ಅಲಂಕಾರ ಮುಂತಾದವು ರೂಪುಗೊಂಡವು, ಎಲ್ಲ ಒಟ್ಟುಗೂಡಿ ಆನಂದಿಸುವಂಥ ಜಾತ್ರೆಗಳು, ಸಂತೆಗಳು, ಹಬ್ಬ ಹರಿದಿನಗಳು ಸಾಮಾಜಿಕ ಚಿಂತನೆ ಮತ್ತು ಕ್ರಿಯೆಗಳ ಫಲವಾಗಿ ಮೂಡಿ ಬಂದವು. ಮಣ್ಣು, ನೀರು, ಆಕಾಶಗಳನ್ನು ಆಧರಿಸಿದ ನಂಬಿಕೆಗಳು ಸುದೀರ್ಘ ಜೀವನದ ಫಲವಾಗಿ ರೂಢ ಮೂಲವಾದವು. ಮೊದ-ಮೊದಲು ಕೇವಲ ಹೊಟ್ಟೆಯ ಬವಣೆಯನ್ನು ನೀಗಲು ಆರಂಭವಾದ ಈ ಪ್ರಯತ್ನ ಮತ್ತು ಪ್ರಯೋಗಗಳು ಬರ-ಬರುತ್ತಾ ಸುಖ ಜೀವನದ ಮತ್ತು ಸಂತೋಷದ ಹಾದಿಯನ್ನು ಸ್ವಾಭಾವಿಕವಾಗಿಯೇ ನಿರ್ಮಿಸತೊಡಗಿದವು. ಆದಿಮ ತಲೆಮಾರಿನ ಈ ಜೀವನ ಪದ್ಧತಿಯ ಬಹುಮುಖ್ಯ ಲಕ್ಷಣಗಳನ್ನೆಲ್ಲ ಅನಂತರದ ತಲೆಮಾರುಗಳು ಅನುಸರಿಸುತ್ತಾ ಮತ್ತು ಅಭಿವೃದ್ಧಿ ಪಡಿಸುತ್ತಾ ಬಂದವು. ವಾಸ್ತವಪ್ರಜ್ಞೆಯ ಜೊತೆಗೆ ಸೌಂದರ್ಯಪ್ರಜ್ಞೆಗಳು ಬೆಳೆದು ಬಗೆ-ಬಗೆಯ ಕಲೆಗಳ ಅವಿಷ್ಕಾರವೂ ಆಯಿತು. ಹೀಗಾಗಿ ಜೀವನದಿಂದ ಹುಟ್ಟಿದ ಮತ್ತು ಜೀವನಕ್ಕೆ ಪೋಷಕವಾದ ಈ ಎಲ್ಲಾ ಪದ್ಧತಿಗಳು ದೀರ್ಘ ಕಾಲದ ಆಚರಣೆಯ ಫಲವಾಗಿ ಸಂಸ್ಕೃತಿ ಎನಿಸಿಕೊಂಡವು. ಈ ಎಲ್ಲಾ ಸಂಸ್ಕೃತಿಯ ಮೂಲ ಪ್ರಜ್ಞೆ, ಮೂಲ ಸಾಮಗ್ರಿ ಮತ್ತು ಮೂಲ ಚಿಂತನೆ ಆ ಪರಿಸರದಿಂದ ಜನ್ಯವಾದವುಗಳೇ ಆಗಿದ್ದವು; ದೇಶೀಯ ಸಂಸ್ಕೃತಿ ಎನಿಸಿಕೊಂಡವು. ಈ ಬಹುಮುಖ ಸಂಸ್ಕೃತಿಗಳು ಕೆಲವೊಮ್ಮೆ ಪ್ರತ್ಯೇಕವಾಗಿ ಮತ್ತೆ ಕೆಲವೊಮ್ಮೆ ಸಂಯುಕ್ತವಾಗಿ ಅಖಂಡವಾಗಿ ಅನುಷ್ಠಾನದಲ್ಲಿ ಕಾಣಿಸಿಕೊಂಡವು. ಆದ್ದರಿಂದ ಈ ಸಂಸ್ಕೃತಿಗಳ ವ್ಯಾಪ್ತಿಗೆ ಅನುಸಾರವಾಗಿ ವ್ಯಾಪಕ ಸಂಸ್ಕೃತಿ ಮತ್ತು ಅವ್ಯಾಪಕ ಸಂಸ್ಕೃತಿಗಳು ರೂಪು ತಳೆದವು. ಈ ಎಲ್ಲಾ ಸಂಸ್ಕೃತಿಗಳ ಮುಖ್ಯ ಉದ್ದೇಶ ಜೀವನ ಸಂತೃಪ್ತಿ, ಜೀವನ ಸಮೃದ್ಧಿ ಮತ್ತು ಜೀವನಶಾಂತಿಗಳೇ ಆಗಿದ್ದವು.

ಆದರೆ ಆರ್ಯರ ಆಗಮನವಾದ ನಂತರ ಈ ಮೂಲ ಸಂಸ್ಕೃತಿಗಳ ಮೇಲೆ ಆರ್ಯ ಸಂಸ್ಕೃತಿಯ ಆಕ್ರಮಣ ಮತ್ತು ಸಂಕ್ರಮಣಗಳಾದವು. ಈ ದೇಶಕ್ಕೆ ತಂಡೋಪ-ತಂಡವಾಗಿ ಬಂದ ಇತರ ಸಂಸ್ಕೃತಿಗಳ ಪ್ರಭಾವವೂ ಈ ಗ್ರಾಮೀಣ ಸಂಸ್ಕೃತಿಯ ಮೇಲೆ ದಟ್ಟವಾಗಿ ಆಗ ತೊಡಗಿತು. ಅಕ್ಷರ ಶಿಕ್ಷಣ, ನಾಗರಿಕತೆ ಮತ್ತು ವಿಜ್ಞಾನದ ಪ್ರಗತಿ ಈ ಮೂಲ ಜನಾಂಗಗಳಲ್ಲ ಮತ್ತು ಸಂಸ್ಕೃತಿಗಳಲ್ಲಿ ಹಲವು ಪಲ್ಲಟಗಳನ್ನು ಮತ್ತು ಪರಿವರ್ತನೆಗಳನ್ನು ತಂದವು. ಗ್ರಾಮೀಣವಾದ ಮೂಲ ಸಂಸ್ಕೃತಿ ಅಜ್ಞಾನ ಜನ್ಯವಾದುದು ಮತ್ತು ಪ್ರಗತಿ ವಿರೋಧಿಯಾದುದು ಎಂಬ ಭಾವನೆ ಬಲಿಯಿತು; ಅವುಗಳನ್ನು ಬಿಟ್ಟುಕೊಡುವುದೇ, ದಾಟುವುದೇ ನಿಜವಾದ ನಾಗರಿಕತೆ

ಎಂಬ ಭ್ರಮೆ ಆವರಿಸಿತು. ಈ ಸ್ಥಿತಿಯಲ್ಲಿ ಗ್ರಾಮಗಳಲ್ಲಿ ಜನ್ಮ ತಳೆದು ಗ್ರಾಮ ಜೀವನಕ್ಕೆ ಸಂತೋಷ - ಸಮಾಧಾನಗಳನ್ನು ಸ್ವಾತಂತ್ರ್ಯ ಮತ್ತು ಸ್ವಾಭಿಮಾನವನ್ನು ತುಂಬುತ್ತಿದ್ದ ಸಂಸ್ಕತಿಗಳು ಮರೆಯಾಗಿ ತಮ್ಮ ಜೀವನದ ಎಲ್ಲಾ ಅಗತ್ಯಗಳಿಗೂ ಪಟ್ಟಣದ ಕಡೆ ನೋಡುವ, ತಮ್ಮ ಬೇರುಗಳನ್ನು ಕತ್ತರಿಸಿಕೊಳ್ಳುವ, ಪರಾವಲಂಬನಾಪ್ರವೃತ್ತಿ ನಮ್ಮಲ್ಲಿ ದಟ್ಟವಾಗಿ ಬೆಳೆಯುತ್ತಾ, ನಮ್ಮತನವನ್ನೇ ತಿಂದು ಹಾಕುತ್ತಿದೆ. ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಬದುಕಿನಲ್ಲಿ ಹಿಂದೆ ಶಕ್ತಿಶಾಲಿಯಾಗಿದ್ದ ಈ ಸ್ವಾವಲಂಬನಶೀಲ ಬದುಕನ್ನು ಪುನರ್ ಸ್ಥಾಪಿಸುವುದು ಮತ್ತು ಈ ಪ್ರಾಚೀನ ಗ್ರಾಮ ಸಂಸ್ಕೃತಿಯನ್ನು ಪರಿಷ್ಕರಿಸಿ ಕಾಲಕ್ಕೆ ತಕ್ಕಂತೆ ಬಳಸಿಕೊಳ್ಳುವುದು ಆಧುನಿಕ ಬದುಕಿನ ಬಹುಪಾಲು ಸಮಸ್ಯೆಗಳಿಗೆ ಮದ್ದು ಎಂದು ಪ್ರತಿಪಾದಿಸಿದರು. ಯಂತ್ರಮೂಲವಾದ ಬದುಕು ಮನುಷ್ಯನ ಅಂತಃಸತ್ವವನ್ನು ತಿಂದು ಹಾಕುತ್ತಿರುವ ಮತ್ತು ಆಗಾಧ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯುತ್ತಿರುವ ಈ ಸಂದರ್ಭದಲ್ಲಿ, ನಶಿಸಿ ಹೋಗುತ್ತಿರುವ ಗ್ರಾಮಸಂಸ್ಕೃತಿಗಳ ಕಡೆಗೆ ಮತ್ತು ಅವುಗಳ ಅಂತರಾಳದ ಅವಿನಾಶೀ ಮೌಲ್ಯದ ಕಡೆಗೆ ಯುವ ಪೀಳಿಗೆಯ ಮನಸ್ಸನ್ನು, ಶ್ರದ್ಧೆಯನ್ನು ತಿರುಗಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿದೆ.

ಈ ದೃಷ್ಟಿಯಿಂದ ಕನ್ನಡ ಪುಸ್ತಕ ಪ್ರಾಧಿಕಾರವು, ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿರುವ ಗ್ರಾಮೀಣ ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ಕ್ಷೇತ್ರಾಧಾರಿತವಾದ ಅಧ್ಯಯನ ಮತ್ತು ಸಂಶೋಧನೆಯ ಮೂಲಕ ಮತ್ತೊಮ್ಮೆ ಯುವ ಜನಾಂಗದ ಮುಂದಿಡಲು ಗ್ರಾಮ ಸಂಸ್ಕೃತಿಮಾಲೆಯನ್ನು ಆರಂಭಿಸಿದೆ. ಈ ಮಾಲೆಯ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ಬೇರೆ ಬೇರೆ ವಿದ್ವಾಂಸರಿಂದ, ಸಂಸ್ಥೆಗಳಿಂದ ನಡೆದಿವೆಯಾದರೂ ಕರ್ನಾಟಕದ ಎಲ್ಲ ಭಾಗಗಳಿಂದಲೂ ಏಕಕಾಲದಲ್ಲಿ ವ್ಯವಸ್ಥಿತವಾಗಿ ಮಾಹಿತಿಯನ್ನು ಸಂಗ್ರಹಿಸುವ ಕೆಲಸ ನಡೆದಿಲ್ಲ. ಹೀಗಾಗಿ ವಿಶ್ಲೇಷಣಾತ್ಮಕ ಅಧ್ಯಯನ ನಡೆಸುವಾಗ ದೊಡ್ಡದೊಂದು ಕೊರತೆ ಎದುರಾಗುತ್ತದೆ. ವಿವಿಧ ಪ್ರಾದೇಶಿಕ ವಿಭಾಗಗಳ ಮಾಹಿತಿ ಒಂದೆಡೆ ಲಭ್ಯವಾಗಬೇಕು, ಮುಂದಿನ ಸೈದ್ಧಾಂತಿಕ ಅಧ್ಯಯನಕ್ಕೆ ವಿಶ್ಲೇಷಣೆಗೆ ಆಕರಗಳನ್ನು ಒದಗಿಸಬೇಕು ಎಂಬುದು ಈ ಗ್ರಂಥಮಾಲೆಯ ಪ್ರಧಾನ ಆಶಯ. ಇಲ್ಲಿ ವಿಶ್ಲೇಷಣೆಗಿಂತ ವಿಷಯ ಸಂಗ್ರಹಕ್ಕೆ ಆದ್ಯತೆ. ಆಯಾ ಸ್ಥಳದವರಿಂದಲೇ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಮತ್ತು ಕ್ಷೇತ್ರಕಾರ್ಯಕ್ಕೆ ಒತ್ತು ನೀಡಲಾಗಿದೆ. ಈ ಮಾಲೆಯಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳು ಜನಸಾಮಾನ್ಯರಿಗೆ, ನಾಗರಿಕತೆಯ ಅಕ್ಟೋಪಸ್ ಹಿಡಿತದಲ್ಲಿ ಜೀವನ ಶಾಂತಿಯನ್ನು ಕಳೆದುಕೊಳ್ಳುತ್ತಿರುವ ನಾಗರಿಕರಿಗೆ ತಮ್ಮ ಇತಿಹಾಸವನ್ನೇ ಮರೆತು ಮರಳಿನ ಮೇಲೆ ಮನೆ ಕಟ್ಟಲು ಹವಣಿಸುತ್ತಿರುವ ಯುವ ಜನಾಂಗಕ್ಕೆ ದೇಶೀಯವಾದ ಹೊಸ ತಿಳುವಳಿಕೆಗಳ ವಿಶಿಷ್ಟ ಲೋಕವನ್ನು ಪರಿಚಯಿಸಿಕೊಡಬಲ್ಲವು ಎಂಬ ನಂಬಿಕೆ ನಮಗಿದೆ.

ಈ ಗ್ರಾಮ ಸಂಸ್ಕೃತಿ ಮಾಲೆಯ ಒಂದು ಭಾಗವಾಗಿ ನಮ್ಮ ಗ್ರಾಮೀಣ ಸಾಮುದಾಯಿಕ

ಬದುಕಿಗೆ ಚೇತನವನ್ನು, ಹೊಳಪನ್ನು ಮತ್ತು ಸಮೂಹಶೀಲವಾದ ಸೌಹಾರ್ದ ಜೀವನವನ್ನು ದರ್ಶನ ಮಾಡಿಸುವ ಗ್ರಾಮೀಣ ಜಾತ್ರೆಗಳ ಬಗೆಗಿನ ಅಧ್ಯಯನಗಳನ್ನು ಕೊಡಲಾಗುತ್ತಿದೆ. ಈಗ ಪ್ರಕಟವಾಗುತ್ತಿರುವ 'ಕೊಪ್ಪಳ ಜಿಲ್ಲೆಯ ಜಾತ್ರೆಗಳು' ಇಂತಹ ಒಂದು ಅತ್ಯುತ್ತಮ ಪ್ರಯತ್ನದ ಫಲವಾಗಿದೆ. ಇದರ ಲೇಖಕರಾದ ಪ್ರೊ. ಎಸ್. ಎಸ್. ಹಿರೇಮಠ ಅವರು ನಮ್ಮ ಗಂಭೀರ ಅಧ್ಯಯನಶೀಲ ಪ್ರಾಧ್ಯಾಪಕರಲ್ಲಿ ಮತ್ತು ಸಂಶೋಧಕರಲ್ಲಿ ಪ್ರಸಿದ್ಧ ಹೆಸರು. ಆಧುನಿಕ ಜ್ಞಾನ-ವಿಜ್ಞಾನಗಳ ಅಭ್ಯಾಸದೊಡನೆ ತಮ್ಮ ದೇಶೀಯ ಸಂಸ್ಕೃತಿಯ ಅಧ್ಯಯನವನ್ನು ವೈಜ್ಞಾನಿಕವಾಗಿ ಮೇಳೈಸಿಕೊಂಡು, ಅವುಗಳ ಫಲಿತವನ್ನು ಆಧುನಿಕ ದೃಷ್ಟಿಕೋನದಿಂದ ವಿಚಾರ ಮಾಡಬಲ್ಲ ಚಿಂತನಶೀಲರು. ಇವರ ಅಧ್ಯಯನ ವ್ಯಾಪ್ತಿ, ಸೂಕ್ಷ್ಮ ಒಳನೋಟಗಳು, ಸಂಶೋಧನೆಯ ವಿಶಿಷ್ಟತೆ ಮತ್ತು ನಿರೂಪಣೆಯ ಪಾರದರ್ಶಕತೆ ಈ ಕೃತಿಯಲ್ಲಿ ನಿಚ್ಚಳವಾಗಿ ಕಂಡುಬರುತ್ತವೆ; ಮತ್ತು ಈ ರೀತಿಯ ಅಧ್ಯಯನಕ್ಕೆ ಅಚ್ಚುಕಟ್ಟಾದ ಭೂಮಿಕೆಯನ್ನು ಸಿದ್ಧಗೊಳಿಸುತ್ತವೆ. ಇಂತಹ ಕ್ಷೇತ್ರ ಕಾರ್ಯಾಧಾರಿತವಾದ ವಿಶಿಷ್ಟ ಕೃತಿಯನ್ನು ಪ್ರಾಧಿಕಾರಕ್ಕಾಗಿ ರಚಿಸಿಕೊಟ್ಟ ಶ್ರೀ ಎಸ್. ಎಸ್. ಹಿರೇಮಠ ಅವರಿಗೆ, ಈ ಮಾಲೆಯ ಸಂಪಾದಕರಾಗಿ ತಮ್ಮ ಅನುಭವ ಮತ್ತು ಆಲೋಚನೆಗಳ ಧಾರೆಯನ್ನು ಎರೆಯುತ್ತಿರುವ ಡಾ. ದೇವೇಂದ್ರಕುಮಾರ್ ಹಕಾರಿ ಮತ್ತು ಡಾ. ಸಂಧ್ಯಾರೆಡ್ಡಿ ಅವರಿಗೆ, ಇದನ್ನು ಪ್ರಕಟಿಸಲು ಸಹಮತಿಸಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಹಾಗೂ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಶ್ರೀ ವೆಂಕಟೇಶ್ವರ ಪ್ರಿಂಟರ್ಸ್‌ನ ಮಾಲೀಕರು ಹಾಗೂ ಸಿಬ್ಬಂದಿ ವರ್ಗಕ್ಕೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಯ ನಮನಗಳು.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

ಸಂಪಾದಕರ ಮಾತು

ಜಾತ್ರೆಗಳು ಜನಪದ ಸಂಸ್ಕೃತಿಯ ವಿಶಿಷ್ಟ ಪ್ರಕಾರ. ಜಾತ್ರೆ, ಪರಿಷೆ, ತೇರು, ರಥೋತ್ಸವ, ಉಚ್ಚಾಯ, ಪಲ್ಲಕ್ಕಿ, ಬಂಡಿ, ಇತ್ಯಾದಿ ಯಾವ ಹೆಸರಿನಿಂದ ಕರೆದರೂ ಎಲ್ಲ ಜಾತ್ರೆಗಳ ಹೊರ ಸ್ವರೂಪ ಒಂದೇ. ಅಪಾರ ಜನಜಂಗುಳಿ, ಗದ್ದಲ, ಮನೋರಂಜನೆ, ಆಟೋಟಗಳು, ವಿವಿಧ ರೀತಿಯ ಸರಕುಗಳ ವ್ಯಾಪಾರ, ದೇವರನ್ನು ಮೆರೆಸುವಿಕೆ, ಭಕ್ತಿಭಾವ ಸಮರ್ಪಣೆ, ಹರಕೆ ಇವು ಎಲ್ಲ ಜಾತ್ರೆಗಳ ಸಾಮಾನ್ಯ ನೋಟ. ಜಾತ್ರೆಗಳ ಎಲ್ಲ ಲಕ್ಷಣಗಳನ್ನೂ ಒಳಗೊಂಡ ಒಂದು ಸಮಗ್ರ ವ್ಯಾಖ್ಯೆಯನ್ನು ಕೊಡುವುದು ಕಷ್ಟ. ಹೆಚ್ಚಿನ ಜಾತ್ರೆಗಳು ನಡೆಯುವುದು ಕೃಷಿಯ ಕೆಲಸಗಳು ಮುಗಿದು ಫಲ ಕೈಗೆ ಬಂದು ರೈತನು ಬಿಡುವಾಗಿರುವ ಕಾಲದಲ್ಲಿ. ಕೈಗೆ ಬಂದ ಫಲಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಮುಂದಿನ ವರ್ಷವೂ ಇದೇ ರೀತಿಯ ಫಲ ಸಿಗುವಂತೆ ಪ್ರಾರ್ಥನೆ ಸಲ್ಲಿಸುವುದೂ ಜಾತ್ರೆಗಳ ಮುಖ್ಯ ಉದ್ದೇಶವಾಗಿರಬಹುದು. ಈ ಸಂದರ್ಭದಲ್ಲಿ ದುಡ್ಡು ಕೈಯಲ್ಲಿರುವುದರಿಂದ ರೈತರ ವ್ಯಾಪಾರ ವಹಿವಾಟಿಗೆ ಜಾತ್ರೆ ಒಂದು ಅನುಕೂಲಕರ ಸಂದರ್ಭವಾಯಿತು. ರೈತನಿಗೆ ಬೇಕಾದ ವಸ್ತುಗಳು ಹಾಗೂ ಮನರಂಜನೆಯನ್ನು ಒದಗಿಸುವುದಕ್ಕಾಗಿ ವಿವಿಧ ಪ್ರಕಾರದ ಅಂಗಡಿಗಳೂ ಮನರಂಜನಾ ಪ್ರಕಾರಗಳೂ ಜಾತ್ರೆಯಲ್ಲಿ ಸೇರಿಕೊಂಡಿರಬೇಕು. ಅನೇಕ ಜಾತ್ರೆಗಳು ದನಗಳ ಜಾತ್ರೆಗಳೂ ಆಗಿರುವುದನ್ನೂ, ದನಗಳ ಪ್ರದರ್ಶನ ಹಾಗೂ ಮಾರಾಟವೇ ಇಲ್ಲಿನ ಪ್ರಧಾನ ಅಂಶವಾಗಿರುವುನ್ನೂ ಸಹ ಈ ಸಂದರ್ಭದಲ್ಲಿಯೇ ಗಮನಿಸಬಹುದು.

ತೇರು ಅಥವಾ ರಥವನ್ನು ಎಳೆಯುವುದು ಬಹುತೇಕ ಜಾತ್ರೆಗಳ ಮುಖ್ಯ ಭಾಗ. ಜಾತ್ರೆಯೆಂದರೆ ರಥೋತ್ಸವವೇ ಎನ್ನುವಷ್ಟು ಇದರ ವ್ಯಾಪಕತೆ ಇದೆ. ಹೋಳಿಗೆಯಿಲ್ಲದೆ ಹಬ್ಬವಿಲ್ಲ ರಥವಿಲ್ಲದೆ ಜಾತ್ರೆಯಿಲ್ಲ ಎಂಬ ಗಾದೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತೇರು ಮತ್ತು ರಥ ಇವೆರಡರ ನಡುವೆ ಹೆಚ್ಚಿನ ವ್ಯತ್ಯಾಸ ಕಲ್ಪಿಸದಿದ್ದರೂ ದೇವರ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡುವ ವಿಶಿಷ್ಟ ವಾಹನವನ್ನು ಮಾತ್ರ ತೇರು ಅನ್ನುತ್ತೇವೆ. ರಥ ಎನ್ನುವುದು ಈ ಅರ್ಥದಲ್ಲಿ ಮಾತ್ರವಲ್ಲದೆ ವಾಹನ ಎಂಬ ಅರ್ಥದಲ್ಲಿಯೂ ಪ್ರಯೋಗವಾಗುತ್ತದೆ. ತೇರನ್ನು

ಎಳೆಯುವುದು ತೇರಿರುವ ಜಾತ್ರೆಗಳ ಶಿಖರಘಟ್ಟ. "ತೇರಾದ ಮೇಲೆ ಜಾತ್ರೆ ನೆರೆಯಿತು" "ತೇರು ಆಯಿತು ಹೇರು ಮಾತ್ರ ವ್ಯರ್ಥ ತಂದೆ" ಎಂಬ ಗಾದೆಗಳಲ್ಲಿ ಈ ಅರ್ಥ ಧ್ವನಿಸಿದೆ. ತೇರು ಅಥವಾ ರಥೋತ್ಸವ ಪ್ರಧಾನವಾದ ಜಾತ್ರೆಗಳು ಅದೇ ಹೆಸರಿನಿಂದಲೇ ಪ್ರಸಿದ್ಧ. ಬಸವೇಶ್ವರ ರಥ, ಉಗ್ರ ನರಸಿಂಹಸ್ವಾಮಿ ರಥೋತ್ಸವ, ವೀರಭದ್ರಸ್ವಾಮಿ ರಥ, ಕಲ್ಲೇಶ್ವರ ರಥ ಇತ್ಯಾದಿ. ನಾಯಕನಹಟ್ಟಿ ತೇರು, ಹಾಲಸ್ವಾಮಿ ತೇರು, ಬನಶಂಕರಿ ತೇರು, ಕರಿಸಿದ್ದೇಶ್ವರನ ತೇರು, ಶರಣ ಬಸಪ್ಪನ ತೇರು ಇತ್ಯಾದಿ. ದೇವರನ್ನು ಮೆರೆಸುವ ಸಾಧನಗಳ ಗುಂಪಿನಲ್ಲಿ ಪಲ್ಲಕ್ಕಿ, ವಾನ್ಯೇವು, ಬಂಡಿ, ಕುರ್ಜ ಮೊದಲಾದುವೆಲ್ಲ ಸೇರುತ್ತವೆ. ಬಂಡಿ ಅತ್ಯಂತ ಸರಳವಾದ ಮೂಲರೂಪದ ಪ್ರಾಚೀನ ವಾಹನ. ರಥವು ಧನ ಬಲ ಶ್ರೀಮಂತಿಕೆ, ಕಲೆ, ವೈಭವಗಳ ಇನ್ನೊಂದು ತುದಿ. ಮಂಡ್ಯ ಜಿಲ್ಲೆಯ ಅನೇಕ ಜಾತ್ರೆಗಳನ್ನು ಬಂಡಿ ಎಂಬ ಹೆಸರಿನಲ್ಲಿ ಕರೆಯುವುದನ್ನು ಕಾಣಬಹುದು. ಬಂಡಿಯನ್ನೇ ಬಾಳೆಕಂಬ, ತಳಿರುಗಳ ಅಲಂಕಾರದೊಂದಿಗೆ ಸಿಂಗರಿಸಿ ಮೆರವಣಿಗೆ ಹೊರಡುವ ಸಂಭ್ರಮ ಇಲ್ಲಿದೆ. ಬಂಡಿಗಳಲ್ಲಿ ಜಾತ್ರೆಗೆ ಹೊರಟರೂ ಸಹ ಬಂಡಿಗಳನ್ನು ಇದೇ ರೀತಿ ಅಲಂಕರಿಸಿರುತ್ತಾರೆ. ದೇವರನ್ನು ಮೆರೆಸುವ ಇದಕ್ಕಿಂತ ಪ್ರಾಚೀನ ರೂಪವೆಂದರೆ ತಲೆಯ ಮೇಲೆ ಹೊತ್ತು ಮರೆಸುವುದೇ ಆಗಿದೆ. ತಲೆಯ ಮೇಲೆ ಹೊರುವುದರಿಂದಾರಂಭಿಸಿ ಭವ್ಯವಾದ ರಥ ತೇರುಗಳವರೆಗಿನ ವಿವಿಧ ಹಂತಗಳನ್ನು ನೋಡಿದಾಗ ಗಮನಕ್ಕೆ ಬರುವ ಸಂಗತಿಯೆಂದರೆ ಸಾಮಾನ್ಯವಾಗಿ ರಥೋತ್ಸವಗಳೆಲ್ಲ ಶಿಷ್ಟದೇವತೆಗಳಿಗೆ ನಡೆಯುವಂಥವು. ಬಿದಿರಿನ ಬುಟ್ಟಿ, ಅಡ್ಡೆ, ಮರದ ಬಂಡಿಯಂಥವು ಗ್ರಾಮ ದೇವತೆಗಳಿಗೆ ಮೀಸಲಾದಂಥವು. ಇಲ್ಲಿನ ಆರ್ಥಿಕ ವಿಕಾಸ ಕ್ರಮವೂ ಗಮನಿಸಬೇಕಾದ ಅಂಶ. ಗ್ರಾಮ ದೇವತೆಗಳು ಹಳ್ಳಿಗಳಿಗೆ, ಸಮಾಜದ ಕೆಳವರ್ಗದವರಿಗೆ, ಕೆಳ ಜಾತಿಗಳವರಿಗೆ, ಬಡವರಿಗೆ ಸೀಮಿತ. ಆದರೆ ಕೆಲವೊಂದು ಗ್ರಾಮದೇವತೆಗಳ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆಯಾದ ನಂತರ ಅವು ರಥೋತ್ಸವಗಳನ್ನು ಪಡೆಯಲು ಸಮರ್ಥವಾಗಿರಬಹುದು.

ರಥ, ತೇರುಗಳಲ್ಲಿ ಅನೇಕ ವಿಧ. ಮರದ ತೇರು, ಕಲ್ಲಿನ ರಥ, ಬೆಳ್ಳಿ ತೇರು, ಚಿನ್ನದ ತೇರು ಇತ್ಯಾದಿ. ರಥ ನಿರ್ಮಾಣ ಒಂದು ಕಲೆಯೂ ಆಗಿ ಬೆಳೆದಿದೆ. ಅತ್ಯಂತ ಸುಂದರವಾದ ರಥಗಳನ್ನು ಪೈಪೋಟಿಯಿಂದೆಂಬಂತೆ ನಿರ್ಮಿಸುವುದೂ ಉಂಟು. ರಥ ವೈಶಿಷ್ಟ್ಯಗಳು ಹಾಗೂ ರಥನಿರ್ಮಾಣದ ಬಗ್ಗೆ ಕಥೆ, ಐತಿಹ್ಯಗಳೂ ಸಾಕಷ್ಟಿವೆ. ಜಾತ್ರೆಗಳ ಅಧ್ಯಯನದಲ್ಲಿ ಇವುಗಳ ಬಗ್ಗೆ ವಿಶೇಷ ಗಮನ ಹರಿಸುವುದು ಅಗತ್ಯ.

ರಥೋತ್ಸವ ತೇರುಗಳ ನಂತರ ಜಾತ್ರೆಗಳ ಎರಡನೇ ವೈಶಿಷ್ಟ್ಯ ದನಗಳ ಪ್ರದರ್ಶನ ಹಾಗೂ ಮಾರಾಟ. ಇವು ದನಗಳ ಜಾತ್ರೆಯಾಗಿಯೇ ಪ್ರಸಿದ್ಧವಾಗಿವೆ. ಇನ್ನೂ ಕೆಲವು ಜಾತ್ರೆಗಳಲ್ಲಿ ವಿವಿಧ ರೀತಿಯ ಹರಕೆಗಳ ಸಲ್ಲಿಕೆಯೇ ಜಾತ್ರೆಯ ಪ್ರಧಾನ ಅಂಶವಾಗಿರುತ್ತದೆ. ಉದಾಹರಣೆಗೆ, ಸಿಡಿಯಾಡುವುದನ್ನು ನೋಡಬಹುದು. ಸಿಡಿಯಾಡುವುದು ಒಂದು ಹರಕೆ. ಸಿಡಿ ಆಚರಣೆ ಇರುವ ಜಾತ್ರೆ ಸಿಡಿಜಾತ್ರೆ ಎಂದೇ ಪ್ರಸಿದ್ಧವಾಗಿರುವುದುಂಟು ಮಾರಮ್ಮನ ಸಿಡಿ, ಆಂಜನೇಯ

ಸಿಡಿ, ಏಕನಾಥೇಶ್ವರಿ ಸಿಡಿ ಇತ್ಯಾದಿ. ಸಿಡಿಯಾಟ ಇಂಥ ಜಾತ್ರೆಗಳ ಶಿಖರಘಟ್ಟ. ಪ್ರಧಾನವಾದ ಇನ್ನಿತರ ಹರಕೆಗಳೆಂದರೆ ಉರುಳುಸೇವೆ, ಬೆತ್ತಲೆಸೇವೆ, ಬೇವಿನನುಡುಗೆ ಸೇವೆ, ಬಾಯಿಬೀಗ, ಕೊಂಡದ ಮೇಲೆ ನಡಿಗೆ ಇತ್ಯಾದಿ. ಸ್ಪರ್ಧೆ ಮತ್ತು ಸಾಹಸ ಪ್ರದರ್ಶನಗಳು ಪ್ರಧಾನವಾದಂಥ ಜಾತ್ರೆಗಳೂ ಇವೆ. ಅದು ದನಗಳ ಓಟವಿರಬಹುದು. ಕಂಬಳ ಜಾತ್ರೆಯಲ್ಲಿದ್ದಂತೆ ಕೋಣಗಳ ಓಟದ ಸ್ಪರ್ಧೆಯಿರಬಹುದು. ಅಥವಾ ಎಣ್ಣೆಮೆತ್ತಿ ಜಾರುವಂಥ ಕಂಭವನ್ನೇರಿ ಅದರ ತುದಿಯಲ್ಲಿರುವ ಮೊಸರುಗಡಿಗೆಯನ್ನು ಒಡೆಯುವ ಸಾಹಸವಿರಬಹುದು. ಇಂತಹ ಹಲವಾರು ಜಾತ್ರೆಗಳಲ್ಲಿ ಯುವಕರು ತಮ್ಮ ದೈಹಿಕ ಬಲ, ಸಾಹಸಗಳನ್ನು ಮೆರೆಯುವುದಕ್ಕೆ ಸದವಕಾಶ. ಪವಾಡ ಪ್ರದರ್ಶನ ಕೆಲವೊಂದು ಜಾತ್ರೆಗಳ ಪ್ರಧಾನ ಅಂಶ. ಕೆಂಡದ ನಡಿಗೆ, ಕೆಂಡಾರ್ಚನೆ ಮೊದಲಾದವು ಈ ಗುಂಪಿನಲ್ಲಿ ಬರುತ್ತವೆ. ಭವಿಷ್ಯ ನುಡಿಯುವುದು, ಕಣಿ ಹೇಳುವುದು ಇನ್ನೂ ಕೆಲವು ಜಾತ್ರೆಗಳ ಪ್ರಧಾನ ಅಂಶ. ಮೈಲಾರ ಲಿಂಗನ ಜಾತ್ರೆ ಕಾರಣಿಕಕ್ಕಾಗಿಯೇ ಪ್ರಸಿದ್ಧ. ಉಜ್ಜನಿ ಚೌಡಮ್ಮನ ಜಾತ್ರೆಯಂಥವುಗಳಲ್ಲಿ ಎರಡು ಜಾತಿಗಳ ತಾತ್ಕಾಲಿಕ ಪಾತ್ರ ಬದಲಾವಣೆಯೇ ಪ್ರಧಾನ. ಕೆಲವೊಂದು ಜಾತ್ರೆಗಳು ಶುದ್ಧ ಮನರಂಜನಾ ಪ್ರಧಾನವಾಗಿವೆ. ಹೀಗೆ ಒಂದೊಂದು ಜಾತ್ರೆಯಲ್ಲಿ ಒಂದೊಂದು ರೀತಿಯ ಪ್ರಧಾನ ಅಂಶವಿದ್ದು ಉಳಿದೆಲ್ಲ ಅಂಶಗಳು ಈ ಶಿಖರಘಟಕ್ಕೆ ಪೀಠಿಕೆಯ ರೂಪದಲ್ಲಿರುವ ಪ್ರಕ್ರಿಯೆಯನ್ನು ಕಾಣುತ್ತೇವೆ.

ಜಾತ್ರೆಗಳ ಅಂಗವಾಗಿ ರೂಪುಗೊಂಡ ಜನಪದ ಸಾಹಿತ್ಯ ಅನೇಕ ದೃಷ್ಟಿಗಳಿಂದ ಗಮನ ಸೆಳೆಯುತ್ತದೆ. ಈ ಸಾಹಿತ್ಯದಲ್ಲಿ ಹಾಡು, ಐತಿಹ್ಯ, ಪುರಾಣ, ಸ್ಥಳ ಕಥೆ, ವಿವರಣಾತ್ಮಕ ಕಥೆ, ಗಾದೆ, ನುಡಿಗಟ್ಟು ಇತ್ಯಾದಿ ಸೇರುತ್ತವೆ. ಶಿಷ್ಟ ದೇವತೆಗಳ ಕಥೆಗಳಿಗಿಂತ ಗ್ರಾಮದೇವತೆಗಳ ಕಥೆಗಳು ಅದರಲ್ಲಿಯೂ ಹೆಣ್ಣು ದೇವತೆಯ ಕಥೆಗಳು ಸಾಮಾಜಿಕ, ಸಾಂಸ್ಕೃತಿಕ ಇತಿಹಾಸದ ಅಧ್ಯಯನಕ್ಕೆ ಒಳ್ಳೆಯ ಸಾಮಗ್ರಿ. ಆಯಾ ಕಾಲಘಟ್ಟದಲ್ಲಿ ನಡೆದ ಯಾವುದೋ ಒಂದು ಸಂಘರ್ಷದ ಕಥೆಗಳನ್ನು ಇವು ಹೇಳುತ್ತವೆ. ಈ ದೈವಗಳು ಯಾವುದೋ ಕಾರಣದಿಂದ ನೆಲೆತಪ್ಪಿ ಬಂದ ದೈವಗಳಾಗಿದ್ದು ಹೊಸ ಜಾಗ ಕಂಡುಕೊಂಡ ಕಥೆಯನ್ನು ಇವು ತಿಳಿಸುತ್ತವೆ. ಈ ದೇವತೆಗಳು ಕೆಲವೊಂದು ಮಹಿಮೆ ಪವಾಡಗಳ ಮೂಲಕ ಜನರಲ್ಲಿ ತಮ್ಮ ಬಗ್ಗೆ ಭಯ ಭಕ್ತಿ ಹುಟ್ಟುವಂತೆ ಮಾಡಿ ತಮ್ಮ ನೆಲೆಗಳನ್ನು ಭದ್ರಗೊಳಿಸಿಕೊಳ್ಳುತ್ತವೆ. ಸ್ಥಳೀಯ ಜನಾಂಗಿಕ, ಭೌಗೋಳಿಕ ಇತಿಹಾಸದ ಬಗ್ಗೆಯೂ ಈ ಕಥೆಗಳು ಬೆಳಕು ಚೆಲ್ಲುತ್ತವೆ. ಸ್ಥಳನಾಮಗಳ ಅಧ್ಯಯನಕ್ಕೂ ಅಪಾರ ಸಾಮಗ್ರಿ ಒದಗಿಸುತ್ತವೆ. ಗ್ರಾಮದೇವತೆಗಳ ಸಂಬಂಧದಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ಅವುಗಳ ಹೆಸರುಗಳು. ಬಹುತೇಕ ಈ ಎಲ್ಲ ದೇವತೆಗಳು ಆಯಾ ಊರಿನ ಹೆಸರನ್ನೇ ಹೊಂದಿರುತ್ತವೆ. ಕೋಲಾರಮ್ಮ, ನಲ್ಲೂರಮ್ಮ, ಉಜ್ಜನಿ ಚೌಡಮ್ಮ, ಗುತ್ತಲಮ್ಮ, ಹೊಸೂರಮ್ಮ ಇತ್ಯಾದಿ. ಊರುಗಳ ಹೆಸರನ್ನೇ ಅಂಟಿಸಿದ್ದರಿಂದಾಗಿ ಗುಣಸ್ವಭಾವ ಆಚಾರ ವಿಚಾರಗಳೆಲ್ಲವೂ ಬಹುತೇಕ ಒಂದೇ ಆಗಿರುವ ಸಾವಿರಾರು ದೇವತೆಗಳಿಗೆ ಪ್ರತ್ಯೇಕ ಹೆಸರಿಡುವ ಕಷ್ಟ ತಪ್ಪಿದಂತಾಗಿದೆ.

ಜಾತ್ರೆಗಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅವುಗಳ ಸಹಕಾರ ಸ್ವರೂಪ. ಇಲ್ಲಿ ಊರಿನ ಎಲ್ಲ ಜಾತಿ, ವರ್ಗ, ಧರ್ಮಗಳ ಜನರೂ ಭೇದವಿಲ್ಲದೆ ಪಾಲುಗೊಳ್ಳುತ್ತಾರೆ. ಎಲ್ಲರೂ ತಮ್ಮ ತಮ್ಮ ನೆಲೆಯಲ್ಲಿ ಸೌಹಾರ್ದಯುತವಾಗಿ ಬೆರೆಯುವಂತೆ ಮಾಡುವುದೇ ಕೆಲವೊಂದು ಜಾತ್ರೆಗಳ ಉದ್ದೇಶವಾಗಿರುವಂತೆ ತೋರುತ್ತದೆ. ಏಕಕಾಲದಲ್ಲಿ ವಿರುದ್ಧ ಸಂಪ್ರದಾಯ ಆಚರಣೆಗಳನ್ನು ಪಾಲಿಸಿಕೊಂಡು ಬರುವುದರಲ್ಲಿಯೂ ಸಹಕಾರ ಸಮನ್ವಯ ಅಂಶವನ್ನು ಕಾಣಬಹುದು. ಒಂದು ಕಡೆ ಸಸ್ಯಾಹಾರಿ ಸಂಪ್ರದಾಯವಿದ್ದರೆ ಇನ್ನೊಂದು ಕಡೆ ಮಾಂಸಾಹಾರಿ ಪದ್ಧತಿ ಇರುತ್ತದೆ. ದೇವಾಲಯಗಳೊಳಗೆ ಪ್ರವೇಶವಿರದ ಹೊಲೆಯ ಅಂದು ದೇವರನ್ನು ಹೊರುತ್ತಾನೆ. ಜನಿವಾರ ಹಾಕಿಕೊಳ್ಳುತ್ತಾನೆ. ಜಾತಿಕೋಮು ಸೌಹಾರ್ದದ ಉದ್ದೇಶ ಉತ್ತರ ಕರ್ನಾಟಕದಲ್ಲಿ ಸಾಧಿತವಾಗುವ ರೀತಿ ಮತ್ತು ದಕ್ಷಿಣ ಕರ್ನಾಟಕದಲ್ಲಿ ಸಾಧಿತವಾಗುವ ರೀತಿಗಳನ್ನು ತೌಲನಿಕವಾಗಿ ಅಭ್ಯಾಸ ಮಾಡಬಹುದು. ಉತ್ತರದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದದ ಪ್ರಶ್ನೆ ಇದ್ದರೆ ದಕ್ಷಿಣದಲ್ಲಿ ಮೇಲುಜಾತಿ ಕೀಳುಜಾತಿ ಪ್ರಶ್ನೆಯಿದೆ.

ಜಾನಪದದಲ್ಲಿ ವ್ಯವಸ್ಥಿತ ಸಂಗ್ರಹಕಾರ್ಯ ನಡೆಯಬೇಕಾಗಿರುವ ಪ್ರಮುಖ ಕ್ಷೇತ್ರವೆಂದರೆ ಜಾತ್ರೆಗಳು. ಆಚರಣೆ, ನಂಬಿಕೆ, ಐತಿಹ್ಯ, ಪುರಾಣ, ಕಲೆ, ಆಟ ಮನರಂಜನೆ...ಮುಂತಾದ ಅನೇಕ ಪ್ರಕಾರಗಳನ್ನೊಳಗೊಂಡಿರುವ ಜಾತ್ರೆ ಒಂದು ಸಂಕೀರ್ಣ ಪ್ರಕಾರ. ಅದ್ದರಿಂದ ಇದರ ಸಂಗ್ರಹಕಾರ್ಯ ಸುಲಭವಲ್ಲ. ಗೊಂದಲಮಯವೂ ಹೌದು. ಅಲ್ಲದೆ ಜಾತ್ರೆಗಳ ಸಂಖ್ಯೆ ಅಪಾರ, ಪ್ರಾದೇಶಿಕ ವ್ಯಾಪ್ತಿ ವಿಸ್ತಾರ. ಇಡೀ ಕರ್ನಾಟಕದ ಜಾತ್ರೆಗಳ ಸಂಗ್ರಹ ಒಬ್ಬರಿಂದಾಗುವ ಕೆಲಸವಲ್ಲ. ಜನಬಲ, ಹಣಬಲ ಕಾಲಾವಕಾಶ ಈ ಎಲ್ಲ ಅಂಶಗಳ ಹಿನ್ನೆಲೆಯಿಂದ ನೋಡಿದಾಗ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಕೊಡಗು....ಮುಂತಾಗಿ ಕರ್ನಾಟಕದ ಪ್ರಾದೇಶಿಕ ವಿಂಗಡಣೆ ಮಾಡಿಕೊಂಡರೂ ಒಂದು ಪ್ರದೇಶದ ವ್ಯಾಪಕ ಸಂಗ್ರಹ ಒಬ್ಬರಿಂದಾಗುವಂಥದಲ್ಲ. ಈ ಕಾರಣದಿಂದಲೇ ಯಾವುದಾದರೊಂದು ನಿರ್ದಿಷ್ಟ ಊರು, ಗ್ರಾಮ, ನಿರ್ದಿಷ್ಟ ದೈವ ಇಂಥವನ್ನು ಗಮನದಲ್ಲಿಟ್ಟುಕೊಂಡು ಮಾತ್ರ ಕೆಲವೊಂದು ಅಧ್ಯಯನಗಳು ನಡೆದಿವೆ. ಅದರೆ ಒಟ್ಟಾರೆ ಜಾತ್ರೆಗಳ ಸ್ವರೂಪ ಉದ್ದೇಶಗಳ ಬಗ್ಗೆ ಇಂತಹ ಅಧ್ಯಯನಗಳು ಹೆಚ್ಚಿನ ಬೆಳಕು ಚೆಲ್ಲಲಾರವು. ಜಾತ್ರೆಯ ವಿವಿಧ ಮುಖಗಳ ಅಧ್ಯಯನಕ್ಕೆ ಅಗತ್ಯವಾದ ಸಾಮಗ್ರಿ ಒದಗಿಸಲಾರವು. ಜಾತ್ರೆಗಳ ವ್ಯವಸ್ಥಿತ ಸಂಗ್ರಹಕ್ಕೆ ಇನ್ನೂ ಕೆಲವು ಸಾಧ್ಯತೆಗಳಿವೆ. ಶಿಷ್ಟದೇವತೆ-ಗ್ರಾಮದೇವತೆ; ಪುರುಷದೇವತೆ-ಸ್ತ್ರೀದೇವತೆ; ಶೈವದೇವತೆ-ವೈಷ್ಣವದೇವತೆ. ಆದರೆ ಹೀಗೆ ಮಾಡಿಕೊಂಡಾಗಲೂ ಇಡೀ ಕರ್ನಾಟಕವನ್ನೇ ಗಮನಿಸಬೇಕಾಗುವುದರಿಂದ ಪ್ರಸ್ತುತದಲ್ಲಿ ಜಾತ್ರೆಗಳ ಸಂಗ್ರಹಣೆಗಾಗಿ ಜಿಲ್ಲೆಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಜಿಲ್ಲೆಯನ್ನು ಆಧಾರವಾಗಿಟ್ಟುಕೊಳ್ಳುವುದರ ಒಂದು ಅನುಕೂಲವೆಂದರೆ ಒಬ್ಬ ವ್ಯಕ್ತಿಯಿಂದ ಸಮಗ್ರ ಸಂಗ್ರಹ ಸಾಧ್ಯವಾದೀತು ಎಂಬುದು. ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲ ಪ್ರಕಾರದ ಜಾತ್ರೆಗಳು ಸಿಗುತ್ತವೆ. ಪ್ರತಿಯೊಂದು ಜಿಲ್ಲೆಯ ಸಂಗ್ರಹಕಾರ್ಯವನ್ನು ಏಕಕಾಲಕ್ಕೆ ನಡೆಸಿ, ಅನಂತರ ವಿಶ್ಲೇಷಣಾತ್ಮಕ

ಅಧ್ಯಯನವನ್ನು ಕೈಗೊಳ್ಳಬಹುದು. ಜಾತ್ರೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕೆಲವು ಅಂಶಗಳ ವಿಶ್ಲೇಷಣೆ ನಡೆಸಬಹುದಾಗಿದೆ :

ರಥೋತ್ಸವಗಳು ಶಿಷ್ಟದೇವತೆಗಳಿಗಿರುವಂತೆ ಗ್ರಾಮದೇವತೆಗಳಿಗೂ ಇವೆಯೇ. ಇದ್ದರೆ ಅದು ಮೂಲತಃ ಇದ್ದುದೇ ಅಥವಾ ಶಿಷ್ಟ ಸಂಬಂಧದಿಂದ ರೂಢಿಗೊಂಡುದೇ?

ಗ್ರಾಮದೇವತೆಗಳಿಗೆ ಸಂಬಂಧಿಸಿದ ಕಥೆಗಳು ಕರ್ನಾಟಕದಾದ್ಯಂತ ಒಂದೇ ರೀತಿ ಇವೆಯೇ? ಅವುಗಳ ತುಲನಾತ್ಮಕ ಅಧ್ಯಯನದಿಂದ ಕಂಡುಬರುವ ಅಂಶವೇನು?

ಜಾತ್ರೆಗಳಿಗೂ ಅವು ನಡೆಯುವ ಕಾಲಮಾನಕ್ಕೂ ಸಂಬಂದಧವಿದೆಯೇ? ಕೆಲವೊಂದು ಜಾತ್ರೆಗಳ ಆಚರಣೆಗಳಿಗೂ ವಿವಾಹ ಸಂಬಂಧದ ಆಚರಣೆಗಳಿಗೂ ಬಹಳ ಸಾಮ್ಯವಿದೆ. ಉದಾಹರಣೆಗೆ, ಜಾತ್ರೆಯಲ್ಲಿ ದೇವರುಗಳಿಗೆ ನಡೆಯುವ ಉಯ್ಯಾಲೆ ಉತ್ಸವ, ವಿವಾಹೋತ್ಸವ, ಶಯನೋತ್ಸವ ಇತ್ಯಾದಿ. ಗಂಧ ಎರಚುವುದು, ಓಕುಳಿಯಾಟ, ಸಕ್ಕರೆ ಹಂಚುವುದು ಇತ್ಯಾದಿ. ಕಳಸ ಒಯ್ಯುವುದು, ಮಡಿಲು ತುಂಬುವುದು, ತಾಳಿ ಕಟ್ಟುವುದು ಅಥವಾ ಹಳೆಯ ತಾಳಿ ಕಿತ್ತು ಹೊಸ ತಾಳಿ ಕಟ್ಟುವುದು - ಈ ಆಚರಣೆಗಳ ಹಿನ್ನಲೆಯಲ್ಲಿ ನೋಡಿದಾಗ ವಿವಾಹವು ಸಂತಾನಫಲ ಸಂಬಂಧಿಯಾಗಿರುವಂತೆ ಜಾತ್ರೆಗಳೂ ಕೂಡ ಫಲವಂತಿಕೆ (ಕೃಷಿ) ಸಂಬಂಧವಾಗಿ ನಡೆಯುತ್ತಿವೆಯೇ?

ಜಾತ್ರೆಯ ವಿವಿಧ ಹರಕೆ, ನೈವೇದ್ಯ, ಆಚರಣೆಗಳ ಹಿನ್ನಲೆಯಲ್ಲಿರುವ ಅರ್ಥವೇನು? ಉದಾಹರಣೆಗೆ, ತೇರು ಎಳೆಯುವಾಗ ಬಾಳೆಹಣ್ಣು ಉತ್ತುತ್ತಿ ಎಸೆಯುವ ಸಂಪ್ರದಾಯ ವ್ಯಾಪಕವಾಗಿದೆ. ಫ್ರಾಯ್ಡ್ ಸಿದ್ಧಾಂತದ ಪ್ರಕಾರ ಬಾಳೆಹಣ್ಣು ಉತ್ತುತ್ತಿ ಮೊದಲಾದವನ್ನು ಶಿಶ್ನ ಸಂಕೇತವೆಂದು ಭಾವಿಸಬಹುದು. ಕಡುಬು ಕಾಳಗವನ್ನು ಇದೇ ಅರ್ಥದಲ್ಲಿ ಗಮನಿಸಬಹುದು. ಈ ಸಂಪ್ರದಾಯದ ಹಿಂದೆ ಫಲವಂತಿಕೆಯ ಉದ್ದೇಶವಿರಬಹುದೇ? ಬ್ರಹ್ಮಚಾರಿ ದೇವತೆಯಾದ ಹನುಮಂತನ ಜಾತ್ರೆಗಳಲ್ಲಿ ಈ ಆಚರಣೆ ಇರುವುದೆ? ಕೆಲವೊಂದು ದೇವರುಗಳಿಗೆ ಪಾದುಕೆಗಳನ್ನರ್ಪಿಸುವ ಹರಕೆಯಿದೆ. ಪಾದುಕೆ ಸ್ತ್ರೀ ಜನನಾಂಗದ ಸಂಕೇತ. ಇಂತಹ ಹರಕೆ ಸ್ವೀಕರಿಸುವ ದೇವರುಗಳು ಯಾರು?

ನಿರ್ದಿಷ್ಟವಾದ ಕೆಲವೊಂದು ಹರಕೆಗಳಿಗೂ ಅದರ ಕಥೆಗೂ ಸಂಬಂಧವಾದ ನೇರ ಸಂಬಂಧವಿದೆಯೆ? ಮಾರಮ್ಮನ ಜಾತ್ರೆಯಲ್ಲಿ ಕೋಣಬಲಿ, ಕುರಿಬಲಿಗಳಿಗೆ ಸಂಬಂಧಿಸಿದಂತೆ ಹೇಳುವ ಕಥೆಯನ್ನು ಇಲ್ಲಿ ಗಮನಿಸಬಹುದು.

ಆಯಾ ದೇವರಿಗೂ ಅವುಗಳಿಗೆ ಸಲ್ಲುವ ಹರಕೆಗಳಿಗೂ ಇರುವ ಸಂಬಂಧವೇನು? ಸಾಮಾನ್ಯವಾಗಿ ಹನುಮಪ್ಪನ (ಆಂಜನೇಯ) ಜಾತ್ರೆಗಳಲ್ಲಿ ಮುಳ್ಳುಪಲ್ಲಕ್ಕಿ ಸೇವೆ ಕಂಡುಬರುತ್ತವೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಹನುಮಪ್ಪನಿಗೆ ಇದೇ ರೀತಿಯ ಸೇವೆ ಸಲ್ಲುವುದೇ? ಮತ್ತು ಇಂತಹ ಸೇವೆ ಹನುಮಪ್ಪನಿಗಲ್ಲದೆ ಇತರ ದೇವತೆಗಳಿಗೂ ಇದೆಯೇ?

ಶೈವದೇವತಾ ಜಾತ್ರೆಯ ಆಚರಣೆಗಳಿಗೂ ವೈಷ್ಣವ ದೇವತಾ ಜಾತ್ರೆಯ ಆಚರಣೆಗಳಿಗೂ ವ್ಯತ್ಯಾಸವಿದೆಯೇ? ಅದೇ ರೀತಿ ಶಿಷ್ಟದೇವತಾ ಜಾತ್ರೆಗಳಿಗೂ ಗ್ರಾಮದೇವತಾ ಜಾತ್ರೆಗಳಿಗೂ ಇರುವ ವ್ಯತ್ಯಾಸವೇನು?

ಇಂತಹ ಯಾವುದೇ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದರೆ ಸರಿಯಾದ ಮಾಹಿತಿ ಲಭ್ಯವಿರಬೇಕು. ಈ ದೃಷ್ಟಿಯಿಂದ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದಲೂ ಜಾತ್ರೆಗಳಿಗೆ ಸಂಬಂಧಿಸಿದ ಮಾಹಿತಿಯ ಸಂಗ್ರಹ ನಡೆಯಬೇಕಾಗಿದೆ. ಈ ಕೆಲಸ ಪೂರ್ಣವಾಗದ ಹೊರತು ಅರ್ಥಪೂರ್ಣವಾದ ವಿಶ್ಲೇಷಣೆಯಾಗಲೀ, ಸೈದ್ಧಾಂತಿಕ ನಿಲುವುಗಳನ್ನು ತಳೆಯುವುದಾಗಲೀ ಸಾಧ್ಯವಾಗದು. ಎ ಲ್ಲಕ್ಕಿಂತ ಮುಖ್ಯವಾಗಿ ಜಾತ್ರೆಗಳ ಸರಿಯಾದ ವರ್ಗೀಕರಣಕ್ಕೆ ಈ ಕೆಲಸದಿಂದ ತುಂಬ ನೆರವಾಗಬಹುದು. ಯಾವ ಜಾತ್ರೆ ಯಾವ ಉದ್ದೇಶಕ್ಕಾಗಿ ನಡೆಯುತ್ತದೆ ಎಂಬುದೇ ಜಾತ್ರೆಗಳ ವರ್ಗೀಕರಣಕ್ಕೆ ಆಧಾರವಾಗಲೂಬಹುದು. ಫಲವಂತಿಕೆಯ ಉದ್ದೇಶವೇ, ವರ್ಗ ವರ್ಣ ಸಂಘರ್ಷದ ಹಿನ್ನೆಲೆಯೇ? ಕೇವಲ ಮನರಂಜನೆ ಸಾಹಸದ ಉದ್ದೇಶವಿದೆಯೇ ಇತ್ಯಾದಿ ಆಧಾರದ ಮೇಲೆ ಜಾತ್ರೆಗಳನ್ನು ಫಲವಂತಿಕೆಯ ಜಾತ್ರೆಗಳು, ಮನರಂಜನಾ ಜಾತ್ರೆಗಳು, ಸಾಹಸ ಪ್ರದರ್ಶನ ಜಾತ್ರೆಗಳು, ವ್ಯಾಪಾರದ ಜಾತ್ರೆಗಳು, ಸೌಹಾರ್ದ ಜಾತ್ರೆಗಳು, ಇತ್ಯಾದಿಯಾಗಿ ವಿಂಗಡಿಸಲು ಸಾಧ್ಯವಿದೆ.

ಪ್ರಸ್ತುತ ಕೊಪ್ಪಳ ಜಿಲ್ಲೆಯ ಜಾತ್ರೆಗಳನ್ನು ಶ್ರೀ ಎಸ್. ಎಸ್. ಹಿರೇಮಠರು ಸಂಗ್ರಹಿಸಿ ಕೊಟ್ಟಿದ್ದಾರೆ. ಜಿಲ್ಲೆಯ ತಾಲ್ಲೂಕುಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿಯೊಂದು ತಾಲ್ಲೂಕಿನ ಜಾತ್ರೆಗಳ ಸಂಗ್ರಹ ಸಮೀಕ್ಷೆ ನಡೆಸಿದ್ದಾರೆ. ವಿಷಯಕ್ಕೆ ಹಿನ್ನೆಲೆಯಾಗಿ ಆಯಾ ತಾಲೂಕಿನ ಭೌಗೋಳಿಕ ವಿವರಗಳು, ಸ್ಥಳೀಯ ಇತಿಹಾಸ, ಪ್ರಧಾನ ದೇವತೆಗಳು, ಇಲ್ಲಿರುವ ಗುಡಿ, ಮಠ, ದರ್ಗಾ ಇತ್ಯಾದಿ ಧಾರ್ಮಿಕ ಕೇಂದ್ರಗಳು ಇವುಗಳನ್ನು ನೀಡಿರುವುದು ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ತುಂಬ ಉಪಯುಕ್ತವಾಗುವಂತಿದೆ.

ಕೊಪ್ಪಳ ಜಿಲ್ಲೆಯ ಜಾತ್ರೆಗಳ ಸಂದರ್ಭದಲ್ಲಿ ಎದ್ದು ಕಾಣುವ ಅಂಶವೆಂದರೆ ಇಲ್ಲಿನ ಬಹುತೇಕ ಜಾತ್ರೆಗಳು ಸಮಕಾಲೀನ ಅಥವಾ ಐತಿಹಾಸಿಕ ವ್ಯಕ್ತಿಗಳ ಸಂಬಂಧವಾಗಿ ಹುಟ್ಟಿಕೊಂಡಿವೆ ಎಂಬುದು. ಕುಮಾರ ರಾಮನ ಜಾತ್ರೆ, ಗವಿಸಿದ್ದೇಶ್ವರ ಜಾತ್ರೆ, ಚನ್ನಬಸವ ತಾತನ ಜಾತ್ರೆ ಇತ್ಯಾದಿ. ಗುರುಗಳು, ಸ್ವಾಮಿಗಳು, ಊರಿಗೆ ಸಹಾಯ ಮಾಡಿದವರು, ರೋಗ ನಿವಾರಿಸಿದವರು, ಶತ್ರುಗಳನ್ನು ಓಡಿಸಲು ಸಹಾಯ ಮಾಡಿದವರು ಇಲ್ಲಿ ಪೂಜಾರ್ಹರಾಗಿದ್ದು ಅವರ ಗದ್ದುಗೆ, ಸಮಾಧಿ, ದರ್ಗಾಗಳು ಪೂಜಾ ಸ್ಥಳಗಳಾಗಿವೆ. ಅವರ ಹೆಸರಿನಲ್ಲಿ ಜಾತ್ರೆ ಉತ್ಸವಗಳು ನಡೆಯುತ್ತವೆ. ಇಂಥ ಜಾತ್ರೆಗಳು ಆಯಾ ಪೂಜ್ಯರು ಸಮಾಧಿ ಹೊಂದಿದ ದಿನಗಳಂದು ನಡೆಯುತ್ತಿರಬಹುದು ಅಥವಾ ಅವರ ಜಯಂತಿಯ ದಿನಗಳಂದು ನಡೆಯುತ್ತಿರ ಬಹುದು. ಆದ್ದರಿಂದ ಋತುಮಾನಗಳಿಗೂ ಈ ಜಾತ್ರೆಗಳು ನಡೆಯುವ ದಿನಕ್ಕೂ ಸಂಬಂಧವಿಲ್ಲ

ದಿರಬಹುದು. ಇದನ್ನು ಸೂಕ್ಷ್ಮವಾಗಿ ಗಮನಿಸಿ ಕಂಡುಕೊಳ್ಳಬೇಕಾಗಿದೆ. ಐತಿಹಾಸಿಕತೆಯ ಕಾರಣದಿಂದಾಗಿಯೇ ಈ ಜಾತ್ರೆಗಳಲ್ಲಿ ಪೌರಾಣಿಕ ಹಾಗೂ ಕಾಲ್ಪನಿಕ ಅಂಶಗಳೂ ಕಡಿಮೆಯಾಗಿವೆ.

ಇಲ್ಲಿನ ಗವಿಸಿದ್ದೇಶ್ವರ ಜಾತ್ರೆ ಮೊದಲಾದವು ಉತ್ತರ ಕರ್ನಾಟಕದ ಜನಜೀವನದಲ್ಲಿ ಮಠಗಳು ಬೀರಿರುವ ಪ್ರಭಾವಕ್ಕೆ ನಿದರ್ಶನವಾಗಿವೆ. ವಿವಿಧ ಕೋಮು ಸೌಹಾರ್ದಗಳಿಗೆ ಸಂಬಂಧಿಸಿದ ಜಾತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಶೈವ ಜಾತ್ರೆಗಳಲ್ಲಿ ರುದ್ರಾಕ್ಷಿ ಭಸ್ಮಗಳಿದ್ದರೆ, ಉರುಸಿನಲ್ಲಿ ಸಕ್ಕರೆ ಉಪ್ಪು ಮಾರುವ ಅಂಗಡಿಗಳು ಕಾಣುತ್ತವೆ. ಮಹಾರಾಷ್ಟ್ರದ ಪ್ರಭಾವದಿಂದಾಗಿ ಪಾಂಡುರಂಗ ವಿಠಲ, ರುಕುಮಾಯಿ, ಜ್ಞಾನೇಶ್ವರ, ತುಕಾರಾಮ ಮುಂತಾದ ಜಾತ್ರೆಗಳಲ್ಲದೆ ಹಲವು ಜೈನ ಜಾತ್ರೆಗಳೂ ಇಲ್ಲಿವೆ. ಕೆಲವೊಂದು ಅಪ್ಪಟ ಗ್ರಾಮದೇವತಾ ಜಾತ್ರೆಗಳೂ ಇಲ್ಲಿವೆ. ಅಸ್ಪೃಶ್ಯರೂ, ದಲಿತರೂ ತಾತ್ಕಾಲಿಕವಾಗಿ ಪ್ರಾಮುಖ್ಯತೆ ಪಡೆಯುವ ಪೂಜ್ಯರಾಗುವ ಪ್ರಕ್ರಿಯೆಯನ್ನು ಈ ಜಾತ್ರೆಗಳಲ್ಲಿ ಕಾಣಬಹುದಾಗಿವೆ. ಇಲ್ಲಿಯ ಅಸುಪಾಸಿನ ಎರಡು ಗ್ರಾಮಗಳಲ್ಲಿ ಮಹಿಳೆಯರೇ ತೇರು ಎಳೆಯುವ ವೈಶಿಷ್ಟ್ಯವನ್ನು ಕಾಣಬಹುದು.

ಒಟ್ಟಿನಲ್ಲಿ ಈ ಸಂಗ್ರಹ ಉತ್ತರ ಕರ್ನಾಟಕದ ಜಾತ್ರೆಗಳ ಸ್ವರೂಪದ ಪ್ರತಿಬಿಂಬದಂತಿದ್ದು ಅತ್ಯಂತ ಮಹತ್ವದ ಸಾಮಗ್ರಿಯನ್ನು ಒದಗಿಸುತ್ತದೆ. ವಿವಿಧ ಪ್ರದೇಶಗಳಲ್ಲಿ ಸುತ್ತಾಡಿ ಅತ್ಯಂತ ಶ್ರಮವಹಿಸಿ, ಅಮೂಲ್ಯ ಸಾಮಗ್ರಿಯನ್ನು ಸಂಗ್ರಹಿಸಿಕೊಟ್ಟಿರುವ ಹಿರೇಮಠರಿಗೆ ನಮ್ಮ ಕೃತಜ್ಞತೆಗಳು. ಈ ಸಂಪಾದಕತ್ವದ ಹೊಣೆ ಒಪ್ಪಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಶ್ರೀ ಎಚ್.ಜೆ. ಲಕ್ಕಪ್ಪಗೌಡ ಅವರಿಗೂ ಸಹಕರಿಸಿದ ಅವರ ಸಿಬ್ಬಂದಿವರ್ಗಕ್ಕೂ ನಮ್ಮ ನಮನಗಳನ್ನು ಅರ್ಪಿಸುತ್ತೇವೆ.

ಬೆಂಗಳೂರು
೧೦-೧೦-೨೦೦೦

ಡಾ. ಸಂಧ್ಯಾರೆಡ್ಡಿ
ಡಾ. ದೇವೇಂದ್ರಕುಮಾರ ಹಕಾರಿ

ಮೊದಲ ಮಾತು

ಕೊಪ್ಪಳ ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳು. "ಕರ್ನಾಟಕ ಗ್ರಾಮ ಸೂಚಿ"ಯ ಪ್ರಕಾರ ಕೊಪ್ಪಳ ತಾಲೂಕಿನಲ್ಲಿ ೧೬೧, ಗಂಗಾವತಿ ತಾಲೂಕಿನಲ್ಲಿ ೧೬೬, ಕುಷ್ಟಗಿ ತಾಲೂಕಿನಲ್ಲಿ ೧೮೫, ಯಲಬುರ್ಗಾ ತಾಲೂಕಿನಲ್ಲಿ ೧೪೮ ಗ್ರಾಮಗಳಿವೆ. ಒಂದೊಂದು ಊರಲ್ಲೂ ಒಂದಲ್ಲ ಒಂದು ಜಾತ್ರೆ, ಉತ್ಸವ ನಡೆಯುತ್ತಲೆ ಇರುವುದರಿಂದ ಕೆಲವೇ ತಿಂಗಳ ಅವಧಿಯಲ್ಲಿ ತೀರ ಕಡಿಮೆ ಸಂಪನ್ಮೂಲಗಳನ್ನು ನೆಚ್ಚಿಕೊಂಡು ಕ್ಷೇತ್ರಕಾರ್ಯ ಮಾಡುವುದು ಅಸಾಧ್ಯ. ಈ ಬಗೆಯ ಕ್ಷೇತ್ರಕಾರ್ಯ ಒಬ್ಬ ವ್ಯಕ್ತಿಗಿಂತ ಒಂದು ಟೀಮಿನ ಮೂಲಕ ನಡೆಯುವುದಾದರೆ ಹೆಚ್ಚು ಸಮರ್ಪಕವಾಗುವ ಸಾಧ್ಯತೆಯಿದೆ. ಈ ಸಂದರ್ಭದಲ್ಲಿ ಇದಕ್ಕಂತೂ ಅವಕಾಶವಿಲ್ಲ.

ಕ್ಷೇತ್ರಕಾರ್ಯ ಮಾಡುವಾಗ ಹಲವಾರು ಕಷ್ಟಗಳು. ಸಂಬಂಧಪಟ್ಟ ಊರುಗಳಿಗೆ ಹೋಗಿ ಬರಲು ಸರಿಯಾದ ವಾಹನ ಸೌಕರ್ಯವಿರುವುದಿಲ್ಲ. ಹೋದಲ್ಲಿ ಸಮರ್ಪಕವಾಗಿ, ಸಮಗ್ರವಾಗಿ ಮಾಹಿತಿ ನೀಡಬಲ್ಲ ವಕ್ತಾರರು ಸಿಗುವರೆಂಬ ಭರವಸೆಯಿರುವುದಿಲ್ಲ. ಅಂಥವರನ್ನು ಪತ್ತೆ ಮಾಡಿ, ಅವರ ಮನಸ್ಥಿತಿಯನ್ನರಿತು ಮಾಹಿತಿಯನ್ನು ಹೊರಡಿಸುವಾಗಲೂ ಸಮಸ್ಯೆ. ನಮಗೆ ಬೇಕಾದ ವಿವರಗಳು ಸಿಗದೆ ಹೋಗಬಹುದು. ಸಿಕ್ಕ ಮಾಹಿತಿ, ಅಸತ್ಯ, ಉತ್ಪ್ರೇಕ್ಷೆ ಮೊದಲಾದ ದೋಷಗಳಿಂದ ಕೂಡಿರಬಹುದು. ಕೆಲವು ಸಲ ಅಗತ್ಯವಾಗಿ ಬೇಕಾದ ಮಾಹಿತಿಗಳು ಸಿಕ್ಕದಿರಬಹುದು. ಹೇಳಿ ಕೇಳಿ ದೇವರು, ಮತ ಪಂಥಕ್ಕೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ತಮ್ಮ ತಮ್ಮ ದೈವಗಳ ಹಿರಿಮೆ, ಮಹಿಮೆ ಹೆಚ್ಚು ಮಾಡಿ ಹೇಳುವ ತವಕ ಪೂಜಾರಿ, ಪುರೋಹಿತ, ಭಕ್ತವರ್ಗದಲ್ಲಿರುವುದು ಸಹಜ. ಕಲೆ ಹಾಕಬೇಕಿರುವ ಮಾಹಿತಿ ಹೆಚ್ಚು ಸಮಗ್ರವಾಗಿರಬೇಕಾದರೆ ಈ ಜನರನ್ನೇ ಅವಲಂಬಿಸಬೇಕಾಗುತ್ತದೆ. ಇವರು ಹೇಳದೆ ಬಿಟ್ಟಿರಬಹುದಾದ ಅಂಶಗಳನ್ನ ಜನಸಾಮಾನ್ಯರಿಂದ ಕೇಳಿ ಪಡೆಯಬೇಕಾಗುತ್ತದೆ. ಹಲವಾರು ಸ್ನೇಹಿತರ, ಹಿರಿಯರ ಸಹಾಯ ಪಡೆದು ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಲೋಪದೋಷಗಳಾಗುವ ಸಂಭವವಿದೆ.

ಕೃತಜ್ಞತೆ ಹೇಳುವಾಗ ಮೊಟ್ಟಮೊದಲು ನೆನೆಯಬೇಕಾದುದು ಜನ ಸಾಮಾನ್ಯರನ್ನು. ಸರಿಯಾದ ಸನ್ನಿವೇಶವಿದ್ದಲ್ಲಿ ಮುಚ್ಚುಮರೆಯಿಲ್ಲದೆ ಮುಲಾಜಿಲ್ಲದೆ ಮಾಹಿತಿ ನೀಡುವವರು

ಇವರೇ. ಆದರೆ ಒಮ್ಮೊಮ್ಮೆ ಇವರಲ್ಲಿ ಹೆಚ್ಚು ಸ್ವಾತಂತ್ರ್ಯ ಪ್ರವೃತ್ತಿಯಿರುವುದರಿಂದ ಹೊಣೆಗಾರಿಕೆಯಿಂದ, ಎಚ್ಚರಿಕೆಯಿಂದ ಹೇಳುವ ಪ್ರವೃತ್ತಿ ಕಾಣದಿರುವುದರಿಂದ ಎಡವಟ್ಟಾಗುವ ಸಾಧ್ಯತೆಯೂ ಇಲ್ಲದಿಲ್ಲ. ದೈವದ ಸಮೀಪದಲ್ಲಿರುವ ಪೂಜಾರಿಗಳು, ಧರ್ಮದರ್ಶಿಗಳು, ಕಮಿಟಿಯವರು, ಪುರೋಹಿತರು ಮಾಹಿತಿ ನೀಡುವಾಗ ಹೊಣೆಗಾರಿಕೆಯಿಂದ ವರ್ತಿಸಿದರೂ, ಪವಾಡ, ಆಧ್ಯಾತ್ಮಿಕತೆ ಅನಗತ್ಯ ವ್ಯಾಖ್ಯಾನಗಳಿಗೆ ಹೋಗಬಹುದು. ಇಂಥವುಗಳ ಬಗ್ಗೆ ಎಚ್ಚರಿಕೆ ಅಗತ್ಯ. ಜನರ ಮನೋಭಾವ ಹೇಗೆ ಕೆಲಸ ಮಾಡುತ್ತಿದೆ ಎಂಬ ಗ್ರಹಿಕೆಗಾಗಿ ಇಂಥ ಐತಿಹ್ಯಾದಿಗಳನ್ನು ಇಲ್ಲಿ ಉಳಿಸಿ ಕೊಂಡಿದ್ದೇವೆ. ಕ್ಷೇತ್ರ ಕಾರ್ಯವು ನಾಸ್ತಿಕನಾದ ನನ್ನನ್ನು ಬದಲಾಯಿಸಲಿಲ್ಲ. ನನ್ನ ಕುತೂಹಲ ಸತ್ಯವನ್ನು ಶೋಧಿಸುವತ್ತ ಇದ್ದುದರಿಂದ, ತೊಂದರೆ ಏನು?

ಇಲ್ಲಿ ಸಂಗ್ರಹಿಸಲಾದ ಮಾಹಿತಿ ಪರಿಪೂರ್ಣವಲ್ಲ. ಕೆಲವು ಗ್ರಾಮಗಳ ಒಂದು ವರ್ಷದ ಅವಧಿಯ ಎಲ್ಲ ಜಾತ್ರೆ ಉತ್ಸವಗಳ ಬಗ್ಗೆ ದಾಖಲಿಸಲಾಗಿದೆ. ಕೆಲವು ಕಡೆ ಹಾಗೆ ಮಾಡದೆ ಪ್ರಮುಖ ಜಾತ್ರೆಯ ವಿವರ ಮಾತ್ರ ನೀಡಿದೆ. ಇದರರ್ಥ ಆ ಗ್ರಾಮದಲ್ಲಿ ಬೇರೆ ಉತ್ಸವಗಳು ಇರುವುದಿಲ್ಲವೆಂದಲ್ಲ. ಅವನ್ನು ದಾಖಲಿಸಲಾಗಲಿಲ್ಲವಷ್ಟೇ. ಜಾತ್ರೆಗಳಿಗೆ ಹೆಚ್ಚು ಒತ್ತುಕೊಟ್ಟಿದ್ದರೂ ಜಾತ್ರೆಯಂತೆ ದೊಡ್ಡ ಪ್ರಮಾಣದಲ್ಲಿ ನಡೆಯುವ ಉತ್ಸವಗಳನ್ನೂ ಇಲ್ಲಿ ದಾಖಲಿಸಿದೆ. ಕೆಲವು ಸಲ ಸಣ್ಣ ಗ್ರಾಮಗಳಿಗೆ ಸಣ್ಣ ಉತ್ಸವಗಳೆ ಜಾತ್ರೆಗಳಂತೆ ತೋರಿದರೆ ಆಶ್ಚರ್ಯವಿಲ್ಲ. ಹಾಗೆ ನೋಡಿದರೆ ಜಾತ್ರೆಯ ಎಲ್ಲ ಲಕ್ಷಣಗಳನ್ನು ಒಳಗೊಂಡ ಒಂದು ಸಮಗ್ರ ವ್ಯಾಖ್ಯೆಯನ್ನು ಕೊಡುವುದು ಕಷ್ಟ. ಒಂದು ಸಂದರ್ಭದಲ್ಲಿ ಸೇರುವ ಅಧಿಕ ಪ್ರಮಾಣದ ಜನರ ಆಧಾರದ ಮೇಲೆ ಜಾತ್ರೆಯೆಂದು ನಿರ್ಧರಿಸಬೇಕೆ? ರಥೋತ್ಸವವಾದರೆ ಮಾತ್ರ ಅದನ್ನು ಜಾತ್ರೆಯೆನ್ನಬೇಕೆ? ಬರಿ ಉಚ್ಚಾಯ (ಉತ್ಸವ)ಗಳಾದರೆ ಅದು ಜಾತ್ರೆಯಾಗದೇ? ದಿನದ ಆಧಾರದಿಂದ ಹೇಳುವುದಾದರೆ, ಒಂದೇ ದಿನದ ವಿಧಿಯಾಚರಣೆ ಮತ್ತು ಕಾರ್ಯಕ್ರಮಗಳು ಕೆಲವು ಕಡೆ ನಡೆದರೆ, ಇನ್ನು ಕೆಲವು ಕಡೆ ವಾರ, ಎರಡು ವಾರಗಳವರೆಗೆ ನಡೆವ ವಿಧಿಯಾಚರಣೆಗಳು ಮತ್ತು ಕಾರ್ಯಕ್ರಮಗಳಿರಬಲ್ಲವು. ಹೀಗಾಗಿ ದಿನಗಳ ಲೆಕ್ಕವನ್ನು ಮುಂದಿಟ್ಟುಕೊಂಡು ಜಾತ್ರೆ ಹೌದೆ, ಅಲ್ಲವೆ ಎಂದು ನಿರ್ಧರಿಸುವುದು ಕಷ್ಟ. ಈ ಬಗೆಯ ಸಮಸ್ಯೆಗಳಿಗೆ ನಮಗೆ ಅಂತಿಮವಾಗಿ ಕಾಣುವ ಪರಿಹಾರವೆಂದರೆ ಈ ಎಲ್ಲ ಲಕ್ಷಣಗಳಲ್ಲಿ ಒಂದೋ, ಹಲವೋ ಅಂಶಗಳು ವ್ಯಕ್ತವಾದರೆ ಅದನ್ನು ಜಾತ್ರೆ ಎನ್ನಬಹುದು. ಹಲವು ಸಂಸ್ಕೃತಿಗಳ ಜನ ಸಂಕುಲದ ನಾಡು ನಮ್ಮದು. ಇಲ್ಲಿ ಸ್ತ್ರೀ ದೈವದ ಆರಾಧನಾ ಸ್ವರೂಪವೇ ಬೇರೆ, ಪುರುಷ ದೈವದ್ದೇ ಬೇರೆ. ಶಿಷ್ಟ ಪರಂಪರೆ, ಅಶಿಷ್ಟ ಪರಂಪರೆ; ಪುರುಷ ದೈವ, ಸ್ತ್ರೀ ದೈವ, ಪೌರಾಣಿಕ ಹಿನ್ನೆಲೆಯ ದೈವ, ಐತಿಹಾಸಿಕ ಕಾಲದ ದೈವ, ಸಮಕಾಲೀನ ದೈವ ಹೀಗೆ ಹಲವು ನೆಲೆಗಳ ವಿಚಿತ್ರ 'ಮಿಸಳಬಾಜಿ' ಜಾತ್ರಾ ಪರಂಪರೆಯಲ್ಲಿದೆ. ಶಿಷ್ಟ ಪರಂಪರೆಯ ಪೌರಾಣಿಕ ಹಿನ್ನೆಲೆಯ ದೈವಗಳಿರುವಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ಆಚರಣೆಯ ಕೇಂದ್ರ ಸ್ಥಾನದಲ್ಲಿರುತ್ತಾರೆ. ಕುತನೂರಿನಂಥ ಕಡೆ ಸ್ತ್ರೀ ದೈವವನ್ನು ಅವರು ವೈದಿಕೀಕರಿಸಿದ್ದಾರೆ. ವಿಭಿನ್ನ ಆರಾಧನಾ ಸಂಪ್ರದಾಯಗಳ ಕಲಬೆರಕೆಯ ವಿಷಯದ ಬಗೆಗಂತೂ ಯಾವುದಕ್ಕು ರಿಯಾಯಿತಿ ಇಲ್ಲ.

ಅಂದರೆ ಅಪವಾದವೇ ಇಲ್ಲದಂತೆ ಪ್ರತಿಯೊಂದು ಜಾತ್ರೆಯಲ್ಲಿ 'ಕಲಬೆರಕೆ'ಯ ಲಕ್ಷಣ ಎದ್ದು ಕಾಣುತ್ತದೆ. ಶಿಷ್ಟ ಪರಂಪರೆಯ ದೈವಕ್ಕೆ ಜಾತ್ರೆಗೆ ಲಿಖಿತ ಪರಂಪರೆಯ ಆಧಾರ ಒದಗಿಸುವ ಯತ್ನವಿರುತ್ತದೆ.

ಬಹುತೇಕ ಎಲ್ಲೆಡೆ ಜಾತ್ರೆಯ ಹ್ಯಾಂಡ್‌ಬಿಲ್ (ಕರಪತ್ರ) ಹಾಕಿಸುವುದು ರೂಢಿ. ಅವುಗಳಲ್ಲಿ ಜಾತ್ರೆಯ ಪ್ರತಿದಿನದ ವಿವರಗಳಿರುತ್ತವೆ. ಕೆಲವು ಕಡೆ ದೈವದ ಚರಿತ್ರೆಯನ್ನು ಕಿರುಹೊತ್ತಿಗೆಯಾಗಿ ಪ್ರಕಟಿಸಿದ್ದು ಕಾಣುತ್ತದೆ. ಇಂಥ ಕೆಲವು ಗ್ರಂಥಗಳನ್ನು ಸಂಗ್ರಹಿಸಿದೆ. ಮತ್ತೆ ಕೆಲವು ಪ್ರಕಟಿತ ಕೃತಿ ಅಲಭ್ಯವಾದವು.

ಒಂದು ತಿಂಗಳ ಅವಧಿಯಲ್ಲಿ ಎರಡು-ಮೂರು ಜಾತ್ರೆಗಳನ್ನು ಸಾಕ್ಷಾತ್ತಾಗಿ ಕಂಡು ಮಾಹಿತಿ ಕಲೆ ಹಾಕಲು ಸಾಧ್ಯವಾಯಿತು. ಇದು ಆಕಸ್ಮಿಕವಾಗಿ ಒದಗಿಬಂದ ಸಂದರ್ಭ. ಇನ್ನುಳಿದಂತೆ ಜನರ ಬಾಯಿಂದ ಕೇಳಿಯೆ ಬರೆಯಲಾಯಿತು. ಇದರಿಂದಾಗುವ ಇತಿ-ಮಿತಿಯ ಬಗ್ಗೆ ಬೇರೆ ಹೇಳಬೇಕಿಲ್ಲ.

ಒಂದು ತಿಂಗಳ ಕಾಲ ಕೊಪ್ಪಳ ಜಿಲ್ಲೆಯ ೩೭ ಗ್ರಾಮಗಳಿಗೆ ಬಸ್ ಅಥವಾ ಮೋಟರ್ ಬೈಕ್ ಮೇಲೆ ಹೋಗಿ ೫೮ ಜಾತ್ರೆಗಳ ವಿವರಗಳನ್ನು ಸಂಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಹಲವಾರು ಜನರಿಂದ ನಾನಾ ಬಗೆಯ ಸಹಾಯ, ಸಹಕಾರ, ಉಪಕಾರವಾಗಿದೆ. ರಾತ್ರಿ ಜಿಟಿ ಜಿಟಿ ಮಳೆಯಲ್ಲಿ ನೆಂದು ಹನುಮಸಾಗರದಾಚೆಯ ಕಬ್ಬರಗಿ ಮಾಸ್ತೆಮ್ಮನ ಗುಡಿಗೆ ಹೋದಾಗ ಶೇಂಗಾ ಚೀಲ ಕಾದುಕೊಂಡಿದ್ದ ಹನುಮಂತ, ಶರಣಪ್ಪ ಎಂಬ ರೈತರು ಊಟ ಕೊಟ್ಟು, ರಾತ್ರಿ ಇರಲು ವ್ಯವಸ್ಥೆ ಮಾಡಿದ್ದನ್ನು ಹೇಗೆ ಮರೆಯಲಾದೀತು? ಇಂಥ ಹಲವಾರು ಶ್ರೀಸಾಮಾನ್ಯರೆ ಈ ಬರಹಕ್ಕೆ ಮೂಲ ಕಾರಣಕರ್ತರು. ನಾಡಿನ ಈ 'ದೈವ'ದವರಿಗೆ ಸಲ್ಲತಕ್ಕ ಕೃತಿ ಇದು. ತಮ್ಮ ಗಾಡಿಯ ಮೇಲೆ ನಾನು ಹೇಳಿದಲ್ಲೆಲ್ಲ ಹೊತ್ತೊಯ್ದು ಹಗಲು ರಾತ್ರಿ ಕಷ್ಟ ಬಿದ್ದವರು ಹೊಸಪೇಟೆಯ ಹೆಡ್‌ಮಾಸ್ಟರ್ ಬಿ. ವೆಂಕೋಬನಾಯಕ ಅವರು ಮತ್ತು ಫೋಟೋಗ್ರಾಫರ್ 'ವೆಂಕಿ'. ಅವರಿಗೆಷ್ಟು ಕೃತಜ್ಞನಾದರೂ ಸಾಲದು.

ಕ್ಷೇತ್ರಕಾರ್ಯದಲ್ಲಿ ನೆರವಾದ ಇತರ ಕೆಲವರ ಹೆಸರು ಕಾಣಿಸಲೇ ಬೇಕಿದೆ - ಹುಲಿಗಿಯ ಬಡಿಗರ ಭೀಮಪ್ಪ, ಕಬ್ಬೇರಕುಲದ ಪೂಜಾರಿಗಳು (ಹುಲಗಪ್ಪ, ರಾಮಣ್ಣ), ಇಂದರಗಿಯ ಸುಣಗಾರ ಮಲ್ಲಮ್ಮ, ಕುಷ್ಟಗಿಯ ಶರಣಪ್ಪ ವಡಿಗೇರಿ, ಬಾಕುಡೆ, ಅರವಿಂದ ದೇಸಾಯಿ, ಆಶ್ರಿತ ವಕೀಲರು, ನಟರಾಜ ಸೋನಾರ, ಬಸವಗೌಡ ಮಾದಾಪುರ, ಗಂಗಾವತಿಯ ಕುಷ್ಟಗಿ ಬಸಣ್ಣ, ಹಿರೇಮಠ ನಿರಂಜನ ಬುಕ್ ಡಿಪೊ, ಶ್ರೀಪಾದರಾಯರು, ಪೂಜಾರಿ ಕೃಷ್ಣಭಟ್ಟರು, ಜಯರಾಮಾಚಾರ್ಯ, ಸಾಲಗುಂದಿ ವೀರಭದ್ರಪ್ಪ, ತಾತನಮಠದ ಪೂಜಾರಿಗಳು, ಕಲ್ಮಠದವರು, ಕುಕನೂರ ನಾಗರಾಜ ದೇವಾಸಿ ಮತ್ತು ಅವರ ತಾಯಿಯವರು, ಸೋಮಯ್ಯ ವೀರಯ್ಯ ಧೂಪದ ಗುಡ್ಡೆಪ್ಪನ ಮಠ; ಕೊಪ್ಪಳದ ಅಲ್ಲಮಪ್ರಭು ಬೆಟದೂರ, ಎಚ್. ಎಸ್. ಪಾಟೀಲ, ತುಬಾಕಿ, ಗವಿಸಿದ್ದೇಶ್ವರ ಮಠದ ಸರ್ವಾಧಿಕಾರಿಗಳು, ಸ್ವಾಮಿಗಳು, ಆನೆಗೊಂದಿಯ ಅರ್ಚಕ ಶ್ರೀನಾಥ

ಆಚಾರ್ಯರು; ಕನಕಗಿರಿಯ ಅರ್ಚಕ ವಿ. ರಾಮಾಚಾರ್, ಎಲಬುರ್ಗಾದ ಶಿವಬಸಪ್ಪ ಹೂಗಾರ; ಕಲ್ಲೂರಿನ ಕಲ್ಲಪ್ಪ ಶಿಕ್ಷಕರು; ವಜ್ರಬಂಡಿಯ ಭೀಮಸೇನ ದೇಸಾಯಿ, ಬಂಡೇಚಾರ್ ದಿಗ್ಗಾವಿ; ಲಿಂಗನಬಂಡಿಯ ಗಂಗಮ್ಮ, ಎಚ್ಚರಸ್ವಾಮಿ ಮೌನೇಶ್ವರಮಠ; ಮುದೇನೂರಿನ ಶಶಿಧರ ಸ್ವಾಮಿಗಳು; ಚಂದಾಲಿಂಗೇಶ್ವರದ ಸಿದ್ರಾಮಯ್ಯನ ನಂದೀಕೋಲ ಮಠ; ಕಬ್ಬರಗಿಯ ಹನುಮಂತ, ಶರಣಪ್ಪ, ಯಮುನಪ್ಪ, ಇವರೆಲ್ಲರಿಗೂ ಋಣಿಯಾಗಿದ್ದೇನೆ.

ನನ್ನನ್ನು ಈ ಕೆಲಸಕ್ಕೆ ತೊಡಗಿಸಿದವರು ಶ್ರೀಮತಿ ಡಾ. ಸಂಧ್ಯಾರೆಡ್ಡಿ ಮತ್ತು ಗುರುಗಳಾದ ಡಾ. ದೇವೇಂದ್ರಕುಮಾರ ಹಕಾರಿ ಅವರು. ಇವರಿಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರಿಗೂ ಅಭಿನಂದನೆಗಳನ್ನು ಹೇಳುವುದು ನನ್ನ ಕರ್ತವ್ಯವಾಗಿದೆ.

- ಎಸ್. ಎಸ್. ಹಿರೇಮಠ

ಪರಿವಿಡಿ

ಪೀಠಿಕೆ

ನಿರ್ದಿಷ್ಟ ಜನ ಸಮುದಾಯ ಆರಾಧಿಸುವ ನಾಡಿನ ಪುರುಷ ಅಥವಾ ಸ್ತ್ರೀ ದೈವ ಆ ಜನ ಸಮೂಹದ ಸಾಂಸ್ಕೃತಿಕ ಪರಂಪರೆಯ ಪ್ರತೀಕ. ಜನಪದರು 'ಭಯ', 'ಭಕ್ತಿ'ಯಿಂದಾಗಿ ಹೆಚ್ಚು ಪರಿಷ್ಕಾರಕ್ಕೊಳಪಡಿಸದೆ ರಕ್ಷಿಸಿಕೊಂಡು ಬಂದಿರುವ ಮೌಖಿಕ ಮತ್ತು ಆಚರಣಾತ್ಮಕ ಜಾನಪದ ಖಣಿ ಅದು. ನಂಬುಗೆ ಮತ್ತು ವಿಧಿಕ್ರಿಯೆಗಳ ಉಚಿತ ಬೆಸುಗೆ ಅಲ್ಲಿದೆ. ವರ್ಷಾವಧಿಯಲ್ಲಿ ಪೂಜೆ, ಉತ್ಸವಾದಿಗಳಿದ್ದರೂ ನಿಯಮಿತ ಕಾಲದ ಪುನರಾವರ್ತನೆಗೊಳ್ಳುವ 'ಜಾತ್ರೆ' ಪರಂಪರೆಯ ಕೆನೆಗಟ್ಟಿದ ಸಂದರ್ಭ. ಇಂಥ ಮಹತ್ವದ ಸಂದರ್ಭದ ಅಧ್ಯಯನ, ನಾಡಿನ ಜನಕೋಟಿಯ ವಿಸ್ಮೃತಿಗೀಡಾದ ಚಾರಿತ್ರಿಕ ಪುಟಗಳ ಹುಡುಕಾಟದ ದೃಷ್ಟಿಯಿಂದಲೂ ಮುಖ್ಯ.

ಒಟ್ಟಾರೆ ದೈವವನ್ನು ಮತ್ತು ಜಾತ್ರೆಯನ್ನು ಜನರ ಸಾಮಾಜಿಕ ಚಲನಶೀಲತೆಯ ಒಂದು ಜೀವಂತ ಭಾಗವೆಂದು ಗ್ರಹಿಸಿಕೊಳ್ಳಬೇಕಿದೆ. ನಿಜ, ಅಲ್ಲಿ ನಂಬಲರ್ಹವಲ್ಲದ ಮೂಢನಂಬಿಕೆಗಳು, ಪವಾಡಗಳು ಬೆಸೆದುಕೊಂಡಿರಬಹುದು, ಅವನ್ನು ವೈಚಾರಿಕ ನೆಲೆಯಲ್ಲಿ ಖಂಡಿಸುವುದು ಒಂದು ಹಂತ. ಜನರ ಮನಸ್ಸಿನ ಒಲವು ನಿಲವು ತಿಳಿಯುವ ಸಾಧನಗಳೆಂದು ಭಾವಿಸುವುದು ಇನ್ನೊಂದು ಹಂತ.

* * *

ಗಮನಾರ್ಹವಾದ ಬದಲಾವಣೆಗಳನ್ನು ಕಂಡ ವಸಾಹುತೋತ್ತರ ಭಾರತ ತನ್ನೊಡಲಲ್ಲಿ ಭೂತಕಾಲದ ಅವಶೇಷಗಳನ್ನು ಉಳಿಸಿಕೊಂಡೇ ಬಂದಿತು. 'ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ' ಸಾಲಿನಲ್ಲಿ ಸೇರಿರುವಾಗಲೂ ಅದು ಸನಾತನ ಪರಂಪರೆ ಪದ್ಧತಿಗಳನ್ನು ಬಾಳುತ್ತಿದೆ. ಗ್ರಾಮೀಣ ಜನಸಂಖ್ಯೆಯೆ ಅಧಿಕವಾಗಿರುವ ನಮ್ಮ ನಾಡಿನಲ್ಲಿ ನೆಲಸುಗಾರ ಬೇಸಾಯಗಾರರ ಭೂಸಂಬಂಧಿ ಸಂಸ್ಕೃತಿ ಸಾರ್ವತ್ರಿಕ ನೆಲೆಯೊಂದನ್ನು ನಿರ್ಮಿಸಿದೆ. ಇನ್ನೊಂದೆಡೆ ವಲಸೆಗಾರರಾದ ಪಶುಪಾಲಕ ಜನಸಮುದಾಯಗಳು ಈಗಲೂ ಅಲ್ಲಲ್ಲಿ ಉಸಿರಿಡಿದಿವೆ. ಅವು ಪಿತೃಪ್ರಧಾನ ಸಮಾಜಗಳಾದ್ದರಿಂದ ಪುರುಷ ದೈವಗಳನ್ನು ಪ್ರಮುಖವಾಗಿ ಆರಾಧಿಸುತ್ತ ಬಂದಿವೆ. ಮೂಲತಃ ಮಾತೃಪ್ರಧಾನ ಸಮಾಜದ ಕೃಷಿ ಸಂಸ್ಕೃತಿಯಲ್ಲಿ ಮಾತೃ ದೈವಗಳೆ ಅಧಿಕ ಮತ್ತು ಪ್ರಮುಖ. ಆರ್ಯ ವೈದಿಕರ ಆಗಮನದ ಮೊದಲು ಈ ದೇಶದಲ್ಲಿದ್ದ ಪ್ರಧಾನ ಜನವರ್ಗ ದ್ರಾವಿಡರದ್ದು. ಅವರಲ್ಲೂ ನೆಲಸುಗಾರ ಮತ್ತು ವಲಸೆಗಾರ ಎಂಬ ಎರಡು ಪ್ರಧಾನ ನೆಲೆಗಳಿದ್ದವು. ಆರ್ಯ ವೈದಿಕರೂ ಪಶುಪಾಲಕ ವಲಸೆಗಾರರೇ. ಆರ್ಯ, ದ್ರಾವಿಡ, ನಾಗ ಮೊದಲಾದ ಹಲವಾರು

ಜನಾಂಗ ಮೂಲದ ಸಮುದಾಯಗಳು ಸಂಘರ್ಷ ಮತ್ತು ಸಮನ್ವಯದ ನಿರಂತರ ಪ್ರಕ್ರಿಯೆಯಲ್ಲಿ ಸಂಕೀರ್ಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಸೃಜಿಸಿದರು. ಇವುಗಳಲ್ಲಿ ಅಂತಿಮವಾಗಿ ಯಜಮಾನಿಕೆಯನ್ನು ಸ್ಥಾಪಿಸಿಯದು ವೈದಿಕ ಪಿತೃಪ್ರಧಾನ ಸಮಾಜ-ಸಂಸ್ಕೃತಿ.

ಹಬ್ಬ ಮತ್ತು ಜಾತ್ರೆಗಳ ಗುಣಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವು ಕ್ರಮವಾಗಿ ಬೇಸಾಯಗಾರರ 'ಹಳ್ಳಿ ಸಂಸ್ಕೃತಿ' ಮತ್ತು ವಲಸೆಗಾರರ 'ಹಟ್ಟಿ ಸಂಸ್ಕೃತಿ'ಗಳಿಂದ ಹುಟ್ಟಿದುವೆಂಬುದು ಖಚಿತ. ಕೃಷಿ ಸಂಸ್ಕೃತಿ ಮೂಲದ ವಾರ್ಷಿಕ ಆವರ್ತನೆಯ ಹಬ್ಬಗಳಾಗಲಿ; ವಲಸೆಗಾರರ ನೆಲೆಯಿಂದ ಹುಟ್ಟಿ ಬಂದ ಜಾತ್ರೆಗಳಾಗಲಿ ಇಂದು ತಮ್ಮ ಮೂಲ ಸ್ವರೂಪವನ್ನು ಯಥಾವತ್ತಾಗಿ ಉಳಿಸಿಕೊಳ್ಳದೆ ಇರಲು ಮೇಲೆ ಹೇಳಿದ ಕಾರಣವಿದೆ. ಕಲಬೆರಕೆ ಮತ್ತು ಕಾಲ ಕಾಲಕ್ಕೆ ನಡೆದ ಸೇರ್ಪಡೆ, ಅಳಿವು-ಉಳಿವುಗಳಿಂದಾಗಿ ಜಾತ್ರೆ ಹಬ್ಬ ಉತ್ಸವಾದಿಗಳಲ್ಲಿ ಪರಿವರ್ತನೆಗಳಾಗುತ್ತ ಬಂದಿವೆ. ಇಷ್ಟಾಗಿಯೂ ಜಾತಿಗಳು ಹೇಗೊ ಹಾಗೆ ಈ ಸಾಂಸ್ಕತಿಕಾಂಶಗಳೂ ಕೂಡ ತಮ್ಮ ಅನನ್ಯ ಸ್ವರೂಪವನ್ನು ಅಷ್ಟಿಷ್ಟು ತೋರಿಸಿಕೊಂಡಿವೆ.

ದ್ರಾವಿಡರಲ್ಲಿ ನೆಲಸುಗಾರರು ದಲಿತರು. ಅವರಿಂದ ಕೃಷಿ ಸಂಸ್ಕೃತಿ - ಹಬ್ಬ, ಜಾತ್ರೆ ಹೇಗೆ ಬೆಳೆದವು, ಭಾರತೀಯ ಸಂಸ್ಕೃತಿಗೆ ಸಂದ ಕೊಡುಗೆ ಏನು, ಇವೆ ಮೊದಲಾದ ವಿಷಯಗಳು ಕುತೂಹಲಕಾರಿ.[1] ಈ ವಿಷಯದ ಚರ್ಚೆ ಇಲ್ಲಿ ಅನಗತ್ಯ ಮತ್ತು ಅಪ್ರಸ್ತುತವಾದರೂ ಜಾತ್ರೆಗಳ ಹುಟ್ಟು ಬೆಳವಣಿಗೆಯ ಬಗ್ಗೆ ವಿವರಿಸಬೇಕಾದ ಪ್ರಮೇಯವಿರುವಲ್ಲಿ ಈ ಉಲ್ಲೇಖಗಳು ಅನಿವಾರ್ಯವೇ. ಯಾವುದೇ ಹಬ್ಬ, ಜಾತ್ರೆ ಮೊದಲಾದ ಸಾಂಸ್ಕೃತಿಕಾಂಶಗಳು ಆಯಾ ಸಮಾಜದ ಆರ್ಥಿಕ, ರಾಜಕೀಯ, ಸಾಮಾಜಿಕ ಬೆಳವಣಿಗೆಯ ಸ್ವರೂಪವನ್ನು ಆಧರಿಸಿರುವುದರಿಂದ ಈ ಮಾತನ್ನು ಇಲ್ಲಿ ಪ್ರಸ್ತಾಪಿಸ ಬೇಕಾಯಿತು. ಪಶುಪಾಲನೆಯ ವೃತ್ತಿಗನುಗುಣವಾಗಿ ವಲಸೆಗಾರರಾಗಿದ್ದ ಜನಕುಲಗಳು ಹಳ್ಳಿ, ಊರುಗಳಲ್ಲಿ ನೆಲೆನಿಲ್ಲ ತೊಡಗಿದಾಗ ಕೃಷಿ ಮತ್ತು ಪಶುಸಂಗೋಪನೆಗಳು ಸಮೀಕರಣಗೊಂಡವು.

ನಮ್ಮ ನಾಡಿನ ಸಹಸ್ರಾರು ವರ್ಷಗಳ ಹಂತ ಹಂತದ ಬೆಳವಣಿಗೆಯ ಅವಧಿಯಲ್ಲಿ ನಡೆದ ಬಹುಮುಖಿ ಪ್ರಗತಿಯ ಹಿನ್ನೆಲೆಯಲ್ಲಿ ಜಾತ್ರೆಗಳ ಅಧ್ಯಯನ ನಡೆಸಬೇಕಿದೆ. ಅವು 'ಇಂದು' ಹೇಗೆ ಅಸ್ತಿತ್ವದಲ್ಲಿವೆ ಎಂಬುದರ ಆಧಾರದಲ್ಲಿ ಮಾತ್ರ ಈ ಅಧ್ಯಯನ ಸಾಧ್ಯ. ಈ ದೃಷ್ಟಿಯಿಂದ ಕೊಪ್ಪಳ ಜಿಲ್ಲೆಯ ಜಾತ್ರೆಗಳ ದಾಖಲೀಕರಣವನ್ನು ಕ್ಷೇತ್ರಕಾರ್ಯದ ಮೂಲಕ ಇಲ್ಲಿ ಕೈಕೊಳ್ಳಲಾಗಿದೆ. ಮುಂದಿನ ಪರಿಶೋಧನೆಗಳಿಗೆ ಈ ಬಗೆಯ ಆಕರ ಉಪಯುಕ್ತವಾಗ ಬಹುದು ಎಂಬ ಆಶಯವಿದೆ.

---

1. ಈ ಬಗ್ಗೆ 'ಕರ್ನಾಟಕ ಸಂಸ್ಕೃತಿ-ಪರಂಪರೆ' ಭಾಗ 1 ಹಬ್ಬಗಳು' ಮತ್ತು 'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ 2 ಜಾತ್ರೆಗಳು' ಎಂಬ ಕೃತಿಗಳಲ್ಲಿ ವಿವರವಾಗಿ ವಿವೇಚಿಸಿದ್ದೇನೆ.

ನಮ್ಮ ರಾಜ್ಯದಲ್ಲಿ ೧೯೯೭ರಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಜಿಲ್ಲೆಗಳಲ್ಲಿ ಕೊಪ್ಪಳವೂ ಒಂದು. ಹೈದ್ರಾಬಾದ ಕರ್ನಾಟಕವೆಂದು ಹೆಸರುಪಡೆದ ರಾಯಚೂರು ಜಿಲ್ಲೆಯ ದಕ್ಷಿಣದ ನಾಲ್ಕು ತಾಲೂಕುಗಳನ್ನು ಸೇರಿಸಿ ಕೊಪ್ಪಳ ಜಿಲ್ಲೆಯನ್ನು ರಚಿಸಲಾಯಿತು. ಕೊಪ್ಪಳ, ಗಂಗಾವತಿ, ಯಲಬುರ್ಗಾ ಮತ್ತು ಕುಷ್ಟಗಿ ಎಂಬ ಈ ನಾಲ್ಕು ತಾಲೂಕುಗಳು ತುಂಗಭದ್ರೆ, ಕೃಷ್ಣೆಗಳ ನಡುವಿದ್ದರೂ ಪೂರ್ಣ ನೀರಾವರಿ ಸೌಲಭ್ಯ ಕಾಣದ ದುರ್ದೈವಿಗಳು. (ಕೊಪ್ಪಳ ತಾಲೂಕಿನ ಪೂರ್ವ ಭಾಗ, ಗಂಗಾವತಿ ತಾಲೂಕಿನ ಕೆಳ ಭಾಗ ಇದಕ್ಕೆ ಅಪವಾದ). ಈ ಎರಡೂ ನದಿಗಳು ಭೌಗೋಲಿಕ ಸೀಮೆಗಳಾಗಿದ್ದರಿಂದ (ದೊ ಆಬ್) ಆಚೆ ದಡದ ಜನ ಸಂಸ್ಕೃತಿಗಳಿಂದ ಸ್ವಲ್ಪ ಭಿನ್ನವಾದ ಅನನ್ಯತೆಯನ್ನು ಇಲ್ಲಿ ಗುರುತಿಸಲು ಸಾಧ್ಯವಾಗಬಹುದು. ಆಡಳಿತ ಸೌಕರ್ಯಕ್ಕಾಗಿ ಈಚೆಗೆ ಮಾಡಿಕೊಂಡಿರುವ ಜಿಲ್ಲೆ, ತಾಲೂಕಗಳ ವ್ಯಾಪ್ತಿ "ಸಾಂಸ್ಕೃತಿಕ ಸೀಮೆ"ಯಿಂದ ಪ್ರತ್ಯೇಕವಾಗಿರ ಬಲ್ಲದೆಂಬುದನ್ನು ಅವಶ್ಯ ಗಮನಿಸಬೇಕು. ಒಂದು ಜಿಲ್ಲೆ ಅಥವಾ ತಾಲೂಕನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ಷೇತ್ರ ಕಾರ್ಯ ಮಾಡುವಾಗ ಮತ್ತು ಕೃತಿ ರಚನೆಗಿಳಿದಾಗ ಉಂಟಾಗುವ ಮಿತಿ ಇದು.

ಹುಬ್ಬಳ್ಳಿ, ಗದಗ ಮಾರ್ಗವಾಗಿ ಹೊಸಪೇಟೆ ಕಡೆ ಬರುವ ದಾರಿಯಲ್ಲಿ ಕೊಪ್ಪಳದಿಂದಲೆ ಕಲ್ಲುಗುಡ್ಡಗಳ ವೈಶಿಷ್ಟ್ಯ ಪ್ರಾರಂಭ. ಇಡೀ ಮಧ್ಯ ಕರ್ನಾಟಕದ ಕಲ್ಲು ಕಾಡು ಮತ್ತು ಅದರ ಮಧ್ಯೆ ಹರಿವ ಹಳ್ಳ, ನದಿ ಪ್ರದೇಶ ಶಿಲಾಯುಗದ, ಚರಿತ್ರಯುಗದ ಅವಶೇಷಗಳಿಂದ ತುಂಬಿ ಹೋಗಿವೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗದ ಇಂಥ ಹೆಬ್ಬಂಡೆ ಗುಡ್ಡಗಳಲ್ಲೇ ಅಶೋಕನ ಶಾಸನಗಳು ದೊರಕಿದ್ದು. ಕೊಪ್ಪಳದ ಹೆಬ್ಬಂಡೆ ಗುಡ್ಡಗಳಲ್ಲಿ (ಗವಿಮಠ, ಪಾಲ್ಕಿಗುಂಡ) ಅವನ ಶಾಸನಗಳಿವೆ. ಇದರ ಪಕ್ಕದ ಗುಹೆಗಳಲ್ಲಿ (ಮತ್ತು ಗಂಗಾವತಿ ತಾಲೂಕಿನ ಅನೇಕ ಕಲ್ಲುಗುಡ್ಡಗಳಲ್ಲಿ) ಶಿಲಾಯುಗದ ಮಾನವನ ಚಿತ್ರ ಕಲೆಯ, ಗೋರಿಗಳ ಅವಶೇಷಗಳಿವೆ. "ಗವಿ" ಸಿದ್ದೇಶ್ವರ, ಮಠದೇಗುಲವಿದೆ. ಕಾಲಾಂತರದಲ್ಲಿ ಬೌದ್ಧರಂತೆ ಜೈನರೂ ಕೊಪ್ಪಳವನ್ನು ತಮ್ಮ ಒಂದು ಮುಖ್ಯ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ಇದಕ್ಕೆ ಮುಖ್ಯ ಆರ್ಥಿಕ ಕಾರಣ ಕೊಪ್ಪಳ, ಆ ಕಾಲದ ಪ್ರಮುಖ ವ್ಯಾಪಾರಿ ಸ್ಥಳವಾಗಿದ್ದುದು. ಬಯಲು ಸೀಮೆಯಲ್ಲಿ ಸುರಕ್ಷಿತ ಹೆಬ್ಬಂಡೆ ಗುಡ್ಡಗಳಿಂದ ಆವೃತ್ತವಾಗಿದ್ದುದು. ವ್ಯಾಪಾರದ ಹೆದ್ದಾರಿಯಲ್ಲೇ ಕೊಪ್ಪಳವಿತ್ತು. ಕನ್ನಡದ ಲಭ್ಯ ಮೊದಲ ಕೃತಿ 'ಕವಿರಾಜಮಾರ್ಗ' ತಿರುಳ್ಗನ್ನಡ ಸೀಮೆ ಹೇಳುವಾಗ ಕೋಪಣ (ಕೊಪ್ಪಳ) ನಗರವನ್ನು ಉಲ್ಲೇಖಿಸಿದೆಯಷ್ಟೇ. ಕಾಲಕಾಲಕ್ಕೆ ಪ್ರಮುಖ ರಾಜವಂಶಗಳ ಆಳ್ವಿಕೆಗೂ ಒಳಪಟ್ಟಿತು ಈ ನಗರ. ಹೀಗೆ ಸಹಸ್ರಾರು ವರ್ಷಗಳ ಹೆಮ್ಮೆಯ ಪರಂಪರೆಯಿದ್ದರೂ ಕೊಪ್ಪಳ ಉಳಿದ ನಗರಗಳ ಜತೆ ಹೋಲಿಸಿದರೆ ಹಳ್ಳಿಯೇ. ಈ ತಾಲೂಕು ಕೇಂದ್ರ ದಾವಣಗೆರೆಯಂಥ ತಾಲೂಕು ಕೇಂದ್ರವೂ ಅಲ್ಲ. ಗ್ರಾಮ ಲಕ್ಷಣವನ್ನು ಕಳೆದುಕೊಳ್ಳಲಾರದೆ ಜಿಲ್ಲಾ ಕೇಂದ್ರವಾಗಿ ರೂಪುಗೊಳ್ಳಲೆತ್ನಿಸುತ್ತಿದೆ. ಅಭಿವೃದ್ಧಿಯ ಇಂದಿನ ಅನುಕ್ರಮ ಬಂಡವಾಳಶಾಹಿಕರಣ. ಇದಕ್ಕೆ ಸಂಪದ್ಭರಿತ ಹಿನ್ನಾಡಿನ (ಹಿಂಟರ್‌ಲ್ಯಾಂಡ್) ಅಗತ್ಯವಿದೆ. ಅದರ

ಕೊರತೆಯಿಂದ ಕೊಪ್ಪಳ ಜಿಲ್ಲೆ ಸೊರಗಿಕೊಂಡಿದೆ. ಅನಿಶ್ಚಿತ ಮಳೆಗಾಲವನ್ನು ನಚ್ಚಿ ಬೇಸಾಯ ವೃತ್ತಿಯಿಂದ ಜೀವನ ನಡೆಸಬೇಕಿರುವ ಜನಸಮೂಹ ಈ ಪ್ರದೇಶದ್ದು. ಅಪವಾದದಂತಿರುವ ಗಂಗಾವತಿ ತಾಲೂಕು ಕೆಲ ಭಾಗ ತುಂಗಭದ್ರೆಯ ನೀರಿನಿಂದ ಕಳಕಳಿಸುತ್ತಿದ್ದರೂ ತನ್ನ ವಾಣಿಜ್ಯ, ವ್ಯಾಪಾರ, ವ್ಯವಹಾರಗಳಿಗೆ ಮೊದಲಿನಿಂದಲೂ ಕೊಪ್ಪಳವನ್ನು ಕೇಂದ್ರವನ್ನಾಗಿ ಕಂಡುಕೊಂಡಿಲ್ಲ. ಬಳ್ಳಾರಿ, ಚಿತ್ರದುರ್ಗ ಪ್ರದೇಶಗಳ ಅಳಿದುಳಿದ ಕುರುಚಲು ಕಾಡಿನಲ್ಲಿ ಬುಡಕಟ್ಟು ಜೀವನ ವಿಧಾನವನ್ನು ಅಷ್ಟಿಷ್ಟು ಉಳಿಸಿಕೊಂಡಿರುವ ಕಾಡು ಗೊಲ್ಲರು, ಮ್ಯಾಸನಾಯಕರಂಥ ಮೂಲನಿವಾಸಿಗಳು ಈ ಪ್ರದೇಶದಲ್ಲಿಲ್ಲ. ನಾಡಿನ ಪ್ರಖ್ಯಾತ ಏಕೈಕ ಸಮಾಜೋ ಧಾರ್ಮಿಕ ಚಳುವಳಿಯಾದ ವೀರಶೈವದ ಪ್ರಭಾವಕ್ಕೆ ಒಳಗಾದ ಸಮೀಪ ಪ್ರದೇಶಗಳಲ್ಲಿ ಇದೂ ಒಂದು. ಹೀಗಾಗಿ ಮೇಲ್ಜಾತಿ ಧರ್ಮ ಪ್ರಭಾವದಲ್ಲಿ ಬ್ರಾಹ್ಮಣೀಕರಣದಂತೆ 'ಲಿಂಗಾಯತೀಕರಣ' ಕ್ರಿಯೆ ಇಲ್ಲಿಯ ವಿಶೇಷ. ಮುಸ್ಲಿಂ ಅರಸರ ಆಡಳಿತಕ್ಕೆ ಒಳಗಾಗಿದ್ದುದರಿಂದ ಮುಸ್ಲಿಂ ಸಂಸ್ಕೃತಿ ಪ್ರಭಾವವೂ ಬೆರೆತುಕೊಂಡಿದೆ. ಉಳಿದಂತೆ ದಲಿತ ಮತ್ತು ಇತರ ಶೋಷಿತ ಸಂಸ್ಕೃತಿಗಳಿವೆ.

* * *

ದೇಗುಲ ಮತ್ತು ಜಾತ್ರೆಗೆ ನಿಕಟ ಸಂಬಂಧವಿದೆ. ದೇಗುಲದ ಹುಟ್ಟು ಯಜ್ಞ ಯಾಗಾದಿಗಳ ವೇದಗಳಿಂದಲ್ಲ; ದ್ರಾವಿಡ ಮೂಲದ ಆಗಮಗಳಿಂದ ಆಗಿದೆ ಎಂದು ವಿದ್ವಾಂಸರು ಹೇಳುತ್ತಿದ್ದು; ಸಾವಿನ ವಾಸ್ತವ, ಆತ್ಮದಲ್ಲಿ ನಂಬಿಕೆ, ಪರಮಾತ್ಮದ ಕಲ್ಪನೆ ಇವಕ್ಕೂ ದೇಗುಲ ರಚನೆಗೂ ಸಂಬಂಧವಿದೆ ಎಂದು ನಿರ್ವಚಿಸುತ್ತಾರೆ. ಜಾತ್ರೆಗೆ ಸಂಬಂಧಿಸಿ ಹೇಳುವುದಾದರೆ ಸ್ಥಾವರ ದೇಗುಲದ ಸ್ಥಿರ ದೇವರನ್ನು, ಉತ್ಸವಮೂರ್ತಿಯ ಮೂಲಕ ಜಂಗಮಗೊಳಿಸಿ, ಜಂಗಮ ದೇಗುಲದಂಥ ತೇರಿನಲ್ಲಿರಿಸಿ ವರ್ಷದ ಅಥವಾ ಹಲವು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಪಾದಗಟ್ಟೆಯವರೆಗೆ ಎಳೆದು ಮತ್ತೆ ಯಥಾಸ್ಥಾನಕ್ಕೆ ತಂದು ನಿಲ್ಲಿಸುವ ಪದ್ಧತಿಯ ಒಳಮರ್ಮವೇನು? ನಂಬಿರುವ ದೈವವೊಂದು ಜೀವನಂತವಿದೆ ಎಂದು ಪುನಃ ಪುನಃ ಮನವರಿಕೆ ಮಾಡಿಕೊಳ್ಳುವುದೇ? ಬಹುಶಃ ಇದೇ ಕಾರಣಕ್ಕಾಗಿ ಅಲ್ಲವೇ ದೈವವಾಗುವ ಪೂರ್ವದಲ್ಲಿ ಅಂದರೆ ವ್ಯಕ್ತಿ ಜೀವಂತವಿದ್ದಾಗ ಮಾಡಿದ ಕೆಲವು ಘಟನೆಗಳನ್ನು ಜಾತ್ರೆಯಲ್ಲಿ ಪುನರಾವರ್ತಿಸುತ್ತಿರುವುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಈ ಬಗೆಯ ಆಚರಣೆಗಳನ್ನು ಇದಾವ ಹಿನ್ನೆಲೆಯಿಲ್ಲದ ದೈವಕ್ಕೆ ಆರೋಪಿಸಿ, ಜಾತ್ರೆ ಪ್ರಾರಂಭಿಸುವುದೂ ಇದೆ. ದೈವ ಪ್ರಾಚೀನವಿರಲಿ, ಅರ್ವಾಚೀನವಿರಲಿ; ಆಚರಣೆಗಳು, ಪದ್ಧತಿಗಳು ಮಾತ್ರ ರೂಢಿಗತವಾಗಿದ್ದು ಪ್ರಾಚೀನವೇ. ಈ ದೃಷ್ಟಿಯಿಂದ ಒಂದೊಂದು ಪ್ರದೇಶದ ವಿಶಿಷ್ಟ ಆಚರಣೆಗಳನ್ನು ಆ ಪ್ರದೇಶದ ಸನ್ನಿವೇಶ ಸಂದರ್ಭಗಳ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗುತ್ತದೆ. ಕನ್ನಡ ರಾಷ್ಟ್ರೀಯತೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ದೈವಗಳ ಜಾತ್ರೆಗಳ ಸಮಗ್ರ ದಾಖಲೀಕರಣವಾದ ನಂತರವಷ್ಟೇ ಈ ಬಗೆಯ ಕೆಲಸ ಪ್ರಾರಂಭವಾಗಬೇಕು.

ತೇರೆಳೆಯುವಾಗ ಜಾತಿ-ಮತ ಪಂಥದ ಭೇದ ಸಂಪೂರ್ಣ ಅಳಿಸಿಹೋಗುವ ಲಕ್ಷಣವನ್ನು ತುಂಬ ಮುಖ್ಯವೆಂದು ಭಾವಿಸಬೇಕಿದೆ. ಹಾಗೆ ನೋಡಿದರೆ ಜಾತ್ರೆ ಊರೊಟ್ಟಿನ ಸಾಂಪ್ರದಾಯಿಕ ಕಡ್ಡಾಯದ ಕೆಲಸವಾಗಿ ಉಳಿದು ಬಂದಿರುವಲ್ಲಿ ಜಾತಿ ಶ್ರೇಣೀಕರಣ ಮತ್ತು ವರ್ಗ ವ್ಯತ್ಯಾಸ ತನ್ನ ವಿಕೃತ ಮುಖವನ್ನು ತೂರಿಸುವುದೂ ನಿಜ. ಆದರೂ ಇದನ್ನು ಮೀರಿದ, ಮಾನವನ ಘನತೆ ಗೌರವವನ್ನು ಎತ್ತಿ ಹಿಡಿಯುವ ಸಮಾನ ನೆಲೆಯ ಜಾತ್ರೆಯ ಆಚರಣೆಗಳು ಅಪವಾದದಂತಾದರೂ ಇವೆ. ಇಂಥಲ್ಲಿ ಅಸ್ಪೃಶ್ಯರಾದ ದಲಿತರೂ ಕೂಡ ತಾತ್ಕಾಲಿಕವಾಗಿ ಅತ್ಯಂತ ಪ್ರಮುಖರೂ, ಪೂಜ್ಯರೂ ಆಗುತ್ತಾರೆ. ಅರಸಿಕೆರೆಯ ದಂಡಿನ ದುರಗಮ್ಮನ ಜಾತ್ರೆಯನ್ನು ಇದಕ್ಕೆ ನಿದರ್ಶನವಾಗಿ ಹೇಳಬಹುದು.

ಜಾತ್ರೆಯ ಮತ್ತೇತರ ಚಟುವಟಿಕೆಗಳಲ್ಲಿ ತುಂಬ ಮುಖ್ಯವಾದುದು ವ್ಯಾಪಾರ. ಹಿಂದಿನ ಸಮಾಂತಶಾಹಿ ಸಮಾಜದಲ್ಲಿ, ಇಂದಿನಂತೆ ಬೇಕಾದ ವಸ್ತುಗಳು, ಬೇಕಾದಾಗ, ಬೇಕಲ್ಲಿ ಸಿಗುತ್ತಿರಲಿಲ್ಲ. ವಾರ್ಷಿಕ ಜಾತ್ರೆಗಳಲ್ಲೇ ಆ ಪ್ರದೇಶದ ಗ್ರಾಮೀಣರು ತಮಗೆ ಬೇಕಾದ ಸಾಮಾನು ಕೊಳ್ಳಬೇಕಿತ್ತು, ಮೋಜು ಪಡೆಯಬೇಕಿತ್ತು, ಮನರಂಜನೆ ಒದಗಿಸಿಕೊಳ್ಳಬೇಕಿತ್ತು. ಜಾತ್ರಾ ಪರಂಪರೆ ಬಹಳಷ್ಟು ಕಡೆ ಇಂದಿಗೂ ಈ ಲಕ್ಷಣವನ್ನು ಉಳಿಸಿಕೊಂಡಿದೆ. ಇದರಿಂದ ಜಾತ್ರೆಯ ಸಮಯದಲ್ಲಿ ಒಂದು ಗ್ರಾಮ ತಾತ್ಕಾಲಿಕ ಪುರವಾಗಿ (ಪಟ್ಟಣ) ಮಾರ್ಪಡುತ್ತಿತ್ತು.

ಉಚ್ಚಾಯ (ಉತ್ಸವ) ಮತ್ತು ತೇರುಗಳಂತೆ ದೈವದ ಮದುವೆ, ಬೇಟೆ, ಜಗಳ ಕೊನೆಗೆ ಶಯನೋತ್ಸವ ಇದು ಹಲವಾರು ಜಾತ್ರೆಗಳಲ್ಲಿ ಕಂಡು ಬರುವ ಸಾಮಾನ್ಯ ಆಶಯ. ಬಹುತೇಕ ಇಲ್ಲೆಲ್ಲಾ ಕಂಡುಬರುವುದು ಫ್ಯೂಡಲ್ ದೊರೆಗಳ ಜೀವನದ ಒಂದು ಮಾದರಿಯೇ, ಅನುಕರಣೆಯೇ. ಕೆಲವು ಸಲ ಸಾಮಂತಶಾಹಿ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ, ಸಮರ್ಥಿಸಿಕೊಳ್ಳುವುದಕ್ಕೆ ಜಾತ್ರೆಗಳು ಸಹಾಯ ಮಾಡಿವೆ.

ಗಂಡು ದೇವರುಗಳ ರಥೋತ್ಸವಗಳೇ ಅಧಿಕ. ಇವನ್ನು ಗಂಡಸರೇ ಎಳೆಯುವುದು ರೂಢಿ. ಕೊಪ್ಪಳ ಜಿಲ್ಲೆಯಲ್ಲಿ ಅಪರೂಪದ ಎರಡು ಗ್ರಾಮಗಳಲ್ಲಿ ಮಹಿಳೆಯರೇ ಎಳೆಯುವ ರಥೋತ್ಸವಗಳಿವೆ. ಅಪವಾದದಂತಿರುವ ಈ ನಿದರ್ಶನಗಳು ಈಚಿನವು. ಹಳೆಯ ಜಾತ್ರೆಗಳ ಜತೆ ಹೊಸವು ಹುಟ್ಟುತ್ತಲೆ ಇರುತ್ತವೆ ಎಂಬುದು ಕ್ಷೇತ್ರಕಾರ್ಯದಲ್ಲಿ ಕಂಡು ಬಂದ ಇನ್ನೊಂದು ಅಂಶ. ಪೌರಾಣಿಕ ಯುಗದ, ಚಾರಿತ್ರಿಕ ಯುಗದ ದೈವಗಳಿರುತ್ತವೆ. ಕಾಲದ ದೃಷ್ಟಿಯಿಂದ ಪೌರಾಣಿಕ ದೈವಗಳು ಪ್ರಾಚೀನ, ಚಾರಿತ್ರಿಕ ದೈವಗಳು ಅರ್ವಾಚೀನ. ಪಂಪಾಪತಿ ಕಂಪಮ್ಮ, ಲಕ್ಷ್ಮಿ ನರಸಿಂಹನಂಥ ಪೌರಾಣಿಕ ದೈವಗಳ ಜಾತ್ರೆಗಳಿರುವಂತೆ ಕುಮಾರರಾಮನಂಥ ಐತಿಹಾಸಿಕ ವ್ಯಕ್ತಿಗಳ ಜಾತ್ರೆಗಳಿವೆ. ಚನ್ನಬಸವ ತಾತನಂಥ ತೀರ ಈಚಿನ ವ್ಯಕ್ತಿಗಳ ಜಾತ್ರೆಗಳೂ ಇವೆ. ಇದರರ್ಥ ಜಾತ್ರೆಯು ಪರಂಪರೆ ಆಧುನಿಕರಿಗೆ ಅನ್ವಯಿಸಿಯೂ ನಿರಂತರವಾಗಿ ಮುಂದುವರೆಯುವ ಲಕ್ಷಣವನ್ನು ಹೊಂದಿದೆ. ಇದು ಜಾತಿ ಜನಾಂಗಗಳ ಸಾಂಸ್ಕೃತಿಕ

ಪರಂಪರೆಯನ್ನು ಅನುಸರಿಸಿ ಆಚರಣೆಯಲ್ಲಿ ವಿಭಿನ್ನತೆಯನ್ನು ತೋರ್ಪಡಿಸುತ್ತದೆ. ಮೇಲ್ಜಾತಿ ಜನರ ದೈವ, ಶ್ರಮಿಕ ಕುಲಗಳ ದೈವಗಳ ಜಾತ್ರೆಗಳನ್ನು ಈ ಹಿನ್ನೆಲೆಯಲ್ಲಿ ಗುರುತಿಸಬಹುದು. ಶೋಷಿತ ಜಾತಿಗಳ ಜತೆ ಬ್ರಾಹ್ಮಣರು ಸೇರಿಕೊಂಡಾಗ ಉಂಟಾಗುವ ಸಂಕೀರ್ಣ ಸ್ವರೂಪಕ್ಕೆ ಹುಲಿಯ ಜಾತ್ರೆ ಉತ್ತಮ ನಿದರ್ಶನ. ಇಲ್ಲಿ ಶೋಷಿತರು ಇನ್ನೂ ಉಳಿದಿದ್ದರೆ ಕುತನೂರಿನಲ್ಲಿ (ಮಹಾಮಾಯಿ) ಅವರು ಸಂಪೂರ್ಣ ಇಲ್ಲವಾಗುತ್ತಾರೆ.

ಈ ಬಗೆಯ ತಾತ್ತ್ವಿಕ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಕೆಲವು ಜಾತ್ರೆಗಳ ವಿಷಯವನ್ನು ಸಂಗ್ರಹಿಸಲು ಇಲ್ಲಿ ಯತ್ನಿಸಲಾಗಿದೆ.

●

ಕೊಪ್ಪಳ ತಾಲೂಕಿನ ಜಾತ್ರೆಗಳು

ಗವಿಸಿದ್ದೇಶ್ವರ ಜಾತ್ರೆ :

ಜಿಲ್ಲಾ ಕೇಂದ್ರವಾದ ಕೊಪ್ಪಳದಲ್ಲಿ ಪ್ರತಿವರ್ಷ ನಡೆವ ಬಹುದೊಡ್ಡ ಜಾತ್ರೆ ಗವಿಸಿದ್ದೇಶ್ವರನದು. ೧೫ ದಿನ ನಡೆವ ಜಾತ್ರೆಗೆ 'ಲಕ್ಷಾಂತರ' ಜನ ಸೇರುತ್ತಾರೆ. ಕೊಪ್ಪಳದ ಸುತ್ತಮುತ್ತಲ ಗ್ರಾಮಗಳು ಮತ್ತು ದೂರದ ಊರುಗಳ ಭಕ್ತರು ಪಾಲ್ಗೊಳ್ಳುತ್ತಾರೆ. ನೂರಾರು ಅಂಗಡಿ ಮಳಿಗೆಗಳಿರುತ್ತವೆ.

ಕಾಶಿಯ ಜಂಗಮವಾಡಿ ಮಠದಿಂದ ರುದ್ರಮುನಿ ಎಂಬ ಜಂಗಮ ಸದಾಸಂಚಾರಿಯಾಗಿ ಶಿವಮತ ಪ್ರಸಾರ ಮಾಡುತ್ತ ಬಂದು ಕೊಪ್ಪಳದಲ್ಲಿ ನೆಲಸಿ ಗವಿಮಠವನ್ನು ಸ್ಥಾಪಿಸಿದರೆಂದು ಮಠಕ್ಕೆ ಸಂಬಂಧಪಟ್ಟ ಕೆಲವು ಗ್ರಂಥಗಳು ಹೇಳುತ್ತವೆ. ("ಶ್ರೀ ಗವಿಸಿದ್ದೇಶ್ವರ ಪುರಾಣಂ" ವೈ. ನಾಗೇಶ ಶಾಸ್ತ್ರಿ, "ಶ್ರೀ ಗವಿಮಠದ ಉಗಮ ಹಾಗೂ ಪರಂಪರೆಯ ಚರಿತ್ರೆ", ಶಿವಲಿಂಗಪ್ಪಯ್ಯ ಶಾಸ್ತ್ರಿ) ರುದ್ರಮುನಿಗಳಿಂದ ಮೊದಲು ಮಾಡಿ ೧೬ ಗುರುಗಳ ಹೆಸರು ಮತ್ತು ಪವಾಡ ಕತೆ ದಾಖಲಾಗಿದ್ದು, ಚಾರಿತ್ರಿಕವಾಗಿ ಮಠ ೫೦೦-೬೦೦ ವರ್ಷಗಳ ಹಿಂದೆ ಪ್ರಾರಂಭವಾಗಿರಬೇಕೆಂದು ಊಹಿಸಲವಕಾಶವಿದೆ. ಈ ಎಲ್ಲ ಸ್ವಾಮಿಗಳು ಮುಖ್ಯವಾಗಿ ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಸಂಚರಿಸುತ್ತ ಪವಾಡಗಳನ್ನು ಮತ್ತು ಜನೋಪಯೋಗಿ ಕಾರ್ಯಗಳನ್ನು ಮಾಡುತ್ತ ಬಂದವರು.

ಕೊಪ್ಪಳದ ಆಗ್ನೇಯಕ್ಕೆ ೨ ಕಿಲೋಮೀಟರು ದೂರದ ಹೆಬ್ಬಂಡೆ ಗುಡ್ಡದಲ್ಲಿರುವ 'ಗವಿಮಠ' ಹೆಸರಿಗೆ ತಕ್ಕಂತೆ ಗವಿಗಳ ಮಠವೇ. ಮೊದಲ ರೂಪವನ್ನು ಊಹಿಸಿ ಕೊಳ್ಳಲಾಗದಷ್ಟು ಬದಲಾಗಿರುವ ಮಠ ಕಾಲಕಾಲಕ್ಕೆ ಹಲವು ಮಾರ್ಪಾಟು ಕಂಡಿದೆ; ಹೊಸ ಹೊಸ ಕಟ್ಟಡಗಳು ಸೇರ್ಪಡೆಯಾಗುತ್ತ ಬಂದಿವೆ. ಇಂದಿಗೂ ಈ ಪ್ರಕ್ರಿಯೆ ನಿಂತಿಲ್ಲ.

ಅರ್ಧ ಮುಗಿದಿರುವ ಹೆಬ್ಬಾಗಿಲೇ ಸಾಕ್ಷಿ. ಸುಮಾರು ೫೦ ಎಕರೆಯಷ್ಟು ಪ್ರದೇಶವನ್ನು ವ್ಯಾಪಿಸಿರುವ ಮಠದ ಸಮುಚ್ಚಯದ ಕೆಳಭಾಗದಲ್ಲಿ ಕಲ್ಯಾಣಮಂಟಪ, ಅಂಗಡಿ ಮಳಿಗೆಗಳು, ತೇರುಮಂಟಪ, ವಿದ್ಯಾರ್ಥಿ ವಸತಿ ನಿಲಯದ ಕೋಣೆಗಳು, ಆಫೀಸು, ಸಂಗೀತಶಾಲೆ, ಆಯುರ್ವೇದ ವಿದ್ಯಾಲಯ, ಕೆಲವು ಸಮಾಧಿ ಗದ್ದುಗೆಗಳಿವೆ. ಅರಳಿ ಮತ್ತು ಬೇವಿನ ಮರದ ಕಟ್ಟೆಯಲ್ಲಿ ಬನ್ನಿ ಮಾಂಕಾಳಿ, ಹುಲಿಗೆಮ್ಮ, ನಾಗನಕಲ್ಲುಗಳಿವೆ. ಬೃಹತ್ ಕಲ್ಲುಗುಡ್ಡದ ಒಂದು ಪ್ರಮುಖ ಭಾಗವನ್ನೇ ಗವಿಮಠ ಆವರಿಸಿದೆ. ಅದರ ಪಶ್ಚಿಮ ಭಾಗದಲ್ಲಿ ಹೋಗಿ ನೋಡಿದರೆ (ಕೆರೆಯ ರಸ್ತೆ) ಕಡಿದಾದ ಬೃಹತ್ ಬಂಡೆ ಗೋಡೆ ನೂರಾರು ಅಡಿ ಎತ್ತರವಿದ್ದು

ಹಾಸಿಕೊಂಡಿರುವ ಅಖಂಡ ಶಿಲೆಯ ಕಲ್ಪನೆ ನೀಡುತ್ತದೆ. ಇದರ ಮಗ್ಗುಲ ಕಲ್ಲುಗುಡ್ಡದಲ್ಲೇ ಅಶೋಕನ ಶಿಲಾಶಾಸನವಿದೆ. ಅದರ ಪಕ್ಕದಲ್ಲಿ ಶಿಲಾಯುಗದ ಜನ ಬಿಡಿಸಿರುವ ಗುಹಾ ಚಿತ್ರಗಳಿವೆ. ಅಶೋಕನ ಶಾಸನವಿರುವ ಬಂಡೆಯಿಂದ ಉತ್ತರಕ್ಕೆ ನೋಡಿದರೆ ಗವಿಮಠದ ಕೈಲಾಸಮಂದಿರದ ಗೋಪುರ ಕಾಣಿಸುತ್ತದೆ. ಈ ಅಖಂಡ ಶಿಲೆಯಲ್ಲೇ ಎರಡು ದೊಡ್ಡ ಗುಳಿಗಳಲ್ಲಿ ನೀರು ನಿಂತು ಬಾವಿಗಳಾಗಿವೆ. ವಿಸ್ತಾರವಾದ ಎರೆ ಭೂಮಿ ಬಯಲ ಮಧ್ಯೆ ಕೊಪ್ಪಳದ ಈ ಕಲ್ಲುಗುಡ್ಡಗಳು ಎರಡು ಕಡೆ ಶ್ರೇಣಿಗಳಾಗಿ ಮೈಚಾಚಿವೆ. ಕೊಪ್ಪಳದ ಪಶ್ಚಿಮದ ಗುಡ್ಡಗಳಲ್ಲಿ ಕೋಟೆ, ಮಳೆಮಲ್ಲಪ್ಪನ ಗುಡಿ, ಪಾಲ್ಕಿ ಗುಂಡ (ಅಶೋಕನ ಶಾಸನ) ಮೊದಲಾದ ಸ್ಮಾರಕಗಳಿವೆ.

ಕೈಲಾಸಮಂದಿರ ಕಲ್ಲುಗುಡ್ಡದ ತುದಿಯ ಹಲವಾರು ಎಕರೆ ಪ್ರದೇಶದ ವಿಸ್ತಾರದಲ್ಲಿದ್ದು ಅಲ್ಲಿಯೆ ಅನ್ನಪೂರ್ಣೇಶ್ವರಿ ಗುಡಿ ಇದೆ. ಇಲ್ಲಿಂದ ಹತ್ತಾರು ಮೆಟ್ಟಿಲು ಕೆಳಗಿಳಿದು ಬಂದರೆ ಈ ಹೆಬ್ಬಂಡೆಯನ್ನೆ ಮೇಲ್ಛಾವಣಿ ಮಾಡಿಕೊಂಡು ಗುಹೆಗಳನ್ನು ಕೋಣೆಗಳನ್ನಾಗಿ ಕೆಲವು ಕಲ್ಲು ಕಟ್ಟಡಗಳನ್ನು ಸೇರಿಸಿ, ಗುಡ್ಡವನ್ನೆ ಮಠವನ್ನಾಗಿ ಮಾಡಿಕೊಂಡಿದ್ದಾರೆ. ಮಧ್ಯ ಭಾಗದಲ್ಲಿ ಲೈಬ್ರರಿ, ಆಫೀಸು, ಶಿವಾನುಭವ ಮಂಟಪ, ಸದರ ('ಬಣ್ಣದ ಗದ್ದಿಗಿ'), ಸ್ನಾನ ಗೃಹ, ದಾಸೋಹ ಗೃಹ, ಪ್ರಸಾದ ನಿಲಯ, ಗವಿಸಿದ್ದೇಶ್ವರ ಜೀವಂತ ಸಮಾಧಿ ಗದ್ದುಗೆ, ದನಗಳ ಕೊಟ್ಟಿಗೆ, ಕಣಜಗಳ ಕೋಣೆ, ಕಾರಭಾರಿಗಳ ಆಫೀಸು, ಮೊದಲಾದ ಭಾಗಗಳಿವೆ. ಈ ಮಠದ ಹಿಂದೆ ಆಗಿಹೋದ ೮ ಸ್ವಾಮಿಗಳ ಗದ್ದುಗೆ ಅಲ್ಲಲ್ಲಿ ಚದುರಿದಂತಿದ್ದು ಇವುಗಳಲ್ಲಿ ಕೇಂದ್ರ ದೈವವಾಗಿರುವುದು ೧೧ನೇ ಸ್ವಾಮಿಗಳಾದ ಗವಿಸಿದ್ದೇಶ್ವರರ ಸಮಾಧಿ. ಇದು ಗರ್ಭಗೃಹದಲ್ಲಿ ನೆಲಕ್ಕಂಟಿಸಿ ಕೊಂಡೆ ಪಿರಮಿಡ್ ಆಕಾರದಲ್ಲಿ ರಚಿತವಾದ ३'-४' ಎತ್ತರದ ಗದ್ದುಗೆ. ತುದಿಯಲ್ಲಿ ಕರಿಶಿಲೆಯ ಮುಖ, ಮೇಲೆ ೭ ಹೆಡೆ ಸರ್ಪ. ನಾಲ್ಕೂ ದಿಕ್ಕಿಗೆ ಗರ್ಭಗೃಹಕ್ಕಿಳಿದು ಬರಲು ಮೆಟ್ಟಿಲುಗಳಿದ್ದು ಕಟಾಂಜನವಿದೆ. ಇದೇ ಪ್ರದಕ್ಷಿಣ ಪಥವೂ ಕೂಡ. ಗವಿಯಂತೆ ರಚನೆಗೊಂಡಿರುವ ಇದರ ಮೇಲೆ ಗೋಪುರ, ಕಳಸಗಳಿವೆ. ಗದ್ದುಗೆಗೆ ಬಣ್ಣದ ಬಟ್ಟೆ ಹೊದಿಸಿ ಗುಲಮೊಹರ್ ಮತ್ತು ಮಲ್ಲಿಗೆ ಹೂಗಳಿಂದ ಅಲಂಕರಿಸಿದ್ದರು. ಗದ್ದುಗೆಯ ಪಕ್ಕ ಸಣ್ಣ ಕೊಡದಲ್ಲಿ ತೆಂಗಿನಕಾಯಿಯಿಟ್ಟು ಖಣ ಏರಿಸಿ ಪೂಜಿಸಿದ್ದಾರೆ. ಹಾವುಗೆ, ಚಿಕ್ಕ ಗಣಪತಿ ವಿಗ್ರಹಗಳೂ ಇವೆ.

ಪ್ರಸಾದ ನಿಲಯದ ಗುಹಾಭಾಗದ ಕಲ್ಲುಬಂಡೆಗೆ ಹಸಿರು ಬಳೆ ನೇತು ಹಾಕಿದ್ದಾರೆ. ಇದು ಅನ್ನಪೂರ್ಣೇಶ್ವರಿ. ಪ್ರತಿ ಮಂಗಳವಾರ ಸ್ವಾಮಿಗಳು ಈ ಅಮ್ಮನ ಅನುಷ್ಠಾನಕ್ಕೆ ಕೂರುತ್ತಾರೆ. ಅಂದು ಉಪವಾಸ ಮಾಡುತ್ತಾರೆ. ಅಮಾವಾಸ್ಯೆಗೆ ವಿಶೇಷ ಪೂಜೆ, ಎಡೆ ಸಲ್ಲುತ್ತದೆ. ಭಕ್ತರ ಗದ್ದಲ ಈ ಇಕ್ಕಟ್ಟು ಜಾಗೆಯಲ್ಲಿ ಜಾಸ್ತಿ ಆದುದರಿಂದ ಇದರ ಮೇಲ್ಭಾಗದಲ್ಲಿ ಗುಡಿ ಕಟ್ಟಿಸಿದ್ದಾರೆ. ಮಠಗಳಲ್ಲಿ ತಾಯಿ ದೈವದ ಅಸ್ತಿತ್ವ ಒಂದು ಮಹತ್ವದ ಅಂಶ. ३೦-४೦

ವರ್ಷಗಳ ಹಿಂದೆ ಇಲ್ಲೆಲ್ಲ ಚಿರ್ತ, ಹೊನ್ನಿಗದಂಥ ಅಪಾಯಕಾರಿ ಪ್ರಾಣಿಗಳಿದ್ದುದನ್ನು ನೋಡಿದವರಿದ್ದಾರೆ.

ಮಠದಲ್ಲಿ ನಡೆಯುವ ವಾರ್ಷಿಕ ಜಾತ್ರೆಯನ್ನು ಬಿಟ್ಟರೆ ಪ್ರತಿ ಅಮಾವಾಸ್ಯೆಗೆ 'ಹರಕೆ ತೇರು' ಎಂಬ ಉತ್ಸವವಿರುತ್ತದೆ. ಗದ್ದುಗೆಯ ಪಕ್ಕದ ಸಣ್ಣ ಕೋಟೆಯಲ್ಲಿ ಈ ಚಿಕ್ಕ ತೇರಿದೆ. ಬೇಡಿಕೊಂಡ ಭಕ್ತರು ೧೦೦೧ ರೂ. ಕೊಟ್ಟು ಇದನ್ನು ಗದ್ದುಗೆಯ ಸುತ್ತ ಐದು ಸಲ ಎಳೆಯುತ್ತಾರೆ. ಪ್ರತಿ ಸೋಮವಾರ 'ಶಿವಾನುಭವ ಗೋಷ್ಠಿ'. ಪ್ರತಿ ದಿನ ರಬ್ಬಳಿಗಿ ಸಾರು (ಜೋಳದ ಅಂಬಲಿ) ದಾಸೋಹ. ಸುಮಾರು ೧೫,೦೦೦ ಎಕರೆ ಜಮೀನು, ೬೩ ಶಾಖಾಮಠಗಳು ಈ ಗವಿಮಠಕ್ಕೆ ಸೇರಿದ್ದವು. ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಈಗಲೂ ಕೆಲವು ಶಾಖಾಮಠಗಳ ಜತೆ ಸಂಬಂಧ ಉಳಿದಿದೆ. ಈಗ ಮಠಕ್ಕೆ ಸ್ವಲ್ಪ ಮಾತ್ರ ಆಸ್ತಿ ಉಳಿದಿದ್ದು ಕೆಲವು ಶಾಲೆ, ಕಾಲೇಜುಗಳನ್ನು ನಡೆಸಲಾಗುತ್ತಿದೆ. (೨ ಹೈಸ್ಕೂಲು, ೧ ಕಾಲೇಜು, ೧ ಪ್ರಾಥಮಿಕ ಶಾಲೆ, ೧ ಅಂಗನವಾಡಿ, ೧ ನರ್ಸರಿ, ೧ ಆಯುರ್ವೇದ ಕಾಲೇಜು) ಹಿಂದೆ ಸಂಸ್ಥಾನಮಠ ಅಥವಾ ಜಹಗೀರು ಮಠವಾಗಿದ್ದರಿಂದ ಸ್ವಾಮಿಗಳು ಧಾರ್ಮಿಕ ಸಭೆ, ಆಡಳಿತ ಕಚೇರಿ ಎರಡನ್ನೂ ನಡೆಸುತ್ತಿದ್ದರು. ಈ ಎರಡೂ ಕೆಲಸಗಳಿಗೆ ಗವಿಮಠದಲ್ಲಿ ಎರಡು ಪ್ರತ್ಯೇಕ ಕೋಣೆಗಳಿವೆ. ಈಗಿರುವ ಸ್ವಾಮಿಗಳ ಸೋದರರು ಕಾರಭಾರಿಗಳಾಗಿ (ಒಟ್ಟು ಮಕ್ತಿಯಾರ್ - 'ಪವರ್ ಆಫ್ ಅಟಾರ್ನಿ') ಕೆಲಸ ನಿರ್ವಹಿಸುತ್ತಿದ್ದಾರೆ. ಈ ಎಲ್ಲ ವಿವರಗಳು ಮಧ್ಯ ಕರ್ನಾಟಕದ ವೀರಶೈವ ಮಠಗಳ ಸ್ವರೂಪ, ಅವುಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಚಟುವಟಿಕೆಗಳ ಸಣ್ಣ ಚಿತ್ರವನ್ನು ನೀಡುತ್ತದೆ. ಮಠ ಜಹಗೀರಾಗಿದ್ದಾಗ ತನಗೆ ಸಂಬಂಧಪಟ್ಟ ಹಳ್ಳಿಗಳ ವ್ಯಾಜ್ಯಗಳನ್ನು ಬಗೆಹರಿಸುವ ನ್ಯಾಯಾಲಯವೂ ಆಗುತ್ತಿತ್ತು. ಮೊದಲಿನಿಂದ ಆಯುರ್ವೇದ ವೈದ್ಯಕೀಯ ಸೌಲಭ್ಯ ಮತ್ತು ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ನಡೆಸುತ್ತ ಬರಲಾಗಿದೆ. ಬದಲಾದ ಇಂದಿನ ಸನ್ನಿವೇಶದಲ್ಲಿ ಕೆಲವು ಕಾರ್ಯ ಚಟುವಟಿಕೆಗಳು ಮುಂದುವರದೇ ಇವೆ.

ಮುಸ್ಲಿಂರು, ಬ್ರಾಹ್ಮಣರು, ಹರಿಜನರು ಮೊದಲು ಮಾಡಿಕೊಂಡು ಎಲ್ಲ ಜಾತಿ ವರ್ಗಗಳ ಜನ ಗವಿಮಠದ ಭಕ್ತರು ಮತ್ತು ಇಲ್ಲಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಗವಿಸಿದ್ದೇಶ್ವರರು ಮಾಡಿದ ಕೆಲವು ಪವಾಡಗಳು ಬ್ರಾಹ್ಮಣ ಪಂಡಿತ ಮತ್ತು ಮುಸ್ಲಿಂ ದೊರೆಗಳಿಗೂ ಸಂಬಂಧಿಸಿರುವುದರಿಂದ ಈ ಜನಾಂಗಗಳೂ ಭಾಗಿಯಾಗುತ್ತವೆಂದು ಹೇಳುತ್ತಾರೆ. ಸುಮಾರು ೧೨ ಕಣಜ, ಹಗೇವು, ೬೦-೭೦ ದನ ಕರು, ನೂರಾರು ಚೀಲ ನೆಲ್ಲು ಜೋಳಗಳ ದಾಸ್ತಾನು ಕೋಣೆ ನೋಡಿದರೆ ಮಠ ಆರ್ಥಿಕವಾಗಿ ಯಾವ ಸ್ಥಿತಿಯಲ್ಲಿದೆ ಎಂಬ ಸೂಚನೆ ಸಿಗುತ್ತದೆ. ಭಕ್ತರು ಬೇಡಿಕೊಂಡು ದನಗಳನ್ನು 'ಜನಿಗಿ' ಹೊಡೆಯುತ್ತಾರೆ. ಮೂಲಾ ನಕ್ಷತ್ರದಲ್ಲಿ ಮಗು ಜನಿಸಿದರೆ ಜನಿಗಿ ದನ ಮಠಕ್ಕೆ ನೀಡುವುದು ಪದ್ಧತಿ.

ಜಾತ್ರೆ : ಪ್ರತಿ ವರ್ಷ ಜನವರಿಯಲ್ಲಿ ನಡೆಯುವ ಜಾತ್ರೆಗೆ ಕೊಪ್ಪಳದ, ಸುತ್ತಮುತ್ತಲ ಗ್ರಾಮಗಳ ಮತ್ತು ದೂರದ ಊರುಗಳ ಸಹಸ್ರಾರು ಭಕ್ತರು ಸೇರುತ್ತಾರೆ. ಈ ಭಾಗದಲ್ಲಿ ನಡೆಯುವ ದೊಡ್ಡ ಜಾತ್ರೆ ಇದು. ೧೫ ದಿನಗಳವರೆಗೆ ಪರೀಕ್ಷೆ ಇರುವದಾದರೂ ೮ ದಿನ ಒಂದಿಲ್ಲೊಂದು ವಿಧಿಯಾಚರಣೆಗಳಿರುತ್ತವೆ.

ಜಾತ್ರೆ ಪ್ರಾರಂಭವಾಗುವುದು 'ಬಸವಪಟ' ಅಥವಾ 'ನಂದಿ ಧ್ವಜ'ವನ್ನು ರಚಿಸಿ ಪೂಜಿಸುವ ಮೂಲಕ. ತೇರಿಗೆ ಐದು ದಿನ ಮೊದಲು ಮಠದಲ್ಲಿ ಬಟ್ಟೆಯ ಮೇಲೆ ನಂದಿಯನ್ನು ಬರೆಯಿಸಿ ಪೂಜಿಸುತ್ತಾರೆ. ಅಂದು ಕೊಪ್ಪಳದಲ್ಲಿ ಸ್ವಾಮಿಗಳು ಭಿಕ್ಷೆಗೆ ಹೋಗುವ ಇನ್ನೊಂದು ಮುಖ್ಯ ಕಾರ್ಯಕ್ರಮ. ಮೊದಲು ಕುಲಕರ್ಣಿಗಳ ಮನೆ ಮತ್ತು ಓದಿಗೌಡರ ಮನೆಗಳಲ್ಲಿ ಕಾಣಿಕೆ ಸ್ವೀಕರಿಸಿ, ನಂತರ ಓಣಿಗಳ ಹಿರಿಯರ ಮೂಲಕ, ಆಯಾ ಓಣಿಯಿಂದ ಸಂಗ್ರಹವಾದ ಹಣ ಅಥವಾ ದವಸ ಧಾನ್ಯವನ್ನು ಪಡೆಯುತ್ತಾರೆ. ಕುಲಕರ್ಣಿ ಮತ್ತು ಜಡೇಗೌಡರ ಮನೆಗಳಿಗೇ ಮೊದಲು ಏಕೆ ಹೋಗಲಾಗುತ್ತದೆನ್ನಲು ಕಾರಣ ಕತೆಗಳಿವೆ. ಅವು ಗವಿಸಿದ್ದೇಶ್ವರ ಪವಾಡಗಳ ಜತೆ ಬೆಸೆದುಕೊಂಡಿವೆ. ಗವಿಸಿದ್ದೇಶ್ವರರು ಓದಿಗೌಡರಿಗೆ ಜಡೆ ಕಿತ್ತುಕೊಟ್ಟಿದ್ದಾರೆ. ಅದನ್ನು ಡಬ್ಬಿಯಲ್ಲಿ ಬೆಸೆದಿಟ್ಟು ಪೂಜೆ ಮಾಡುತ್ತಿದ್ದಾರೆ. ಅಲ್ಲಿ ಪೂಜೆ, ದರುಶನವಾದ ನಂತರ ಬೇರೆ ಭಕ್ತರ ಮನೆಗಳಿಗೆ ಭಿಕ್ಷೆಗೆ ಹೋಗಲಾಗುತ್ತದೆ. ಸ್ವಾಮಿಗಳು ಮೇಣೆಯಲ್ಲಿ ವಾದ್ಯ ಮೇಳ ಮೆರವಣಿಗೆ ಯೊಂದಿಗೆ ಈ ಕೆಲಸಕ್ಕೆ ಹೋಗುತ್ತಾರೆ. ಭಕ್ತರು ತಮ್ಮ ಶಕ್ತ್ಯಾನುಸಾರ ಕೊಡುವ ಹಣ ಮತ್ತು ಕಾಳಿನಮೌಲ್ಯ ("ಜಾತ್ರಿ ಕಾಣಿಕಿ") ಲಕ್ಷಾಂತರ ರೂಪಾಯಿ ಗಡಿ ದಾಟುತ್ತದೆ.

ಬನದ ಹುಣ್ಣಿಮೆಯ ದಿನ ಅಡ್ಡಪಲ್ಲಕ್ಕಿ ಉತ್ಸವ. ಜಾತ್ರೆಗೆಂದು ಬಂದಿರುವ ಮುಂಡರಗಿಯ ಅಥವಾ ಬೇರಾವುದೇ ಗ್ರಾಮದ ಸ್ವಾಮಿಗಳು ಪಲ್ಲಕ್ಕಿಯಲ್ಲಿರುತ್ತಾರೆ. ಊರಲ್ಲಿ ಗೌಡರ ಮನೆಯ ಹತ್ತಿರ ಇರುವ ಹಳೆಯ ಮಠದಿಂದ ಮೆರವಣಿಗೆ ವಾದ್ಯ ಮೇಳದೊಂದಿಗೆ ಹೊರಡುತ್ತವೆ. ಮುಖ್ಯ ಬೀದಿಗಳಲ್ಲಿ ಸಾಗಿ ಮಠ ಸೇರುತ್ತದೆ. ಈ ಮಧ್ಯೆ ಬರುವ ಶುಕ್ರವಾರ ಅಥವಾ ಮಂಗಳವಾರದಂದು ದೇವಿಯ ಪೂಜೆ ಮಾಡಲಾಗುತ್ತದೆ.

ಹುಣ್ಣಿಮೆಯ ಮರುದಿನ ಸಂಜೆ 'ಉಚ್ಚಯ್ಯ' ನಾಲ್ಕು ಗಾಲಿಯ ಬಂಡಿಯಂಥ ಸಣ್ಣ ರಥದಲ್ಲಿ ಉತ್ಸವಮೂರ್ತಿಯನ್ನು ಕೂಡಿಸಿ ಮಠದ ಮುಖ್ಯ ದ್ವಾರದಿಂದ ಎದುರಿನ ವಿಶಾಲ ಬಯಲಿನಲ್ಲಿ ಅರ್ಧ ಫರ್ಲಾಂಗು ದೂರದ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಒಂದರ ಮೇಲೊಂದು ಕೂತಿರುವ ಮೂರು ಬಂಡೆಗಳೆ 'ಪಾದಗಟ್ಟೆ'. ಈ ಲಘು ಉತ್ಸವದಲ್ಲಿ ವಾದ್ಯಮೇಳ, ಭಕ್ತರು, ಮುತ್ತೈದೆಯರಿರುತ್ತಾರೆ. ಕೊಪ್ಪಳದಿಂದ ಆರು ಕಿಲೋಮೀಟರು ದೂರದಲ್ಲಿರುವ 'ಮುದ್ದಾಬಳ್ಳಿ' ಎಂಬ ಗ್ರಾಮದ ಭಕ್ತರು ಗವಿಸಿದ್ದೇಶ್ವರನ ಬೆಳ್ಳಿಯ ಉತ್ಸವಮೂರ್ತಿಯನ್ನು ತಂದಿರುತ್ತಾರೆ. ಇದನ್ನೇ 'ಉಚ್ಚಯ್ಯ' ಮತ್ತು ದೊಡ್ಡ ತೇರಿನಲ್ಲಿಡುತ್ತಾರೆ.

ಇದರ ಮರುದಿನ ಸಂಜೆ ಮಹಾರಥೋತ್ಸವ - ವೈಭವ, ಸಡಗರ, ಸಂಭ್ರಮದಿಂದ

ನಡೆಯುವ ಈ ಕಾರ್ಯಕ್ರಮ ಜಾತ್ರೆಯ ಪ್ರಧಾನ ಅಂಗ. ಸಂಸ್ಥಾನ ಮಠವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟ ಅನೇಕ ಗ್ರಾಮಗಳ ಭಕ್ತರು ಜಾತ್ರೆಗೆ ಸಂಬಂಧಪಟ್ಟ ಹಲವಾರು ಸೇವಾಕಾರ್ಯಗಳನ್ನು ಹಂಚಿಕೊಂಡಿರುತ್ತಾರೆ. ಹಿರೇಬಗನಾಳ ಗ್ರಾಮದ ಭಕ್ತರು ಛತ್ರ, ಚಾಮರ ಹಿಡಿಯುತ್ತಾರೆ. ವೀರಾಪುರ, ಹಳ್ಳಿಗುಡಿ, ಮಂಗಳೂರವರು ಅಡಿಗೆ ಮಾಡುತ್ತಾರೆ. ಐದಾರು ಊರುಗಳಿಂದ ಭಜನೆ ಮೇಳ, ನಂದಿಧ್ವಜ, ಸಮಾಜ, ಹಲಗೆ, ಡೊಳ್ಳು ಮೇಳಗಳಿರುತ್ತವೆ.

ಉತ್ಸವಮೂರ್ತಿಯನ್ನು ದೊಡ್ಡ ತೇರಿನಲ್ಲಿಟ್ಟು ಪಾದಗಟ್ಟೆಯವರೆಗೆ ಎಳೆಯುತ್ತಾರೆ. ನೆರೆದ ಜನ ತೇರಿಗೆ ಬಾಳೆಹಣ್ಣು, ಉತ್ತತ್ತಿ, ಬೆಲ್ಲ ಒಗೆಯುತ್ತಾರೆ. ಗಾಲಿಗಳಿಗೆ ಕಾಯಿ ಒಡೆಯುತ್ತಾರೆ. ಉಚ್ಚಯ್ಯ ಮತ್ತು ಮಹಾರಥಗಳ ಕಾರ್ಯ ನಿರ್ಬಾಧಕವಾಗಿ ನಡೆಯಲೆಂಬ ಉದ್ದೇಶದಿಂದ ಅರಿಶಿಣ ಕಲಸಿದ ಅನ್ನವನ್ನು (ಬಲಿ ಅನ್ನ) ಉಂಡೆ ಮಾಡಿ ಗಾಲಿಗಳಿಗೂ, ಪಾದಗಟ್ಟೆವರೆಗೂ ಇಡುವ ಪದ್ಧತಿ ಇದೆ. ಇದು ಒಂದು ವಿಧದ ದಿಗ್‌ಬಂಧನ ಎನ್ನುತ್ತಾರೆ ಬಗನಾಳದ ಪಟ್ಟಾಧಿಕಾರಿ ಗವಿಸಿದ್ಧ ಸ್ವಾಮಿಗಳು. ಇದಾದ ಮಾರನೇ ದಿನ ಊರ ತುಂಬ ಮೂರ್ತಿಯ ಉತ್ಸವ ಮಾಡಿ ೩೦೦-೪೦೦ ಮದ್ದು ಸುಡುವ ಕಾರ್ಯಕ್ರಮ ಮತ್ತು ಕಡುಬಿನ ಕಾಳಗ. ಚಿಕ್ಕೇನಕೊಪ್ಪ ಚನ್ನವೀರ ಶರಣರು ಮಠದ ಪರಮ ಭಕ್ತರಾಗಿದ್ದರು. ಅವರು ಪ್ರಾರಂಭ ಮಾಡಿದ ದೀಡ ನಮಸ್ಕಾರ ಕಾರ್ಯಕ್ರಮ ಇಂದಿಗೂ ಮುಂದುವರೆದಿದೆ. ದ್ವಾರಬಾಗಿಲಿನಿಂದ, ಕೈಲಾಸ ಮಂಟಪದ ಶಿಖರ ಸ್ಥಾನದವರೆಗೆ ಶೇವಂತಿಗೆ, ಮಲ್ಲಿಗೆ ಮೊದಲಾದ ಹೂಗಳನ್ನು ಚೀಲಗಟ್ಟಲೆ ಸುರುವಿ ನೂರಾರು ಭಕ್ತರು ದೀಡ ನಮಸ್ಕಾರ ಹಾಕುವ ಈ ಕಾರ್ಯಕ್ರಮ ತೇರಾದ ಮರುದಿನದ 'ದೊಡ್ಡಗದ್ದಲ'. ಇದಾದ ನಂತರ ಕೈಲಾಸ ಮಂಟಪದಲ್ಲಿ ಜಾತ್ರೆಗೆ ಬಂದಿರುವ ಸ್ವಾಮಿಗಳು, ವಿದ್ವಾಂಸರು, ಅತಿಥಿಗಳು, ಗಣ್ಯಮಾನ್ಯರು, ಭಕ್ತರೆಲ್ಲ ಸಭೆ ಸೇರುತ್ತಾರೆ. ಈ ಮಠದಲ್ಲಿ ಓದಿ, ಸಣ್ಣ ದೊಡ್ಡ ಹುದ್ದೆಗಳಲ್ಲಿರುವ ಜನ ನೆರೆಯುತ್ತಾರೆ. ವಿದ್ಯಾರ್ಥಿ ಬಳಗದವರು ಮಾಡುವ ಈ ಕಾರ್ಯಕ್ರಮದಲ್ಲಿ ವಿದ್ವಾಂಸರಿಗೆ ಸನ್ಮಾನ ಮಾಡಲಾಗುತ್ತದೆ. ವಿಶೇಷವೆಂದರೆ ರಾಜಕಾರಣಿಗಳನ್ನು ಕರೆಸದೆ ಇರುವುದು.

ತೇರಿನ ನಂತರದ ಹಲವು ದಿನಗಳವರೆಗೆ ಜಾತ್ರೆಯ ನೂರಾರು ಅಂಗಡಿಗಳು ತಮ್ಮ ವ್ಯಾಪಾರ ವ್ಯವಹಾರ ನಡೆಸಿಕೊಂಡಿರುತ್ತವೆ. 'ಫಳಾರ' ಹೋಟಲು, ತೆಂಗಿನಕಾಯಿ, ಸ್ಟೇಶನರಿ, ಭಸ್ಮ, ರುದ್ರಾಕ್ಷಿ, ಹೂ, ಪಾತ್ರೆ, ಬೇಸಾಯದ ಉಪಕರಣಗಳು, ಬಟ್ಟೆ, ಬಳೆ ಇತ್ಯಾದಿ ವಸ್ತುಗಳನ್ನು ಮಾರುವ ಅಂಗಡಿಗಳಿವು. ಸಾಮಂತಶಾಹಿ ಕುಲದ ಜಾತ್ರೆಗಳಲ್ಲಿ ವ್ಯಾಪಾರವೂ ಪ್ರಮುಖ ಉದ್ದೇಶವಾಗಿದ್ದುದು ಈಗಲೂ ಈ ಪದ್ಧತಿ ಮುಂದುವರೆದಿದೆ. ಈಗ ಕೊಪ್ಪಳದ ಪೇಟೆಯಲ್ಲಿ ಪ್ರತಿ ದಿನ ಬೇಕಾದ ಸಾಮಾನು ಸಿಗುವ ಸೌಲಭ್ಯ ಇದ್ದರೂ ಜಾತ್ರೆಯ ವ್ಯಾಪಾರ ಕಡಿಮೆ ಇರಲಾರದು. ಜಾತ್ರೆಯಲ್ಲಿ ಹಕ್ಕುದಾರರು, ಬಾಬುದಾರರು ಇಲ್ಲ. ಸ್ವಾಮಿಗಳೆ ಊರ ಹಿರಿಯರು, ಪ್ರಮುಖರನ್ನು, ಅಧಿಕಾರಿಗಳನ್ನು ಕರೆಸಿ ಜಾತ್ರೆಯು ಸಾಂಗವಾಗಿ ನೆರವೇರುವಂತೆ ಸಹಕರಿಸಲು ಹೇಳುತ್ತಾರೆ. ಮಠವೆ ಜಾತ್ರೆಗೆ ಸೇರಿದ ಅಂಗಡಿಗಳ ಬಾಡಿಗೆ ವಸೂಲಿ ಮಾಡುತ್ತದೆ.

ಸರಕಾರದ ಆರೋಗ್ಯ ಇಲಾಖೆ, ಪೋಲಿಸ್, ಅಗ್ನಿಶಾಮಕ ದಳ, ಸಾರಿಗೆ ಮೊದಲಾದ ಇಲಾಖೆಗಳು ಜಾತ್ರೆಯಲ್ಲಿ ತಮ್ಮ ಕೆಲಸ ನಿರ್ವಹಿಸುತ್ತವೆ.

ಮಠದ ಈಗಿನ ಶಿವಶಾಂತವೀರಸ್ವಾಮಿಗಳು ೧೭ನೇಯವರು. ೧೧ನೆಯವರಾದ ಗವಿಸಿದ್ದೇಶ್ವರ ಸ್ವಾಮಿಗಳು ಜೀವಂತ ಸಮಾಧಿಯಾದ ದಿನವನ್ನೇ ಜಾತ್ರೆಯ ದಿನವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಗವಿಸಿದ್ದೇಶ್ವರರು ಮಾಡಿದ ಹಲವಾರು ಪವಾಡಗಳನ್ನು ಜನ ನೆನಪಿಸಿಕೊಳ್ಳುತ್ತಾರೆ. ಜಾತ್ರೆಯ ಆಚರಣೆಗಳ ಜತೆ ಸಂಬಂಧ ಕಲ್ಪಿಸಿಕೊಂಡು ಬಂದಿದ್ದಾರೆ. ಮಠವೂ ಕೂಡ ಈ ಕುರಿತು ಹಲವು ಲೇಖನ ಮತ್ತು ಗ್ರಂಥಗಳನ್ನು ಬರೆಯಿಸಿದೆ. ಮಠದಲ್ಲಿರುವ ಎಲ್ಲರೂ ಇವುಗಳ ವಿವರ ನೀಡಬಲ್ಲರು. ಭಕ್ತರು ಮತ್ತು ಮಠದ ಸಂಬಂಧ ಈ 'ನಂಬಿಗೆ'ಯನ್ನು ಆಧರಿಸಿಯೆ ಉಳಿದುಬಂದಿದೆ. ಹೈದರಾಬಾದ ನವಾಬನ ಆಳ್ವಿಕೆಯ ಕಾಲದಲ್ಲಿ (ಮೀರಲಂ ಬಹದ್ದೂರ) ಜಹಗೀರುದಾರರು, ಮಾನ್ಯರ, ರೋಗರುಜಿನಗಳನ್ನು ನಿವಾರಣೆ ಮಾಡಿ ಗವಿಸಿದ್ದೇಶ್ವರರು ಮಠದ ಆಸ್ತಿ ಪಾಸ್ತಿ ಹೆಚ್ಚುವುದಕ್ಕೆ ಕಾರಣರಾದರು. ಮಠದಲ್ಲಿ ಸ್ವಾಮಿಗಳನ್ನು ಬಿಟ್ಟರೆ ದೇವರೆಂಬ ಕೇಂದ್ರ ಆಕರ್ಷಣೆ ಈ ಸ್ವಾಮಿಗಳ ಗದ್ದುಗೆಯೇ. 'ಗವಿಸಿದ್ದೇಶ್ವರ ಮಠ' ಎಂದು ಇದಕ್ಕೆ ಇವರ ಹೆಸರೇ ನಿಂತಿತು. ಗವಿಸಿದ್ದಪ್ಪ, ಗವಿಸಿದ್ದವ್ವ ಎಂದು ಎಲ್ಲ ಜಾತಿ-ಜನಗಳಲ್ಲಿ ಹೆಸರಿಟ್ಟುಕೊಳ್ಳುವ ಪದ್ಧತಿ ಈ ಪ್ರದೇಶದಲ್ಲಿ ವ್ಯಾಪಕವಾಗಿದೆ. ಇದು ಈ ದೈವ ಜನಪದೀಕರಣಗೊಂಡುದರ ಸಂಕೇತ. ಹಮಾಲರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮುಖ್ಯ ದ್ವಾರವನ್ನು ನಿರ್ಮಿಸುತ್ತಿರುವುದು ಇನ್ನೊಂದು ನಿದರ್ಶನ. ರೈತರು ಬಂಡಿಗಟ್ಟಲೆ ರೊಟ್ಟಿ, ಕಾಳು ಕಡ್ಡಿ ತಂದು ಮಠಕ್ಕೆ ಹಾಕುತ್ತಾರೆ. ಇದೆಲ್ಲ ದಾಸೋಹಕ್ಕೆ ಬಳಕೆಯಾಗುತ್ತದೆ. ಕೊಪ್ಪಳ ಸುತ್ತಮುತ್ತಲ ಪ್ರದೇಶದ ರೈತರು ಪ್ರತಿ ವರ್ಷ ಸುಗ್ಗಿಯಲ್ಲಿ "ಗವಿಸಿದ್ದಪ್ಪನ ಮುಡುಪು" ಎಂದು ಕಾಳು ತೆಗೆದು ಮಠಕ್ಕೆ ನೀಡುತ್ತಾರೆ. ನಾನು ಸಂದರ್ಶಿಸಿದ ದಿನ (೫-೪-೯೯) ಬಳಗಾನೂರಿನಿಂದ ೯೦ ಚೀಲ ಬಿಳಿ ಜೋಳ ಬಂದಿವೆ ಎಂದು ಕಾರಭಾರಿ ಶಂಕರಯ್ಯ ಹೇಳಿದರು. ಭಿಕ್ಷೆಗೆಂದು ಸ್ವಾಮಿಗಳು ಹಳ್ಳಿಗಳ ಮೇಲೆ ಹೋಗುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಮಠಕ್ಕೆ ಸೇರಿದ ಮಠದ ಸುತ್ತಲ ವಿಸ್ತಾರವಾದ ಬಯಲಲ್ಲಿ ಅಲ್ಲಲ್ಲಿ ದಲಿತರು, ಅಲ್ಪಸಂಖ್ಯಾತರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಹೀಗೆ ಜನರಿಂದ ದಾನವಾಗಿ ಪಡೆದು ಜನರಿಗೇ ನಾನಾ ಬಗೆಯಾಗಿ ಹಿಂದಿರಿಗಿಸುವ ಕಾಯಕವನ್ನು ಮಠ ಪರಂಪರಾಗತವಾಗಿ ನಡೆಸಿಕೊಂಡು ಬಂದಿದೆ.

ಮಧ್ಯ ಕರ್ನಾಟಕದ ಹೆಚ್ಚಿನ ಜಾತ್ರೆಗಳಲ್ಲಿ ಸಮೀಪ ಐತಿಹಾಸಿಕ ಘಟನೆಗಳನ್ನು ಜಾತ್ರೆಯ ವಿಧಿಯಾಚರಣೆಗಳ ಜತೆ ಸಮೀಕರಿಸಿ ಸಮರ್ಥಿಸುವುದು ಒಂದು ವಿಶೇಷ ಅಂಶ. ಈ ಲಕ್ಷಣ ಕೊಪ್ಪಳದ ಜಾತ್ರೆಯಲ್ಲೂ ಕಂಡು ಬರುತ್ತದೆ. ಗವಿಸಿದ್ದೇಶ್ವರರು ಮಾಡಿದ ಪವಾಡಗಳಲ್ಲಿ ನವಾಬನ ಜಹಗೀರುದಾರನಾದ ಮೀರಾಲಂ ಬಹದ್ದೂರನ ಕುಷ್ಠರೋಗ ನಿವಾರಿಸಿದ್ದು ಸೇರಿದೆ. ಈತ ಯಾರು? ಕೊಪ್ಪಳದ ಇತಿಹಾಸ ಈ ಘಟನೆಗೆ ಸಂಬಂಧಿಸಿ ಆಧಾರ ಒದಗಿಸುವುದೇ?

೧೯೦೫ರಲ್ಲಿ ಕೊಪ್ಪಳ ಮತ್ತು ಯಲಬುರ್ಗಾ ತಾಲೂಕುಗಳು ಹೈದರಾಬಾದ ನಿಜಾಮನ ಪ್ರಧಾನಮಂತ್ರಿ ಸರ್ ಸಾಲಾರ್‌ಜಂಗನ ಜಹಗೀರಾಗಿದ್ದವು. ೧೯೪೯ರಲ್ಲಿ ಜಹಗೀರುಗಳು ರದ್ದಾದ ನಂತರ ಈ ಎರಡೂ ತಾಲೂಕು ರಾಯಚೂರು ಜಿಲ್ಲೆಗೆ ಸೇರಿದವು. ೧೭೯೯ರಲ್ಲಿ ಟೀಪು ತೀರಿಹೋದ ನಂತರ ಆತನ ವಶದಲ್ಲಿದ್ದ ರಾಯಚೂರು ಪ್ರದೇಶವನ್ನು ಬ್ರಿಟಿಶರು ವಶಪಡಿಸಿಕೊಂಡರು. ೧೮೫೭ರ ಸಿಪಾಯಿದಂಗೆಯಲ್ಲಿ ತಮಗೆ ಸಹಾಯ ಮಾಡಿದ ೫ನೇ ನಿಜಾಮ ಅಫ್‌ಜಲ್ ಉದ್ದೌಲನಿಗೆ ದೋರೆಬ್ ಮತ್ತು ಉಸ್ಮಾನಾಬಾದಗಳನ್ನು ಬಿಟ್ಟುಕೊಟ್ಟರು. ಈತನ ಮಂತ್ರಿಯೆ ಸಾಲಾರಜಂಗ್.

ಈಗಿನ ಸ್ವಾಮಿಗಳು ೧೯೫೪ರಲ್ಲಿ ಪೀಠಾಧಿಕಾರಿಗಳಾದರು. ಇವರು ೧೭ನೆಯವರು. ೧೧ನೆಯವರಾದ ಗವಿಸಿದ್ಧ ಸುಮಾರು ೧,೭೦೦ರಲ್ಲಿದ್ದಿರಬಹುದು. ಮೊಘಲ ಅರಸ ಔರಂಗಜೇಬನ ಸುಬೇದಾರ ಮೀರ ಕರೀಮುದ್ದೀನ (ನಿಜಾಮ ಉಲ್‌ಮುಲ್ಕ) ೧೭೨೪ರಲ್ಲಿ ಹೈದ್ರಾಬಾದ ನಿಜಾಮನೆಂದು ರಾಜ್ಯ ಸ್ಥಾಪಿಸಿದನಷ್ಟೇ. ಗವಿಸಿದ್ಧರು ಈ ಸಂದರ್ಭದಲ್ಲಿ ಬಾಳಿರುವ ಸಾಧ್ಯತೆ ಇದೆ. ಮತ್ತು ಈ ಅವಧಿಯಲ್ಲೇ ಜಾತ್ರೆ ಪ್ರಾರಂಭವಾಗಿರಬೇಕೆಂದು ಊಹಿಸಬೇಕಾಗುತ್ತದೆ. ಆದರೆ ೧೯೭೭ರಲ್ಲಿ ಸಿದ್ದಪ್ಪ, ಗಡಾದಶೆಟ್ಟರ ಅವರು ಬರೆದ ನಕ್ಷತ್ರ ಮಾಲಿಕಾ ಸ್ತೋತ್ರದಲ್ಲಿ ಸರ್ ಸಾಲಾರಜಂಗ ಗವಿಸಿದ್ಧರಿಗೆ ಶರಣು ಬಂದು ಕುಷ್ಠ ರೋಗ ನಿವಾರಿಸಿಕೊಂಡುದು ಮತ್ತು ಮಾನ್ಯ ಮೀರಾಲಂಬನು ೫ ಗ್ರಾಮಗಳನ್ನು ದಾನ ಮಾಡಿದ ವಿಷಯವಿದ್ದರೆ ೧೯೭೧ರಲ್ಲಿ ನಾಗೇಶಶಾಸ್ತ್ರಿಗಳು ಬರೆದ 'ಗವಿಸಿದ್ದೇಶ್ವರ ಪುರಾಣಂ'ದಲ್ಲಿ ಹೈದರಾಬಾದ ನವಾಬ ಮೀರಲಂ ಬಹದೂರ ಎಂಬ ಅರಸನ ಕುಷ್ಠರೋಗ ನಿವಾರಿಸಿದ ಪ್ರಸ್ತಾಪವಿದೆ.

ಯಮನೂರಪ್ಪನ ಉರುಸು :

ಕೊಪ್ಪಳದ ಊರ ನಡುವೆ ೪೦ ಮೆಟ್ಟಿಲು ಎತ್ತರದ ಉಡೇವಿನಂತಿರುವ ಹೆಬ್ಬಂಡೆಯ ಮೇಲೆ ಯಮನೂರಪ್ಪನ ದರ್ಗಾ ಇದೆ. ಮುಂಭಾಗ ಕುಸಿದುಬಿದ್ದು ಹಾಳಾಗಿದ್ದು, ಕಟ್ಟಡದ ಉಳಿದ ಭಾಗ ಅಪಾಯದ ಅಂಚಿನಲ್ಲಿದೆ. ಗರ್ಭಗುಡಿಯಂಥ ಇಕ್ಕಟ್ಟಾದ ಕಿರುಕೋಣೆಯಲ್ಲಿ ಬಾಯಿ ತೆರೆದ ಹುಲಿಯ ಕಾಷ್ಠ ವಿಗ್ರಹವಿದೆ. ಅದಕ್ಕೆ ಹೂಮಾಲೆ ಇದೆ. ಅದರ ಮೇಲ್ಭಾಗದಲ್ಲಿ ಆರು ಹುಲಿಗಳ ಕಾಷ್ಠ ವಿಗ್ರಹಗಳಿವೆ. ಇವು ಬೇಡಿಕೊಂಡ ಭಕ್ತರು ಮಾಡಿಸಿಕೊಟ್ಟವು. ಮುಂಭಾಗದ ಹಾಲ್‌ನ ಒಳಛಾವಣಿ ಕಮಲದಳದಂತೆ ಇರುವ ಗುಮ್ಮಟವನ್ನು ಒಳಗೊಂಡಿದೆ.

ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಮೂರು ದಿನಗಳ ಉರುಸು (ಜಾತ್ರೆ) ನಡೆಯುತ್ತದೆ. ಮೊದಲ ದಿನ ಗಂಧ, ಎರಡನೆ ದಿನ ಉರುಸು, ಮೂರನೇ ದಿನ **ಜಿಯಾದಾತ್** (ತಿಥಿ). ಇದಕ್ಕೆ ಯಮನೂರಪ್ಪನ ಅಥವಾ ರಾಜಾಬಕ್ಷನ ಉರುಸು ಎನ್ನುತ್ತಾರೆ. ಉರುಸಿನಲ್ಲಿ ಪಾಲ್ಗೊಳ್ಳುವ ಮುಕ್ಕಾಲು ಪಾಲು ಜನ ಹಿಂದುಗಳೇ.

ಗಂಧದ ದಿವಸ 'ಹುಲಿ' ಹೊರಗೆ ಬರುತ್ತದೆ. ಅದನ್ನು ಮುಜಾವರರ ಮನೆಗೆ ಮೊದಲೆ

ಒಯ್ದು ಬಣ್ಣ ಹಾಕಿಸುತ್ತಾರೆ. ಶೇಕಬಾವಿಯಲ್ಲಿ ಅದಕ್ಕೆ ಸ್ನಾನ ಮಾಡಿಸಿ ತಲೆಯ ಮೇಲೆ ಗಂಧ, ನೀರು, ಮಲ್ಲಿಗೆ ಹೂಗಳ ಗಂಗಳ ಹೊತ್ತುಕೊಂಡು ಮೆರವಣಿಗೆಯಲ್ಲಿ (ವಾದ್ಯಗಳಿರುವುದಿಲ್ಲ) ದರಗಾಕ್ಕೆ ಬರುತ್ತಾರೆ. ದರಗಾದಲ್ಲಿರುವ ಹಿಲಾಲಿನ ಮೇಲೆ ತಂದ ನೀರು ಹಾಕುತ್ತಾರೆ. ಅದು ನಂದುವುದಿಲ್ಲವಂತೆ. ಇದನ್ನು ಯಮನೂರಪ್ಪನ ಪವಾಡವೆಂದು ನಂಬುತ್ತಾರೆ. ಬೇಡಿಕೊಂಡ ಭಕ್ತರು ಕೆಂಪು ಸಕ್ಕರೆ, ಉಪ್ಪನ್ನು 'ಓದಿಕಿ' ಮಾಡಿಸುತ್ತಾರೆ. ಸಕ್ಕರೆ ಅಥವಾ ಬೆಲ್ಲದಿಂದ ಮಾಡಿದ ಕುಡುಕಿಯನ್ನು ಓದಿಸುವುದೂ ಇದೆ. ಹೀಗೆ ಪ್ರತಿ ವರ್ಷ ಓದಿಕಿಯಿಂದ ೧೦ ಚೀಲ ಉಪ್ಪು, ೨ ಚೀಲ ಸಕ್ಕರೆ ಸೇರುತ್ತದೆ. ಇದನ್ನು ಮುಜಾವರರು ತೆಗೆದುಕೊಳ್ಳುತ್ತಾರೆ.

ಎರಡನೆ ದಿನ ಉರುಸು. ಇಡೀ ದಿನ ಭಕ್ತರು ಓದಿಕಿ ಮಾಡಿಸುವುದೇ ಮುಖ್ಯ ಕಾರ್ಯಕ್ರಮ. ಮೂರನೆ ದಿನ **ಜಿಯಾದತ್**. ಪಟ್ಟಿ ಎತ್ತಿ ಅನ್ನ, ಮಟನ್ ಅಡಿಗೆ ಮಾಡಿಸಿ ಸುಮಾರು ೫೦೦-೬೦೦ ಜನಕ್ಕೆ ಊಟ ಮಾಡಿಸುತ್ತಾರೆ. ಹಿಂದು ಕಲಾಲ ಕುಲದವರು (ಮಟನ್ ಮಾರುವವರು) ಕುರಿ ಮಾಂಸ ಕೊಡುತ್ತಾರೆ, ಚಂದಾ ವಸೂಲಿ ಮಾಡಿಕೊಡುತ್ತಾರೆ. ಇದು ಯಮನೂರಪ್ಪನ ತಿಥಿ ದಿವಸವಿದ್ದಂತೆ. ಹುಲಿಯ ಹತ್ತಿರ ಇರುವ ಸಣ್ಣ ಬೆಳ್ಳಿಯ ಕಡಗವನ್ನು ಭಕ್ತರು ಧರಿಸುವ ಪದ್ಧತಿಯಿದೆ. ದೇವರ ವಾರವಾದ ಪ್ರತಿ ಗುರುವಾರ ಮತ್ತು ಉರುಸಿನ ದಿನಗಳಲ್ಲಿ ಪೂಜೆ, ಓದಿಕೆ ಇರುತ್ತವೆ. ಉರುಸಿನಲ್ಲಿ ಸಕ್ಕರೆ, ಉಪ್ಪು ಮಾರುವ ಅಂಗಡಿಗಳೆ ಹೆಚ್ಚು.

ಈ ತಾಲೂಕಿನ ಬಾದರಬಂಡಿ, ಹಾಲವರ್ತಿಗಳಲ್ಲೂ ಯಮನೂರಪ್ಪನ ಆಚರಣೆಗಳಿವೆ.

ಪಾಂಡುರಂಗನ ಯಾತ್ರೆ :

ಕೊಪ್ಪಳ ಗವಿಮಠದ ಪಶ್ಚಿಮದ ಬಯಲಲ್ಲಿ ಪೂರ್ವಾಭಿಮುಖವಾಗಿದೆ ಪಾಂಡುರಂಗ ದೇಗುಲ. ೧೯೮೫ರಲ್ಲಿ ನಿರ್ಮಾಣಗೊಂಡಿದೆ. ಮುಂದೆ ಕಲ್ಯಾಣಮಂಟಪ ಕಟ್ಟುತ್ತಿದ್ದಾರೆ. ಗರ್ಭಗುಡಿಯಲ್ಲಿ ಮೂರಡಿ ಎತ್ತರದ ಪಾಂಡುರಂಗ ವಿಠಲ, ರುಕುಮಾಯಿಯರ ವಿಗ್ರಹಗಳು. ಹೊರಗೋಡೆಯ ಗೋಡೆಯ ಮೇಲೆ ಏಕನಾಥ, ಜ್ಞಾನೇಶ್ವರ, ತುಕರಾಮ, ನಾಮದೇವ, ಜನಾಬಾಯಿ ಸುಖೂಬಾಯಿ, ನಿಳೊಬಾ ಮಹಾರಾಜರ ಸುಂದರ ಚಿತ್ರಗಳು. ಒಂದು ಗೂಡಲ್ಲಿ ದತ್ತಾತ್ರೇಯ, ಲಿಂಗಗಳು. ಕೊಪ್ಪಳದ "ಶ್ರೀ ವಾಸಕರ ವಾರಕರೀ ಸಂಸ್ಥಾ ಟ್ರಸ್ಟ್", ಮಾಘ ಶುದ್ಧ ಪ್ರತಿಪದೆಯಿಂದ ರಥಸಪ್ತಮಿಯವರೆಗೆ ಪಾಂಡುರಂಗ ಮಾಘ ಯಾತ್ರಾ ಮಹೋತ್ಸವ ಆಚರಿಸುತ್ತದೆ.

ಬೆಳಿಗ್ಗೆ ೫ರಿಂದ ೭ರವರೆಗೆ ಕಾಕಡಾರತಿ-ಭಜನೆ, ೯.೩೦ರಿಂದ ೧೦.೩೦ರವರೆಗೆ ಪ್ರವಚನ, ೧೧ರಿಂದ ೧ರವರೆಗೆ ಕೀರ್ತನೆ, ಸಾಯಂಕಾಲ ೪.೩೦ರಿಂದ ೫.೩೦ರವರೆಗೆ ಪ್ರವಚನ, ೫.೩೦ರಿಂದ ೬ರವರೆಗೆ ನಾಮಜಪ, ೭ರಿಂದ ೯ರವರೆಗೆ ಕೀರ್ತನೆ, ರಾತ್ರಿ ೧೧ರಿಂದ ೧ರವರೆಗೆ ಜಾಗರ, ಭಜನೆ, ಸಂಗೀತ ಭಜನೆ, **ಭಾರುಡಾದಿ ಕಾರ್ಯಕ್ರಮಗಳು** - ಮಾಘ ಶುದ್ಧ ಚತುರ್ಥಿಯಂದು ನಾರಾಯಣಪ್ಪ ವಾಸಕರ ಮಹಾರಾಜರ ಪುಣ್ಯ ದಿನಾಚರಣೆ, ಗುಲಾಲ ಕಾರ್ಯಕ್ರಮ, ಸಪ್ತಮಿಯಂದು ಹಾಜರಿ ಕಾಲಾ ಕೀರ್ತನೆ ಮತ್ತು ಸಂಜೆ ದಿ. ಡಿ. ಸೋಹಳಾ (ನಗರ ಪ್ರದಕ್ಷಿಣೆ).

ಮಹೋತ್ಸವಕ್ಕೆ ಬರುವ ಭಕ್ತರ ಊಟದ ವ್ಯವಸ್ಥೆಯನ್ನು ಎಮ್ಮಿಗನೂರು, ಗೋನಹಳಾ, ಬಾದನಹಟ್ಟಿ, ಯರಂಗಳಿಗಿ, ಸಿದ್ದಮ್ಮನಹಳ್ಳಿ, ಉಂಚಕಲ್ಲುಗಳ ಪಂಢರಿ ವಾರಕರಿ ಭಕ್ತಮಂಡಳಿ ಮಾಡುತ್ತದೆ. ಉಳಿದ ಖರ್ಚು ಕೊಪ್ಪಳ, ಭಾಗ್ಯನಗರದ ಭಕ್ತರು ವಹಿಸುತ್ತಾರೆ. ಭಜನೆಗೆ ಮೃದಂಗ, ತಾಳ, ವೀಣಾಗಳನ್ನು ಬಳಸುತ್ತಾರೆ. ತುಕಾರಾಮ ಹೇಳಿದ 'ಜೈ ಜೈ ರಾಮಕೃಷ್ಣ ಹರಿ' ಎಂಬುದು ಭಜನೆಯ ಬೀಜಮಂತ್ರ. ಮರಾಠಿ ಅಭಂಗಗಳನ್ನು ಹೇಳುತ್ತಾರೆ. ವಾರಕರಿಯಾದವ ಪ್ರತಿದಿನ ಸ್ನಾನ ಮಾಡಿ ಜ್ಞಾನೇಶ್ವರರು ಬರೆದ ಹರಿಪಾಠ ಹೇಳುವುದು ಕಡ್ಡಾಯ. ಕೊನೆಯ ದಿನ ಪಾಲಿಕೆಯಲ್ಲಿ ಉತ್ಸವಮೂರ್ತಿಯಿಟ್ಟು ಊರಲ್ಲಿ ಮೆರವಣಿಗೆ ಮಾಡುತ್ತಾರೆ. ಸಾಧುಗಳಿಗೆ ಊಟ ಮಾಡಿಸುತ್ತಾರೆ. ಹತ್ತು ನಿಮಿಷ ಒಬ್ಬೊಬ್ಬರಂತೆ ಗೀತೆಯ ಕೀರ್ತನೆ (ಕಾಲಾ) ಮಾಡುತ್ತಾರೆ. ಭಾವಸಾರ ಕ್ಷತ್ರಿಯ ಮರಾಠಾ ಕುಲದ ಪೂಜಾರಿ ದಿನವೂ ಪೂಜೆ ಮಾಡುತ್ತಾನೆ. ಕೊಪ್ಪಳದಲ್ಲಿ ಈ ಕುಲದ ಸುಮಾರು ೪೦೦-೫೦೦ ಜನ ವ್ಯಾಪಾರ, ಸಿಂಪಿಗತನ ಮಾಡಿಕೊಂಡಿದ್ದಾರೆ.

ಒಡ್ಡರು, ಕ್ಷೌರಿಕರು, ಮರಾಠಾ, ನಾಮದೇವ ಸಿಂಪಿ, ರಡ್ಡಿ, ಗೋಂದಳಿ ಮೊದಲಾದ ಕುಲಗಳ ಜನ ಈ ಪಂಥದ ಭಕ್ತರಾಗಿದ್ದಾರೆ. ಐನೇರು, ಬೇಡರು, ಕುರುಬರು ಮೊದಲಾದ ಕುಲಗಳ ಜನ ದೇವರಿಗೆ ನಡಕೊಳ್ಳುತ್ತಾರೆ.

ಜಾತ್ರೆಗೆ ಗದಗ ಬೆಟಗೇರಿ, ಬೆಳಗಾವಿ, ಹುಬ್ಬಳ್ಳಿ, ಹೊಸಪೇಟೆ ಮೊದಲಾದ ದೂರದ ನಗರಗಳ ಭಕ್ತರು ಬರುತ್ತಾರೆ.

ಅಶ್ವಿನ ಬಹುಳದಲ್ಲಿ ಕೊಪ್ಪಳದಿಂದ ಪಂಢರಾಪುರಕ್ಕೆ ದಿಂಡಿಯಾತ್ರೆ ಹೊರಡುತ್ತಾರೆ. ಭಕ್ತರು ನಡೆಯುತ್ತ ಹೋಗುವುದು ಹೆಚ್ಚು. ಪಂಡರಾಪುರದ ವಾಸಕರ ಮಹಾರಾಜರು ತುಳಸಿಕಟ್ಟಿಗೆಯ ಮಾಲೆ ಹಾಕಿ ದೀಕ್ಷೆ ನೀಡುತ್ತಾರೆ. ಹೀಗೆ ದೀಕ್ಷೆ ಪಡೆದವರು ವಾರಕರಿಗಳು. 'ವಾರಿ' ಕೊಡುವ ನೂರಾರು ಗುರುಗಳು ಪಂಢರಾಪುರದಲ್ಲಿದ್ದಾರೆ. ಅದರಲ್ಲಿ ಈ ಊರ ಜನ ವಾಸ್ಕರ ಮಹಾರಾಜರಿಂದ ದೀಕ್ಷೆ ಪಡೆದಿದ್ದಾರೆ. ಹೀಗೆ ವಾರಕರಿಗಳಾದವರು ಪ್ರತಿವರ್ಷ ತಪ್ಪಿಸದಂತೆ ಪಂಢರಾಪುರಕ್ಕೆ ಹೋಗುತ್ತಾರೆ. ಪಂಢರಾಪುರದಲ್ಲಿ ಪ್ರತಿ ತಿಂಗಳು 'ವಾರಿ' ಇರುತ್ತದೆ. ಭಕ್ತರು ಯಾವ ವಾರಿ ಸ್ವೀಕರಿಸುತ್ತಾರೊ ಆ ದಿನ ಹೋಗುವುದು ರೂಢಿ. ಆಳಂದಿಯಿಂದ ಬರುವ 'ವಾರಿ' ಪ್ರಖ್ಯಾತವಾದುದು. ಲಕ್ಷಾಂತರ ಜನ ಸೇರುವ ಪಂಢರಾಪುರದಲ್ಲಿ ಆಷಾಢ ಮತ್ತು ಕಾರ್ತಿಕದಲ್ಲಿ ತೇರಾಗುತ್ತದೆ. ಸಂಸಾರಸ್ಥರಿಗೆ ಮಾತ್ರ ವಾರಿ ದೀಕ್ಷೆ ಇದೆ. ವಾಸ್ಕರ ಅವರೂ ಸಂಸಾರಸ್ಥರೇ. ಕೃಷ್ಣಾಜಿರಾವ್ ಜ್ಞಾನೋಟೆ ಎಂಬವರು ಕೊಪ್ಪಳ ಭಾಗದಲ್ಲಿ 'ವಾರಕರಿ' ಪಂಥ ಪ್ರಸಾರ ಮಾಡಿದ್ದಾರೆ.

ಹುಲಿಗೆಮ್ಮನ ಜಾತ್ರೆ :

ಕೊಪ್ಪಳ ಜಿಲ್ಲೆಯ ಪ್ರಖ್ಯಾತ ಜಾತ್ರೆಗಳಲ್ಲಿ ಹುಲಿಗೆಯ ಹುಲಿಗೆಮ್ಮನದೂ ಒಂದು. ಕೊಪ್ಪಳ ತಾಲೂಕಿನ ಹುಲಿಗಿ ತುಂಗಭದ್ರಾ ಅಣೆಕಟ್ಟಿನ ಕೆಳಗೆ ಮುನಿರಾಬಾದ ಪಕ್ಕದ ಹಳ್ಳಿ.

ಡ್ಯಾಮಿನಿಂದಾಗಿ, ಒಂದೆಡೆ ನೀರಾವರಿ ಸೌಲಭ್ಯ, ಇನ್ನೊಂದೆಡೆ ಕೈಗಾರಿಕೆಗಳ ಸ್ಥಾಪನೆಯಿಂದ ಈ ಪ್ರದೇಶ ಅಭಿವೃದ್ಧಿಗೊಂಡಿದೆ. ಈ ಪ್ರಕ್ರಿಯೆಯ ಸೆಳವಿಗೆ ಸಿಕ್ಕ ಹುಲಿಗೆಮ್ಮನ ಗುಡಿಯೂ ಸಾಕಷ್ಟು ಬದಲಾಗಿದೆ. ಹುಲಿಗೆ ಊರಿನಿಂದ ಪೂರ್ವದ ಬಯಲಿನಲ್ಲಿ ಎರಡು ಕಿಲೋಮೀಟರು ದೂರದಲ್ಲಿ ಹೊಳೆ ದಂಡೆಗಿರುವ ಗುಡಿಗೆ ಮೊದಲು ರಾತ್ರಿ ಜನ ಬರುತ್ತಿರಲಿಲ್ಲ. ಪೂಜೆಯ ನಂತರ ದೇಗುಲದ ಉತ್ಸವ ಮೂರ್ತಿಯನ್ನು ಕಬ್ಬೇರ ಕುಲದ ಪೂಜಾರಿಗಳು ಊರಲ್ಲಿರುವ ತಮ್ಮ ಮನೆಯಲ್ಲಿ ತಂದಿಟ್ಟುಕೊಳ್ಳುತ್ತಿದ್ದರು. ಅವರವರಲ್ಲೇ ವೈಮನಸ್ಸು ಬೆಳೆದು ೧೯೫೦ರ ಸುಮಾರು ದೇಗುಲವನ್ನು ಸರಕಾರ ವಹಿಸಿಕೊಳ್ಳುವಂತಾಯಿತು. ದೇಗುಲದ ಪ್ರತಿ ದಿನದ ಪೂಜಾಕಾರ್ಯ ಬ್ರಾಹ್ಮಣ ಅರ್ಚಕರ ಪಾಲಾಯಿತು. ಇವರ ಪ್ರವೇಶದಿಂದ ದೇಗುಲದ ಹಲವಾರು ವಿಧಿಯಾಚರಣೆಗಳಲ್ಲಿ ಕಟ್ಟುಪಾಡು ಬಂದವು. ವೈದಿಕೀಕರಣ ಪ್ರಕ್ರಿಯೆ ಇದ್ದರೂ ಆದಿಮ ಆಚರಣೆಗಳು ಕೆಲವಾದರೂ ಉಳಿದುಕೊಂಡವು. ಆಶ್ಚರ್ಯವೆಂದರೆ ಜಾತ್ರೆಯಲ್ಲಿ ಪ್ರಮುಖ ವಿಧಿಯಾಚರಣೆ ಗಳನ್ನು ಪೂರೈಸುವ ಗಂಗಾಮತದ (ಕಬ್ಬೇರು) ಐವರು ಪೂಜಾರಿ ಮನೆತನಗಳ ಮೂರು ಮನೆಗಳಲ್ಲಿ ಹುಲಿಗೆ ಊರೊಳಗಿರುವ ಈ ಮೂರು ಮನೆಗಳ ಒಂದೊಂದು ಕೋಣೆಗಳು ಹುಲಿಗೆಮ್ಮನ ಗುಡಿಗಳೆ ಆಗಿವೆ. ದೇಗುಲದ ನಿತ್ಯ ಪೂಜಾ ಕಾರ್ಯ ತಮ್ಮ ಕೈತಪ್ಪಿ ಹೋದುದಕ್ಕೆ ಅವರು ಪರಿತಪಿಸುತ್ತಿದ್ದಾರೆ. ಜಾತ್ರೆಯಲ್ಲಿ ಪ್ರಮುಖವಾದ ಐದು ಆಚರಣೆಗೆ ಸಂಬಂಧಪಟ್ಟು ಇವರಿಗೆ ಬಾಳೆದಂಡಿಗಿಯವರು, ದೇವರಮನಿಯವರು, ಪಾಯಸದವರು, ಎಲಿಚಟ್ಟಿನವರು, ಉಮ್ಮಾಯನವರು (ಸಹಾಯಕರು) ಎಂದು ಕರೆಯುತ್ತಾರೆ. ಬಾಳೆದಂಡಗಿ ಮತ್ತು ದೇವರಮನಿಯವರ ಎರಡು ದೇವರು ಒಂದೇ ಮನೆಯಲ್ಲಿವೆ. ಇದೇ ರೀತಿ ಉಮ್ಮಾಯನವರು ಮತ್ತು ಎಲಿಚಟ್ಟದವರ ದೈವಗಳು ಒಂದೇ ಮನೆಯಲ್ಲಿವೆ. ಭಕ್ತರು ಈ 'ಮನೆ-ಮಂದಿರ'ಗಳಿಗೂ ಬರುತ್ತಾರೆ. ಕೆಲವು ವಿಧಿಯಾಚರಣೆಗಳನ್ನು ಪೂರೈಸಿ ಕೊಳ್ಳುತ್ತಾರೆ. ಜವುಳ ತೆಗೆವ, ಜೋಗಮ್ಮಗಳಾಗುವ ಕೆಲವು ಪದ್ಧತಿಗಳನ್ನು ಇಲ್ಲಿ ಮಾಡಲಾಗುತ್ತದೆ. ಈ ಮೂರು ಮನೆಗಳಲ್ಲಿ ದೇವರ ಮನೆಯವರ ಮನೆ ದೊಡ್ಡದಿದ್ದು ಕೇಂದ್ರ ಸ್ಥಾನವಾಗಿದೆ. ಜಾತ್ರೆಯಲ್ಲಿ ಬಾಳೆದಂಡಿಗಿ ಏರುವ, ಕುದಿವ ಅಕ್ಕಿ ಅನ್ನ ಎತ್ತಿಕೊಡುವ ಪೂಜಾರಿ ಈ ಮನೆಯವರೇ.

ದೇಗುಲದ ಪೂರ್ವ ಪಶ್ಚಿಮಗಳಲ್ಲಿ ಈಚೆಗೆ ಮಹಾದ್ವಾರಗಳನ್ನು ಪೂರ್ಣ ಗೊಳಿಸಿದ್ದಾರೆ. ಹುಲಿಗಿಯಿಂದ, ದೇವಿಯ ಗುಡಿಗೆ ಹೊರಡುವ ದಾರಿಯ ಪ್ರಾರಂಭದಲ್ಲೂ ದೊಡ್ಡ ದ್ವಾರಮಂಟಪ ಕಟ್ಟಿದ್ದಾರೆ. ದೇವಿಯ ಗುಡಿಯ ಮೇಲ್ಭಾವಣಿಯ ರಚನೆಯೂ ಈಚಿನದೇ. ಇವೆಲ್ಲ ಗೋಪುರ, ಕಳಸ, ದೇವಿಯ ಅವತಾರದ ಪ್ರತಿಮೆಗಳಿಂದ ಕೂಡಿ ಅಂದವಾಗಿವೆ. ಪೂರ್ವದ ಮಹಾದ್ವಾರದಿಂದ ಹೊಳೆಗೆ ಹೋಗುವ ಕಾಲುದಾರಿಯಿದೆ. ಜಾತ್ರೆಯಲ್ಲಿ ಈ ದಾರಿಯ ಇಕ್ಕೆಲದಲ್ಲಿ ಭಿಕ್ಷುಕರು, ಜೋಗಮ್ಮಗಳು ಭಿಕ್ಷೆಗಾಗಿ ಕೂತಿರುತ್ತಾರೆ. ಈ ದಾರಿಯ ಎಡಬದಿಗೆ ಹಳೆಕಾಲದ ಹಾಳಾದ ಸೋಮೇಶ್ವರ ಮತ್ತು ಗಣಪತಿ ಗುಡಿಗಳಿವೆ. ಸೋಮೇಶ್ವರನ ಸ್ಥಾನ ಬಿಡಿಸಿ ಅಮ್ಮ ಬಂದು ಕೂತಳೆಂಬ ಐತಿಹ್ಯವಿರುವುದನ್ನು ಗಮನಿಸಬೇಕು.

ಗರ್ಭಗುಡಿಯ ಅಗಲಮುಖದ ದೇವಿಗೆ ಬೆಳ್ಳಿಯ ಕಣ್ಣು, ಮೀಸೆ, ಬಾಯಿ ಅಂಟಿಸಿದ್ದಾರೆ.

ಮುಖದ ತುಂಬ ಕಾವಿಯ ಬಣ್ಣ, ಹೂಗಳಿಂದ ಅಲಂಕಾರ ಮಾಡಿರುವುದರಿಂದ ಸ್ಪಷ್ಟ ಭೌತಿಕಾಕೃತಿ ತಿಳಿಯಲಾರದು. ಹಿಂದೆ ಪ್ರಭಾವಳಿ, ಬೆಳ್ಳಿಯ ಮಂಟಪ ಜೋಡಿಸಿದ್ದಾರೆ. ಪಕ್ಕದಲ್ಲಿ ಬೆಳ್ಳಿಯ ಉತ್ಸವಮೂರ್ತಿ, ಇದಕ್ಕೆ ಹಾವಿನ ಹೆಡೆಯ ಪ್ರಭಾವಳಿ, ಬೆಳ್ಳಿಯ ಛತ್ರಿ, ಚಾಮರ, ಸೀರೆಯುಡಿಸಿದ್ದಾರೆ. ನವರಂಗದ ಗೋಡೆಗಳಲ್ಲಿ ಮೂರು ಪುರುಷ ವಿಗ್ರಹಗಳು ಚೂರಿ ಹಿಡಿದು ನಿಂತಿವೆ. 'ಅಜ್ಜಪ್ಪ'ಗಳೆಂದು ಹೇಳಲಾಗುವ ಇವು ದೇವಿಯ ಸೇವಕರಂತೆ. ಇವರೇ ನಾಗಜೋಗಿ, ಬಸವ ಜೋಗಿಗಳೆಂದೂ ಹೇಳುತ್ತಾರೆ. (ಮುಂದೆ ನೋಡಿ) ಜಾತ್ರೆ ಮತ್ತು ಇತರ ಮುಖ್ಯ ಉತ್ಸವಗಳಲ್ಲಿ ಇವಕ್ಕೂ ಪೂಜೆ ಇದೆ. ಸರಳವಾಗಿ ಲೈಟ್ ಅಳವಡಿಸಿದ್ದಾರೆ. ಗರ್ಭಗುಡಿಯ ಹಿಂಭಾಗದಲ್ಲಿ ಗುಡಿಯ ಗೋಡೆಗಂಟಿರುವ ಹೆಬ್ಬಂಡೆಯಲ್ಲಿ ಹೆಣ್ಣು ಶಿಲ್ಪವಿದ್ದು, ಅರಿಶಿಣ, ಕುಂಕುಮ ಬಟ್ಟೆಟ್ಟು ಪೂಜಿಸಿದ್ದಾರೆ. ಇದು 'ಉಪ್ಪಿನ ಅಮ್ಮ'. ಮೈ, ಕೈ ತಿಂಡಿಯಾದರೆ, ಕಜ್ಜಿಯಂಥ ರೋಗವಿದ್ದರೆ ಬೇಡಿಕೊಂಡು ಉಪ್ಪು ಹಾಕುತ್ತಾರೆ. ಮಂಗಳವಾರ, ಶುಕ್ರವಾರ ಮತ್ತು ಹುಣ್ಣಿಮೆಗೆ-ಪಲ್ಲಕ್ಕಿ ಸೇವೆ ನಡೆಯುತ್ತದೆ. ದೇವಿಗೆ ಅಭಿಮುಖವಾಗಿ ಹಾಸುಬಂಡೆಯ ಅಂಗಳದಲ್ಲಿ ಒಂದೆಡೆ ಮಾತಂಗಿಯ ಸಣ್ಣ ಗುಡಿ ಇದೆ. ಅದನ್ನು ಹರಿಜನರು ನೋಡಿಕೊಳ್ಳುತ್ತಾರೆ. ಒಳಗೆ ಕಪ್ಪುಶಿಲೆಯ ವಿಗ್ರಹವಿದೆ. ಇದರ ಮುಂದೆ ಬಲಿಪೀಠ - ಲಿಂಗದ ಆಕಾರದ ಇದು ಕಟ್ಟೆಯ ಮೇಲಿದೆ. ಇದಕ್ಕೆ ಹಸಿರು ಬಳೆ ತೊಡಿಸಿದ್ದಾರೆ. ಇದರ ಮುಂದೆ ಅಗ್ನಿಕುಂಡದ ಸ್ಥಳ. ಪಕ್ಕಕ್ಕೆ ೧೫ ಮೀಟರು ಎತ್ತರದ ಕಲ್ಲಿನ ದೀಪಸ್ಥಂಭ, ತುದಿಗೆ ಕಬ್ಬಿಣದ ಆರತಿಗಳು. ಈ ಕಲ್ಲಿನಲ್ಲಿ ನಾಗಮಂಡಲದ ಕೆತ್ತನೆ ಗಮನಾರ್ಹ. ಇದರ ಪಕ್ಕಕ್ಕೆ ಆಳೆತ್ತರದ ಕಲ್ಲು ಕಂಬಾರ ಮೇಲೆ ತಿರುಗು ಗುಂಡು. ಭಕ್ತರು ಫಲ ಕೇಳಿ ಇದನ್ನು ತಿರುಗಿಸಿ ನೋಡುತ್ತಾರೆ. ಪ್ರಾಕಾರದ ಸುತ್ತ ವಸತಿ ಕೋಣೆ, ಆಫೀಸು, ಪರಶುರಾಮನ ಮಂದಿರ, ಬನ್ನಿ ಕಟ್ಟೆ, ಭರಮ ದೇವರು. ಜಾತ್ರೆಗೆ ಬಂದ ಜನ ಗುಡಿಯ ಮತ್ತು ಅಂಗಳದಲ್ಲಿ ಎಲ್ಲಾ ಕಡೆ ಬೀಡು ಬಿಡುತ್ತಾರೆ. ಜೋಗಮ್ಮಗಳನ್ನು ಕರೆ ತಂದು ಚಾದರೊ, ಕಂಬಳಿಯೊ ಹಾಸಿ ವಿಧಿಯಾಚರಣೆ ಪೂರೈಸುತ್ತಾರೆ. ಎಲ್ಲೆಂದರಲ್ಲಿ ಚೌಡಕಿ ನುಡಿಸುವ, ಅಮ್ಮನ ಕೊಡ ಹೊತ್ತ ಹಡ್ಡಲಗಿ ಹಿಡಿದಿರುವ ಗಂಡು ಹೆಣ್ಣು ಜೋಗಮ್ಮಗಳು, ಭಿಕ್ಷೆ ಎತ್ತುವವರು. ನಾವು ಜಾತ್ರೆಗೆ ಹೋದಾಗ ಒಬ್ಬ ಜೋಗತಿ ಕೊಡ ಹೊತ್ತು, ದೇವಿಯ ಎದುರು ಅಂಗಳದಲ್ಲಿ ಜೋರಾಗಿ ಕುಣಿಯುವುದನ್ನು ನೋಡಿದೆವು. ಆಕೆ ಬೇಡಿಕೊಂಡ ಭಕ್ತರ ಪರವಾಗಿ ಹಾಗೆ ಮಾಡುತ್ತಿದ್ದಳು.

ಮುಂಬೈದಷ್ಟು ದೂರದ ಊರುಗಳಿಂದ ಭಕ್ತರು ಜಾತ್ರೆಗೆ ಬರುತ್ತಾರೆ. ಕನ್ನಡ ತಿಳಿಯದ ಇಂಥ ಒಂದು ಕುಟುಂಬ ಕಳೆದ ೩೦-೪೦ ವರ್ಷದಿಂದ ಜಾತ್ರೆಗೆ ಬರುತ್ತಿರುವುದಾಗಿ ಹೇಳಿತು. ಈ ಕುಟುಂಬದ ಯಜಮಾನ ಬಂದರು ಕೆಲಸಗಾರ. ಮುನಿರಾಬಾದ ಕೆ.ಇ.ಬಿ.ಯಲ್ಲಿ ವಾಚ್‌ಮನ್ ಆಗಿ ಕೆಲಸ ಮಾಡುವ ಒಬ್ಬ ಹಿರಿಯ, ಎರಡೂ ಕೈ ತುಂಬ ಹಸಿರು ಬಳೆ ತೊಟ್ಟಿದ್ದ. ಇಂಥಾ ನಾನಾ ಬಗೆಯ ದೃಶ್ಯಗಳು. ಈ ಸಲ (೧೯೯೯) ಕೊಪ್ಪಳ ಸಹಾಯಕ ಆಯುಕ್ತರು ಅಧ್ಯಕ್ಷರಾಗಿರುವ, ತಹಶೀಲದಾರರು ಕಾರ್ಯದರ್ಶಿಗಳಾಗಿರುವ ''ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಸಮಿತಿ'' ಪ್ರಕಟಿಸಿದ ಪೋಸ್ಟರಿನಲ್ಲಿ (ಆಹ್ವಾನ ಪತ್ರಿಕೆ) ಜಾತ್ರೆಯ ಕಾರ್ಯಕ್ರಮಗಳು ಹೀಗಿವೆ -

೧) ವೈಶಾಖ ಬಹುಳ ಪ್ರತಿಪದ ಹುಲಿಗೆಮ್ಮ ದೇವಿಯವರಿಗೆ ಕಂಕಣಧಾರಣ, ೨) ಅಷ್ಟಮಿ ಸಂಜೆ ೭ ಗಂಟೆಗೆ ರಥೋತ್ಸವ, ೩) ನವಮಿ ರಾತ್ರಿ ಲಕ್ಕೆ ಅಕ್ಕಿಪಡಿ ರಥೋತ್ಸವ, ೪) ದಶಮಿ ಬಾಳಿದಂಡಿಗೆ - ೧) ಕೊಂಡದ ಪೂಜಾ ಸಂಜೆ ೮ ಗಂಟೆ, ೨) ಗಂಗಾದೇವಿ ಪೂಜಾ ರಾತ್ರಿ ೩.೩೦ ಗಂಟೆ, ೩) ಶ್ರೀದೇವಿಗೆ ಪ್ರಸಾದ ಕಟ್ಟುವುದು ರಾತ್ರಿ ೪ ಗಂಟೆ, ೪) ಬಾಳಿದಂಡಿಗೆ ಆರೋಹಣ ರಾತ್ರಿ ೪.೩೦, ೫) ಏಕಾದಶಿ - ಪಾಯಸ ಅಗ್ನಿಕೊಂಡ - ೧) ಕೊಂಡದ ಪೂಜಾ ಸಂಜೆ ೮ ಗಂಟೆ, ೨) ಹಿಡಿ ದಕ್ಷಿಣೆ ವಿತರಣೆ ರಾತ್ರಿ ೯ ಗಂಟೆ, ೩) ಪಡಗದ ಪೂಜಾ ರಾತ್ರಿ ೯.೩೦, ಸಾರಂಗ ಮಠದಲ್ಲಿ ೪) ಗಂಗಾದೇವಿ ಪೂಜಾ ರಾತ್ರಿ ೪ ಗಂಟೆ, ೫) ಶ್ರೀದೇವಿಗೆ ಪ್ರಸಾದ ಕಟ್ಟುವುದು ರಾತ್ರಿ ೪.೩೦ ಗಂಟೆ, ೬) ಶ್ರೀದೇವಿಗೆ ಪ್ರಸಾದ ನಿವೇದನೆ ೫.೩೦ ಗಂಟೆ, ೭) ಅಗ್ನಿಕೊಂಡ ಬೆಳಿಗ್ಗೆ ೬.೩೦.

ಜಾತ್ರೆಯ ಈ ಐದಾರು ದಿನಗಳಲ್ಲದೆ ಹತ್ತಾರು ದಿನಗಳವರೆಗೆ ಅಂಗಡಿಗಳು ವ್ಯಾಪಾರ ವ್ಯವಹಾರದಲ್ಲಿ ತೊಡಗಿರುತ್ತವೆ. ಪಶ್ಚಿಮ ಮಹಾದ್ವಾರದಿಂದ ಹುಲಿಗೆ ಊರಿನವರೆಗೂ ಇರುವ ಸುಮಾರು ಕಿಲೋಮೀಟರು ದಾರಿಯ ಇಕ್ಕೆಲಗಳಲ್ಲೂ ನಾನಾ ಬಗೆಯ ವಸ್ತುಗಳನ್ನು ಮಾರುವ ಅಂಗಡಿಗಳಿರುತ್ತವೆ. ಕುಂಕುಮ, ಭಂಡಾರ, ಕಾಯಿ ಕರ್ಪೂರ ಮಾರುವ ಅಂಗಡಿಗಳೆ ಹೆಚ್ಚು. ಸ್ಟೇಶನರಿ ಸಾಮಾನು, ಬಳೆ ಅಂಗಡಿ, ಹೋಟೆಲು, ಫಳಾರದ ಅಂಗಡಿ, ಕಬ್ಬಿಣ ಸಾಮಾನು, ಬಟ್ಟೆ ಬರೆ, ಪಾತ್ರೆ ಪಡಗ ಮಾರುವ ಅಂಗಡಿಗಳು. ಮೊದಲು ಇಲ್ಲೆಲ್ಲ ಕುರಿ, ಕೋಳಿ ಬಲಿಯಾಗುತ್ತಿದ್ದುದರಿಂದ, ಅದರ ಆರ್ಭಟವೆ ಹೆಚ್ಚಿರುತ್ತಿತ್ತು. ಈಗ ಬಲಿಯನ್ನು ಪೂರ್ಣ ನಿಷೇಧಿಸಿರುವುದರಿಂದ ಭಕ್ತರು ದೂರದ ಹೊಳೆ ದಂಡೆಯಲ್ಲಿ ಆ ವಿಧಿ ಪೂರೈಸಿಕೊಳ್ಳುತ್ತಾರೆ. ನಾಡಿನ ಮತ್ತು ನಾಡಿನಾಚೆಯ ಅನೇಕ ಭಾಗಗಳಿಂದ ಭಕ್ತರ ಪ್ರವಾಹ ಹರಿದು ಬರುತ್ತದೆ.

ಜಾತ್ರೆಯ ಮೊದಲದಿನ ಹುಲಿಗೆಮ್ಮನಿಗೆ ಮತ್ತು ಕಬ್ಬೇರ ಕುಲದ ಪೂಜಾರಿಗಳಿಗೆ ಕಂಕಣ ಕಟ್ಟಲಾಗುತ್ತದೆ. ಈ ಪೂಜಾರಿಗಳು ಹನ್ನೊಂದು ದಿನ ಉಪವಾಸವಿರುತ್ತಾರೆ. ಹಣ್ಣು ಹಾಲಿನ ಮೇಲೆ ದಿನಗಳೆದು ಬಾಳಿದಂಡಿಗೆ, ಪಾಯಸ, ಅಗ್ನಿಕೊಂಡದ ಮುಖ್ಯ ಕಾರ್ಯಗಳನ್ನು ಪೂರೈಸುತ್ತಾರೆ.

ಅಷ್ಟಮಿಯ ರಥೋತ್ಸವ ಅದನ್ನು ಕಟ್ಟುತ್ತಿದ್ದ ಬಡಿಗರ ಮುದುಕನ ಪ್ರಕಾರ "ಟ್ರೈಯಲ್ ನೋಡಿದಂತೆ". ಇದಕ್ಕೆ ಬೋಳು ಉತ್ಸವವೆಂದೂ ಹೆಸರಿಸಿದ ಆತ. ಪಶ್ಚಿಮ ಮಹಾದ್ವಾರದ ಅಂಗಳದಲ್ಲಿ ನಾಲ್ಕು ಕಲ್ಲುಗಾಲಿಗಳ ರಥದ ಮೇಲೆ ಅಟ್ಟಕಟ್ಟಿ ಅಲಂಕಾರ ಮಾಡದೆ ದೇವಿಯ ಉತ್ಸವ ಮೂರ್ತಿಯನ್ನಿಟ್ಟು ೩೦-೪೦ ಮಾರು ದೂರದಲ್ಲಿರುವ ತಾಯಿ ಮುದ್ದವ್ವನ ಕಟ್ಟೆಯವರೆಗೆ ಎಳೆಯುತ್ತಾರೆ. ಹುಲಿಗೆಮ್ಮನ ತಾಯಿ ಮುದ್ದವ್ವ. ತಾಯಿ ಮಗಳಿಗೆ ಜಗಳವಾಯ್ತು. ಮಗಳು ತಾಯಿಯ ಸೀರೆ ಕಸಗೊಂಡು ಬಂದುದರಿಂದ, ತಾಯಿ ಆಲದ ಬೊಡ್ಡೆ ಹೊಕ್ಕಳು ಇದು ಸ್ಥಳೀಯ ಜನಪದರು ಹೇಳುವ ಐತಿಹ್ಯ. ನವಮಿಯಂದು ರಾತ್ರಿ ಅಕ್ಕಿಪಡಿ ರಥೋತ್ಸವ, ಲಗ್ನದಲ್ಲಿ ಕಟ್ಟುವಂತೆ ಅಕ್ಕಿಯ ಗಂಟು ಕಟ್ಟುವುದು. ರಾತ್ರಿ ಶಿವಪುರದ ಹತ್ತಿರ

ಇರುವ ಸೋಮನಾಥನ ಗುಡಿಗೆ ಹೋಗಿ ಅಕ್ಕಿಗಂಟು ಕಟ್ಟಿ ತರುತ್ತಾರೆಂದು ಹುಲಿಗಿಯಲ್ಲಿ ಹೇಳಿದರೆ, ರಾಮನಾಥನ ಜಾತ್ರೆಯಾದ ನಂತರ ಅಲ್ಲಿಂದ ಅಕ್ಕಿಪಡಿ ಬಂದ ನಂತರವೇ 'ಹುಲಿಗಿ ತೇರು' ಎಂದು ಕಮ್ಮಟ ದುರ್ಗದಲ್ಲಿ ಹೇಳುತ್ತಾರೆ. ಈ ಬಗ್ಗೆ ಪೂಜಾರಿಗಳು 'ಅದೆಲ್ಲ ಏನಿಲ್ಲ' ಎನ್ನುತ್ತಾರೆ. ಹುಲಿಗೆಮ್ಮ ಈಗಿರುವ ಗುಡಿ ಮೊದಲು ಸೋಮನಾಥನಿದ್ದ ಜಾಗೆ. ಹೊಳೆಯಾಚೆಯಿಂದ ಜಿಗಿದು ಬಂದ ಹುಲಿಗೆಮ್ಮ ಸೋಮನಾಥನಿಗೆ ಇರಲು ಸ್ವಲ್ಪಜಾಗ ಕೇಳಿದಳಂತೆ. ಆತ 'ಏ ಹೊಲಸ ಮುದುಕಿ ಆ ಮೂಲೆಯಲ್ಲಿರು' ಅಂದ. ಆಕೆ ಪಡ್ಡಲಗಿ ಇಟಗೊಂಡು ಕೂತಳು. ನಂತರ ಆತ 'ಬೆನ್ನಿಂದ ಗ್ವಾಡಿ ಒಡಕೊಂಡು' ಹೋದ. ಆಕೆ ಅವನ ಸ್ಥಾನದಲ್ಲಿ ಕೂತಳು. ಹೊಳೆಯಾಚೆ ಮೊದಲು ಆಕೆ ಅಕ್ಕ ಹೊಸೂರಮ್ಮನ ಜತೆಗಿದ್ದಳು. ಆಕೆಯ ಜತೆ ಜಗಳಾಡಿ ಹೊಳೆ ಜಿಗಿದು ಬಂದಳು. ಇದಕ್ಕೆ ಸಾಕ್ಷಿ ಎಂಬಂತೆ ಹೊಳೆಯಾಚೆ ದಡದಲ್ಲಿ ಹೊಸೂರು ಇದೆ. ಹೊಸೂರಮ್ಮನ ಗುಡಿ ಇದೆ. ಅಲ್ಲಿಯೂ ಜಾತ್ರೆಯಾಗುತ್ತದೆ. ಅದು ಹೊಸಪೇಟೆ ತಾಲೂಕಿಗೆ ಸೇರುವ ಗ್ರಾಮ. ಇವರಿಬ್ಬರ ಜತೆ ಸವದತ್ತಿ ಎಲ್ಲಮ್ಮನನ್ನೂ ಜೋಡಿಸುತ್ತಾರೆ 'ಭಕ್ತರು'. ಆಕೆ ತಂಗಿ, ಸವದತ್ತಿಗೆ ಹೋಗಿ ನೆಲೆ ನಿಂತಳು. ಅಕ್ಕಿಪಡಿ ರಥೋತ್ಸವದ ನಂತರ ಅಕ್ಕಿಪಡಿಯನ್ನು ದೇಗುಲದಲ್ಲಿಟ್ಟು ಪೂಜೆ ಮಾಡುತ್ತಾರೆ.

ಮುಂದಿನ ಎರಡು ದಿನ ಅಂದರೆ ದಶಮಿ, ಏಕಾದಶಿಯಂದು ಜಾತ್ರೆಯ ಪ್ರಮುಖ ಕಾರ್ಯಕ್ರಮಗಳು. ದಶಮಿಯಂದು 'ಬಾಳಿದಂಡಿಗೆ' ರಾತ್ರಿ ೮ ಗಂಟೆಗೆ ಕೊಂಡವನ್ನು ಪೂಜಿಸುವುದು. ಬಾಳೆಕಂಬವನ್ನು (ದಂಡಿಗಿ) ವಾದ್ಯ ಮೇಳದೊಂದಿಗೆ ಊರಲ್ಲಿರುವ ಕಬ್ಬೇರ ಕುಲದ ಪೂಜಾರಿಯ ದೇವರ ಮನೆಯಲ್ಲಿಟ್ಟಿರುತ್ತಾರೆ. ರಾತ್ರಿ ಎರಡರ ಸುಮಾರು ಐವರು ಪೂಜಾರರು ದಂಡಿಗೆ ಸಮೇತ ವಾದ್ಯಮೇಳದೊಂದಿಗೆ ಗುಡಿಗೆ ಬರುತ್ತಾರೆ. ದಂಡಿಗೆಯನ್ನು ಗುಡಿಯಲ್ಲಿಟ್ಟು ಗಂಗಮ್ಮನ ಪೂಜೆಗೆ ಹೊರಡುತ್ತಾರೆ. ಅಲ್ಲಿ ದಂಡಿನ ಪೂಜಾರಿಯ ಚೌರ ಮಾಡಲಾಗುತ್ತದೆ. ಇಡೀ ವರ್ಷ ಕಾದಿರುವ ಗಡ್ಡ ಮೀಸೆ ಬೋಳಿಸುತ್ತಾರೆ. ಹೊಳೆ ಸ್ನಾನ ಮಾಡಿ ಗುಡಿಗೆ ಬರುತ್ತಾರೆ. ಅಮ್ಮನಿಗೆ ಹೂಕಟ್ಟಿ ೫ ಸಲ "ಕೇಳುತ್ತಾರೆ". ಗರ್ಭಗುಡಿಯಲ್ಲಿರುವ ದೇವಿಯ ತಲೆಯ ತುಂಬ ಮಲ್ಲಿಗೆ ಹೂ ಮತ್ತು ತುದಿಗೆ ಮಲ್ಲಿಗೆ ದಂಡೆಯ ಉಂಡೆಯಿಟ್ಟು ಪರದೆ ಎಳೆಯುತ್ತಾರೆ. ಬಹುಪರಾಕ್ ಎಂದು ಗದರಿಸಿದಂತೆ ಕೂಗುತ್ತ ಪರದೆ ತೆಗೆದಾಗ ಏರಿಸಿದ ಹೂ ಉದುರಿ ಕೆಳಗೆ ಬೀಳುತ್ತದೆ. ನಂತರ ಬಾಳೆದಂಡಿಗಿಯಲ್ಲಿ ಬಾಳೆದಂಡಗಿ ಪೂಜಾರಿ ಕೂರುವದು. ಅಮ್ಮನಿಗೆ ಪ್ರಿಯವಾದ ಲಕ್ಕಿಯ ಬರಲು ಜೋಡಿಸಿ ಅದಕ್ಕೆ ಬಾಳೆದಿಂಡಿನ ಸಿಪ್ಪೆ ಹೊದಿಸಿ ಮಾಡಿದ ಮೂರ್‍ನಾಲ್ಕು ಅಡಿ ಕೋಲಿನಾಕಾರದ ಸಾಧನವೆ ಬಾಳೆದಂಡಿಗೆ. ಇದಕ್ಕೆ ಮಲ್ಲಿಗೆ ಮಾಲೆ ಸುತ್ತುತ್ತಾರೆ. ಪೂಜಾರಿಗಳ ಮುಖದ ತುಂಬ ಕುಂಕುಮ ಬಳಿದು 'ಅಮ್ಮನನ್ನಾಗಿ' ಮಾಡಲಾಗುತ್ತದೆ. ಇವರ ತಲೆಗೆ ಮಲ್ಲಿಗೆ ದಂಡೆ ಮುಡಿಸುತ್ತಾರೆ. ವೀರಮಂಡಿಯೂರಿ ಕೂತ ಒಬ್ಬ ಪೂಜಾರಿಯು ಹೊತ್ತಿರುವ ಬಾಳೆದಂಡಿಗೆಯ ಮೇಲೆ ಪ್ರಧಾನ ಪೂಜಾರಿ ಕೂರುತ್ತಾನೆ. ಈತ ಚೂರಿ ಎತ್ತಿ ಹಿಡಿದು ಯುದ್ಧಕ್ಕೆ ಹೊರಟ ಭಂಗಿಯಲ್ಲಿರುತ್ತಾನೆ. ಮಂಡಿಯೂರಿ ಕೂತವನ ಅಕ್ಕಪಕ್ಕ ಇಬ್ಬರು ಅವನು ಬೀಳದಂತೆ ಹಿಡಿದಿರುತ್ತಾರೆ.

ಒಳಗಿರುವವರು 'ಬಹುಪರಾಕ್' ಎಂದು, ಹೊರಗಿನ ಜನ 'ಉಧೋ' ಎಂದು ಕೂಗುತ್ತಿರಬೇಕಾದರೆ ದಂಡಿಗೆಯ ಮೆರವಣಿಗೆ ೩ ಸುತ್ತು ಗುಡಿಗೆ ಪ್ರದಕ್ಷಿಣೆ ಬರುತ್ತಾರೆ. ಬ್ರಾಹ್ಮಣ ಪೂಜಾರಿ ಗಂಟೆ ಬಾರಿಸುತ್ತ ಮುಂದೆ ಹೋಗುತ್ತಿರುತ್ತಾರೆ. ಈ ಕಾರ್ಯಕ್ರಮ ಏಕೆ ಮಾಡುತ್ತೀರಿ ಎಂದು ಪೂಜಾರಿಯನ್ನು ಕೇಳಿದರೆ, "ಅಮ್ಮನ ತಾತಿ ಮಾಡಲು ಛಲ ಬೇಕು, ನಿಷ್ಠೆ ಬೇಕು, ಅದಕ ಈ ಪವಾಡ ಮಾಡ್ತೀವಿ" ಎನ್ನುತ್ತಾರೆ. ಈ ವಿಧಿಯಾಚರಣೆಯನ್ನು ಪೂರೈಸಿಕೊಂಡು ಪೂಜಾರಿಗಳು ಊರಲ್ಲಿ ಮೆರವಣಿಗೆಯಲ್ಲಿ ಬಂದು ಗೌಡರು, ಶಾನುಭೋಗರು, ದೇಸಾಯರು ಮೊದಲಾದವರಿಗೆ ಅಮ್ಮನ ತಲೆಯ ಮೇಲಿನ ಹೂವನ್ನು ಪ್ರಸಾದವಾಗಿ ಹಂಚುತ್ತಾರೆ.

ಏಕಾದಶಿಯಂದು ಗಂಗಾಮತದ ಕಟ್ಟೇರಮನೆಯವರು ಎರಡು ಬಂಡಿ ಕಟ್ಟಿಗೆ ತಂದು ಅಗ್ನಿಕೊಂಡಕ್ಕೆ ಹಾಕುತ್ತಾರೆ. ದಂಡಿಗಯ ದಿವಸವೆ ಪೂಜೆ ಮಾಡಿ ಕೊಂಡ ತೆಗೆದಿರುತ್ತಾರೆ. ಇಂದು ಅದನ್ನು ಕಟ್ಟಿಗೆಯಿಂದ ತುಂಬಿಸುತ್ತಾರೆ. ಐವರು ಪೂಜಾರಿಗಳು ಊರಲ್ಲಿರುವ ದೇವರ ಮನೆಯಿಂದ ಮೇಳದಲ್ಲಿ ಹೊರಟು ಗುಡಿಗೆ ಬಂದು ಕೊಂಡವನ್ನು ಪೂಜಿಸಿ ೫ ಗಂಧದ ಕಟ್ಟಿಗೆ ಇಟ್ಟು ೫ ದಿಕ್ಕಿಗೆ ಪೂಜೆ ಮಾಡಿ ಕೊಂಡಕ್ಕೆ ಒಂದೊಂದು ಗಂಧದ ಕಟ್ಟಿಗೆ ಹಾಕುತ್ತಾರೆ. ನಂತರ ಬಾಬುದಾರರಿಗೆ ಅಂದರೆ ದೇವಸ್ಥಾನಕ್ಕೆ ಸಂಬಂಧಪಟ್ಟ ಐನೋರು, ಬ್ರಾಹ್ಮಣರು, ಶೆಟ್ಟರು, ಪಟ್ಟಣಶೆಟ್ಟರು, ಕಟ್ಟೇರು, ಇತರೆಲ್ಲ ಸೇವಕರಿಗೆ, ವಾದ್ಯಮೇಳದವರಿಗೆ (ಸನಾಯಿ ಊದುವವರು) "ಇಡಿ ದಕ್ಷಿಣೆ" ಕೊಡುತ್ತಾರೆ. (ಹಿಡಿ ದಕ್ಷಿಣೆ) ಅಂಧರೆ ದಂಡಿಗೇರು ಮತ್ತು ಪಾಯಸದ ಪೂಜಾರಿಗಳು ಸುಮಾರು ೨೫ ರೂ. ಚಿಲ್ಲರೆ ನಾಣ್ಯಗಳನ್ನು ಎಲ್ಲರಿಗೂ ಬರುವಂತೆ ಹಂಚುತ್ತಾರೆ.

ಅರಿವೆ ಸುತ್ತಿ ತುಪ್ಪದಲ್ಲಿ ತಿದ್ದಿ ಉರಿ ಹಚ್ಚಿ ಗಾಡಿಯಲ್ಲಿ ಅಮ್ಮನಿಗೆ, ಹಿರೇರ ಕಲ್ಲುಗಳಿಗೆ ಬೆಳಗಿ ಕೊಂಡಕ್ಕೆ ಬಂದು ಪುಟ ಕೊಡುತ್ತಾರೆ. ಕೊಂಡ ಹೊತ್ತಿ ಉರಿಯುತ್ತಿದ್ದಂತೆ ಪೂಜಾರರು ಮನೆಗೆ ಬರುತ್ತಾರೆ.

ಸಂಪ್ರದಾಯದ ಪ್ರಕಾರ ಪಾಯಸದ ದೊಡ್ಡ ಮಣ್ಣಿನ ಮಡಕೆಯನ್ನು (ಪಡಗ) ಸಾರಂಗಮಠದವರ ಮನೆಯಲ್ಲಿಟ್ಟು ಪೂಜಿಸುತ್ತಾರೆ. ಈ ಪೂಜೆ ಮಾಡುವವರು ಉಮ್ಮಾಯನವರು ಮತ್ತು ಎಲಿಚಟ್ಟದ ಪೂಜಾರಿಗಳು. ನಂತರ ಅದನ್ನು ದೇವರ ಮನೆಗೆ ತಂದಿಡುತ್ತಾರೆ. ರಾತ್ರಿ ೩.೩೦ರ ಸುಮಾರು ಐವರು ಪೂಜಾರಿಗಳು ಪಡಗದೊಂದಿಗೆ ಗುಡಿಗೆ ಬರುತ್ತಾರೆ. ಹೊಳೆಗೆ ಹೋಗಿ ಪಾಯಸದ ಪೂಜಾರಿ ಚೌರ ಮಾಡಿಸಿಕೊಳ್ಳುತ್ತಾನೆ. ಸ್ನಾನವಾದ ನಂತರ ಪಾಯಸದ ಅಕ್ಕಿ ತೊಳೆದು ಪಡಗದಲ್ಲಿ ನೀರು ತುಂಬಿಕೊಂಡು ಗುಡಿಗೆ ಬರುತ್ತಾರೆ. ಮತ್ತೆ 'ಅಮ್ಮನಿಗೆ' ಹೂ ಪ್ರಸಾದ ಕಟ್ಟಿ ಮೂರು ಸಲ ಕೇಳಿ ಅಂಗಳದಲ್ಲಿ ಪಾಯಸದ ಗುಂಡು ಇಟ್ಟು ಬೆಂಕಿಯಿಡುತ್ತಾರೆ. ಪಾಯಸ ಮತ್ತು ದಂಡಿಗೆಯ ಪೂಜಾರರು ಪಡಗಕ್ಕೆ ನೀರು ಅಕ್ಕಿ ಹಾಕಿ ಗರ್ಭಗುಡಿಗೆ ಬರುತ್ತಾರೆ. ಹೂ ಪ್ರಸಾದ ಮುಗಿಯುವುದರಲ್ಲಿ ಪಾಯಸ ಕುದಿಯುತ್ತದೆ. ಮುಖ್ಯ ಪೂಜಾರಿ ಚಡ್ಡಿ ಮಾತ್ರ ಧರಿಸಿದ್ದು ಗರ್ಭಗುಡಿಯಿಂದ ರಭಸದಿಂದ ಬಂದು ಕೈ ತಿದ್ದಿ

ಚಮಚ ಹಾಕಿ ತಿರುವಿದಂತೆ ತಿರುವಿ ಅನ್ನವಾದಾಗ ಎರಡೂ ಕೈಯಿಂದ ಮೂರು ಹರಿವಾಣಗಳಿಗೆ ಮೂರು ಮೂರು ಹಿಡಿ ಅನ್ನ ತೆಗೆಯುತ್ತಾನೆ. ಇದನ್ನು ಪ್ರಸಾದವೆಂದು ಹಂಚುತ್ತಾರೆ. "ದೇವಿ ಪವಾಡ ಕೈ ಸುಡುವುದಿಲ್ಲ"ವೆಂದು ಪೂಜಾರರ ನಂಬುಗೆ. ದಂಡಿಗೇರ ಮನೆಯಿಂದ ಬಂದ ಕಡಬು ಅನ್ನಸಾರನ್ನು ಕೊಂಡದ ಐದು ಮೂಲೆಗೆ ೫ ಎಡೆ ಮಾಡುತ್ತಾರೆ. ಇಷ್ಟರಲ್ಲಿ ಮುಖದ ತುಂಬ ಕುಂಕುಮ ಬಳಿದುಕೊಂಡು ಎದೆ, ತಲೆಯ ಮೇಲೆ ಮಲ್ಲಿಗೆ ಹೂ ಮಾಲೆ ಮತ್ತು ತಲೆಗೆ ಕೂದಲ ಚವರಿ ಕಟ್ಟಿಕೊಂಡು ("ಅಮ್ಮನಾಗಿ") ಮುಖ್ಯ ಪೂಜಾರಿ ಚೂರಿ ಹಿಡಿದು ಗರ್ಭಗುಡಿಯಿಂದ ಓಡಿ ಬರುತ್ತಾನೆ. ಅವನನ್ನು ನೋಡಿದರೆ ಸಾಕ್ಷಾತ್ ಅಮ್ಮನೇ ಎದ್ದು ಬಂದಂತೆ ಭಾಸವಾಗುತ್ತದೆ. ಕೊಂಡಕ್ಕೆ ತುಪ್ಪ ಸುರಿದು, ಅಮ್ಮನಿಗೆ ಬೆಳಗಿ **'ಹಾರಗೋಳಿ'** ಬಿಡುವವ ಈ ಪೂಜಾರಿಯೇ. ನಂತರ ಅಗ್ನಿಕೊಂಡ ತುಳಿಯುತ್ತಾನೆ. ಮೂರ್‍ನಾಲ್ಕು ಹೆಜ್ಜೆ ದಾಟಿ ಬಂದ ಕೂಡಲೆ ಉಳಿದ ಪೂಜಾರಿಗಳು ಅವನನ್ನು ಹೊತ್ತುಕೊಳ್ಳುತ್ತಾರೆ. ಕಾಲುಗಳಿಗೆ ನೀರು ಹಾಕುತ್ತಾರೆ. ಗರ್ಭಗುಡಿಗೆ ಒಯ್ದಿಳಿಸುತ್ತಾರೆ. ನಂತರ ಜೋಗಪಂಕ್ತಿ, ಗುಡಿಯ ಒಳಗೆಬಂದು ಗೌಡ, ಶಾನುಭೋಗಾದಿಗಳಿಗೆ ಕಲ್ಲು ಸಕ್ಕರೆ, ದ್ರಾಕ್ಷಿ, ಪ್ರಸಾದವನ್ನು ಹಂಚುತ್ತಾರೆ. ಕಮಿಟಿ ಅವರಿಗೆ 'ಶಲ್ಲೇವು' ಕಾಣಿಕೆ ನೀಡುತ್ತದೆ. ಮೂವರು ಪೂಜಾರಿಗಳು ಮುಖದ ತುಂಬ ಕುಂಕುಮ ಬಳಿದು ಹೂ ಮಾಲೆ ಹಾಕಿ ಮೇಳದೊಂದಿಗೆ ಮನೆಗೆ ಬರುತ್ತಾರೆ. ಈ ಮೂವರು ದಂಡಿಗೇರು, ಪಾಯಸದವರು. ದಾರಿಯಲ್ಲಿ ನೆರೆದ ಭಕ್ತರು ಅವರ ಮೇಲೆ ಕುಂಕುಮ ಭಂಡಾರ ಉಗ್ಗುತ್ತ ಉಧೋ, ಉಧೋ ಎಂದು ಕೂಗುತ್ತಾರೆ. ದೇವರ ಮನೆ, ದಂಡಿಗೇರ ಮನೆಯಲ್ಲಿ ಪೂಜೆ ಮಾಡಿ ಪಾಯಸದವರ ಮನೆಗೆ ಬರುತ್ತಾರೆ. ಅಮ್ಮನವರ, ಎಲೆ ಚಟ್ಟಿನವರ ಮನೆಗಳಲ್ಲೂ ಪೂಜೆಯಾಗುತ್ತದೆ. ಈ ಐದು ಮನೆಗಳ ದೇವಿಯನ್ನು ಈಗ ಪೂಜಿಸುವವರು ದೇಗುಲದ ಬ್ರಾಹ್ಮಣ ಅರ್ಚಕ.

ಆಗಿಹುಣ್ಣಿಮೆಯ ರಾತ್ರಿ ಕಂಕಣಧಾರಿಗಳಾದ ಐವರು ಪೂಜಾರಿಗಳು ನಂದಿಬಂಡಿಯ ಒಬ್ಬ ಜೋಗಪ್ಪನ ಜತೆಗೂಡಿ ಗುಡಿಗೆ ಬಂದು 'ಪವಾಡ' ಮಾಡಿ ಹೋಗುತ್ತಾರೆ. ಇದೇನು ಎಂಬುದನ್ನು ಪೂಜಾರಿಗಳು ಯಾರಿಗೂ ಹೇಳುವುದಿಲ್ಲ. ಹೇಳಿದರೆ ಕೇಳಿದವರಿಗೂ, ಹೇಳಿದವರಿಗೂ ಅಪಾಯವಿದೆ ಎಂದರು ಅವರು. ರಾತ್ರಿ ಎರಡು ಗಂಟೆ ಹೊತ್ತಿಗೆ ಈ 'ಪವಾಡ' ನಡೆಯುತ್ತದೆ.

'ಶಾಕಿ' ಎರೆಯುವುದು : ಭಾರತ ಹುಣ್ಣಿಮೆಯಂದು (ಜನವರಿ) ದಲಿತ ಜೋಗಮ್ಮನಿಗೆ ಹಿಂದೆ ಹೆಂಡ ಎರೆಯುತ್ತಿದ್ದರು. ಈಗ ಹಾಲು ಎರೆಯುತ್ತಾರೆ. ಹುರಳಿಯ ಗುಗ್ಗರಿ ಕುಚ್ಚಿ ಕಣಕದ ಮುಟಗಿ ಮಾಡಿ ಕ್ಷೇತ್ರಪಾಲ ಬರಮ ದೇವರಿಗೆ ಎಡೆ ಮಾಡಿ ಐವರು ಪೂಜಾರಿಗಳಿಗೆ ಐದೈದು ಹಿಡಿ ಉಡಿ ತುಂಬುತ್ತಾರೆ. ಜೋಗಮ್ಮಗಳಿಗೂ ಉಡಿ ತುಂಬಿ ಅವರ ಹಡ್ಲಲಿಗೆಗೆ ಅಕ್ಕಿ, ಕಾಯಿ ಇತ್ಯಾದಿ ಸಾಮಗ್ರಿ ಹಾಕಿ ಪೂಜೆ ಮಾಡಿ ಶಾಕೆ (ಹೆಂಡ) ಎರೆಯುತ್ತಾರೆ.

ಈ ದೇಗುಲದ ಪ್ರತಿದಿನದ ಪೂಜೆ ಬ್ರಾಹ್ಮಣರಿಗೆ ಸೇರಿದ್ದರೂ ಹಿಂದೊಮ್ಮೆ ಕಬ್ಬೇರ

ಕುಲದ ಪೂಜಾರಿಗಳಿಗೇ ಸೇರಿತ್ತು. ಈ ಕಬ್ಬೇರರಿಗೂ ಅಮ್ಮನಿಗೂ ಹೇಗೆ ಸಂಬಂಧ ಉಂಟಾಯಿತು? ಈ ಕುತೂಹಲದ ಪ್ರಶ್ನೆಗೆ ಒಬ್ಬ ಪೂಜಾರಿ ತಮ್ಮ ತಂದೆ ಹೇಳುತ್ತಿದ್ದ ಕತೆ ಹೇಳಿದರು.

ಅಂಬಿಗರು (ಕಬ್ಬೇರು) ನದಿಯಲ್ಲಿ 'ಹರಗೋಲಾಡುತ್ತಿದ್ದರು'. ಅಮ್ಮ ರೂಪವತಿಯಾಗಿ ಹೊಳೆ ದಂಡೆಗೆ ಬಂದಳು. 'ನನ್ನ ಆಚೆ ಕಡೆ ದಾಟಸ್ತೀಯಾ?' ಎಂದು ಕೇಳಿದಳು. 'ಬರ್ರಿ ದಾಟಿಸ್ತೀನಿ' ಎಂದ ಅಂಬಿಗರವ ನಡು ಹೊಳೆಯಲ್ಲಿ ಆಕೆಯ ಚಲುವಿಗೆ ಮನಸೋತು ಅತ್ಯಾಚಾರ ಮಾಡಲೆತ್ನಿಸಿದ. ಆಕೆ ಹರಗೋಲು ದಬ್ಬಾಕಿ ಹುಲಿಗೆಗೆ ಬಂದು ಅಂಬಿಗರವನ ಮನೆಗೆ ಹೋಗಿ 'ನಿಮ್ಮ ಗಂಡಸರು ಸತ್ತೋದರು' ಎಂದು ಹೇಳಿದಳು. ಅವರ ಅಳುವುದು, ಕರೆಯುವುದು ನೋಡಿ ಕನಿಕರಿಸಿ, 'ಅಳಬೇಡಿ, ನಾಳೆ ಬೆಳಿಗ್ಗೆ ಕಳಸ ಕನ್ನಡಿ ತಗೊಂಡು ಬಂದು ಕರೆಯಿರಿ' ಎಂದು ಹೇಳಿ ಹೋದಳು. ಇವರು ಆಕೆ ಹೇಳಿದ ಪ್ರಕಾರ ಕಳಸ ಕನ್ನಡಿಯೊಂದಿಗೆ ಹೊಳೆದಂಡೆಗೆ ಬಂದರು. ಮುಳುಗಿದ ಅಂಬಿಗರು 'ಹ್ಯಾಂಗಿದ್ದರೊ ಹಾಂಗೇ' ಎದ್ದು ಬಂದರು. ನಿಮಗ ಪುನರ್ಜನ್ಮ ಆತು, ನನ್ನ ಮೇಲೆ ಮೋಹ ಮಾಡಿದ್ದಕ್ಕ ಪ್ರತಿಯಾಗಿ ನಿಮ್ಮ ಮಕ್ಕಳ ಮೇಲೆ ಇನ್ನೊಬ್ಬರು ಮೋಹ ಮಾಡಲಿ' ಅಂತ ಶಾಪವಿತ್ತಳು. ನಾನು ಇಂಥಲ್ಲಿ ವಾಸವಾಗಿದೀನಿ, ನನ್ನ ಕಾರೆ ಎಲ್ಲಾ ನೀವೇ ಮಾಡಿರಿ ಎಂದು ಹೇಳಿ ಮಾಯವಾದಳು. ಆಗಿನಿಂದ ಅಂಬಿಗರು ಪೂಜಾರಿಗಳಾಗಿ ಅಮ್ಮನ ಸೇವೆಗೆ ನಿಂತರು.

ಅಮ್ಮ ಪೂರ್ವಭಾಗದಿಂದ ಹೊಳೆ ದಾಟಿ ಬಂದಳು ಎಂದು ಈ ಕತೆ ಹೇಳಿದರೆ ದೇವರ ಮನೆಯ ಪೂಜಾರಿ ಮತ್ತು ಅವರ ಪತ್ನಿ ಹುಲಿಗಿಯ ಭೀಮಸೇನರಾವ್ ರಂಗರಾವ್ ದೇಸಾಯಿ ಅವರು ಸಂಪಾದಿಸಿದ ''ಶ್ರೀ ಹುಲಿಗಿ ರೇಣುಕಾಂಬಾ ಸ್ಥಳ ಚರಿತ್ರೆ'ಯಲ್ಲಿ ಬರುವ ಕತೆಯ ಒಂದು ಭಾಗವನ್ನೇ ಪುನರುಕ್ತಿಸಿದರು. ಈ ಪುಸ್ತಕ ಬ್ರಾಹ್ಮಣ ಚೌಡಿಭಟ್ಟ ಮತ್ತು ಸೋಮನಾಥ ಭಟ್ಟರನ್ನು ತಳುಕು ಹಾಕಿ ಗ್ರಾಮನಿವಾಸಿಗಳಾದ ನಾಗಜೋಗಿ, ಬಸವ ಜೋಗಿಗಳ ಕತೆ ಹೇಳಿದೆ. ಅಂಬಿಗ ಪೂಜಾರಿಗಳು ತಮ್ಮ ವಂಶಜರಾದ ನಾಗಜೋಗಿ, ಬಸವಜೋಗಿಗಳ ಕತೆ ಮಾತ್ರ ಹೇಳುತ್ತಾರೆ. ಅವರು ಸವದತ್ತಿ ಎಲ್ಲಮ್ಮನ ಭಕ್ತರು. ಒಂದು ಹುಣ್ಣಿಮೆಗೆ ಸವದತ್ತಿಗೆ ಹೋದಾಗ ಮಲಪ್ರಭೆ ತುಂಬಿ ಬಂದು ಮೂರ್ನಾಲ್ಕು ದಿನ ಉಪವಾಸ ಬಿದ್ದರು. ದೇವಿ ಅವರ ಕನಸಿನಲ್ಲಿ ಬಂದು ನಿಮ್ಮೂರ ಶಿವಾಲಯದ ಪಶ್ಚಿಮ ತಾಣದಲ್ಲಿ ಹರಿಹರ ಬ್ರಹ್ಮಾದಿಗಳು ಪೂಜಿಸುವ ಶ್ರೀ ಚಕ್ರ ದೊರಕುವುದು, ಅಲ್ಲಿಯೇ ನಾನು ಹುಟ್ಟುವೆ, ನನ್ನನ್ನು ಪೂಜಿಸಿರಿ' ಎಂದು ಹೇಳಿದಳು. ಜಾತ್ರೆಯ ಎಲ್ಲ ಆಚರಣೆ ಆಗ ಪ್ರಾರಂಭವಾದವು. ನಾಗಜೋಗಿ, ಬಸವ ಜೋಗಿಗಳೆ ವಿಧಿಗಳನ್ನು ಪೂರೈಸಿದ ಪೂಜಾರಿಗಳು. ತಾಯಿ ಉದ್ಭವಮೂರ್ತಿಯಾಗಿ ಕಲ್ಲಿನಲ್ಲಿ ಒಡಮೂಡಿದಳು. ಈ ಕತೆ ಸವದತ್ತಿ ಎಲ್ಲಮ್ಮನ ಜತೆ ಹುಲಿಗೆಮ್ಮನನ್ನು ತಳಕು ಹಾಕುತ್ತದೆ. ಇದನ್ನು ಸಮರ್ಥಿಸುವಂತೆ ಹುಲಿಗೆಗೆ ಬರುವ ಪ್ರಮುಖ ಜನಪದ ಗುರುವರ್ಗ, ಜೋಗಪ್ಪ, ಜೋಗಮ್ಮಗಳು ಹೇಳುವ ಹಾಡುಗಳು ಅವುಗಳ ಪ್ರಕಾರ ಹುಲಿಗೆಮ್ಮ ರೇಣುಕ ಎಲ್ಲಮ್ಮನೇ. ಆದರೆ ಕಬ್ಬೇರ ಕುಲದ

ಪೂಜಾರಿಯೊಬ್ಬರ ಪ್ರಕಾರ ಹುಲಿಗೆಮ್ಮನೇ ಬೇರೆ, ಎಲ್ಲಮ್ಮನೇ ಬೇರೆ. ಆಕೆಯ ನಡುವಳಿಗಳೆ ಬೇರೆ, ಈಕೆಯ ಆಚರಣೆಗಳೇ ಬೇರೆ.

ನಾಗಜೋಗಿ ಬಸವಜೋಗಿಗಳು ಕಾಲ್ಪನಿಕ ವ್ಯಕ್ತಿಗಳಲ್ಲ. ವಿಜಯನಗರ ಸದಾಶಿವರಾಯನೆ ಆಳ್ವಿಕೆಯ (ಕ್ರಿ.ಶ. ೧೫೫೬) ಆನೆಗೊಂದಿಯ ಒಂದು ಶಾಸನದಲ್ಲಿ ೧೪ ಜನ ಹೊಳೆಯ ಬೋವರು ಮತ್ತು ೩೦೦ ಜನ ಅಂಬಿಗರು ಅಂಬಲಿಯ ಮಹಲಿಂಗ ಒಡೆಯರಿಗೆ ಧರ್ಮ ಕೊಟ ವಿಷಯವಿದೆ. ಅರಸ ಅದೇ ವರ್ಷ ಅಂಬಿಗ ಮುಖ್ಯಸ್ಥರಾದ ನಾಗಯೋಗಿ ಮತ್ತು ಬಸವಯೋಗಿಗೆ ಭೂಮಿಯನ್ನು ದಾನ ಮಾಡಿದ್ದಾನೆ. ("ಕಾಯಕಸಿರಿ" ಎಂಬ ಗ್ರಂಥದಲ್ಲಿ "ಗಂಗಾವತಿ ತಾಲೂಕಿನ ಶಾಸನಗಳು", ತಾ॥ C. S. ಪಾಟೀಲರ ಲೇಖನ).

ಪಾಯಸದ ಪಡಗ ಹುಲಿಗಿಯ ಸಾರಂಗ ಮಠದಲ್ಲೇಕೆ ಇರುತ್ತದೆ? ಪೂಜಾರಿಗಳು ಮೇಳದೊಂದಿಗೆ ಹೋಗಿ ಅದನ್ನು ಪೂಜಿಸಿ ತರುತ್ತಾರಷ್ಟೇ. ಈ ಪ್ರಶ್ನೆಗೂ ಬಡಿಗೇರ ಮುದುಕ ಒಂದು ಕತೆ ಹೇಳಿದ. "ಹುಲಿಗೆಮ್ಮ ಐನೇರ ಮಗಳು. ಈಕೆಗೆ ಹಿರೇಬೇನೆ ಹತ್ತಿತ್ತು, ಐಗೋಳ ಕೇರಿಗೆ ಹೋಗಿ ಪತ್ರಿಗಿಡದ ಕೆಳಗೆ ಕೂತಿದ್ದಳು. ಸ್ವಾಮಿಗಳು ಆ ಗಿಡದ ಮೇಲಿದ್ದರು. ಅವರ ಆಶೀರ್ವಾದದಿಂದ ಆಕೆಯ ಹಿರೇಬೇನೆ ಗುಣವಾಯಿತು. 'ನೀನು ನನ್ನ ಮಗಳು ಹೋಗಮ್ಮ' ಎಂದರಂತೆ, ಅವರು.

ಪೂಜಾರಿಗಳು ಮಾಂಸಾಹಾರಿಗಳಲ್ಲ, ಕಬ್ಬೇರ ಮನೆಯಿಂದ ಹೆಣ್ಣು ತಕ್ಕೊಂಡಾಗ ಮದುವೆಯಾಗಿ ಬಂದ ನಂತರ ಆಕೆ ಮಟನೂಟ ಬಿಡಬೇಕಾಗುತ್ತದೆ. ಪೂಜಾರಿಗಳಿಗೆ ಗುಡಿಯ ಅರ್ಚಕರೆ ಮದುವೆಯ ಮೊದಲು ದೀಕ್ಷೆ ನೀಡುತ್ತಾರೆ. ಮುತ್ತು, ಹವಳ, ರುದ್ರಾಕ್ಷಿಗಳನ್ನು ಬಂಗಾರದ ತಂತಿಗೆ ಹಾಕಿದ ಸರವನ್ನು ಮುಖ್ಯ ಪೂಜಾರಿ ಧರಿಸಿದ್ದ. ಇದು 'ದೇವಿಯ ಸರ'.

ಕುಮಾರರಾಮನ ಜಾತ್ರೆ :

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ಮೊದಲು ಹೆಬ್ಬಂಡೆ ಗುಡ್ಡಗಳ ಸುರಕ್ಷಿತ ಪ್ರದೇಶವನ್ನು 'ಬೇಡನಾಯಕ ದೊರೆ ಕಂಪಿಲ ಆಳುತ್ತಿದ್ದನೆಂದು ಇತಿಹಾಸಕಾರರು ಹೇಳುತ್ತಾರೆ. ಮುಮ್ಮಡಿಸಿಂಗ ಅವನ ಮಗ ಕಂಪಿಲ ಅವನ ಮಗ ಕುಮಾರರಾಮ, ಈ ಮೂವರು ಸೊಂಡೂರು ಹೊಸಮಲೆದುರ್ಗ, ಕೊಪ್ಪಳ ತಾಲೂಕಿನ ಕುಮ್ಮಟ ಮೊದಲಾದ ಕಾಡು ಪ್ರದೇಶದಲ್ಲಿ ತಮ್ಮ ಬೇಡಗಂಪಳದ ಜತೆ ಆಳಿಕೊಂಡಿದ್ದವರು. ಒಂದು ಅಚ್ಚರಿಯ ಸಂಗತಿ ಎಂದರೆ ಬಹು ದೊಡ್ಡ ಸಾಮ್ರಾಜ್ಯವಾಗಿದ್ದ ವಿಜಯನಗರದ ಯಾವ ಅರಸನ ಬಗೆಗೂ ಜನಪದರಲ್ಲಿಲ್ಲದ ಹಬ್ಬ, ಜಾತ್ರೆ, ಆಚರಣೆ, ಜನಪದ ಸಾಹಿತ್ಯ, ಕುಮಾರರಾಮನ ಬಗ್ಗೆ ಇವೆ. ಕುರುಬರು, ಬೇಡರು, ಬೆಸ್ತರು ಮೊದಲಾದ ಶ್ರಮಿಕ ಜನಕುಲಗಳ ನಡುವೆ ವ್ಯಾಪಕವಾಗಿ ಜೀವಂತವಿರುವ ಈ 'ಪಂಥ' ಸರಿಯಾದ ಅಧ್ಯಯನವಾಗದೆ ಉಳಿದಿದೆ.

ಕುಮ್ಮಟದಲ್ಲಿ ೧೦.೫.೧೯೯೯ರಂದು ಒಂದು ದಿನ ನಡೆದ ರಾಮಸ್ವಾಮಿ ಜಾತ್ರೆಗೆ ಬಂದಿದ್ದ ನೂರಿನ್ನೂರು ಜನಗಳಲ್ಲಿ ಅನೇಕರನ್ನು ಸಂದರ್ಶಿಸಿದಾಗ, ಕುಮಾರರಾಮನ ಮತ್ತು ಅವನ

ಪರಿವಾರದವರ ರುಂಡಗಳಿರುವ ಇಂದರಗಿ ಗ್ರಾಮದ ಹಿರಿಯರನ್ನು ಭೇಟಿಯಾದಾಗ ತಿಳಿದುಬಂದ ಅಂಶವಿದು. ಇಂದರಗಿ ಬೇಡನಾಯಕರ ಇಬ್ಬರು ಹಿರಿಯರು ಪತ್ರಿಕೆಗಳಲ್ಲಿ ಅಲ್ಲಲ್ಲಿ ಪ್ರಕಟವಾದ ಚರಿತ್ರೆಯನ್ನು ಓದಿ, ಸುತ್ತಮುತ್ತಲ ಗ್ರಾಮಗಳ ಲೇಖಕರು ಬರೆದಿರುವ ನಾಟಕಗಳನ್ನು ಓದಿ ನೋಡಿ ತಮ್ಮದೆ ಆದ ಬೇರೊಂದು ಚರಿತ್ರೆಯನ್ನು ಹೇಳುತ್ತಾರೆ. ಅಲ್ಲಿ ಐತಿಹ್ಯ, ಪವಾಡ, ಇತಿಹಾಸಗಳ ವಿಚಿತ್ರ ಕಲಬೆರಕೆಯಿದೆ. ಇಂಥವರು ಅಪವಾದದಂತಿರುವ ನಿದರ್ಶನಗಳು, ಜನರ ತಿಳುವಳಿಕೆಯಲ್ಲಿ ಈ ಚರಿತ್ರಾಂಶಗಳು ತೀರ ಕಡಿಮೆ. ಜಾತ್ರೆಗೆ ಬಂದಿದ್ದ ಬಹಳಷ್ಟು ಜನಕ್ಕೆ 'ರಾಮಸ್ವಾಮಿ' ಜಾತ್ರೆ ನಡೆಯುತ್ತಿದೆ ಎಂಬ ಭಾವನೆಯಿತ್ತೆ ಹೊರತು ಕುಮಾರರಾಮನೇ ರಾಮಸ್ವಾಮಿ ಎಂದು ಕೂಡ ತಿಳಿದಿರಲಿಲ್ಲ. ಕುಮಾರರಾಮನ ಜನ್ಮಕ್ಕೆ ಕಾರಣನಾದ ಜಟಂಗರಾಮನ ಜಾತ್ರೆಯ ಬಗೆಗೂ ನಮಗೆ ಗೊಂದಲವಿತ್ತು.

ಈಗ ಕುಮ್ಮಟ ದುರ್ಗವೆಂದು ವಿದ್ವಾಂಸರು ಹೇಳುವ ಕಮ್ಮಟದ ರಾಮಸ್ವಾಮಿಯ ಜಾತ್ರೆ ಒಂದು ದಿನದ್ದು. ರಾಮಸ್ವಾಮಿಯ ಗುಡಿ, ಅರಮನೆ, ಜಗದ್ಗುರು ದೇಗಲ, ದೋಣಿಗಳು, ಜೇನುಕಲ್ಲು, ಹಾಲಬಾವಿ, ಬೈಚಪ್ಪನ ಗುಡಿ, ಕಾಟಪ್ಪನ ಕಟ್ಟೆ, ಆನೆಪಾಗು, ಜೈನ ಬಸದಿ, ಕೋಟೆ ಮೊದಲಾದ ರಾಜ್ಯದ ಕೇಂದ್ರವೊಂದರ ಕುರುಹುಗಳೆಲ್ಲ ಮೂಕಸಾಕ್ಷಿಯಾಗಿರುವ ಬೆಟ್ಟಕ್ಕೆ ಈ ಭಾಗದ ಜನ 'ಕುಮ್ಮಟ'ವೆನ್ನುತ್ತಾರೆ, ಕುಮ್ಮಟ ದುರ್ಗವೆನ್ನುವುದಿಲ್ಲ. ಕುಮ್ಮಟದಲ್ಲೇ ದುರ್ಗದ ಅರ್ಥವೂ ಸೇರಿಕೊಂಡಿರುವುದರಿಂದ ಜನರಲ್ಲಿರುವ ಮಾತೇ ಸರಿಯಾದ ಬಳಕೆ ಎನಿಸುತ್ತದೆ. ಕುಮ್ಮಟದ ಆಚೆ 'ಹಳೆ ಕಮಟಾ' ಎಂಬ ಗ್ರಾಮವಿದೆ. ಕಡಲ ಕಿನಾರೆಯ ಕಮಟಾ ಇಲ್ಲೇಕೆ ಬಂತು ಎಂದು ದಿಗಿಲಾದೆ. ಅದು ಶಿಷ್ಟರ ಬಳಕೆಗೆ ಬಂದಿರುವ ಅಪಪ್ರಯೋಗ. ಜನಪದರು ಹೇಳುವ ಕುಮ್ಮಟವೇ ಅದು. ಕುಮ್ಮಟದ ಪಕ್ಕಕ್ಕೆ ಇರುವ ಮತ್ತೊಂದು ಗುಡ್ಡಕ್ಕೆ ಮಾದಿಗ ಹಂಪಯ್ಯನ ಗುಡ್ಡವೆನ್ನುತ್ತಾರೆ.

ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ಹೊಸಪೇಟೆಯಿಂದ ಮುನಿರಾಬಾದ್ ಮೂಲಕ ದಾಟಿ ಹೋಗುವಾಗ ಬೂದಿಗುಂಪ ಕ್ರಾಸ್ ಇದೆ. ಅಲ್ಲಿಂದ ಪೂರ್ವದ ಕಡೆ ೯ ಕಿಲೋಮೀಟರು ದೂರದಲ್ಲಿ ಜಬ್ಬಲಗುಡ್ಡ ಎಂಬ ಸಣ್ಣ ಹಳ್ಳಿ. ಅಲ್ಲಿಂದ ಸ್ವಲ್ಪ ದೂರದಲ್ಲಿ ಮುಕ್ಕುಂಪಿ. ಈ ಎಲ್ಲ ಪ್ರದೇಶ ಹೆಬ್ಬಂಡೆ ಗುಡ್ಡಗಳ ಸಾಲುಗಳು ಮತ್ತು ಗುಂಪಿಗಳಿಂದ ತುಂಬಿದೆ. ಇಬ್ಬದಿಯ ಕಾಡು ಕಲ್ಲುಗಳ ಶ್ರೇಣಿಯ ನಡುವೆ ಬಯಲು ಹೊಲಗಳ ನಡುವೆ ರಸ್ತೆ. ಈ ಪ್ರದೇಶದಲ್ಲೇ ಇಂದರಗಿ ಮೊದಲಾದ ಗ್ರಾಮಗಳು. ೨೫೦ ಮನೆಗಳ ಕುರುಬರು, ಕಬ್ಬೇರು, ಈಡಿಗರು, ನಾಯಕರು, ಮುಸ್ಲಿಂರು ಮೊದಲಾದವರು ಇರುವ ಜಬ್ಬಲಗುಡ್ಡ ಸಣ್ಣ ಗ್ರಾಮ. ಈ ಗ್ರಾಮದಿಂದ ದಕ್ಷಿಣಕ್ಕಿರುವ ಬೃಹತ್ ಬಂಡೆಗುಡ್ಡವೇ 'ಕುಮ್ಮಟ'. ಅದಕ್ಕೆ ಹೋಗಲು ಕಾಲುದಾರಿಗಳು. ಮೂರ್ನಾಲ್ಕು ಮೈಲಿ ಹೋಗಿ ಗುಡ್ಡದ ಕೆಳಗೆ ನಿಂತರೆ ಈ ಪ್ರದೇಶದ ಎರಡು ಗುಡ್ಡಗಳನ್ನು ಸುತ್ತುವರಿದು ಕೋಟೆ ಕಟ್ಟಿದ್ದು ಕಾಣುತ್ತದೆ. ಗುಡ್ಡದ ಅಂಚಿನ ಕೋಟೆಯ ಕಲ್ಲುಗೋಡೆ ಅಲ್ಲಲ್ಲಿ ಉಳಿದಿದೆ.

ಈ ಕಲ್ಲು ಗುಡ್ಡ ಹತ್ತಲು ಸುತ್ತಲೂ ಕಾಲುದಾರಿಗಳು. ಅವೂ ಸುಗಮವಿಲ್ಲ. ಸುಮಾರು

೩೦೦' - ೪೦೦' ಎತ್ತರ ಹತ್ತಿ ತುದಿಗೆ ಹೋದರೆ ಜಟಿಂಗರಾಮನ ಚಿಕ್ಕ ಗುಡಿ. ನೈಋತ್ಯ, ವಾಯುವ್ಯ, ಈಶಾನ್ಯಕ್ಕೆ ಮೂರು ಚಿಕ್ಕ ಬಾಗಿಲು. ಈಶಾನ್ಯದ್ದು ದಿಲ್ಲಿ ಬಾಗಿಲು, ನೈಋತ್ಯದ್ದು 'ಹುಲಿಗೆ ಬಾಗಿಲು', ವಾಯುವ್ಯದ್ದು 'ರತ್ನಾಜಿ ಬಾಗಿಲು' ಎಂಬ ಪ್ರತೀತಿ. ರತ್ನಾಜಿ ಬಾಗಿಲ ಒಳನುಗ್ಗಲು ಹಾಸುಗಲ್ಲಿನಲ್ಲಿ ಡಬ್ಬ ಮಲಗಿ ಕೈ ಉದ್ದ ಚಾಚಿ ನಮಿಸುವ ಸ್ತ್ರೀ ವಿಗ್ರಹ, ಪಕ್ಕಕ್ಕೆ ಅಸ್ಪಷ್ಟ ಶಿಲ್ಪಕೃತಿ. ಇದು ರತ್ನಾಜಿಯ ಉಬ್ಬು ಶಿಲ್ಪವೆಂದು ಕೆಲವರ ಗ್ರಹಿಕೆ. ರಂಗಮಂಟಪದಲ್ಲಿ ಈ ಸ್ಥಳದ ನಾಲ್ಕು ಕಂಬಗಳ ನಡುವೆ ಪೂಜೆಗೊಳ್ಳುವ ಗುಂಡುಕಲ್ಲು. ಗರ್ಭಗೃಹದಲ್ಲಿ ಹೆಬ್ಬಂಡೆಯೆ ಹಿಂದಲ ಗೋಡೆ. ಕಟ್ಟೆಯಲ್ಲಿ ಬಣ್ಣದ ಕಟ್ಟಿಗೆಯ ಹತ್ತು ರುಂಡಗಳು. ಜಾತ್ರೆಗೆಂದು ಇಂದರಗಿ ಮತ್ತು ಜಬ್ಬಲಗುಡ್ಡಗಳಿಂದ ತಂದಿರಿಸಿದುವು. ಖಾಯಂ ಆಗಿ ಇರುವಂಥವಲ್ಲ. ಖಾಯಂ ಆಗಿ ಇರುವ ಗುಂಡುಕಲ್ಲಿಗೆ ಸಣ್ಣ ಬಿದಿರ ಚಟ್ಟ ಕಟ್ಟಿ ಮಡಿಸಿದ ಎಲೆಗಳನ್ನು ಅಂಟಿಸಿ (ಎಲೆ ಚಟ್ಟು) ಹೂಮಾಲೆ ಹಾಕಿ ಪೂಜಿಸಿದ್ದಾರೆ. ೧೦ ರುಂಡಗಳಲ್ಲಿ ನಾಲ್ಕು ಹಸಿರು ಬಣ್ಣದವು, ೨ ನೀಲಿ, ೨ ಕಂದು, ೨ ಕೆಂಪು ಬಣ್ಣದವು. ರುಂಡಗಳ ಪಕ್ಕಕ್ಕೆ ಗೋಡೆಗಂಟಿ ಹಲವಾರು ಕರಿಕಲ್ಲುಗಳು. ಇವಕ್ಕೆ ಕುಂಕುಮ ಅರಿಶಿಣ ಬಟ್ಟಿಟ್ಟು ಪೂಜಿಸಿದ್ದಾರೆ. ಎರಡು ಕೊಡಗಳನ್ನೂ ಪೂಜಿಸಿದ್ದಾರೆ.

ವೀರಗೂಳನ್ನು ತಯಾರಿಸಲು ಕರಿಮರಿ ಕಡಿಯುವ ಜಾತ್ರೆಯ ದಿನದ ಸಂಜೆಯ ಸಂದರ್ಭದಲ್ಲಿ ಗುಡಿಯ ಪಕ್ಕದ ಚಿಕ್ಕ ಕಲ್ಲಾಸರೆಯಲ್ಲಿ ಕಂಬಳಿ ಹಾಸಿ ತೆರೆದ ಪೆಟ್ಟಿಗೆಯಲ್ಲಿ ಎರಡು ರುಂಡಗಳನ್ನು ಇಟ್ಟಿದ್ದರು. ಅದರ ಅಕ್ಕಪಕ್ಕ ಒಂದು ವೀರಗಲ್ಲು, ಕುದುರೆಯ ಶಿಲ್ಪವಿರುವ ಕಲ್ಲು ಮತ್ತೊಂದು ಆಕಾರ ಗೊತ್ತಾಗದ ಶಿಲೆ. ಇಲ್ಲಿ ಬಲಿಯಾದ ಟಗರಿನ ಕರಸನ್ನು ಗುಡಿಯಿಂದ ಕಾಲು ಕಿಲೋಮೀಟರು ದೂರದ ಹಾಸುಬಂಡೆಗೆ ಒಯ್ದು ಎರಡೂವರೆ ಸೇರು ಜೋಳದ ನುಚ್ಚಿನ ಜತೆ ಬೆರಸಿ ವೀರಗೂಳು ಎಂದು ("ನೀರಗೊಳಿ") ಪೂಜಾರಿಗಳು ಅಲ್ಲಿ ನೆರೆದ ಬೇರೆ ಬೇರೆ ಗ್ರಾಮಗಳ ಹೆಸರು ಹಿಡಿದು ಕೂಗಿ ಹಂಚುತ್ತಾರೆ. ಅವರು ಹಾಗೆ ಹಂಚಿ 'ಅರಗಾದ ಕೂಡಲೆ' ನೆರೆದವರೆಲ್ಲ ಗೆಬರಾಡಿ ಉಳಿದುದನ್ನು ಪ್ರಸಾದವೆಂದು ತೆಗೆದುಕೊಂಡು ಹೋಗುತ್ತಾರೆ. ಬಿತ್ತುವಾಗ ಬೀಜಗಳಲ್ಲಿ ಇದನ್ನು ಬೆರಸಿ ಬಿತ್ತಿದರೆ ಹುಲುಸು ಹೆಚ್ಚು ಎಂದು ಇವರ ನಂಬುಗೆ. ಇದು ಜಾತ್ರೆಯ ಕೊನೆಯ ಪ್ರಮುಖ ವಿಧಿ. 'ಕರಿಮರಿ' ಕಡಿದ ನಂತರ ಜಾತ್ರೆಗೆ ಬಂದ ಬೇಡಿಕೊಂಡ ಭಕ್ತರು ತಮ್ಮ ತಮ್ಮ ಬೇಟೆಗಳನ್ನು (ಕುರಿ, ಟಗರು) ಕಡಿದುಕೊಂಡು ಹೊತ್ತೊಯ್ಯುತ್ತಾರೆ. ಅಂದು ರಾತ್ರಿ ವಸ್ತಿ ಇದ್ದು ಮರುದಿನ ಗುಡ್ಡ ಇಳಿಯುತ್ತಾರೆ. ವೀರಗೂಳಿನ ಒಂದು ಪಾಲು ಹುಲಿಗಿಯ ಹುಲಿಗೆಮ್ಮನ ಜಾತ್ರೆಗೆ ಅಕ್ಕಿಪಡಿಯಾಗಿ ಹೋಗುತ್ತದೆಂದು ಜಾತ್ರೆಯ ಕೆಲವರು ಹೇಳಿದರು. ಆದರೆ ಹುಲಿಗಿಯ ಪೂಜಾರಿಗಳು ಇದನ್ನು ಒಪ್ಪಲಿಲ್ಲ. ಹುಲಿಗೆಮ್ಮನಿಗೂ, ರಾಮಸ್ವಾಮಿಗೂ ಏನು ಸಂಬಂಧ ಎಂದು ಕೇಳಿದರೆ ಅದಕ್ಕೊಂದು ಕತೆ ಹೇಳುತ್ತಾರೆ, ಇಂದರಗಿಯ ಜನ. ಹುಲಿಗೆಮ್ಮ ಹೊಳೆ ದಾಟುವಾಗ ಮೂಗಿನ ನತ್ತು ಕಳಚಿ ಬಿತ್ತು. ಎಷ್ಟು ಹುಡುಕಿದರೂ ಸಿಗಲಿಲ್ಲ. ರಾಮ ಅದನ್ನು ಹುಡುಕಿ ಕೊಟ್ಟ. ಅದಕ್ಕೆ ಆಕೆ "ನನ್ನ ಅಕ್ಕಿಪಡಿಗೆ ಮೊದಲು ನಿನ್ನದಾಗಲಿ" ಎಂದು ಹರಸಿದಳಂತೆ.

ಪ್ರತಿ ವರ್ಷ ಜಾತ್ರೆಗೆ ಬರುವ ಒಬ್ಬ ಭಕ್ತ, ಕುಮಾರರಾಮನ ರುಂಡ ತೆರೆದವಳು ಹುಲಿಗೆಮ್ಮನೇ ಎಂದು ಹೇಳಿದ. "ಮಾತಂಗಿಯಾಗಿದ್ದವಳು, ಹುಲಿಗೆಮ್ಮನಾದಳು", ಇದನ್ನು ಬಹಳಷ್ಟು ಜನ ಅಲ್ಲಗಳೆದರು. ಡೊಂಬರ ಹುಡುಗಿ ಮಲತಾಯಿ ರತ್ನಾಜಿಯ ಸೇಡು ತೀರಿಸಿಕೊಳ್ಳಲು ದಿಲ್ಲಿ ಸುಲ್ತಾನ ಹತ್ತಿರ ಮಾದಿಗರ ಮಾತಂಗಿಯಾಗಿ ಹೋಗಿ ಸುಂದರವಾದ ಚಪ್ಪಲಿ ತಯಾರಿಸಿ ಅವನ ಮಗಳ ಮತ್ತು ರಾಜನ ಗಮನ ಸೆಳೆದಳೆಂದು 'ಗಂಡುಗಲಿ ರಾಮ'ನ ಒಂದು ನಾಟಕದಲ್ಲಿದೆ.

ಕೊಪ್ಪಳದ ಗವಿಮಠ ಪ್ರದೇಶದಲ್ಲಿರುವಂತೆ 'ಕುಮ್ಮಟ'ದಲ್ಲೂ ಕಮಾರರಾಮನ ಗುರುವಿನದೆಂದು ಹೇಳುವ ಗುಡಿಯ ಮಧ್ಯದ ಗರ್ಭಗೃಹದಲ್ಲಿ ಜಿನಮೂರ್ತಿ ಇದೆ. ಅಕ್ಕಪಕ್ಕದ ಗರ್ಭಗೃಹಗಳಲ್ಲಿ ಯಾವ ವಿಗ್ರಹವೂ ಇಲ್ಲ. ಮಧ್ಯದ ಗರ್ಭಗೃಹದ ಬಾಗಿಲ ಚೌಕಟ್ಟಿನಲ್ಲೂ ಜಿನವಿಗ್ರಹವಿದೆ. ಇಂದರಗಿಯ ರಾಮದೇವರ ಪೂಜಾರಿಣಿ ಇದು 'ಬೌದ್ಧೇಶ್ವರ'ವೆಂದು ಹೇಳಿದಳು. ಅಖಂಡ ನವರಂಗದ ಒಂದು ಕಲ್ಲುಕಂಬಕ್ಕಂಟಿ ಒಡೆದ ಜಿನಮೂರ್ತಿ ಇದೆ.

ಜಾತ್ರೆಯ ದಿನ ಬೆಳಿಗ್ಗೆ ಮತ್ತು ಮಧ್ಯಾಹ್ನ ರಾಮಸ್ವಾಮಿಯ ಲಗ್ನ ಮತ್ತು ಸೂಳೆ ಮನೆಗೆ ಹೋಗಿ ಬರುವ ವಿಧಿಯಾಚರಣೆಗಳಿವೆ. ಸುರಗಿ ನೀರು ತಂದು, ಸುರಗಿ ಸುತ್ತಿ ಕಾರಣ ಮಾಡಿ, ೫ ಮಂದಿಗೆ ಮತ್ತು ರಾಮಸ್ವಾಮಿಗೆ, ಇತರ ದೇವರುಗಳಿಗೆ ಕಂಕಣ ಕಟ್ಟಿ ಲಗ್ನದ ಎಲ್ಲ ಕಾರ್ಯಗಳನ್ನು ಮಾಡುತ್ತಾರೆ. ಮಧ್ಯಾಹ್ನ ಡೊಳ್ಳಿನ ಮೇಳದೊಂದಿಗೆ ಗುಡಿಯಿಂದ ಗುಡ್ಡದ ಮತ್ತೊಂದು ಮಗ್ಗುಲಲ್ಲಿರುವ ರಾಜಧಾನಿ ಪ್ರದೇಶದಲ್ಲಿಯ ಸೂಳೆಯರ ಮನೆಗೆ (ಕಲ್ಲು ಗುಂಪಿಗಳಿವೆ) ಹೋಗುವ ವಿಧಿ ಇದೆ. ಪೂಜಾರಿಗಳು ಕೆಲವರು ಎಡಗೈಗೆ, ಕೆಲವರು ಬಲಗೈಗೆ ಕೆಂಪು ಬಟ್ಟೆ ಸುತ್ತಿ ಗುಡಿಯಲ್ಲಿರುವ ರುಂಡಗಳನ್ನು ಹಿಡಿದುಕೊಂಡು ಹೊರಡುತ್ತಾರೆ. ನೀರಗೊಳಿ ಹೆಬ್ಬಂಡೆ ಹತ್ತಿರ ಬಂದ ಕೂಡಲೆ ಕೇಕೆ ಹೊಡೆಯುತ್ತ ಎಲ್ಲೆಂದರಲ್ಲಿ ಓಡುತ್ತಾರೆ. ಸೂಳೆ ಮನೆಗಳಿರುವ ಜಾಗೆಗೆ ಬರುತ್ತಾರೆ. ಪಕ್ಕದ ಭರಮ ದೇವರ ಕಟ್ಟೆ ಹತ್ತಿರದ ಓಕುಳಿ ಹೊಂಡದಲ್ಲಿ ಓಕುಳಿಯಾಡುತ್ತಾರೆ. ದೇವದಾಸಿಯೊಬ್ಬಳಿಗೆ ಬಣ್ಣ ಉಗ್ಗುವ ಆಚರಣೆಯೆ ಓಕುಳಿ. ಇದಾದ ನಂತರ ಗುಡಿದುಂಬುತ್ತಾರೆ. (ದೇವರೆಲ್ಲ ಗುಡಿಗೆ ಬಂದು ಸ್ಥಾಪನೆಗೊಳ್ಳುತ್ತವೆ). ಸಂಜೆ ನೀರಗೂಳಿನ ಸುತ್ತ (ವೀರಗೂಳು) ಮತ್ತೆ ರುಂಡ ಹಿಡಿದ ಪೂಜಾರಿಗಳು ಐದು ಸುತ್ತು ಪ್ರದಕ್ಷಿಣೆ ಬರುತ್ತಾರೆ. ಇದು "ನೀರಗೊಳಿ ತುಳಿವ" ವಿಧಿ.

ಜಾತ್ರೆಯಲ್ಲಿ ಗುಡ್ಡದಲ್ಲಿ ಪೂಜೆ ಮಾಡುವವರು ಇಂದರಗಿಯ ಸುಣಗಾರ (ಅಂಬಿಗರು) ಪೂಜಾರಿಗಳು. ಹಿಂದೆ ಹಾಳು ಕಮ್ಮಟದ ಬೇಡರು ಪೂಜಾರಿಗಳಾಗಿದ್ದರಂತೆ. ಅಂಬಿಗರು, ಕುರುಬರು, ಬೇಡರು, ಉಪ್ಪಾರರು ಮೊದಲಾದ ಶ್ರಮಿಕ ಜನಕುಲಗಳ ಮನೆ ದೇವರು ಕುಲದ ದೇವರಾಯನ ರಾಮಸ್ವಾಮಿ. ಅವರೆಲ್ಲ ಜಾತ್ರೆಗೆ ಬರುತ್ತಾರೆ.

ಇಂದರಗಿಯಿಂದ ಬರುವ ಆರುಕಟ್ಟಿಗೆ ರುಂಡಗಳು ಪ್ರಧಾನ ದೈವಗಳು. ಜಬ್ಬಲ ಗುಡ್ಡದಿಂದ ಈ ಸಲ ನಾಲ್ಕು ಬಂದಿದ್ದವು. ಆನೆಗೊಂದಿ ಹತ್ತಿರದ ಮಲ್ಲಾಪುರದಿಂದ ಬರುತ್ತಿದ್ದ ರುಂಡಗಳು ಈ ಸಲ ಬಂದಿರಲಿಲ್ಲ. ಅವರಿಗೂ, ಇವರಿಗೂ ಜಗಳವಾಗಿ ಅವು ಬರುತ್ತಿಲ್ಲ.

ಆರು ರುಂಡಗಳು ಯಾರವು ಎಂದು ಕೇಳಿದರೆ ಓಜಪ್ಪ, ಹಳದಪ್ಪ, ರಾಮಣ್ಣ, ಲಕ್ಷ್ಮಣ್ಣ ಮತ್ತು ಎರಡು ಹರಕೆ ದೇವರು ಎಂದು ಇಂದರಗಿ ಪೂಜಾರಿಣಿ ಹೇಳಿದಳು. ಉಳಿದ ನಾಲ್ಕು ರಾಮಸ್ವಾಮಿಯವೇ ಎಂದಳು ಆಕೆ. ಇಂದರಗಿ ಊರಲ್ಲಿ ಹೋಗಿ ಕೇಳಿದರೆ ಹಳುವಪ್ಪ, ಕಾಟಪ್ಪ, ಬರಮಪ್ಪ, ಜಟಿಂಗಸ್ವಾಮಿ, ಹಿರೇದೇವರು, ಅಂದರೆ ರಾಮಣ್ಣ, ಲಕ್ಷ್ಮಣ್ಣ ಎಂದು ಕುಮಾರರಾಮನಿಗೆ ಬಿಟ್ಟ ಯುವ ದೇವದಾಸಿ ಮಲ್ಲಮ್ಮ ಹೇಳಿದಳು. ಪಕ್ಕದಲ್ಲಿದ್ದ ಹಿರಿಯ ರಾಮಣ್ಣ, ಲಕ್ಷ್ಮಣ ಅಲ್ಲ ಹೋಲಿಕಿರಾಮ, ಚನ್ನಿಗರಾಮ ಎಂದು ತಿದ್ದಿದ. (ರಾಮಾಯಣದ ಪ್ರಖ್ಯಾತ ರಾಮನ ಪ್ರಚಾರ ಹೆಚ್ಚಿ ಕುಮಾರರಾಮನ ಪಂಥದಲ್ಲಿ ರಾಮ ಲಕ್ಷ್ಮಣರು ಪ್ರವೇಶವಾಗುತ್ತಿರುವ ರೀತಿ ಇದು.)

ಜಾತ್ರೆಗೆ ಬಂದ ಬೇಡಿಕೊಂಡ ಹೆಂಗಸರು, ಗಂಡಸರು, ದೀಡ ನಮಸ್ಕಾರ ಹಾಕುವ, ಕಾಯಿ ಕರ್ಪೂರ ತಟ್ಟೆ ತಲೆ ಮೇಲೆ ಹೊತ್ತು ಮೇಳದೊಂದಿಗೆ ಗುಡಿಗೆ ಬಂದು ಅರ್ಪಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಏಳೆಂಟು ಬೇಟೆ ಬೀಳುತ್ತವೆ.

ಕಮ್ಮಟದ ಸುತ್ತಮುತ್ತಲ ಜಬ್ಬಲಗುಡ್ಡ, ಇಂದರಗಿ, ಬೂದಿಗುಂಪ, ಮುಕ್ಕುಂಪಿ, ಕೆರೆಹಳ್ಳಿ, ಗುಡದಳ್ಳಿ, ದನಕನದಡ್ಡಿ, ಮಲ್ಲಾಪುರ, ಆನೆಗೊಂದಿ ಮೊದಲಾದ ಊರುಗಳ ಭಕ್ತರು ಜಾತ್ರೆಗೆ ಬರುತ್ತಾರೆ. ಇದು ಕುರುಬರ ದೇವರು, ಹಾಗಾಗಿ ಕುರುಬರೇ ಹೆಚ್ಚು ನಡಕೊಳ್ಳುವರು ಎಂದು ಬೂದಿಗುಂಪದಲ್ಲಿ ಕೆಲವರು ಹೇಳಿದರು. ಆದರೆ ಇಂದರಗಿಯ ನಾಯಕರು, ರಾಮಸ್ವಾಮಿ ನಾಯಕ ಕುಲದವ ಎನ್ನುತ್ತಾರೆ. ಜಾತ್ರೆಯ ಹಿಂದಿನ ದಿನ ರಾಮಸ್ವಾಮಿ ಮನೆದೇವರಾಗಿರುವ ಮೇಲೆ ಹೇಳಿದ ಗ್ರಾಮಗಳ ಭಕ್ತರ ಮನೆಗಳಲ್ಲಿ ದೇವರ ಗದ್ದುಗೆಯ ಮೇಲಿರುವ ಮೂರ್ತಿಗೆ ದೀಪ ಎತ್ತಿ ಹಬ್ಬ ಮಾಡುತ್ತಾರೆ. ಪೂಜೆ ಮಾಡಿ, ಹೋಳಿಗೆ ಎಡೆಯಿಟ್ಟು, ಆರತಿ ಎತ್ತಿ, ಮರುದಿನ ಗುಡ್ಡ ಹತ್ತುತ್ತಾರೆ.

ಗುಡ್ಡದ ರಾಮಸ್ವಾಮಿ ಗುಡಿಯಲ್ಲಿ ಜಬ್ಬಲಗುಡ್ಡದ ಭಕ್ತರು ಭಜನೆ ಮಾಡುತ್ತಿದ್ದರು. ಪೂಜಾರಿ ಭಕ್ತರು ಕೊಡುವ ತೆಂಗಿನಕಾಯಿಗಳನ್ನು ಗರ್ಭಗೃಹದ ಹೊಸ್ತಿಲಿಗೆ ಒಡೆದು ಕೊಡುತ್ತಿದ್ದ. ಈ ಪೂಜಾರಿ ಜಬ್ಬಲಗುಡ್ಡದ ಸುಣಗಾರ ಕುಲದವರು. ಇಂದರಗಿಯಿಂದ ಮೇಳದೊಂದಿಗೆ ದೇವರು ತರುವವರು ಮುಕ್ಕಂಪಿಯಲ್ಲಿ ವಸ್ತಿ ಮಾಡುತ್ತಾರೆ. ಹನುಮಪ್ಪನ ಗುಡಿಯಲ್ಲಿ ಇಳಿದುಕೊಂಡು ಕರೆದವರ ಮನೆಗೆ ಹೋಗಿ ಊಟ ಮಾಡಿ ಬರುತ್ತಾರೆ. ಬೆಳಿಗ್ಗೆ ಮುಕ್ಕುಂಪಿಯವರು ಕೊಟ್ಟ 'ನೀರಗೂಳ' ಬೇಟೆ ಮರಿ (ಹೋತ ಮರಿ) ತೆಗೆದುಕೊಂಡು ಗುಡ್ಡಕ್ಕೆ ಬರುತ್ತಾರೆ. ಈ ಬೇಟೆಯನ್ನು ಮುಕ್ಕುಂಪಿಯವರು ಒಂದು ವರ್ಷ ಎಡಗೈಯ್ಯಿಂದ, ಇಂದರಗಿಯವರು ಒಂದು ವರ್ಷ ಬಲಗೈಯ್ಯಿಂದ ಕಡಿಯುವ ಪದ್ಧತಿಯಿದೆ. ಇದನ್ನು ಕಡಿಯುವವರು ಕುರುಬರು.

ಜಾತ್ರೆಯನ್ನು ಬಿಟ್ಟರೆ ವರ್ಷದ ಪ್ರತಿ ಅಮವಾಸ್ಯೆಗೆ ಸುತ್ತಲ ಗ್ರಾಮಗಳ ಭಕ್ತರು ಗುಡ್ಡ ಹತ್ತಿ ಕಾಯಿ ಕರ್ಪೂರ ಮಾಡಿಸಿ ತಂದ ಬುತ್ತಿ ಊಟ ಮಾಡಿ ಹೋಗುತ್ತಾರೆ. ಗುಡ್ಡದ ದೇವರಿಗೆ

ದಿನವೂ ಪೂಜೆಯಿಲ್ಲ. ಅಮವಾಸ್ಯೆ ಮತ್ತು ಜಾತ್ರೆಯ ಸಂದರ್ಭದಲ್ಲಿ ಮಾತ್ರ. ಶ್ರಾವಣದಲ್ಲಿ ದೇವರು ಗುಡ್ಡ ಹತ್ತಿ ಬರುತ್ತವೆ.

ಜಾತ್ರೆಗೆ ಬರುವ ಪ್ರಮುಖ ಆರು ರುಂಡಗಳಿರುವುದು ಇಂದರಗಿ ಎಂಬ ಗ್ರಾಮದಲ್ಲಿ. ಗುಡ್ಡದ ಪಕ್ಕದ ಬಯಲಲ್ಲಿರುವ ಈ ಊರು ಕೊಪ್ಪಳ ತಾಲ್ಲೂಕಿನಲ್ಲಿದ್ದು ೨,೦೦೦ ಮನೆಗಳಿವೆ. "ಎಲ್ಲ ಜಾತಿ" ಜನಗಳಿದ್ದಾರೆ. ಗ್ರಾಮ ಪಂಚಾಯಿತಿ ಇರುವ ಈ ಊರಲ್ಲಿ ದುರಗವ್ವ, ದ್ಯಾಮವ್ವ, ಈಶ್ವರ, ಹನುಮಪ್ಪ, ಅರಳಿಮರದಪ್ಪ, ಕನಕರಾಯ, ಇಂದ್ರೇಶ್ವರ, ಬೀರಪ್ಪ, ಗವಿಸಿದ್ದ, ಹೊಸೂರು ದುರಗಮ್ಮ, ಮಿಂಚಮಂಡೆಪ್ಪ ಮೊದಲಾದ ಗುಡಿಗಳಿವೆ. ಇವುಗಳಲ್ಲಿ ಕೆಲವು ಜಾತ್ರೆಗಳಾಗುತ್ತವೆ.

ಈ ಊರ ಸುಣಗಾರರ ಗುಡಿಸಲು ಮನೆಯ ಒಂದು ರೂಮಿನಲ್ಲಿ ರಾಮಸ್ವಾಮಿಯ ಗದ್ದುಗೆ ಇದೆ. ಕಂಬಳಿಯ ಲೋಡಿಟ್ಟು ಅದರ ಮೇಲೆ ಸೋಮವಾರಕ್ಕೊಮ್ಮೆ ರುಂಡಗಳನ್ನು ತೆಗೆದಿಡುತ್ತಾರೆ. ಉಳಿದ ದಿನ ಹಳೆಯ ಎರಡು ಪೆಟ್ಟಿಗೆಗಳಲ್ಲಿರುತ್ತವೆ. ದಿನವೂ ಪೆಟ್ಟಿಗೆಗೆ ಪೂಜೆ. ಅಮವಾಸ್ಯೆ, ಹಬ್ಬ, ಹುಣ್ಣಿಮೆ, ದಸರಾ ಮತ್ತು ಜಾತ್ರೆಯ ಸಂದರ್ಭದಲ್ಲೂ ಪೆಟ್ಟಿಗೆಯಿಂದ ರುಂಡ ದೇವರು ಹೊರ ಬರುತ್ತವೆ. ಎರಡು ತೊಟ್ಟಿಲಲ್ಲಿ ಉಳಿದವು ಹೊರಗೆ. ಜಬ್ಬಲಗುಡ್ಡ, ಮಲ್ಲಾಪುರಗಳಲ್ಲಿರುವ ದೇವರಿಗಿಂತ ಇಲ್ಲಿರುವ ರುಂಡಗಳೆ ಮೊದಲಿನವು ಎಂದು ಇಲ್ಲಿಯವರ ಹೇಳಿಕೆ. ಗದ್ದಿಗೆಯ ಮೇಲೆ ರಾಮನ ಬಿಲ್ಲು ಬಾಕುಗಳಿವೆ. ಎರಡು ಬಾಕುಗಳನ್ನು ರುಂಡಗಳ ಜತೆ ಗುಡ್ಡಕ್ಕೆ ಒಯ್ಯುತ್ತಾರೆ. ಬಣ್ಣದ ಎರಡು ಛತ್ರಿಗಳಿವೆ. ಗದ್ದಿಗೆಯ ಕೆಳಗೆ ನೆಲದ ಮೇಲೆ ಒಂದು ಕರಿಯಕಲ್ಲು. ಇದಕ್ಕೆ ಕಾಯಿ ಒಡೆಯುವುದು. ಇದು "ಬುದ್ಧಿವಂತನ ಕಲ್ಲು". ಅಂಗಳದಲ್ಲಿ ಪಾದಗಟ್ಟೆ. ಊರಲ್ಲಿ ಮದುವೆಯ ಸಂದರ್ಭದಲ್ಲಿ ರಾಮನ ಬಾಕು ಒಯ್ಯುತ್ತಾರೆ.

ದಸರಾದಲ್ಲಿ ೯ ಅಥವಾ ೧೧ ದಿವಸ ಗದ್ದಿಗೆಯ ಮೇಲೆ ಕೂರುವ ದೇವರು ಹನುಮಪ್ಪ, ದುರಗವ್ವರ ಜತೆ ಬನ್ನಿ ಮುಡಿದುಕೊಂಡು ಬರುತ್ತವೆ. ಕಿನ್ನಾಳಕ್ಕೆ ಬಣ್ಣಕ್ಕೆ ಹೋಗುವಾಗ ಕೂಡ ದೇವರು ಪೆಟ್ಟಿಗೆಯಿಂದ ಹೊರಗೆ ಬರುತ್ತವೆ. ಸುತ್ತಮುತ್ತಲ ಗ್ರಾಮಗಳ ಭಕ್ತರು ಇಲ್ಲಿ ಬಂದು ಜವುಳ ತೆಗೆಸುವ, ದೀಡನಮಸ್ಕಾರ ಹಾಕುವ ವಿಧಿಗಳನ್ನು ಪೂರೈಸಿಕೊಳ್ಳುತ್ತಾರೆ.

ಇಲ್ಲಿಯ ಗಮನಾರ್ಹವಾದ ಒಂದಂಶವೆಂದರೆ ರಾಮಸ್ವಾಮಿಗೆ ಮದುವೆ ಮಾಡಿಬಿಟ್ಟ ಸುಣಗಾರ ಮಲ್ಲಮ್ಮ ಎಂಬ ಯುವತಿ ದೇವರ ಪೂಜೆ ಮಾಡುವುದು. ಇಲ್ಲಿಯ ದೇವರು ಗಂಡುಮಕ್ಕಳಿಂದ ಪೂಜಿಸಿಕೊಳ್ಳಲಾರ ಎಂದು ಆಕೆ ಹೇಳಿದಳು.

ಬಿಲ್ಲ ಊಟ : ಗುಡ್ಡದ ಜಾತ್ರೆಗೆ ಹೋಗುವ ಮೊದಲು ಎರಡು ದಿನ ಇಂದರಗಿಯಲ್ಲಿ ಬಿಲ್ಲು ಊಟದ ಕಾರ್ಯಕ್ರಮ. ಜಾತ್ರೆಯ ಎರಡು ದಿನ ಮೊದಲು ಊರವರು ಸೇರಿ ಪ್ರತಿ ಮನೆಗೂ ಪಟ್ಟಿ ಹಾಕಿ ಜೋಳದ ಸಂಗಟಿ ಸಾರು ಮಾಡುತ್ತಾರೆ. ರಾತ್ರಿ ದೇವರು ಗಂಗಮ್ಮನಿಗೆ ಹೋಗಿ

ಉಡಿ ತುಂಬಿ ಎಡೆ ಕೊಟ್ಟು 'ಆಕೆಯ' ಶಾಂತಿ ಮಾಡಿ ಬಂದು ಊರಲ್ಲಿರುವ ಎಲ್ಲಾ ಗುಡಿಗಳಿಗೆ ಭೇಟಿ ಕೊಟ್ಟು, ಎಡೆ ಕೊಟ್ಟು ಬರುತ್ತವೆ. ರಾಶಿ ಮಾಡಿದ ಜೋಳದ ಸಂಗಟಿಗೆ ಪೂಜಿಸಿ, ಸೇರಿದ ಊರ ಜನಕ್ಕೆ ಊಟ ಹಾಕಿಸುತ್ತಾರೆ. ಅಂದು ಇಡೀ ರಾತ್ರಿ ಭಜನೆ ಮಾಡುತ್ತಾರೆ. ಬ್ರಾಹ್ಮಣರು, ಲಿಂಗಾಯತರು, ಕೊಮಟರು ಈ ಊಟಕ್ಕೆ ಬರುವುದಿಲ್ಲ. ಆದರೆ ತಮ್ಮ ಮನೆಯ ಎಡೆ ತಂದು ಪೂಜೆಗೆ ಹಾಜರಾಗಿ ತಾವೆ ಪೂಜೆ ಮಾಡಿಕೊಂಡು ಹೋಗುತ್ತಾರೆ. ಬಿಲ್ಲ ಊಟಕ್ಕೆ ಈ ಊರ ಜನವಲ್ಲದೆ ಸುತ್ತಲ ಹಳ್ಳಿ ಜನವೂ ಬರುತ್ತದೆ. ಈ ದಿನ ಬೆಳಿಗ್ಗೆ ದೇವದಾಸಿ ಮಲ್ಲಮ್ಮ ಕುಮಾರರಾಮನ ಬಿಲ್ಲು ಹಿಡಿದುಕೊಂಡು ಐದು ಮನೆಗಳ ಮುಂದೆ "ರಾಮ ರಾಮ ಗೋವಿಂದಾ" ಹೇಳಿ ಭಿಕ್ಷೆ ಎತ್ತುತ್ತಾಳೆ. ಬಂದುದು ಆಕೆಗೆ ಉಳಿಯುತ್ತದೆ. ಈ ಜಾತ್ರೆ ಮತ್ತು ದಸರಾ ಹಬ್ಬಗಳಲ್ಲಿ ಊರಿನ ಕೆಲವು ಮಹಿಳೆಯರು ಕುಮಾರರಾಮನ ಕುರಿತು ಹಾಡು ಹೇಳುತ್ತಾರೆ.

ದೇವರು ಈ ಮನೆಗೆ ಹೇಗೆ ಬಂದವು ಎಂದು ಕೇಳಿದ್ದಕ್ಕೆ ಮಲ್ಲಮ್ಮ, "ಮೂರ ತಲೆ ಹಿಂದೆ ನಮ್ಮ ಮನೆತನದ ಮುದುಕಿ ಆಡ ಕಾಯಲು ಹಳೆ ಕುಮಟಾ ಕಡೆ ಹೋಗಿದ್ದಳು. ಆರು ಜನಗಳಲ್ಲಿ ಇಬ್ಬರು (ಚನ್ನಿಗರಾಮ, ಪೋಲಿಕಿರಾಮ) ಗವಿಯಲ್ಲಿದ್ದರಂತೆ. ಎಲೆ, ಅಡಿಕೆ, ಕಳಸ, ದೀವಿಗೆ ಎಲ್ಲಾ ಇದ್ದವು. ಆಕೆಗೆ ರಾಮ ಮೈತುಂಬಿದ. ನಾ ನಿನ್ನ ಹಿಂದೆ ಬರ್ತೀನಿ ಅಂದ. ಆಕೆ, ನಮ್ಮೂರ ದೈವದವರನ್ನ ಕೇಳಿ, ಅವರ ಒಪ್ಪಿಗೆ ತಕ್ಕೊಂಡ ಬರಬೇಕಾಗ್ತದೆ ಎಂದು ಹೇಳಿದಳು. ಅದರಂತೆ ಊರವರ ಒಪ್ಪಿಗೆ ಪಡೆದು ಭಜನೆ ಮೇಳದೊಂದಿಗೆ ಗವಿಯಿಂದ ಈ ಮನೆಗೆ ತಂದರು'. ಈ ಊರಿಗೆ ಆರು ದೇವರು ಸೇರುವ ಮೊದಲು ಎರಡು ಕೊಪ್ಪಳ ಜಿಲ್ಲೆಯಲ್ಲಿ, ಎರಡು ಹಳೆ ಕುಮಟಾದಲ್ಲಿ ಎರಡು ಈ ಊರ ಅಡ್ಡೇರ ಮನೆಯಲ್ಲಿದ್ದವು. ಅವೆಲ್ಲ ಇಲ್ಲಿ ಜಮಾ ಆದವು.

ಆನೆಗೊಂದಿ ಹತ್ತಿರದ ಮಲ್ಲಾಪುರದಲ್ಲಿ ರಾಮಸ್ವಾಮಿಯ ದೊಡ್ಡಗುಡಿ ಇದೆ. ಗರ್ಭಗುಡಿಯ ಪೆಟ್ಟಿಗೆಯಲ್ಲಿ ಎರಡು ರುಂಡಗಳಿವೆ. ಅವು ಹೋಲಿಕಿ-ರಾಮ, ಚನ್ನಿಗರಾಮರ ರುಂಡಗಳು. ಪ್ರತಿದಿನ ಪೂಜೆ ಸಲ್ಲುತ್ತದೆ. ಗಂಗಾ ಮತಸ್ತರು ಇಲ್ಲಿಯ ಪೂಜಾರಿಗಳು. ದಸರಾ ನವರಾತ್ರಿಯ ೯ ದಿವಸ ವಿಶೇಷ ಪೂಜೆ ನಡೆಯುತ್ತದೆ. ಊರಲ್ಲಿಯ ಮತಿಮ್ಮನ ಜತೆ ಸೇರಿ ಈ ಎರಡು ರುಂಡ ದೈವ ಬನ್ನಿಮುಡಿಯಲು ಹೋಗಿ ಬರುತ್ತವೆ. ಇವನ್ನು ಬಟ್ಟೆ ಸುತ್ತಿದ ಕೈಯಲ್ಲಿ ಹಿಡಿದಿರುತ್ತಾರೆ. ಕಿನ್ನಾಳಕ್ಕೆ ಆಗಾಗ ಬಣ್ಣಕ್ಕೆ ಕಳಿಸುವ ಸಂದರ್ಭವಿದ್ದಾಗ ಬೇಟೆಯಾಗುತ್ತದೆ. ಊರ ಗುಡ್ಡೆಕಲ್ಲಿಗೆ ಬೇಟೆ ಕಡಿದು ಗಂಗೆಗೆ ಹೋಗಿಬಂದು ಗುಡಿ ದುಂಬಿಸುತ್ತಾರೆ. ೬-೭ ವರ್ಷಗಳ ಮೊದಲು ಗುಡ್ಡದ ಜಾತ್ರೆಗೆ ಈ ರುಂಡಗಳೂ ಬರುತ್ತಿದ್ದವು.

ಇಂದರಗಿಯ ಹಿರಿಯರು ಮೂವತ್ತು ನಾಲ್ವತ್ತು ವರ್ಷಗಳ ಹಿಂದೆ ಬಳ್ಳಾರಿ ಹತ್ತಿರದ ತಪ್ಪಗಲ್ಲ ಮಾದಿಗರು ಕುವಮಾರ ರಾಮ ಮತ್ತು ಕಂಸವಧೆ ಎಂಬೆರಡು ಬಯಲಾಟಗಳನ್ನು ಅದ್ಭುತವಾಗಿ ಆಡುತ್ತಿದ್ದುದಾಗಿ ಸ್ಮರಿಸಿಕೊಂಡರು. ಹೆಂಗಸರೂ ಸಹ ಪಾತ್ರ ಮಾಡುತ್ತಿದ್ದರಂತೆ.

ಇಂದರಗಿ, ಅರಳಿಮರದಪ್ಪನ ಜಾತ್ರೆ

ಇಂದರಗಿಯಲ್ಲಿ ಅರಳಿಮರದಪ್ಪನ ಗುಡಿ ಇದೆ. ವಾಲ್ಮೀಕಿ ಕುಲದವರು ಪೂಜಾರಿಗಳು. ಇಲ್ಲಿಂದ ೧೨ ಮೈಲಿ ದೂರದ ಇರಕಲಗಡದ ಅರಳಿಮರದಪ್ಪ ಇಲ್ಲಿ ಬಂದ್ನು ನೆನೆದಿದ್ದಾನೆಂದು ಹಿರಿಯರ ಅಭಿಮತ. ಶ್ರಾವಣದಲ್ಲಿ ಈ ದೇವರ ಸಣ್ಣ ಪ್ರಮಾಣದ ಜಾತ್ರೆ. ಊರಲ್ಲಿ ಪಟ್ಟಿ ಹಾಕಿ ಸಂಗಟಿಸಾರ ಮಾಡಿ ಊರ ಜನಕ್ಕೆ ಊಟ ಹಾಕಿಸುತ್ತಾರೆ.

ಹನುಮಂತ ದೇವರ ಉಚ್ಚಯ್ಯ (ಉಚ್ಚಾಯ)

ಇದೇ ಊರಿನ ಹನುಮಂತ ದೇವರ ಉಚ್ಚಯ್ಯ ಕಾರ್ತಿಕದಲ್ಲಾಗುತ್ತದೆ. ಮೂರು ದಿನಗಳ ಈ ಜಾತ್ರೆಯಲ್ಲಿ ಪಾಡ್ಯದಂದು ಬೇಡಿಕೊಂಡವರು ಜವುಳ ತೆಗೆಸುತ್ತಾರೆ. ದೀಪ ನಮಸ್ಕಾರ ಹಾಕುತ್ತಾರೆ. ಮರುದಿನ ಹೋಳಿಗೆ ಎಡೆ, ಓಕುಳಿಕೊಂಡ ಮರುದಿನ ಬೇಟೆ ಕಡಿದು ಕರಿ ಆಚರಿಸುತ್ತಾರೆ. ಉಗಾದಿಯಲ್ಲಿ ನೀರಿನ ಕೊಂಡದ ಕಾರ್ಯವಾಗುತ್ತವೆ. ಊರ ಪ್ರಾರಂಭದಲ್ಲೇ ಆಳೆತ್ತರ ಹನುಮಪ್ಪನ ದೊಡ್ಡ ಗುಡಿ ಇದೆ.

ಊರಲ್ಲಿ ದೊಡ್ಡ ಜಾತ್ರೆ ಎಂದರೆ ಈ ಇಂದಿರೇಶನದೇ. ಕಾರ್ತಿಕದಲ್ಲಿ ಬೇಡಿಕೊಂಡ ಭಕ್ತರು ದೇವಿಗೆಗೆ ಹಾಕುವ ಎಣ್ಣೆ ೮-೧೦ ಡಬ್ಬಿಗಳಷ್ಟು. ಯುಗಾದಿಯ ಓಕುಳಿ ಕೊಂಡದಲ್ಲಿ ಗಂಡಸರು ಪಾಲ್ಗೊಳ್ಳುತ್ತಾರೆ.

ದುರಗಮ್ಮನ ಜಾತ್ರೆ

ಇಂದರಗಿಯ ದುರಗಮ್ಮನ ಪೂಜಾರಿ ನಾಯಕ ಜನಾಂಗದವರು ಐದು ಅಥವಾ ಹತ್ತು ವರ್ಷಕ್ಕೊಮ್ಮೆ ಕೋಣ ಕಡಿದು, ಬೆಂಕಿಕೊಂಡ ಹಾಯ್ದು ಜಾತ್ರೆ ಮಾಡುತ್ತಾರೆ. ಗುಡಿಯಲ್ಲಿ ಅಮ್ಮನ ಕಲ್ಲುಗುಂಡು, ಮೂರ್ತಿ, ಕಾಷ್ಠದ ಉತ್ಸವ ಮೂರ್ತಿಗಳಿವೆ.

ಕೊಪ್ಪಳದ ಪೂರ್ವಭಾಗ ತುಂಗಭದ್ರಾ ಅಣೆಕಟ್ಟಿನಿಂದಾಗಿ ಪೂರ್ಣ ಪ್ರಮಾಣದಲ್ಲಿ ನೀರಾವರಿಗೆ ಒಳಪಟ್ಟ ಪ್ರದೇಶ. ಒಂದೆಡೆ-ಹೆಬ್ಬಂಡೆ-ಗುಡ್ಡಗಳ ಸಾಲು, ಇನ್ನೊಂದೆಡೆ ನೆಲಕಾಣುವಲ್ಲೆಲ್ಲ ನೆಲ್ಲು. ಇಷ್ಟು ಶ್ರೀಮಂತವಾದ ಈ ಪ್ರದೇಶದಲ್ಲಿ ಹುಲಿಗಿಯ ಜಾತ್ರೆಯನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಯಾವ ದೊಡ್ಡ ಜಾತ್ರೆಗಳಾಗದೆ ಇರುವುದು ಅಚ್ಚರಿ.

ಒಂದು ಊರಲ್ಲಿ ರಥೋತ್ಸವವಾದರೆ ಆ ಗ್ರಾಮದ ಎಲ್ಲ ಜಾತಿಗಳ ಮತ್ತು ಸುತ್ತಮುತ್ತಲ ಎಂಟು ಹತ್ತು ಹಳ್ಳಿಗಳ ಜನರು ಸೇರುವುದು ಸಂಪ್ರದಾಯ. ಕೊಪ್ಪಳ ತಾಲ್ಲೂಕಿನ ಪೂರ್ವಭಾಗದ ನೀರಾವರಿ ಪ್ರದೇಶದ ಗ್ರಾಮಗಳು-ಕಂಪಸಾಗರ, ಶಿವಪುರ, ಬಸಾಪುರ, ನಗರ, ಬಂಡಿಹರ್ಲಾಪುರ (ಹಳೆ-ಹೊಸ) ಅಗಳಕೇರಾ ಮುಂತಾದವು. ಈ ಗ್ರಾಮಗಳಲ್ಲಿ ಒಂದು ಅಥವಾ ಎರಡು ದಿನದ ಕೆಲವು ಜಾತ್ರೆಗಳು ಆಗುತ್ತವೆ.

ಹನುಮಪ್ಪನ ಜಾತ್ರೆ

ಕಬ್ಬೇರವು ಸುಮಾರು ಮೂರು ನೂರು ಮನೆಗಳು, ಹರಿಜನರವು ಎರಡು ನೂರ ಐವತ್ತು

ಮನೆಗಳು, ಒಡ್ಡರವು-ಅರವತ್ತು ಮನೆಗಳು, ಮುಸ್ಲಿಂರವು ಮೂರು ನಾಲ್ಕು ಮನೆಗಳು, ಪಿಂಜಾರರವು ಮೂವತ್ತು ಮನೆಗಳು, ನಾಯಕರವು ಐದು ಮನೆಗಳಿರುವ ಗ್ರಾಮ ಕಂಪಸಾಗರ.

ಹನುಮಪ್ಪ, ಮಂಜುನಾಥ, ಗಾಳೆಮ್ಮ, ಮರಿಯಮ್ಮ, ದುರಗಮ್ಮ, ಕಾಡಸಿದ್ದಪ್ಪ, ಭರಮು, ಮೈಲಮ್ಮ ಎಂಬ ಸ್ತ್ರೀಪುರುಷ ದೇವರುಗಳಿರುವ ಈ ಊರಲ್ಲಿ ವರ್ಷಕ್ಕೊಮ್ಮೆ ಹನುಮಪ್ಪನ ಜಾತ್ರೆಯಾಗುತ್ತದೆ. ಭಾರತ ಹುಣ್ಣಿಮೆಯಾದ ಒಂಭತ್ತನೆಯ ದಿನ ನಡೆಯುವ ಈ ಜಾತ್ರೆಯಲ್ಲಿ 'ಉಚ್ಚಯ್ಯ' 'ಗಿಡಾ' ಎಂಬೆರಡು ಮುಖ್ಯ ಕಾರ್ಯಗಳು.

ಬಂಡಿಮಲ್ಲಿ ಹನುಮಂತನ ಉತ್ಸವ ಮೂರ್ತಿಯನ್ನಿಟ್ಟು 'ಗೋವಿಂದ ಗೋವಿಂದ' ಎಂದು ಕೂಗುತ್ತ ಜನ ಊರೆಲ್ಲ ಉಚ್ಚಯ್ಯೆನನ್ನು ಎಳೆಯುತ್ತಾರೆ. ಮರುದಿನ 'ಗಿಡಾ' (ಗಂಡು ಗಾರಿಗಿ ಮುಳ್ಳು) ಕಡಿದುಕೊಂಡು ಬಂದು ಊರಲ್ಲಿ ಗಂಗಮ್ಮನಕಟ್ಟೆ, ಕೆರೆ, ಅಗಸಿ, ಗೌಡರಮನೆ, ನಡುಊರು ಮತ್ತು ಹನುಮಪ್ಪನ ಗುಡಿ ಹತ್ತಿರ ಹಾಕುತ್ತಾರೆ. ಪೂಜಾರಿ (ಉಪ್ಪಾರಕುಲದವರು) -ಈ ಆರೂ ಕಡೆ ಮುಳ್ಳುಗಳ ಮೇಲೆ ಕುಣಿದಾಡುವನು. ಈ ಕಾರ್ಯಕ್ರಮ ಮಧ್ಯಾಹ್ನ ಇಪ್ಪತ್ತು-ಮೂವತ್ತು ಡೊಳ್ಳುಗಳ ಮೇಳದೊಂದಿಗೆ ಪ್ರಾರಂಭವಾಗುತ್ತದೆ. ಪೂಜಾರಿಯ ಜೊತೆಗೆ ಬೇಡಿಕೊಂಡವರೂ ಕೂಡ ಮುಳ್ಳುಗಳ ಮೇಲೆ ಕುಣಿದಾಡುತ್ತಾರೆ. ಕಂಪಸಾಗರದ ಅಕ್ಕಪಕ್ಕದ ಶಿವಪುರ, ಅಗಳಕೇರಿ, ಬಸಾಪೂರ, ಹಿಟ್ನಾಳ, ನಿಂಗಾಪುರಗಳಿಂದ ಡೊಳ್ಳಿನ ಮೇಳದವರು ಬಂದಿರುತ್ತಾರೆ. ಜಾತ್ರೆಗೆ ಊರಲ್ಲಿ ಹಿರಿಯರು ಪ್ರತಿಮನೆಗೆ ಪಟ್ಟಿಹಾಕಿರುತ್ತಾರೆ.

ಸಾಯಂಕಾಲ ಕಾರೆಮುಳ್ಳಿನ ಕಂಟಿಯಿಂದಲೆ ಮಾಡಿದ ಪಲ್ಲಕ್ಕಿಯಲ್ಲಿ ಬತ್ತಲೆ ಹನುಮಪ್ಪನನ್ನು ಮಲಗಿಸಿ ಗಂಗೆಗೆ ಹೊರಡುತ್ತಾರೆ. ಮುತ್ತೈದೆಯರು ಕಳಸ ದೊಂದಿಗಿರುತ್ತಾರೆ. ಆರೂ ಕಡೆ ಪೂಜಾರಿ ಮತ್ತು ಭಕ್ತರು ತುಳಿದ ಮುಳ್ಳುಗಳನ್ನು ಆರಿಸಿ ಗೊಂಗಡಿಯಲ್ಲಿ ಹಾಕಿಕೊಂಡು ಗಂಗೆಯಲ್ಲಿ ಹಾಕುತ್ತಾರೆ. ಗಂಗೆಗೆ ಹೋಗಿಬಂದು ಪೂಜಾರಿ, ಕಳಸದವರು, ಗೊಂಗಡಿ, ಪಾಲಕಿ ಹೊತ್ತವರು ಕೊಂಡ ಹಾಯುತ್ತಾರೆ. (ಅಗ್ನಿ ತುಳಿಯುವುದು) ರೈತರು ತಂದ ಹೊಸ ಬಟ್ಟೆಯನ್ನು ಸ್ನಾನ ಮಾಡಿದ ನಂತರ ಪೂಜಾರಿಗೆ ಉಟ್ಟುಕೊಳ್ಳಲು ಕೊಡುತ್ತಾರೆ. ಅವರನ್ನು ಮೇಳದೊಂದಿಗೆ ಮನೆಗೆ ಬಿಟ್ಟು ಬರುತ್ತಾರೆ. ಈ ದಿನ ಊರ ಜನ ತಮ್ಮ ಅನುಕೂಲಗಳಿಗೆ ತಕ್ಕಂತೆ ಹೋಳಿಗಿ ಮಾದ್ಲಿ, ಕರಿಗಡಬು, ಉಂಡಿಗಳ ಸಿಹಿ ಅಡುಗೆ ಮಾಡುತ್ತಾರೆ. ಸಾಮಾನ್ಯವಾಗಿ ಎಡೆಗೆ ಹೋಳಿಗೆ. ಚಿಕ್ಕ ಅಂಗಡಿಗಳು ವ್ಯಾಪಾರಕ್ಕೆ ತೊಡಗಿರುತ್ತವೆ.

ಇಲ್ಲಿ ಗಮನಿಸಬೇಕಾದ ಮಹತ್ವದ ಒಂದು ಸಂಗತಿ ಏನೆಂದರೆ ಈ ಜಾತ್ರೆ ಮೊದಲು ಅಲ್ಲಾನಗರ (ಗಿಣಿಗೇರಿ ಹತ್ತಿರ)ದಲ್ಲಿ ಕಾರ್ತಿಕ ಅಮಾವಾಸ್ಯೆಯಂದು ನಡೆಯುತ್ತದೆ. ಇದಾದನಂತರ ಸುತ್ತಮುತ್ತಲ ಶಿವಪುರ, ಅಗಳಕೇರಿ, ಹೊಸಹಳ್ಳಿ ಮುಂತಾದ ಏಳೆಂಟು ಗ್ರಾಮಗಳಲ್ಲಿ ಇದೇ ರೀತಿ ನಡೆಯುತ್ತದೆ. ಆಯಾ ಊರಜನ ತಮ್ಮ ತಮ್ಮ ಮಿತಿಗೆ ಅನುಕೂಲವಿರುವಂತೆ ಜಾತ್ರೆಯನ್ನು ಇಟ್ಟುಕೊಂಡಿರುತ್ತಾರೆ. ಈ ಪದ್ಧತಿ ಒಂದು ಸಾಂಸ್ಕೃತಿಕ ಪರಿವಲಯದಲ್ಲಿ ಜೀವಂತವಿದೆ.

ತೆಪ್ಪೋತ್ಸವ

ಹುಲಿಗಿಯಿಂದ ಎರಡು ಕಿಲೋಮೀಟರು ದೂರದಲ್ಲಿರುವ ಈ ಕಂಪಸಾಗರದಲ್ಲಿ ಕಬ್ಬೇರ (ಗಂಗಾ ಮತಸ್ಥರು) ಹೆಚ್ಚಿದ್ದು 'ತೆಪ್ಪೋತ್ಸವ'ವನ್ನು ಕೊನೆಯ ಶ್ರಾವಣ ಸೋಮವಾರದಂದು ಇಟ್ಟುಕೊಳ್ಳುತ್ತಾರೆ. ಹೊಳೆದಂಡೆಯ ಊರುಗಳಲ್ಲಿ ಈ ಉತ್ಸವ ಸರ್ವೇಸಾಮಾನ್ಯ. ಕಂಪಸಾಗರದ ಗಂಗಮ್ಮನ ಗುಡಿಗೆ ಗಂಗೆಮಕ್ಕಳೇ ಪೂಜಾರಿಗಳು. ಉತ್ಸವದ ದಿನ ಕುಂಭಾಭಿಷೇಕ ಮಾಡಿ ದಂಟಿನ ತೆಪ್ಪದಲ್ಲಿ ಎಡೆ, ದೇವರದಂಡೆ, ಹಣ್ಣುಹಂಪಲ, ಉಡಕ್ಕಿ, ದೀವಿಗಿ ಇಟ್ಟು ಪೂಜಿಸಿ ಕಾಯಿ ಒಡೆದು ನಡುಹೊಳೆಗೆ ಒಯ್ದು ಕಳಿಸುತ್ತಾರೆ. ಒಂದು ದಿನದ ಈ ಉತ್ಸವದಲ್ಲಿ ಮುಖ್ಯ ಪಾತ್ರ ಕಬ್ಬೇರರದ್ದು. ಸಿಹಿ ಅಡಿಗೆ ಆದಿನ ವಿಶೇಷ.

ಕೊರ್ರಮ್ಮನ ಚರಗೋತ್ಸವ

ಹುಲಿಗಿಯಿಂದ ಗಂಗಾವತಿಗೆ ಭತ್ತದ ಗದ್ದೆಗಳ ಮಧ್ಯೆ ಹೋಗುವ ರಸ್ತೆಯ ಎಡಬದಿಗೆ ಅತ್ತಿ, ಬಸರಿ, ಅಂಕಲಿ, ಬೇವು, ಆಲಗಳು ಸೇರಿದ ಗಿಡಗಳ ಬೊಡ್ಡೆಗೆ ದೊಡ್ಡ ಕಟ್ಟೆ ಕಟ್ಟಿಸಿ ಕೊರ್ರಮ್ಮನೆಂಬ ದುಂಡುಕಲ್ಲನ್ನು ಸ್ಥಾಪಿಸಿದ್ದಾರೆ. ಈ ಗುಂಡುಕಲ್ಲಿಗೆ ಕುಂಕುಮ ಭಂಡಾರ ತೊಡೆಯಲಾಗಿದೆ. ಇದರ ಅಕ್ಕ-ಪಕ್ಕ ೭೦-೭೭ ಕಲ್ಲುಗುಂಡುಗಳು. ಇವೆಲ್ಲ ಈಕೆಯ ಮಕ್ಕಳೆಂದು ಪ್ರತೀತಿ. ಕೆಲವರು ಇವನ್ನು ತಮ್ಮ ಮನೆಗೆ ಒಯ್ದು ಪೂಜೆಗಿಟ್ಟು ಕೊಳ್ಳುತ್ತಾರೆ. ಇವಕ್ಕೆಲ್ಲ ಸುಣ್ಣ ತೊಡೆಯಲಾಗಿದೆ. ಮಂಗಳವಾರ, ಶುಕ್ರವಾರ, ಹುಣ್ಣಿಮೆ, ಅಮಾವಾಸ್ಯೆಗಳಂದು ಗಂಗಾಮತದವರು ಪೂಜೆ ಮಾಡುತ್ತಾರೆ. ಸೀಗೆಹುಣ್ಣಿಮೆಯ ದಿನ ಸುತ್ತಮುತ್ತಲ ಹಳ್ಳಿಯ ಜನ ಸೇರಿ ಹುಲಿಗಿಯಿಂದ ಆಚಾರಿಗಳನ್ನು ಕರೆಯಿಸಿ ಅಭಿಷೇಕ ಮಾಡಿಸಿ, ಸಾಮೂಹಿಕ ಭೋಜನ ಮಾಡುತ್ತಾರೆ. ಸಿಹಿ, ಅನ್ನ, ಸಾರು ಊಟ. ಸುತ್ತಲ ಗದ್ದೆಗಳ ಜನ ತಮಗನುಕೂಲದ ಶುಕ್ರವಾರ ಅಥವಾ ಮಂಗಳವಾರ ಟಗರು, ಕುರಿ, ಕೋಳಿ ಬಲಿಕೊಟ್ಟು 'ಹಬ್ಬ' ಮಾಡಿಕೊಳ್ಳುತ್ತಾರೆ. ಈ ದೈವಕ್ಕೆ ಊರಜನ ಕಣದ ಕಾಳು ಕಾಣಿಕೆಯಾಗಿ ಸಲ್ಲಿಸುತ್ತಾರೆ.

ಶಿವಪುರದ ಮಾರ್ಕಂಡೇಯ ಜಾತ್ರೆ

ಕೊಪ್ಪಳ ತಾಲೂಕಿನ ಕಡೆಯ ಊರುಗಳ ಪೈಕಿ ಶಿವಪುರವೂ ಒಂದು. ಊರಿಂದ ಒಂದು ಮೈಲು ಪೂರ್ವಕ್ಕೆ ಹೊಳೆಯ ದಂಡೆಗೆ ಮಾರ್ಕಂಡೇಯ ದೇಗುಲವಿದೆ. ಗುಡಿ ಪೂರ್ವಾಭಿಮುಖವಾಗಿದ್ದು ಸಣ್ಣ ಗರ್ಭಗೃಹ, ಶುಕನಾಶಿ, ನವರಂಗಗಳನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿರುವ ಲಿಂಗದ ಹಿಂದೆ ತ್ರಿಶೂಲವನ್ನು ನೆಟ್ಟಿದ್ದಾರೆ. ಅದಕ್ಕೆ ಧಾರಾಪಾತ್ರೆ ಕಟ್ಟಲಾಗಿದೆ. ಶುಕನಾಶಿಯಲ್ಲಿ ಕಲ್ಲಿನ ನಂದಿವಿಗ್ರಹ, ನವರಂಗದ ಆಚೆ ಈಚೆಯ ಗೂಡುಗಳಲ್ಲಿ ವೀರಭದ್ರ, ಗಣೇಶನ ಪ್ರತಿಮೆಗಳಿವೆ. ಗರ್ಭಗುಡಿಗೆ ಗೋಪುರ, ಕಳಸ, ಹಿಂದೆ ಮಂಟಪವಿದೆ. ಮಾವಿನ ತೋಪು ಮತ್ತು ಎಂಟು ಎಕರೆ ಗದ್ದೆ ಗುಡಿಯ ಆಸ್ತಿ. ಹೊಳೆ ತುಂಬಿ ಹರಿದು ಹಲವು ಸಲ ಇಲ್ಲಿಯ ಹೊಸ ಕಟ್ಟಡಗಳನ್ನು ಕೊಚ್ಚಿಹಾಕಿದೆ ಎಂದು ಜಂಗಮ ಕುಲದ ಪೂಜಾರಿಣಿ ಹೇಳಿದಳು.

ಪ್ರತಿವರ್ಷ ಶಿವರಾತ್ರಿಯ ದಿವಸ ಈ ಮಾರ್ಕಂಡೇಯನ ಜಾತ್ರೆ ನಡೆಯುತ್ತದೆ. ಭಕ್ತರು

ಒಪ್ಪತ್ತೂಟಮಾಡಿ ಇಡೀ ರಾತ್ರಿ ಭಜನೆ ಮಾಡುತ್ತ ಮರುದಿನ ಸಾಮೂಹಿಕ ಭೋಜನ ಮಾಡುತ್ತಾರೆ. ಗುಡಿಯಿಂದ ಕಿಲೋಮೀಟರು ದೂರದಲ್ಲಿರುವ ಗದ್ದುಗೆವರೆಗೆ ಉಚ್ಚಯ್ಯವನ್ನು (ಸಣ್ಣತೇರು) ಎಳೆಯುತ್ತಾರೆ. ಪೂಜಾರಿ ಉತ್ಸವ ಮೂರ್ತಿಯೊಂದಿಗೆ ಉಚ್ಚಯ್ಯದಲ್ಲಿರುತ್ತಾನೆ. ಭಕ್ತರು ಹಣ್ಣು ಉತ್ತತ್ತಿ ಎಸೆಯುತ್ತಾರೆ. ಒಂದು ದಿನದ ಈ ಜಾತ್ರೆಗೆ ಅಂಗಡಿ ಬಂದಿರುತ್ತವೆ. 'ಹರಹರ ಮಹಾದೇವ' ಎಂದು ತೇರನ್ನು ಎಳೆಯುವಾಗ ಕೂಗುತ್ತಾರೆ. ಕಂಪಸಾಗರ, ಅಗಳಕೇರಿ, ಹುಲಿಗಿ, ಬಸಾಪುರ, ಹರ್ಲಾಪುರ ಮೊದಲಾದ ಐದಾರು ಗ್ರಾಮಗಳ ಜನ ಜಾತ್ರೆಗೆ ಸೇರುತ್ತಾರೆ. ಲಗ್ನಕಾರ್ಯಕ್ಕೆ ಸ್ಥಳ ಪ್ರಶಸ್ತವಿರುವುದರಿಂದ ಮದುವೆಗಳು ಸಾಕಷ್ಟಾಗುತ್ತವೆ.

ಹೊಸಬಂಡಿ ಹರ್ಲಾಪುರದ ಈಶ್ವರ ಜಾತ್ರೆ :

ಸುಮಾರು ಒಂದು ಸಾವಿರ ಜನಸಂಖ್ಯೆಯಿರುವ ಸಣ್ಣಗ್ರಾಮ, ಹೊಸಬಂಡಿ ಹರ್ಲಾಪುರ. ಇಲ್ಲಿಂದ ಅರ್ಧಮೈಲು ಅಂತರದಲ್ಲಿ ಹಳೆಬಂಡಿ ಹರ್ಲಾಪುರವಿದೆ. ಈ ಊರಪಕ್ಕದ ಹೆಬ್ಬಂಡೆ ಗುಡ್ಡಗಳಲ್ಲಿ ಆದಿಮಾನವ ಬರೆದ ಚಿತ್ರಗಳಿವೆ. ಇಲ್ಲಿಯ ಜನಕ್ಕೆ ಈ ವಿಷಯ ತಿಳಿದಿಲ್ಲ. ಗದ್ದೆಗಳ ನಡುವೆ ಒಂದು ದೊಡ್ಡ ಬಂಡೆಗಲ್ಲಿನಲ್ಲಿ ಶಾಲಿವಾಹನ ಶಕೆ ೧೪೩೫ರ ವಿಜಯನಗರ ಅರಸರ ಶಾಸನವೊಂದನ್ನು ನೋಡಿದೆ. ಪ್ರತಿವರ್ಷ ಶಿವರಾತ್ರಿ ದಿವಸ ಇಲ್ಲಿ ಈಶ್ವರನ ಜಾತ್ರೆ ನಡೆಯುತ್ತದೆ. ಸುತ್ತಮುತ್ತಲ ಊರುಗಳ ಜನ ಸೇರುತ್ತಾರೆ. ಮುಂಜಾನೆ ಶಿವಪಾರ್ವತಿಯರ ಮದುವೆ, ಅನ್ನಸಂತರ್ಪಣೆ, ಕೀರ್ತನ, ಭಜನೆ, ಮೂರ್ತಿಗಳ ಮೆರವಣಿಗೆ, ಈ ಜಾತ್ರೆಯ ವಿಶೇಷಗಳು. ಲಿಂಗಾಯತರ ಮದುವೆಯ ಪ್ರತಿಯೊಂದು ವಿಧಿಯಾಚರಣೆಗಳನ್ನು (ಕನ್ಯೆಯನ್ನು ನೋಡುವುದು, ವೀಳ್ಯಶಾಸ್ತ್ರ, ಗಂಗೆಗೆ ಹೋಗಿ ಬರುವುದು, ಪಂಚಕಳಸ ಹೂಡುವುದು, ಧಾರೆ ಎರೆಯುವುದು, ಆಹೇರ ಮಾಡುವುದು ಇತ್ಯಾದಿ) ಪಾರ್ವತಿ ಪರಮೇಶ್ವರರ ಮದುವೆಯಲ್ಲಿ ಮಾಡಲಾಗುತ್ತದೆ. ಹೆಣ್ಣುಗಂಡಿನ ಕಡೆಯವರು ಇಂಥವರೇ ಆಗಬೇಕೆಂದೇನಿಲ್ಲ. ಪ್ರತಿವರ್ಷ ಒಬ್ಬೊಬ್ಬರಾಗುತ್ತಾರೆ. ಪಕ್ಕದ ಗಡ್ಡಿಮಠ ಮತ್ತು ಕೊಪ್ಪಳದ ಗವಿಮಠದ ಸ್ವಾಮಿಗಳು ಜಾತ್ರೆಗೆ ಆಗಮಿಸುತ್ತಾರೆ. ಲಿಂಗಾಯತರು ಪೂಜಾರಿಗಳಾಗಿದ್ದು ಈಶ್ವರ ಗುಡಿಗೆ ಆಸ್ತಿಪಾಸ್ತಿ ಏನಿಲ್ಲ.

ಮಾರಮ್ಮನ ಜಾತ್ರೆ :

ಈ ನೀರಾವರಿ ಪ್ರದೇಶದಲ್ಲಿ ಬತ್ತದ ಬೇಸಾಯದ ಜತೆ ಕಲ್ಲು ಒಡೆಯುವ ವೃತ್ತಿಗೂ ಅವಕಾಶವಿದೆ. ಹೀಗಾಗಿ ತಮಿಳುನಾಡಿನಿಂದ ಈ ಭಾಗದ ಹಲವು ಗ್ರಾಮಗಳಲ್ಲಿ ಒಡ್ಡರು ಬಂದು ನೆಲೆನಿಂತಿದ್ದಾರೆ. ಈ ಗ್ರಾಮದ ನೂರು ಕುಟುಂಬಗಳ ತಮಿಳರು ಭಾರತ ಹುಣ್ಣಿಮೆಯಂದು ಮಾರೆಮ್ಮನ ಜಾತ್ರೆ ಮಾಡುತ್ತಾರೆ. ದೇವಿಯನ್ನು ಗಂಗೆಗೆ ಪಲ್ಲಕ್ಕಿಯಲ್ಲಿ ಒಯ್ಯುವುದು, ಪೂಜೆನಂತರ ವಾದ್ಯ ಮೇಳದೊಂದಿಗೆ ಗುಡಿ ತುಂಬಿಸುವುದು, ಅಗ್ನಿ ತುಳಿಯುವುದು, ಓಕುಳಿ ಮಾಡುವುದು, ಸಾಮೂಹಿಕ ಭೋಜನ - ಇವು ಜಾತ್ರೆಯ ವಿಧಿಗಳು. ಜಾತ್ರೆಗೆ ಬೇಟೆ ಕಡಿಯುವುದಿಲ್ಲ.

ವಾಸವಿ ಜಾತ್ರೆ :

ಒಂದು ದಿನದ ಸಣ್ಣ ಪ್ರಮಾಣದ ಈ ಜಾತ್ರೆಯನ್ನು ಈ ಊರಿನ ಕೊಮಟರು ಮಾಡುತ್ತಾರೆ.

ಕುಂಭ ತರುವುದು, ಒಡಪು ಹೇಳುವುದು, ಪರಮೇಶ್ವರ ಪಾರ್ವತಿಯರ ಲಗ್ನ ಮಾಡಿ ಸಾಮೂಹಿಕ ಭೋಜನ ಮಾಡುತ್ತಾರೆ.

ಬಸಾಪುರದ ಗವಿಸಿದ್ಧೇಶ್ವರ ಜಾತ್ರೆ :

ಕೊಪ್ಪಳ ತಾಲೂಕಿನ ಪೂರ್ವದಂಚಿನ ಕಡೆಯಹಳ್ಳಿ ಬಸಾಪುರ. ಸಾವಿರ ಮನೆಗಳ ಈ ಗ್ರಾಮದಲ್ಲಿ ಕಲ್ಗುಡ್ಡ ಗುಹೆಗಳ ಪಕ್ಕಕ್ಕೆ ಬಯಲಲ್ಲಿ ಸಣ್ಣ ಗುಡಿ ಇದೆ. ಅದು ಸುಮಾರು ನೂರಿನ್ನೂರು ವರ್ಷಗಳ ಹಿಂದೆ ಕೊಪ್ಪಳದ ಹತ್ತಿರದ ಓಜೇನಹಳ್ಳಿಯಿಂದ ಬಂದು ನೆಲೆನಿಂತು ಗವಿಯಲ್ಲಿ ಸಮಾಧಿಯಾದ ಸಿದ್ಧೇಶ್ವರನೆಂಬ ಶರಣರ ಗದ್ದುಗೆ ಸ್ಥಳ. ಪಕ್ಕದ ಗವಿಯಲ್ಲಿ ಐದುಪಿಂಡಿಗಳು ಒಂದೇ ಪಾಣಿಪೀಠದ ಮೇಲಿರುವಂತೆ ಕೆತ್ತಲಾದ ಶಿವಲಿಂಗವಿದೆ. ಕೊಪ್ಪಳದ ಹತ್ತಿರದ ಬೀಳೂರು ಹಿರೇಮಠದ ವಿರಕ್ತ ಜಂಗಮರೊಬ್ಬರು (ಸಿದ್ದಯ್ಯಸ್ವಾಮಿ) ಪೂಜೆ ಮಾಡಿಕೊಂಡು ಇದ್ದಾರೆ. ಕೊಪ್ಪಳದ ಗವಿಮಠಕ್ಕೆ ಈ ಗದ್ದುಗೆ ಸಂಬಂಧಪಟ್ಟಿಲ್ಲವೆಂದು ಅವರು ತಿಳಿಸಿದರು. ಗದ್ದುಗೆಗೆ ಆಸ್ತಿ ಏನಿಲ್ಲ. ಪ್ರತಿವರ್ಷ ಓಜೇನಹಳ್ಳಿ, ನರೇಗಲ್ಲ ಗ್ರಾಮದ ನೂರಾರು ಭಕ್ತರು ಬಂಡಿಗಾಡಿಗಳಲ್ಲಿ ಇಲ್ಲಿ ಬಂದು ಜಾತ್ರೆ ಮಾಡಿಹೋಗುತ್ತಾರೆ. ಪ್ರತಿಮೆಗೆ ೫೦೦ ರೂ. ಅಥವಾ ೧೦೦೦ ರೂ. ಪಟ್ಟಿ ಸೇರಿಸುತ್ತಾರೆ. ಈ ವರ್ಷದ ಜಾತ್ರೆಗೆ ಊರವರು ಎರಡು ಚೀಲ ಅಕ್ಕಿ ಕೊಟ್ಟಿದ್ದಾರೆ. ಈ ಊರಲ್ಲಿ ಇದೇ ದೊಡ್ಡ ಜಾತ್ರೆ. ಹಂಪಿ ಉತ್ಸವದಂದು ಉಚ್ಚಯ್ಯವನ್ನು ಗವಿಯಿಂದ ಗೇಟವರೆಗೆ ಎಳೆಯುತ್ತಾರೆ. ಸಾಮೂಹಿಕ ಲಗ್ನಗಳು ನಡೆಯುತ್ತವೆ. ಊರವರು, ಸುತ್ತಮುತ್ತಲ ಗ್ರಾಮಸ್ಥರು ಪಾಲ್ಗೊಳ್ಳುತ್ತಾರೆ. ಇಡೀ ರಾತ್ರಿ ಶಿವಕೀರ್ತನ ಭಜನೆಯಲ್ಲಿ ಕಳೆಯುತ್ತಾರೆ.

ಬೇಡರು, ಒಡ್ಡರು, ಕೊಂಗರು, ಮಾದಿಗರು ಹೆಚ್ಚಿರುವ ಈ ಊರಿನಲ್ಲಿ ಕೊಂಗರು (ತಮಿಳು ಒಡ್ಡರು) ಪ್ರತಿಮನೆಗೆ ೫೦೦ ರೂ. ಪಟ್ಟಿಹಾಕಿ ಪ್ರತಿವರ್ಷ ಮಾರಮ್ಮನ ಜಾತ್ರೆ ಮಾಡುತ್ತಾರೆ.

ಆಗಳಕೇರಾ :

ಕುರುಬರು, ಉಪ್ಪಾರರು, ಒಡ್ಡರು, ಹರಿಜನರು, ಬೇಡರು, ಲಿಂಗಾಯತರು ಇರುವ ಈ ಊರಿನಲ್ಲಿ ಹನುಮಪ್ಪನ ಜಾತ್ರೆಯಾಗುತ್ತದೆ. ಕಂಪಸಾಗರದ ಹನುಮಪ್ಪನ ಜಾತ್ರೆಯ ವಿವರಗಳೆಲ್ಲ ಈ ಜಾತ್ರೆಗೂ ಅನ್ವಯಿಸುತ್ತವೆ. ಇಲ್ಲಿ ಹನುಮಂತನ ಪೂಜಾರಿಗಳು ನಾಯಕ ಕುಲದವರು. ಹಳೆಊರು ಹೊಸಊರು ಎಂದು ಆಗಿರುವುದರಿಂದ ಇನ್ನೊಂದು ಊರ ಹನುಮಪ್ಪನನ್ನು ಬಾರಿಕರು ಪೂಜುತ್ತಾರೆ.

ಈ ಊರ ದಲಿತ ಕೇರಿಯಲ್ಲಿ ಮರಿಯಮ್ಮನ ಗುಡಿಯಿದ್ದು ಅಮ್ಮನ ಮುಖಕ್ಕೆ ಬಣ್ಣಕೊಡುವ ಸಂದರ್ಭವಿದ್ದಾಗ ಬೇಟೆ ಕಡಿದು ಜಾತ್ರೆ ಮಾಡಲಾಗುತ್ತದೆ. ಇದೇ ಊರ ಒಡ್ಡರ ಮನೆಯಲ್ಲಿರುವ ದುರಗಮ್ಮನಿಗೆ ಸಂಬಂಧಿಸಿ ಭಾರತ ಹುಣ್ಣಿಮೆಗೆ 'ಅಮ್ಮನನ್ನು ಕಳಿಸುವ' ಉತ್ಸವ ನಡೆಯುತ್ತದೆ.

ಬೂದಿಗುಂಪ ಕರಿಯಮ್ಮನ ಜಾತ್ರೆ :

ಕೊಪ್ಪಳ ತಾಲ್ಲೂಕಿನ ಪೂರ್ವದ ಬಯಲು ಪ್ರದೇಶದಲ್ಲಿರುವ ಊರು ಬೂದಿಗುಂಪ. ನೀರಾವರಿ ಸೌಲಭ್ಯವಿಲ್ಲದ ಈ ಗ್ರಾಮದಲ್ಲಿ ೪೫೦ ಮನೆಗಳಿವೆ. ಕುರುಬರು, ನಾಯಕರು, ಈಡಿಗರು, ಒಡ್ಡರು, ಹರಿಜನರು, ಮುಸ್ಲಿಂ, ಲಿಂಗಾಯತರು ಇತ್ಯಾದಿ ಜಾತಿ ಜನಗಳಿದ್ದಾರೆ. 'ಹೊಲದಾಳಕರೆಮ್ಮ' ಮತ್ತು ಊರಾಳಕರೆಮ್ಮನೆಂದು ಎರಡು ಗುಡಿಗಳಿವೆ. ಗುಡಿಗಳಲ್ಲಿರುವ ಗುಂಡುಕಲ್ಲುಗಳೆ ಅಮ್ಮ. ಈ ಊರ ಪಕ್ಕದ ಹಳೆ ಕುಮಟಾ ದಾಚೆಯ ಬಂಡೆಕುಂಟಿಯ ಜನ ಇಲ್ಲಿ ಬಂದು ನೆಲೆ ನಿಂತಾಗ ಇವರ ಜತೆಬಂದು ನೆಲಸಿದವಳು ಊರ ಕರೆಮ್ಮ. ಹೊಲದಾಳ ಕರೆಮ್ಮನ ಗುಡಿಯಲ್ಲಿ ಎರಡೂ ಮೂರ್ತಿಗಳಿಟ್ಟು ಪ್ರತಿವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ. ಬಂಡೆಕುಂಟೆಮ್ಮನನ್ನು ಪೂಜುವವರು ಕುರುಬರು. ಹೊಲದಾಳ ಕರೆಮ್ಮನನ್ನು ಪೂಜಿಸುವವರು 'ಛತ್ರೇಯರು. ಮನೆಗೆ ನೂರು-ನೂರೈವತ್ತು ರೂಪಾಯಿಗಳ ಪಟ್ಟಿಹಾಕಿ ಎರಡೂ ದೇವರುಗಳ ಒಂದೇ ಜಾತ್ರೆ ಮಾಡುತ್ತಾರೆ. ಕೋಣ ಕಡಿಯುತ್ತಾರೆ. ಸಾವಿರಾರು ಟಗರು, ಕುರಿ ಬೇಟೆಯಾಗುತ್ತವೆ. ಹದಿನೈದು ಇಪ್ಪತ್ತು ದಿನಗಳವರೆಗೆ ಅಂಗಡಿ ಮಳಿಗೆ ವ್ಯಾಪಾರ ನಡೆಯುತ್ತದೆ. ಆಗಿ ಹುಣ್ಣಿವಿಯ ಎಡಬಲ ನಡೆಯುವ ಈ ಜಾತ್ರೆಯ ಮುಖ್ಯ ವಿಧಿಯಾಚರಣೆಗಳು ಕೋಣ ಕಡಿಯುವುದು, 'ಪಾಶಾ' ಮತ್ತು ಅಗ್ನಿಕುಂಡ. ಹುಲಿಗಿಯ ಜಾತ್ರೆಯಲ್ಲಿ ನಡೆದ ಅಕ್ಕಿಪಡಿಯಂತೆ ಇಲ್ಲಿ 'ಪಾಶಾ' ಆಚರಣೆ ಇದೆ. ದೊಡ್ಡ ಕೊಳಗದಲ್ಲಿ ಜೋಳದ ನುಚ್ಚು ಕುದಿಯಲಿಟ್ಟು ಪೂಜಾರಿ ಕೈಹಾಕಿ ತಿರುವಿ ತೆಗೆಯುವನು. ಇದು ಬೆಳಗಾಗುವ ಮೊದಲು ನಡೆವ ಕಾರ್ಯಕ್ರಮ. ಇದೇ 'ಪಾಶಾ' (ಪಾಯಸ?)

ಈ ಜಾತ್ರೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಶೇಷವಾದುದು 'ಮುಂಗೈ ಆಟ'. ಎದುರುಬದುರು ನಿಂತ ಇಬ್ಬರು ಕೈಗಳನ್ನು ಹೊಸೆದು ಶಕ್ತಿ ಪ್ರದರ್ಶಿಸಿಕೊಳ್ಳುವ ಈ ಆಟದಲ್ಲಿ ಗೆದ್ದವರಿಗೆ ಬೆಳ್ಳಿಯ ಕಡಗವನ್ನು ತೊಡಿಸುತ್ತಾರೆ.

ಶಾಂತಲಿಂಗೇಶ್ವರ ಜಾತ್ರೆ :

ಮೇಲೆ ಹೇಳಿದ ಬಸಾಪುರದಿಂದ ಆರು ಕಿಲೋಮೀಟರು ಧೂರದ ಹೊಳೆಯ ನಡುವಿನ 'ಗಡ್ಡಿಮಠ'ದಲ್ಲಿ ಚೈತ್ರಶುದ್ಧ ಚತುರ್ದಶಿಯಂದು ಶಾಂತಲಿಂಗೇಶ್ವರ ಜಾತ್ರೆ ನಡೆಯುತ್ತದೆ. ಈಗಿರುವ ಸ್ವಾಮಿಗಳು ೧೫ನೇಯವರು, ೩೦೦-೪೦೦ ಎಕರೆ ಜಮೀನಿದ್ದ ಈ ಜಹಗೀರುಮಠ ಇಂದು ೧೦-೧೫ ಎಕರೆಗೆ ಒಡೆಯನಾಗಿದೆ.

ಸುತ್ತಮುತ್ತಲ ೮-೧೦ ಗ್ರಾಮಗಳ ಜನ ಜಾತ್ರೆಗೆ ಸೇರುತ್ತಾರೆ. ಒಂದೇ ದಿನದ ಈ ಜಾತ್ರೆಯಲ್ಲಿ ದೀಕ್ಷೆ, ಅಯ್ಯಾಚಾರ, ಅನ್ನಸಂತರ್ಪಣೆ, ತೇರು ಎಳೆಯುವ ವಿಧಿಯಾಚರಣೆಗಳಿವೆ.

ಅಮರೇಶ್ವರ ಜಾತ್ರೆ :

ಬೂದಿಗುಂಪದಿಂದ ೪-೫ ಕಿಲೋಮೀಟರು ದೂರದಲ್ಲಿ 'ಅಡವಿ ಅಮರೇಶ್ವರ' ದೇಗುಲವಿದೆ. ಇದರ ಸಮೀಪ ಯಾವ ಊರಿಲ್ಲ. ಗಾಣಿಗ ಕುಲದ ಪೂಜಾರಿ ಪ್ರತಿದಿನವೂ

ಪೂಜೆ ಮಾಡಿಕೊಂಡಿದ್ದಾನೆ. ಮದುವೆಯಾದವರು ಇಲ್ಲಿ ಮನೆ ಮಾಡುವಂತಿಲ್ಲವಾದ್ದರಿಂದ ಆತ ವಿರಕ್ತನಿಂತಿದ್ದಾನೆ.

ಬೇವು, ಆಲ, ನೀರಲ ಮೊದಲಾದ ಮರಗಳ ತೋಪು, ಜೋಕಾಲಿ ಕಂಬ, ಸುತ್ತಲೂ ಕಂಪೌಂಡ್ ಗೋಡೆ ಇರುವ ದೇಗುಲ ಮೊದಲು ಮಣ್ಣಲ್ಲಿ ಮುಚ್ಚಿ ಹೋಗಿತ್ತಂತೆ. ಒಂದು ಶತಮಾಲನದ ಹಿಂದೆ, ದನ ಕಾಯುವ ಹುಡುಗರು ಅನುಮಾನದಿಂದ ಗೆಬರಿ ನೋಡಿದಾಗ ಕಳಸ ಗೋಪುರ ಕಂಡವು. ಈ ಗುಡಿಗೆ ಸಮೀಪ ಇರುವ ಕೂಕನಪಳ್ಳಿಯವರು ಅಗಿದು ತೆಗೆದರು. ಅಲ್ಲಿ ದೊರಕಿದ ಶಾಸನದಲ್ಲಿ 'ಅಡವಿ ಅಮರೇಶ್ವರ' ಎಂದು ಬರೆದಿತ್ತಂತೆ. ದೇಗುಲ ಸ್ವಲ್ಪ ತಗ್ಗಿನಲ್ಲಿದ್ದು ಗರ್ಭಗುಡಿಯ ತುಂಬ ನೀರಿದೆ. ಮಳೆಗಾಲದಲ್ಲಂತೂ ಗುಡಿ ಪೂರ್ಣ ನೀರಿನಿಂದಾವೃತವಾಗುತ್ತದೆ. ಗರ್ಭಗುಡಿಯ ನೀರಿನಲ್ಲಿ ಉದ್ಭವ ಲಿಂಗ ಮುಳುಗಿದೆ. ಹೊರ ಭಾಗದಲ್ಲಿ ಈಚೆಗೆ ಕಟ್ಟಿಸಿರುವ ಗದ್ದುಗೆಗಳಿವೆ. ಭಕ್ತರು ಪ್ರಶ್ನೆ ಕೇಳಿ ಎತ್ತುವ ಕಲ್ಲುಗಳಿವೆ. ಹಳೆ ನಂದಿ ವಿಗ್ರಹದ ಜತೆ ಈಚೆಗೆ ಕೆಲವು ಇದ್ದುಳ್ಳವರು ಮಾಡಿಸಿಟ್ಟಿರುವ ಲಿಂಗ, ನಂದಿಗಳಿವೆ. ನಂಬುಗೆ ಇಟ್ಟಿರುವ ಜನ ಗರ್ಭಗುಡಿಯ ನೀರನ್ನು ದನಕರುಗಳ ರೋಗ ನಿವಾರಣೆಗೆ ಅಮರೇಶ್ವರ ಪಾದೋದಕವೆಂದು ಬಳಸುತ್ತಾರೆ. ನವರಂಗದ ಎದುರು ಗೋಡೆಯಲ್ಲಿ ಶಿವಪೂಜೆಗೆ ಕೂತ ವ್ಯಕ್ತಿಯ ಉಬ್ಬುಶಿಲ್ಪ, ಪಕ್ಕದ ಗೋಡೆಯಲ್ಲಿ ನಿಂತ ವ್ಯಕ್ತಿಯ ಶಿಲ್ಪವಿದೆ. ಗುಡಿಯ ಆವರಣದಾಚೆ ಹೊಸದಾಗಿ ಕಲ್ಯಾಣ ಮಂಟಪ ಕಟ್ಟಿದ್ದಾರೆ.

ಯುಗಾದಿ ಪಾಡ್ಯದಂದು ಅಂಗಳದ ಹಾಸುಬಂಡೆಯ ಮೇಲೆ ರೈತರು ಬೆಳೆಯುವ ಬಹುತೇಕ ಎಲ್ಲ ಧಾನ್ಯಗಳು, ಬೆಳಿಗ್ಗೆ ೪ ಗಂಟೆಯಿಂದ ಕಾಣತೊಡಗುತ್ತವೆಂದು ಗುಡಿಯ ಪೂಜಾರಿ ತಿಳಿಸಿದ. ಇವನ್ನು ನೋಡಲು ದೂರದೂರಗಳಿಂದ ಮತ್ತು ಆಂಧ್ರದಿಂದಲೂ ಜನ ಸೇರುತ್ತಾರೆ. ರಾತ್ರಿ ಎರಡು ಗಂಟೆಗೆ ಪೂಜೆಯಾಗುತ್ತದೆ. ಬೆಳಿಗ್ಗೆ 'ಕಾಣುವ' ಬೆಳೆಗಳನ್ನು ನೋಡಿದ ಜನ ಬಿತ್ತಲು ನಿರ್ಧರಿಸುತ್ತಾರೆ. ಕಾಣದಿರುವ ಧಾನ್ಯಗಳನ್ನು ಬಿತ್ತುವುದಿಲ್ಲ. ಬೆಳಗಿನ ೧೦ ಗಂಟೆಯ ನಂತರ ಸಸಿ ಕಾಣದಾಗುತ್ತವೆ, ಎಂದು ಪೂಜಾರಿ ಹೇಳಿದ.

ಪ್ರತಿ ಅಮವಾಸ್ಯೆಗೆ ಜನರ ಸೇರುವೆ ಹೆಚ್ಚು. ಶ್ರಾವಣದ ಐದೂ ಸೋಮವಾರ ಪಾಲಿಕಿ ಉತ್ಸವ - ನಡುವಿನ ಸೋಮವಾರ ಜಾತ್ರೆ. ಒಂದು ದಿನದ ಜಾತ್ರೆಗೆ ಭಜನೆ, ಡೊಳ್ಳು, ಬ್ಯಾಂಡ್‌ಬಾಜಿ ಮೇಳ. ನಾಲ್ಕಾರು ಹಳ್ಳಿಗಳ ೪-೫ ಸಾವಿರ ಜನ ಸೇರುತ್ತಾರೆ. ಬೆಳಿಗ್ಗೆ ದೇವರ ವಿಶೇಷ ಪೂಜೆ. ಕೂಕನಪಳ್ಳಿಯಿಂದ ಪಾಲಿಕಿಯಲ್ಲಿ ದೇವರು ಬರುತ್ತದೆ. ರುದ್ರಾಭಿಷೇಕದ ನಂತರ ಅಂಗಳದಲ್ಲಿರುವ ಜೋಲಿಕಂಬಕ್ಕೆ ಜೋಕಾಲಿ ಕಟ್ಟಿ ದೇವರನ್ನಿಟ್ಟು ತೂಗುತ್ತಾರೆ. ಭಕ್ತರೂ ಕೂಡ ಹಣ ಕೊಟ್ಟು ಜೋಕಾಲಿ ತೂಗುತ್ತಾರೆ. ಗುಡಿಯಿಂದ ಉಯ್ಯಾಲೆ ಕಂಬದಾಚೆ ಪಾದಗಟ್ಟೆವರೆಗೆ ಸಂಜೆ ಉಚ್ಚಯ್ಯ ಎಳೆಯುತ್ತಾರೆ. ಇದರಲ್ಲಿ ಕೂಕನಪಳ್ಳಿಯ ಬೆಟ್ಟದ ಲಿಂಗೇಶ್ವರ ಮಠದವರು ಅಮರೇಶ್ವರ ಉತ್ಸವಮೂರ್ತಿಯನ್ನು ಹಿಡಿದುಕೊಂಡು ಕೂರುತ್ತಾರೆ. ಜಾತ್ರೆಯಲ್ಲಿ ವಿಶೇಷ ಮನರಂಜನೆ ಎಂದರೆ ಬೂದಿಗುಂಪದಲ್ಲಿರುವಂತೆ **'ಮುಂಗೈ ಆಡುವುದು'** ಗೆದ್ದವರಿಗೆ 'ಕಡೆ' ಕೊಡುತ್ತಾರೆ.

ಕೂಕನಪಳ್ಳಿ :

೧೩ನೇ ರಾಷ್ಟ್ರೀಯ ಹೆದ್ದಾರಿಯ ಮೇಲಿರುವ ಈ ಗ್ರಾಮದ ಹೊರ ಭಾಗದಲ್ಲಿ ಬೆಟ್ಟಪ್ಪನ ಗುಡಿ. ಸ್ಥಾಪನೆ ೧೯೪೪ರಲ್ಲಿ. ಅಂಗಳದಲ್ಲಿ ಬೆಟ್ಟಪ್ಪಜ್ಜನ ಶಿಷ್ಯ ಕುಂಬಾರ ನಿಂಗಜ್ಜನ ಗದ್ದುಗೆ. ಗರ್ಭಗೃಹದಲ್ಲಿ ಗದ್ದುಗೆಯ ಮೇಲೆ ಬೆಟ್ಟಪ್ಪನ ಪಂಚಲೋಹದ ಪ್ರತಿಮೆ, ರುಮಾಲು, ಕಫನಿಗಳಿವೆ. ಕೊರಳಲ್ಲಿ ಕರಡಿಗೆ. ಗದ್ದುಗೆಯ ಕೆಳಗೆ ಈ ಹಿಂದೆ ನಮೂದಿಸಲಾದ ಅಮರೇಶ್ವರ ದೇವರ ಬೆಳ್ಳಿಮುಖಗಳಿವೆ. ಗುಡಿಗೆ ಗೋಪುರ ಕಳಸಗಳಿವೆ. ಬೇಡಿಕೊಂಡ ಭಕ್ತರು ಹಾಕಿಸಿದ ೨೦ ಕಳಸಗಳು, ಗರ್ಭಗುಡಿ, ಮುಖ ಮಂಟಪಗಳು ಮಾತ್ರ ಇದ್ದವು. ಈಚೆಗೆ ಮುಂದಿನ ಭಾಗ ಕಟ್ಟಿಸಿದ್ದಾರೆ. ಗರ್ಭಗುಡಿಯ ಹೊರ ಗೋಡೆಗಳಲ್ಲಿ ಗಡ್ಡಧಾರಿ ಬೆಟ್ಟಪ್ಪಯ್ಯ ನಿಂತ ಭಂಗಿಯ ಚಿತ್ರ, ಅವನ ಶಿಷ್ಯ ಲಿಂಗಪ್ಪ ಗಡಿಗೆ ಮಾಡುತ್ತಿರುವ ಚಿತ್ರ, ಗಂಗಾವತಿ ತಾಲೂಕಿನ ಬೆಣಕಲ್ಲಿನಲ್ಲಿ ಮೂಲಪೀಠ. ಇದು ಶಾಖಾಮಠ, ಕಲ್ಗುಡಿಯಲ್ಲಿ ಶಾಖಾ ಮಠವಿದೆ. ಜಂಗಮ ಕುಲದ ಪೂಜಾರಿ ಪ್ರತಿದಿನ ಪೂಜಿಸುತ್ತಾನೆ.

ಈ ಊರಿಗೆ ಬೆಟ್ಟಪ್ಪಜ್ಜನ ಗುಡಿ ಹೇಗೆ ಬಂತು? ಎಂದು ಕೇಳಿದರೆ ಬೆಟ್ಟಪ್ಪಜ್ಜ ಹಿಟ್ನಾಲ ಬೆಣಕಲ್ಲು ಕಿನ್ನಾಳದಿಂದ ಆಗಾಗ ಹೋಗಿ ಬರುತ್ತಿದ್ದರು. ಒಂದು ಸಲ ಇಲ್ಲಿ ಬಂದಿದ್ದು ಹೋದರು. ಊರಿಗೆ ಒಮ್ಮೆ ಮಾರಿಕಾ ರೋಗ ಬಂದಿತ್ತು. ಊರವರು ಬೆಣಕಲ್ಲಿಗೆ ಹೋಗಿ ಅಜ್ಜನ್ನ ಕೇಳಿದರು. ಅವರು ಒಂದು ಟೆಂಗಿನಕಾಯಿ ಆಶೀರ್ವದಿಸಿ ಕೊಟ್ಟರು. ಅದನ್ನು ತಂದು ಪೂಜಿಸಿದಾಗ ಮಾರಿಕಾ ಕಡಿಮೆಯಾಯಿತು. ಆಗಿನಿಂದ ಅಜ್ಜನ ಪೂಜೆ ಇದೆ.

ಅಜ್ಜನ ಇತಿಹಾಸ, ಪವಾಡ ತಿಳಿಯಬೇಕೆಂದರೆ ಬೆಣಕಲ್ಲಿಗೆ ಹೋಗಬೇಕು ಎಂದರು.

ಜಾತ್ರೆ :

ಕಾರ್ತಿಕ ಮಾಸದಲ್ಲಿ ಶಾಸ್ತ್ರಿಗಳಿಂದ ಒಂದು ತಿಂಗಳು ಶರಣ ಬಸವೇಶ್ವರ ಪುರಾಣ ಹೇಳಿಸುತ್ತಾರೆ. ಮುಕ್ತಾಯ ಸಮಾರಂಭಕ್ಕೆ ಜಾತ್ರೆ ಮಾಡುತ್ತಾರೆ.

ಕಾರ್ತಿಕ ಅಮವಾಸ್ಯೆಯಂದು ತೇರು. ಬೆಳಿಗ್ಗೆ ದೇವರ ಪಾಲಿಕಿ ವಾದ್ಯ ಮೇಳದೊಂದಿಗೆ ಊರಲ್ಲಿ ಹೋಗಿ ಬರುವುದು. ಸಂಜೆ ಐದು ಗಂಟೆಗೆ ತೇರೆಳೆಯುವುದು. ಗುಡಿಯ ಎದುರುಗಡೆ ಇರುವ ಪಾದಗಟ್ಟೆಯವರೆಗೆ ಎಳೆದು ಹಿಂದೆ ತರುತ್ತಾರೆ. ಈ ಕಾರ್ಯಕ್ರಮಕ್ಕೆ ಕೊಪ್ಪಳದ ಗವಿಸಿದ್ದೇಶ್ವರ ಮಠದ ಸ್ವಾಮಿಗಳು ಬರುತ್ತಾರೆ. ತೇರಿನಲ್ಲಿ ಉತ್ಸವಮೂರ್ತಿ, ಪೂಜಾರಿ, ಬಡಿಗರಿರುತ್ತಾರೆ. 'ಹರಹರ ಮಾದೇವ' ಎಂಬ ಘೋಷಣೆ. ಜನ ತೇರಿಗೆ ಬಾರೆಹಣ್ಣು, ಬಾಳೆಹಣ್ಣು, ಮಂಡಕ್ಕಿ, ಉತ್ತತ್ತಿ ಎಸೆಯುತ್ತಾರೆ. ಡೊಳ್ಳು, ಬೆಂಡಬಾಜಿ, ನಂದಿಕೋಲು, ಕುದುರೆ ಕುಣಿತ, ಭಜನೆ ಮೇಳ, ಒಡಪು ಹೇಳು ವವರಿರುತ್ತಾರೆ.

ಮೊದಲು ಉಚ್ಚಯ್ಯ ಮಾತ್ರ ಎಳೀತಿದ್ದರು. ೯ ವರ್ಷದಿಂದೀಚೆ ತೇರು ಮಾಡಿಸಿದ್ದಾರೆ. ಸುತ್ತಮುತ್ತಲ ಗ್ರಾಮಗಳ ಜನ, ಅಂಗಡಿಗಳು ಜಾತ್ರೆಯಲ್ಲಿರುತ್ತವೆ.

ಬೆಟ್ಟಪ್ಪಜ್ಜನ ಮುಖ್ಯ ಸ್ಥಳವಾದ ಬೆಣಕಲ್ಲಿನಲ್ಲಿ ಹೊ ಳಿಹುಣ್ಣಿಮೆಯಾದ ೯ ದಿನಕ್ಕೆ ಜಾತ್ರೆ. ಅದರ ಮರುದಿನ ಇಲ್ಲಿ ಸಂಗಟಿಸಾರಿನ 'ಅನ್ನಪ್ರಸಾದ'. ಬಂಡಿಯಲ್ಲಿ ಅಜ್ಜನ ಫೋಟೊ ಇಟ್ಟು ಉಚ್ಚಯ್ಯ ಅಂತ ಎಳೆಯುತ್ತಾರೆ. ಅದಕ್ಕೂ ಮೊದಲು ದೇವರ ಪಾಲಿಕಿ ಊರಲ್ಲಿ ಹೋಗಿ ಬರುತ್ತದೆ. ಮನೆ ಮುಂದೆ ಪಾಲಿಕಿ ಬಂದಾಗ ಜನ, ಕಾಯಿ ಕರ್ಪೂರ ಮಾಡುತ್ತಾರೆ. ಅಮವಾಸ್ಯೆಗೆ ಊರ ಜನ ಭಜನೆ ಮಾಡುತ್ತಾರೆ, ಸಂಗಟಿಸಾರಿನ ಪ್ರಸಾದವಿರುತ್ತದೆ.

ದ್ಯಾಮವ್ವನ ಜಾತ್ರೆ :

ಈ ಊರಿನ ದ್ಯಾಮವ್ವನ ಜಾತ್ರೆಯನ್ನು ಮೂರು ವರ್ಷಕೊಮ್ಮೆ ಆಗಿ ಹುಣ್ಣಿಮೆಯ ಮುಂದೆ ಮಾಡುತ್ತಾರೆ. ಊರಲ್ಲಿ ಪೂರ್ವಾಭಿಮುಖವಾದ ಸಾದಾ ಗುಡಿ. ಗರ್ಭಗುಡಿಯ ಕಟ್ಟೆಯ ಮೇಲೆ ಹುಲಿ ವಾಹನದ ಮೇಲೆ ಕೂತು ಕಟ್ಟಿಗೆಯು ಸ್ತ್ರೀ ವಿಗ್ರಹ. ನಾಲ್ಕು ಕೈ, ಕತ್ತಿಗೆ ಹಸಿರು ಬಳೆ ಹಾಕಿದ್ದಾರೆ. ಕಟ್ಟಿಗೆಯ ಪ್ರಭಾವಳಿ, ವಿಗ್ರಹಕ್ಕೆ ಸೀರೆಯುಡಿಸಿದ್ದಾರೆ. ಕೆಳಗೆ ಮೂರು ಚಿಕ್ಕ ಬೆಳ್ಳಿಯ ಮುಖಗಳು. ಗುಡಿಯ ಮೇಲೆ ಸಣ್ಣ ಗೋಪುರ, ಕಳಸಗಳು.

ಜಾತ್ರೆಯ ಸಂದರ್ಭದಲ್ಲಿ ಕಿನ್ನಾಳಿನಿಂದ ಬಣ್ಣ ಕೊಡುವವರನ್ನು ಕರೆಸುತ್ತಾರೆ. ಜಾತ್ರೆಯ ನಾಲ್ಕು ದಿನ ಮೊದಲು ಬಣ್ಣ ಹಾಕಲಾಗುತ್ತದೆ. ಗುಡಿಯ ಹೊರಗಿನ ಕೋಣೆಯಲ್ಲಿ ಯಾವ ಮುಚ್ಚುಮರೆಯಿಲ್ಲದೆ ಬಣ್ಣ ಕೊಡುತ್ತಾರೆ. ಈ ಮಾತು ಹೇಳಲು ಕಾರಣವೇನೆಂದರೆ ಉತ್ತರ ಕರ್ನಾಟಕದ ಹಲವು ಕಡೆ ತುಂಬ ಕಟ್ಟುನಿಟ್ಟಾಗಿ ಯಾರ ಕಣ್ಣಿಗೂ ಬೀಳದಂತೆ ದ್ಯಾಮವ್ವನ ವಿಗ್ರಹಕ್ಕೆ ಬಣ್ಣ ಕೊಡುವ ಸಂಪ್ರದಾಯವಿದೆ. ಈ ಗುಡಿಯ ಪೂಜಾರಿಗಳು ನಾಯಕ ಕುಲದವರು. (ಬೇಡರು) ಮೂರು ದಿನದ ಜಾತ್ರೆಯಲ್ಲಿ ಮೊದಲದಿನ ಪಾಲಿಕಿಯಲ್ಲಿ ದೇವಿ ಉತ್ಸವಮೂರ್ತಿಯನ್ನಿಟ್ಟುಕೊಂಡು ಶಿವಪುರದ ಹತ್ತಿರ ಇರುವ ತುಂಗಭದ್ರಾ ಗುಡಿ (೨ಕಿಲೋಮೀಟರು) ಹೋಗಿ ಪೂಜೆ ಮಾಡಿಕೊಂಡು ಕೊಡಗಳಲ್ಲಿ ನೀರು ತರುತ್ತಾರೆ. ಈ ನೀರನ್ನು ಭಕ್ತರಿಗೆ ಆಶೀರ್ವಾದ ಕೊಡುತ್ತಾರೆ. ಅವರು ಅದನ್ನು ಮನೆ ಮತ್ತು ಹೊಲಗಳಿಗೆ ಉಗ್ಗುತ್ತಾರೆ.

ಮರುದಿನ ಬೇಡಿಕೊಂಡವರು ಕುರಿಮರಿ ತಂದು ಪೂಜಿಸಿ ಗುಡಿಗೆ ಪ್ರದಕ್ಷಿಣೆ ಬಂದು ಮನೆಗೆ ಒಯ್ದು ಕಡಿದು ಎಡೆಮಾಡುತ್ತಾರೆ. ದೇವಿಗೆ ಊರ ಜನ ಕಾಯಿ ಕರ್ಪೂರ, ಹೂವಿನದಂಡೆ ಅರ್ಪಿಸುತ್ತಾರೆ. ಡೊಳ್ಳು, ಬಾಜಾ ಬಜಂತ್ರಿ ಎಲ್ಲ ಕಾರ್ಯಕ್ರಮಗಳಿಗೆ ವಾದ್ಯ ಮೇಳ.

ಮೂರನೆ ದಿನ 'ಪಾಸೆ' ('ಪಾಯಸ') ಮತ್ತು ಅಗ್ನಿ, ಪೂಜಾರಿ ಗುಡಿಯ ಹತ್ತಿರದ ಬಾವಿಯಿಂದ ಮಡಿಯಿಂದ ನೀರು ತರುತ್ತಾನೆ. ಈಗ ಮೂರು ದಿನಗಳಿಂದ ಉಪವಾಸವಿರುತ್ತಾನೆ. ಗುಡಿಯ ಅಂಗಳದಲ್ಲಿ ಕಲ್ಲುಹೂಡಿ ಹೊಸ ಗಡಿಗೆಯಲ್ಲಿ ಅನ್ನ ಮಾಡುತ್ತಾರೆ. ಅದು ಕುದಿಯುವಾಗ ಕೈ ಅದ್ದಿ ಸೇರಿದ ಜನಕ್ಕೆ ತೋರಿಸುತ್ತಾನೆ ಪೂಜಾರಿ. ಆ ಸಂದರ್ಭದಲ್ಲಿ ಪೂಜಾರಿ ಹಣೆಗೆ ಮಾತ್ರ ಕುಂಕುಮ ಭಂಡಾರ ತೊಡೆದು ಕೊಂಡಿರುತ್ತಾನೆ. ಮುಂಜಾನೆ ೮ ಗಂಟೆಯ ಒಳಗೆ ಪೂಜಾರಿ ಮತ್ತು ಹರಕೆ ಹೊತ್ತವರು ಅಗ್ನಿಕೊಂಡ ತುಳಿಯುತ್ತಾರೆ. "ಕಪ್ಪುಜನ" ಕುರಿ

ಬೇಟೆ ಮಾಡಿದರೆ ಲಿಂಗಾಯತರು ಹೂಹಣ್ಣು ಕಾಯಿ ಕರ್ಪೂರ ಮಾಡಿಸುತ್ತಾರೆ. ಅಂದರೆ ಊರಿನ ಎಲ್ಲ ಜಾತಿ ಜನ ಪಟ್ಟಿ ಎತ್ತಿ ಮಾಡುವ ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ದ್ಯಾಮವ್ವನ ಕೋಣಕ್ಕೆ ಸಂಬಂಧಿಸಿ ಒಂದು ಘಟನೆಯನ್ನು ಊರಿನ ಒಬ್ಬ ಹೇಳಿದ. ಭಕ್ತರು ದ್ಯಾಮವ್ವನಿಗೆ ಬಿಟ್ಟ ಕೋಣದಿಂದಲೆ ಊರಿನ ಬೆದೆ ಬಂದ ಎಮ್ಮೆಗಳನ್ನು **"ಕಟ್ಟಿಸುತ್ತಾರೆ"** ಒಂದು ಸಲ ಕೊಪ್ಪಳದ ಲಾರಿ ಹೊಡೆದು ಸತ್ತು ಹೋಯಿತು. ಲಾರಿ ಮಾಲಕನಿಗೆ ಕಾಡಾಟ ಸುರುವಾಯಿತು. ಆತ ಕೊಪ್ಪಳದಿಂದ ಲಾರಿಯಲ್ಲಿ ಬಂದು ವಿಜೃಂಭಣೆಯಿಂದ ಪೂಜೆ ಮಾಡಿಸಿ ಬೇರೆ ಕೋಣ ಕೊಡಿಸಿದ. ದ್ಯಾಮವ್ವನ ಗುಡಿಯ ಓಣಿಯಲ್ಲೇ ಮರಗವ್ವನ ಗುಡಿ ಇದೆ. ಗರ್ಭಗುಡಿಯಲ್ಲಿ ಕಟ್ಟೆಯ ಮೇಲೆ ಹುಗಿದಿರುವ ಚಪ್ಪಟೆ ಕಲ್ಲುಗಳೇ 'ವಿಗ್ರಹ'ಗಳು. ಇವಕ್ಕೆ ಸೀರೆಯುಡಿಸಿದ್ದಾರೆ. ಬೆಳ್ಳಿ ಕಣ್ಣಿಟ್ಟಿದ್ದಾರೆ, ನಾಯಕರೇ ಇದನ್ನು ಕೂಡ ಪೂಜಿಸುವವರು. ಈ ಊರಲ್ಲಿ ಲಿಂಗಾಯತರ ೨೦೦, ಕುರುಬರ ೬೦, ಬೇಡರ ೪೦, ಹರಿಜನರ ೪೦, ಐನೋರುಗಳ ೧೦, ಮುಸ್ಲಿಂರ ೩, ಚನ್ನದಾಸರ ೧೦ ಮನೆಗಳಿವೆ.

ಗಂಗಾವತಿ ತಾಲೂಕಿನ ಜಾತ್ರೆಗಳು

ಹಿನ್ನೆಲೆ :

ಗಂಗಾವತಿ ತಾಲೂಕಿನ ಹೆಚ್ಚಿನ ಭಾಗ ಒಂದೆಡೆ ತುಂಗಭದ್ರಾ ನೀರಾವರಿಯಿಂದಾಗಿ ಭತ್ತದ ಕಣಜವೆಂದು ಪ್ರಖ್ಯಾತ. ಮತ್ತೊಂದೆಡೆ ಹೊಳೆಯ ದಂಡೆಗುಂಟ ಸುತ್ತೆತ್ತಲೂ ಹಬ್ಬಿ ಹರಡಿರುವ ಬೃಹತ್ ಬಂಡೆಗುಡ್ಡ, ಕುರುಚಲು ಕಾಡು ಈ ತಾಲೂಕಿನ ಸಾಂಸ್ಕೃತಿಕ ವಾತಾವರಣದ ಮೇಲೆ ಪ್ರಭಾವ ಬೀರಿರುವ ಪ್ರಮುಖ ಭೌಗೋಲಿಕಾಂಶ. ಹೊಸಪೇಟೆಯಿಂದ ಕಂಪ್ಲಿ ಮೂಲಕ ಗಂಗಾವತಿಗೆ ಬರುವ ದಾರಿ ಈ ಹೆಬ್ಬಂಡೆ ಗುಡ್ಡಗಳ ನಡುವೆಯೆ. ವಿಜಯನಗರ ಅರಸರು ಮಾಡಿಕೊಂಡಿದ್ದ ಕಾಲುವೆಗಳಿಂದ ಈ ಪ್ರದೇಶ ಆ ಕಾಲದಿಂದಲೂ ನೀರಾವರಿಗೊಳಪಟ್ಟಿದೆ. ಕಂಪ್ಲಿ ಹೊಳೆದಂಡೆಯ ಊರು. ಹೊಸಪೇಟೆ ತಾಲೂಕಿನ ಕೊನೇ ಗ್ರಾಮ. ಹೊಳೆದಾಟಿದ ಕೂಡಲೆ ಗಂಗಾವತಿ ತಾಲೂಕು ಪ್ರಾರಂಭ. ಇಲ್ಲಿಂದ ಗಂಗಾವತಿಯ ಹೊಲಗಳೆಲ್ಲ ಗದ್ದೆಗಳೇ. ಹಾಗಾಗಿ ಇಲ್ಲಿ ೪೦ ಅಕ್ಕಿ ಗಿರಣಿಗಳಿವೆ. ಎಣ್ಣೆ ಮಿಲ್ಲುಗಳಿವೆ. ಇದು ಈ ಪ್ರದೇಶದ ಬಂಡವಾಳಶಾಹಿಕರಣದ ಸ್ವರೂಪವನ್ನು ನಿರ್ದೇಶಿಸುತ್ತವೆ. ಒಂದು ಸಣ್ಣ ಕುರುಚಲು ಗುಡ್ಡದ ಅಂಚಿಗೆ ಮಲಗಿರುವ ಗಂಗಾವತಿಗೆ ಹಿರೇಜಂತಕಲ್ಲು, ನಗರ, ವಿರುಪಾಪುರಗಳು ಕೂಡಿಕೊಂಡಿವೆ. ಈ ತಾಲೂಕಿನಲ್ಲಿ ಸುಮಾರು ೧೫೦ ಹಳ್ಳಿ ಗ್ರಾಮಗಳಿವೆ. ಗಂಗಾವತಿಯ ಉತ್ತರಕ್ಕೆ ಹಿರೇಬೆಣಕಲ್, ಗುಡೂರು, ಆನೆಗೊಂದಿ, ತಿಪ್ಪನಾಳ, ಬಸ್ರಿಹಾಳ್ ಮೊದಲಾದ ಗ್ರಾಮಗಳು ನವ ಮತ್ತು ಬೃಹತ್ ಶಿಲಾಯುಗದ ಸಂಸ್ಕೃತಿಯ ನೂರಾರು ಕಲ್ಗೋರಿ ಮತ್ತು ಗುಹಾಚಿತ್ರಗಳ ಕೇಂದ್ರಗಳಾಗಿ ಪ್ರಖ್ಯಾತವಾಗಿವೆ. ಇಂಥದೇ ಸ್ಮಾರಕಗಳು ಸಿಂಗನಾಳ, ಹೇರೂರು ಗೋನಾಳ, ಜಂತಕಲ್ಲು, ಕಲ್ಗುಡ್ಡಿ, ಕುಂಟೋಜಿ, ಮಲ್ಲಾಪುರಗಳಲ್ಲಿವೆ. ಇತಿಹಾಸ ಯುಗದ ರಾಜ್ಯ, ಸಾಮ್ರಾಜ್ಯಗಳ ಉದಯಕ್ಕೂ ನೈಸರ್ಗಿಕ ಕೋಟೆಯಂಥ ಈ ಪ್ರದೇಶ ಪ್ರಶಸ್ತವಾಗಿತ್ತು. (ಕಂಪಿಲನಿಗೆ ಕುಮ್ಮಟದುರ್ಗ, ವಿಜಯನಗರ ಅರಸರಿಗೆ ಆನೆಗೊಂದಿ, ಕಂಪಿ).

ಪಾಳೇಗಾರರ ರಾಜಧಾನಿಯಾಗಿದ್ದ ಹಿರೇಜಂತಕಲ್ಲಿನಲ್ಲಿ ವಿಜಯನಗರ ಶಿಲ್ಪ ಸೌಂದರ್ಯದಿಂದ, ಅರಳಿರುವದು ಪ್ರಸನ್ನ ಪಂಪಾವತಿ ಮತ್ತು ಹಂಪಮ್ಮನ ಗುಡಿ. ಈ ಗುಡಿಯ ವಿಶಾಲವಾದ ಬಯಲು ಆವರಣದಲ್ಲಿ ಆಂಜನೇಯ, ದುರಗಮ್ಮ, ಗಣಪತಿ, ಮಡ್ಡಾಣೇಶ್ವರ (ಮದ್ದಾನೇಶ್ವರ?) ಮೊದಲಾದ ದೈವಗಳಿವೆ. ಹಿಂದೆ ಕಾಣುವ ಚಂದ್ರಗಿರಿ ಬೆಟ್ಟದಲ್ಲಿ ವೀರಭದ್ರೇಶ್ವರ ದೇಗುಲ ಮತ್ತು ಕೋಟೆಗಳು. ಜೈನ ನಿಶಿದಿಗೆ, ಶಾಸನಗಳು ಇಲ್ಲಿವೆ. ಗಂಗಾವತಿಯ ದಕ್ಷಿಣಕ್ಕೆ ಬರಿ ೩ ಕಿಲೋಮೀಟರ್ ದೂರದಲ್ಲಿ ನದಿದಂಡೆಗೆ ದೇವಖಾತದಲ್ಲಿ

ಕಲ್ಯಾಣಿ ಚಾಲುಕ್ಯರ ಕಾಲದ ಮತ್ತು ಈಚೆಯ ದೇಗುಲಗಳಿವೆ. ಪಶ್ಚಿಮ ದಿಕ್ಕಿನಲ್ಲಿ ಮಣಿಭದ್ರೇಶ್ವರ ಎಂಬ ಪ್ರಾಚೀನ ಪಂಪಾಕ್ಷೇತ್ರದ ಉತ್ತರ ದ್ವಾರವಿದೆ. ಗುಹಾಂತರ್ದೇಗುಲವಿದೆ. ಸುಧಾತೀರ್ಥ, ಪಾಪನಾಶನ ತೀರ್ಥಗಳಿವೆ. ನವ ಬೃಂದಾವನದಲ್ಲಿ ೯ ಯತಿಗಳ ಸಮಾಧಿಗಳಿವೆ. ಸುಗ್ರೀವನು ಅಡಗಿದ್ದ ಚಂಚಲಕೋಟೆ, ಮತ್ತು ವಾಲಿಯ ಸಂಸ್ಕಾರ ಸ್ಥಳ, ವಾಲಿದಿಬ್ಬ ಇವೆಲ್ಲ ರಾಮಾಯಣ ಕಾಲದ ಸ್ಮಾರಕಗಳೆಂದು ಪ್ರತೀತಿಯಿದೆ. ವಿರುಪಾಪುರ ಗಡ್ಡೆ, ಹನುಮಾನ್ ಸೇತುವೆ, ಅಚ್ಯುತಾಶ್ರಮಗಳು ಪ್ರಮುಖ ಸ್ಥಳಗಳಾಗಿವೆ. ಹೀಗೆ ಈ ತಾಲೂಕು ಶಿಲಾಯುಗ, ಪ್ರಾಕ್ ಚಾರಿತ್ರಿಕ, ಮತ್ತು ಚಾರಿತ್ರಿಕ ಯುಗಗಳ ಮಾನವನ ನೆಲೆಗಳಲ್ಲೊಂದಾಗಿ ತುಂಗಭದ್ರೆಯಂತೆ ನಿರಂತರ ಸಾಂಸ್ಕೃತಿಕ ವಾಹಿನಿಯೊಂದರ ಭಾಗವಾಗಿ ಹೆಬ್ಬಂಡೆಯಂತೆ ಅಚಲವಾಗುಳಿದು ಬಂದಿದೆ.

ಗಂಗಾವತಿಯ ಜಾತ್ರೆಗಳು :

ಬಹುತೇಕ ಎಲ್ಲ ಜಾತಿ ಕೋಮುಗಳಿರುವ ಗಂಗಾವತಿಯಲ್ಲಿ ಲಕ್ಷದ ಮೇಲೆ ಜನಸಂಖ್ಯೆಯಿದೆ. ಮಲ್ಲಿಕಾರ್ಜುನ ಮಠದ ಚನ್ನಬಸವಸ್ವಾಮಿಗಳ ಗದ್ದುಗೆ, ಕಲ್ಯಾಣ ಮಂಟಪ, ನಗರೇಶ್ವರ ದೇಗುಲ, ಕಲ್ಯಾಣ ಮಂಟಪ, ರಾಮಮಂದಿರ, ಕಲ್ಯಾಣ ಮಂಟಪ, ಕಲ್ಮಠ-ಕಲ್ಯಾಣ ಮಂಟಪ, ಮರಗಮ್ಮನ ಗುಡಿಗಳು, ಕೊಟ್ಟೂರು-ಬಸವೇಶ್ವರ ಗುಡಿ, ಪ್ರಸನ್ನ ವೆಂಕಟೇಶ್ವರ, ನೀಲಕಂಠೇಶ್ವರ, ಸುಂಕದಕಟ್ಟೆ ಪ್ರಾಣೇಶ, ಹನುಮಂತನ ಗುಡಿಗಳು ಹೀಗೆ ಹಳೆಯ ಮತ್ತು ಹೊಸದಾಗಿ ನಿರ್ಮಿತವಾದ ಹಲವಾರು ದೇಗುಲಗಳು ಈ ಪಟ್ಟಣದಲ್ಲಿವೆ. ಮಂದಿರಗಳೊಂದಿಗೆ ಕಲ್ಯಾಣ ಮಂಟಪಗಳನ್ನು ಕಟ್ಟಿಸುವ ಇಲ್ಲಿಯ ವಿಶೇಷತೆ, ಈ ಊರ ದೊಡ್ಡ ಜಾತ್ರೆಯಾದ ಪಂಪಾವತಿ ಹಂಪಮ್ಮನ ಮದುವೆಯ ಆಚರಣೆಯ ಜತೆ ಮತ್ತು ಭತ್ತದ ಉತ್ಪಾದನೆಯ ಶ್ರೀಮಂತಿಕೆಯ ಜತೆ ವಿಚಿತ್ರ ವಿಧದಲ್ಲಿ ತಳುಕು ಹಾಕಿಕೊಂಡಿರುವುದನ್ನು ಗಮನಿಸಬಹುದು. ಇದಕ್ಕೆ ತನ್ನದೇ ಆದ ವಿಶಿಷ್ಟ ಪರಂಪರೆಯಿದೆ. ಹರಿಹರ ಮಹಾಕವಿ ಹಂಪಿಯಲ್ಲಿ 'ಗಿರಿಜಾಕಲ್ಯಾಣ'ವನ್ನು ಬರೆದ. ಆನೆಗೊಂದಿಯ ಹೊಲದಲ್ಲಿ ದೊರೆತ ೧೩ನೇ ಶತಮಾನದ ತಾಮ್ರಶಾಸನದಲ್ಲಿ 'ವಿವಾಹ ಪುರಾಣ', 'ಅಮೃತ ಮಥನ ಪುರಾಣ'ಗಳಿವೆ. 'ವಿವಾಹ ಪುರಾಣ'ದಲ್ಲಿ ಶಿವಪಾರ್ವತಿಯರ ಲಗ್ನದ ವಿಷಯವಿದೆ. ಕುಂಬಾರ ಕುಲಕ್ಕೆ ಸಂಬಂಧಪಟ್ಟ ವಿಶೇಷ ಸಂಗತಿಗಳಿವೆ.

ಈ ಊರ ಕೆಲವು ದೈವಗಳ ಒಂದು ದಿನದ ಉತ್ಸವಗಳನ್ನು ಹೊರತು ಪಡಿಸಿದರೆ ದೊಡ್ಡ ಪ್ರಮಾಣದ ಜಾತ್ರೆಗಳ ಲೆಕ್ಕದಲ್ಲಿ ನಡೆಯುವಂಥವು ಮೂರು :

೧) ಹಿರೇಜಂತಕಲ್ಲು ಪಂಪಾವತಿ ಹಂಪಮ್ಮನ ಜಾತ್ರೆ
೨) ಮಲ್ಲಿಕಾರ್ಜುನ ಮಠದ ಚನ್ನಬಸವಸ್ವಾಮಿ ಜಾತ್ರೆ
೩) ಕೊಟ್ಟೂರು ಬಸವೇಶ್ವರ ತೇರು.

೧) ಪಂಪಾಪತಿ ಹಂಪಮ್ಮನ ಜಾತ್ರೆ :

ಪ್ರಖ್ಯಾತ ಹಂಪಿ ವಿರುಪಾಕ್ಷ 'ಪಂಪಾಪತಿ'ಯೇ. ಈತನ ಪತ್ನಿ ಹಂಪಮ್ಮ, ಹಂಪಿಯ

ದೊಡ್ಡ ಜಾತ್ರೆಯಲ್ಲಿ ಪ್ರಮುಖ ವಿಧಿಯೆಂದರೆ ಇವರ 'ಮದುವೆ'. ಇದೇ ಬಗೆಯ ಜಾತ್ರೆ ಗಂಗಾವತಿಯಲ್ಲೂ ಇದೆ. ಗಂಗಾವತಿಯ ಆಸುಪಾಸಿನ ಮೂರು ಊರುಗಳು ಈಗ ಗಂಗಾವತಿಗೆ ಸೇರಿಕೊಂಡಿವೆ. ಇವುಗಳಲ್ಲಿ ಹಿರೇಜಂತಕಲ್ಲು ಒಂದು. ಈ ಗ್ರಾಮದ ಕಾಲುವೆ ಪಕ್ಕದ ವಿಶಾಲವಾದ ಬಯಲಿನಲ್ಲಿ ಎರಡು ಮಹಾದ್ವಾರಗಳ ಪಂಪಾಪತಿ ಗುಡಿ. ವಿಜಯನಗರ ಕಾಲದ ವಾಸ್ತುಶಿಲ್ಪದಿಂದ ಕೂಡಿರುವ ಈ ಗುಡಿ ಜಂಬುಕೇಶ್ವರರಾಯನಿಂದ ನಿರ್ಮಾಣವಾಯಿತಂತೆ. ಈತ ಪ್ರತಿದಿನ ಹೊಳೆದಾಟಿ ಹಂಪಿಗೆ ಹೋಗಿ ವಿರುಪಾಕ್ಷನ ದರ್ಶನ ಪಡೆಯುತ್ತಿದ್ದ. ಒಂದುಸಲ ಹೊಳೆ ಬಂದು ನಾಕಾರು ದಿನ ದಾಟದಂತಾಗಿ ಸ್ನಾನ ಊಟವಿಲ್ಲದೆ ಚಿಂತೆಗೊಳಗಾದ. ವಿರುಪಾಕ್ಷ ಅವನ ಕನಸಿನಲ್ಲಿ ಬಂದು 'ಗಂಗಾದೇವಿನ್ನ ತಡೀಲಿಕ್ಕೆ ಆಗಲ್ಲ, ಹಿರೇಜಂತಕಲ್ಲಿನಲ್ಲಿ ನೆನೆಯುತ್ತೇನೆ, ಇನ್ನು ಮುಂದೆ ಅಲ್ಲಿಯೆ ನನ್ನ ದರ್ಶ ಪಡೆ' ಎಂದು ಹೇಳಿದ. ಹೀಗಾಗಿ ಈ ದೇಗುಲ ನಿರ್ಮಾಣವಾಯಿತೆಂದು ಐತಿಹ್ಯ.

ಅಂಗಳದಲ್ಲಿ ಗರುಡಗಂಬ (ದೀಪಸ್ಥಂಭ?) ತೇರಿನ ಪ್ರತ್ಯೇಕ ಕೋಣೆಗಳು. ಉತ್ತರಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಉದ್ಭವಲಿಂಗ. ಪಕ್ಕದ ಗರ್ಭಗೃಹದಲ್ಲಿ ಹಂಪಮ್ಮನ ಶಿಲಾವಿಗ್ರಹ. ನವರಂಗದ ಬಾಗಿಲಲ್ಲಿ ದ್ವಾರಪಾಲಕ ಪ್ರತಿಮೆಗಳು. ಇಲ್ಲಿಯ ೧೨ ಕಂಬಗಳು ಉಬ್ಬುಚಿತ್ರಗಳಿಂದ ಅಂದಗೊಂಡಿವೆ. ದೇವರಿಗೆ ಅಭಿಮುಖವಾಗಿ ಅಂಗಳದಲ್ಲಿ ನಂದಿ ವಿಗ್ರಹ. ಪಕ್ಕಕ್ಕೆ ಅರಳಿಕಟ್ಟೆ, ಪಾದಗಟ್ಟೆಗಳು, ಉತ್ತರ ಮತ್ತು ಪೂರ್ವಕ್ಕೆ ದ್ವಾರಬಾಗಿಲು, ಎರಡೂ ಗರ್ಭಗುಡಿಗಳಿಗೆ ಗೋಪುರ ಕಳಸ, ಗುಡಿಯ ಸುತ್ತ ಕಂಪೌಂಡ್ ಗೋಡೆ.

ಜಾತ್ರೆಯ ಮೊದಲ ದಿನ ಮಾಘ ಶುದ್ಧ ಪ್ರತಿಪದೆಯಂದು ಧ್ವಜಾರೋಹಣ ಮತ್ತು ಕಂಕಣ ಬಂಧನ. ೨೦ ದಿನ ಮೊದಲೆ ಜಾತ್ರೆಯ ವ್ಯವಸ್ಥೆ ನಡೆದಿರುತ್ತದೆ. ಗುಡಿಗಳಿಗೆ ಸುಣ್ಣ ಹುರಮಂಜು ಬಳಿಯುತ್ತಾರೆ. ಊರಿನ ಜನರೂ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಕಾಣಿಸುತ್ತಾರೆ. ತೇರಿನ ರಿಪೇರಿ, ಜಾತ್ರೆಯ ಸಾಮಾನು ಜೋಡಿಸಿಕೊಳ್ಳುವುದು ಮುಂತಾಗಿ ಪೂರ್ವಭಾವಿ ಸಿದ್ಧತೆ, ಜನ ಜಾತ್ರೆಗೆ ತಮ್ಮ ಬಂಧು ಬಳಗವನ್ನು ಕರೆಸಿಕೊಳ್ಳುತ್ತಾರೆ. ಹೊಸಬಟ್ಟೆ ಹೊಲಿಸಿಕೊಳ್ಳುತ್ತಾರೆ.

ಆಗಮೋಕ್ತವಾಗಿ ಪುಣ್ಯಾಹ ವಾಚನ, ಹೋಮ ಹವನ, ಗರುಡಗಂಬದ ಮೇಲೆ ನಂದಿಧ್ವಜ ಹಾರಿಸಲಾಗುತ್ತದೆ. ಪೂಜಾರರು, ಹೋಮಹವನ ಮಾಡುವ ಪುರೋಹಿತರು ಕಂಕಣ ಕಟ್ಟಿಕೊಳ್ಳುತ್ತಾರೆ. ಇದರಿಂದ ಎಲ್ಲ ಕಾರ್ಯಗಳನ್ನು ಸುಗಮವಾಗಿ ಮಾಡುವ, ಯಾವ ವಿಧದ ದೋಷಗಳು ತಗುಲಲಾರವೆಂಬ ನಂಬಿಕೆ ಇದೆ. ಕಂಕಣ ಕಟ್ಟಿಕೊಂಡವರ ಮನೆಯಲ್ಲಿ ಸಾವು ಉಂಟಾದರೆ, ಹೆರಿಗೆಯಾದರೆ ದೋಷ ಬರಲಾರದೆಂದು ಹೇಳುತ್ತಾರೆ. ಆದರೆ ಕಂಕಣ ಕಟ್ಟಿಕೊಂಡವನ ಧರ್ಮಪತ್ನಿ ಅಥವಾ ತಂದೆ ತಾಯಿ ತೀರಿದರೆ ದೋಷವಿದೆ. (ಕುಷ್ಟಗಿ ಬಸಣ್ಣ-"ನಮ್ಮೂರ ಜಾತ್ರೆ") ಪೂಜಾರಿ ೭ ದಿವಸ ಉಪವಾಸವಿರುತ್ತಾನೆ. ಕಾಲುವೆಗೆ ಹೋಗಿ ಮಣ್ಣುತಂದು ಅಂಕುರಾರ್ಪಣೆ ಮಾಡುವುದು. ಅಂದರೆ ಒಂಬತ್ತು ವಿಧದ ಧಾನ್ಯಗಳನ್ನು ಬಿತ್ತುತ್ತಾರೆ. ಹೀಗೆ ಪಾಡ್ಯದಂದು ಪ್ರಾರಂಭಿಸಿ ೮೬ಳ ದೇವರಿಗೆ ೮೬ಳ ಮುಟ್ಟಿಗೆ ಅನ್ನ ತುಪ್ಪ,

ಅರಳಿಕಟ್ಟಿಗೆಗಳನ್ನು ೭ ದಿನಗಳವರೆಗೂ ಹೋಮ ಮಾಡುತ್ತಾರೆ. ೨೭ ಕಳಸಗಳು ಪ್ರತಿಷ್ಠಾಪನೆಗೊಳ್ಳುತ್ತವೆ.

ಮಾಘ ಶುದ್ಧ ದ್ವಿತೀಯೆಯಂದು ಹೂವಿನ ಮಂಟಪದಲ್ಲಿ ಉತ್ಸವಮೂರ್ತಿ ಯನ್ನಿಟ್ಟು ಗುಡಿಯಿಂದ ಪಾದಗಟ್ಟೆಯವರೆಗೆ ಹೋಗಿ ಬರುವ ಕಾರ್ಯಕ್ರಮ. ಪ್ರತಿದಿನದ ಈ ಉತ್ಸವಗಳು ಉಚ್ಚಾಯದಲ್ಲಿ ಬಾಜಾಬಜಂತ್ರಿಯೊಂದಿಗೆ ನಡೆಯುತ್ತವೆ. ಉತ್ಸವ ಹೊರುವ, ದೀವಟಿಗೆ ಹಿಡಿಯುವ ಆರು ಜನ ತಾಮಾಟೆಗಳು ಬಾಬುದಾರರು. ಇವರು ಸುಣಗಾರ ಕುಲದವರು ಮತ್ತಿತರರು. ಹನ್ನೆರಡು ಜನ ವಾಲ್ಮೀಕಿ ಕುಲದವರು ತೇರೆಳೆವ ಬಾಬುದಾರರು. ಇವರು ತೇರು ಕಟ್ಟುವ, ಗುಮ್ಮಟ, ಕಳಸ ಇಡುವ ಹಕ್ಕುದಾರರು. ಹತ್ತು ಜನ ಬಾಜಾಬಜಂತ್ರಿಯವರೂ ಬಾಬುದಾರರೇ. ಜತೆಗೆ ಗುಡಿಯ ಇತರ ಸೇವಕ ವರ್ಗವಿದೆ. ಅಂದು ರಾತ್ರಿ ನವಿಲಿನ ಉತ್ಸವ.

ಮೂರನೇ ದಿನ(ತೃತೀಯ) ಹಗಲು ಹೊತ್ತು ಹಿಂದಲ ರಾತ್ರಿ ನಡೆಸಿದ ನವಿಲು ವಾಹನ ಉತ್ಸವ ಮತ್ತೆ ನಡೆಯುತ್ತದೆ. ರಾತ್ರಿ ಹಂಸವಾಹನೋತ್ಸವ. ನಾಲ್ಕನೆಯ ದಿನ ಹಗಲು ಹಂಸದ ಮೇಲೆ ರಾತ್ರಿ ಆದಿಶೇಷನ ಮೇಲೆ ಉತ್ಸವಮೂರ್ತಿ ಇಟ್ಟು 'ಉಚ್ಚಾಯ'. ೫ನೇ ದಿನ ಹಗಲಿನಲ್ಲಿ ಆದಿಶೇಷನ ಮೇಲೆ ರಾತ್ರಿ ನಂದಿವಾಹನೋತ್ಸವ. ೬ನೇ ದಿನ ಹಗಲಿನಲ್ಲಿ ನಂದಿ ಮೇಲೆ, ರಾತ್ರಿ ಆನೆಯ ಮೇಲೆ ಉತ್ಸವ. ಈ ಎಲ್ಲ ಉಚ್ಚಾಯಗಳಿಗೆ ಕಟ್ಟಿಗೆಯಿಂದ ಮಾಡಿದ ನವಿಲು, ಆನೆ, ಹಾವು ಮುಂತಾದ ವಾಹನಗಳನ್ನು ಬಳಸುತ್ತಾರೆ. ಈ ಉತ್ಸವ ತಮ್ಮ ಮನೆ ಮುಂದೆ ಬಂದಾಗ ಭಕ್ತರು ನೀರುಹಾಕಿ ಕಾಯಿ ಕರ್ಪೂರ ಮಾಡಿಸುತ್ತಾರೆ. ಪಂಚಮಿಯ ದಿನ ಕಲ್ಯಾಣೋತ್ಸವ. ಗಂಡಿನ ಕಡೆ, ಹೆಣ್ಣಿನ ಕಡೆ ಎರಡು ಗುಂಪಾಗಿ, ಕನ್ಯಾ ನೋಡಲಿಕ್ಕೆ ಬರುವುದರಿಂದ ಶುರುಮಾಡಿ ಲಗ್ನದ ಎಲ್ಲ ವಿಧಿಗಳನ್ನು ಪಂಪಾಪತಿ ಹಂಪಮ್ಮನಿಗೆ ಪೂರೈಸುತ್ತಾರೆ. ದೇವಸ್ಥಾನದ ಕಾರ್ಯದರ್ಶಿ ವರನ ಕಡೆ, ಪುರೋಹಿತರು ಕನ್ಯೆಯ ಕಡೆಯವರಾಗುತ್ತಾರೆ. ಮದುವೆಯ ನಂತರ ದೇವಸ್ಥಾನದ ಸುತ್ತ ವಧುವರರ ಮೆರವಣಿಗೆ. ಜಾತ್ರೆಯ ೯ ದಿನಗಳವರೆಗೂ ಪ್ರತಿದಿವಸ ಕುಂಕುಮ ಬೆರಿಸಿದ ಅನ್ನವನ್ನು (ಬಲಿ ಉತ್ಸವ) ಉಚ್ಚಾಯ ಹೋಗಿ ಬರುವ ಎಲ್ಲ ಸ್ಥಾನದಲ್ಲಿ ಹಾಕಿಬರುತ್ತಾರೆ. ಪ್ರತಿದಿವಸ ದೇಗುಲದ ಎಲ್ಲ ಸೇವಕರಿಗೆ ಮತ್ತು ಲಗ್ನದ ದಿವಸ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಇರುತ್ತದೆ.

ಸಪ್ತಮಿಯಂದು ಮಧ್ಯಾಹ್ನ ಬ್ರಹ್ಮರಥೋತ್ಸವ. ವೇದಮಂತ್ರ ಘೋಷ, ಯಜ್ಞಯಾಗಾದಿ ನಡೆದು ಒಂದು ಗಂಟೆಯ ಹೊತ್ತಿಗೆ ರಥವನ್ನು ಐದು ಉರುಳಿಕಿ ಜಗ್ಗುತ್ತಾರೆ. "ಈ ದಿನ ತೇರಿನ ಹತ್ತಿರ ಹೋಮ ಮಾಡುವಾಗ ಎಲ್ಲಾ ತರಹದ ಕಾಮ ಭಾವನೆಯನ್ನು ಮಂತ್ರದ ಮೂಲಕ ಹೇಳಿ ಹೋಮದಲ್ಲಿ ಅರ್ಪಣೆ ಮಾಡುತ್ತಾರೆ. ಕಾಮ ಭಾವನೆ ಎಂದರೆ "ನಾನು ಮಾತಾಪಿತೃ ನಿಧನದ ದಿವಸ ಮತ್ತು ದಿನದ ಹಗಲಿನ ವೇಳೆಯಲ್ಲಿ, ಹುಣ್ಣಿಮೆ, ಅಮವಾಸ್ಯೆಗಳಂದು ಸ್ತ್ರೀ ಸಂಗವನ್ನು ಮಾಡುವುದಿಲ್ಲ" ಎಂಬ ಪ್ರತಿಜ್ಞೆ. (ಮೇಲೆ ಹೇಳಿದ ಪುಸ್ತಕ ಪು. ೧೫) ಸಂಜೆ ಸಾರ್ವಜನಿಕರೆಲ್ಲ ಸೇರಿ ಪಾದಗಟ್ಟೆಯವರೆಗೆ ರಥ ಎಳೆಯುತ್ತಾರೆ. ಆಗ ೫೦-೬೦ ಸಾವಿರದವರೆಗೆ ಜನ ಸೇರುತ್ತಾರೆ. ನಾನಾ ತರದ ಅಂಗಡಿಗಳು ಬಂದಿರುತ್ತವೆ.

ಪಾಡ್ಯದಿಂದ ಸಪ್ತಮಿಯವರೆಗೆ ಪುರೋಹಿತರು ಹಣ್ಣು, ಹಾಲು ಮಾತ್ರ ಸೇವಿಸಿ ಉಪವಾಸವಿರುತ್ತಾರೆ. ಪಾಡ್ಯದಂದು ಹೊತ್ತಿಸಿದ ಹೋಮ ಆರದಂತೆ ತುಪ್ಪ ಹಾಕುತ್ತಿರುತ್ತಾರೆ.

ತೇರಿನ ಮರುದಿನ ಅಷ್ಟಮಿಯಂದು ಅಶ್ವವಾಹನೋತ್ಸವ, ಮೃಗಯಾವಿಹಾರ, ಪ್ರೇಮಕಲಹದ ವಿಧಿಯಾಚರಣೆಗಳು (ಕಡುಬಿನ ಕಾಳಗ) ಪಂಪಾಪತಿ ಬೇಟೆಯಾಡಲು ಹೊರಡುತ್ತಾನೆ. (ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನು ಕೊಂಡೊಯ್ಯುತ್ತಾರೆ) ಇತ್ತ ಹಂಪಮ್ಮ ಬಾಗಿಲು ಹಾಕಿಕೊಳ್ಳುತ್ತಾಳೆ. ಬೇಟೆಯಿಂದ ತಿರುಗಿ ಬಂದು ಬಾಗಿಲು ತೆರೆಯಲು ಕೇಳುತ್ತಾನೆ. ಆಕೆ ತೆರೆಯುವುದಿಲ್ಲ. ಈ ಸಂದರ್ಭದಲ್ಲಿ ಪುರೋಹಿತರು ಗಂಡ ಹೆಂಡರ ಜಗಳವನ್ನು ಅನುಕರಿಸುತ್ತಾರೆ. ಗಂಡ-ನಾನು ಸ್ಥಾಣು ಬಂದಿದ್ದೇನೆ, ಬಾಗಿಲು ತೆಗೆ.

ಹೆಂಡತಿ ಹಂಪಮ್ಮ : ಸ್ಥಾಣುವೆಂದರೆ ಮಂಡ ಬಡ್ಡೆ, ಅದಕ್ಕೇನು ಇಲ್ಲಿ ಕೆಲಸವಿಲ್ಲ.

ಪಂಪಾಪತಿ : ನಾನು ನೀಲಕಂಠ ಬಂದಿದ್ದೇನೆ.

ಹಂಪಮ್ಮ : ನೀಲಕಂಠ ಎಂದರೆ ನವಿಲು. ಅದರ ಅವಶ್ಯಕತೆ ಇಲ್ಲ.

ಪಂಪಾಪತಿ : ನಾನು ಗಂಗಾಧರ ಬಂದಿದ್ದೇನೆ.

ಹಂಪಮ್ಮ : ನೀರು ಹೊರುವವ ನನಗೆ ಬೇಕಾಗಿಲ್ಲ. ಈಗ ಬೇಕಾದಷ್ಟು ನಳ (ನಲ್ಲಿ) ಬಂದಿವೆ.

ಪಂಪಾಪತಿ : ನಾನು ನಿನ್ನ ಪತಿ ಪಂಪಾಪತಿ ಬಂದಿದ್ದೇನೆ ಬಾಗಿಲು ತೆಗೆ.

ಹಂಪಮ್ಮ : ಮೋಜಿಗಾಗಿ ನಾನು ಈ ರೀತಿ ಪೀಡಿಸಿದೆ ಎಂದು ಬಾಗಿಲು ತೆಗೆಯುತ್ತಾಳೆ. ಈ ಸಂದರ್ಭ ಎರಡು ಪಾಲಿಕಿಗಳಲ್ಲಿರುವ ಉತ್ಸವ ಮೂರ್ತಿಗಳನ್ನು ಆಂಜನೇಯ ಗುಡಿಯ ಅಂಗಳದಲ್ಲಿ ಇಳಿಸಿದಾಗ ನಡೆಯುವಂಥದು. ಕೊನೆಗೆ ಎರಡೂ ಮೂರ್ತಿಗಳನ್ನು ಒಂದೇ ಪಲ್ಲಕ್ಕಿಯಲ್ಲಿಟ್ಟುಕೊಂಡು ಬರುತ್ತಾರೆ.

ನವಮಿಯಂದು ಅವಭೃತ (ಓಕುಳಿ) ಮತ್ತು ಪೂರ್ಣಾಹುತಿ. ದೇವರನ್ನು ಪಾಲಿಕಿಯಲ್ಲಿ ಕಾಲುವೆ ದಂಡೆಗೆ ಒಯ್ದು ಕೂಡಿಸಿ ಹೋಮಮಾಡಿ ಸ್ನಾನ ಮಾಡಿ ಓಕುಳಿಯಾಡುತ್ತಾರೆ. ಹೋಮದ ಮುಕ್ತಾಯ ಮಾಡಿ ಕಂಕಣ ಬಿಚ್ಚುತ್ತಾರೆ. ಪೂಜಾರಿ ಪುರೋಹಿತರು ಬ್ರಾಹ್ಮಣರಿರುವುದರಿಂದ ಹೋಮ ಹವನಾದಿಗಳ ಸಹಿತ ಎಲ್ಲ ಕಾರ್ಯಕ್ರಮ ನಡೆಯುತ್ತವೆ.

ಪ್ರತಿದಿನ ಪೂಜೆಯಿದ್ದರೂ ಊರ ಹೊರಗೆ ಇರುವ ಈ ದೇಗುಲದಲ್ಲಿ ಹೇಳಿಕೊಳ್ಳುವ ಆದಾಯವಿಲ್ಲ ಎಂದು ಪೂಜಾರಿಗಳು ಹೇಳುತ್ತಾರೆ. ಬಿಡಿದಿನಗಳಲ್ಲಿ ಭಕ್ತರು ಬರುವುದು ಕಡಿಮೆ. ಕಾರ್ತಿಕ ಮಾಸದಲ್ಲಿ ಮೊದಲು ಅಭಿಷೇಕ, ನೈವೇದ್ಯ, ದೀಪೋತ್ಸವಗಳು ವಿಜ್ರಂಭಣೆಯಿಂದ ಜರುಗುತ್ತಿದ್ದವು. ಈಗ ಇಲ್ಲ. ಆಗಾಗ ಬೇಡಿಕೊಂಡ ಭಕ್ತರು ಹಂಪಮ್ಮನಿಗೆ ಹೊಸ ಸೀರೆ ತಂದು ಉಡಿ ತುಂಬಿಸುವ ಕಾರ್ಯ ಮಾಡಿಸುತ್ತಾರೆ.

ಈಚೆಗೆ ೬ ದಿನ ಅತಿ ರುದ್ರಯಾಗವನ್ನು ಮಾಡಿ ೮-೧೦ ಲಕ್ಷ ರೂಪಾಯಿ ವೆಚ್ಚ ಮಾಡಲಾಗಿದೆ. ೧೮೬ ಬ್ರಾಹ್ಮಣರು ಪ್ರತಿದಿನ ೨೧ ಹೋಮಕುಂಡಗಳಲ್ಲಿ ಯಾಗ ಮಾಡಿದ್ದಾರೆ. ೧ ಲಕ್ಷ ೨೧ ಸಾವಿರ ಮೋದಕಗಳಿಂದ ಗಣಪತಿ ಹೋಮ, ನವಗ್ರಹ ಹೋಮ, ಗಾಯತ್ರಿ ಹೋಮ, ಶತಚಂಡಿ ಹೋಮ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅನ್ನಸಂತರ್ಪಣೆ, ಸಂಗೀತ ಕಾರ್ಯಕ್ರಮ ವೇದಾಂತ ಪ್ರವಚನ ನಡೆದಿವೆ. ಅತಿರುದ್ರಯಾಗದ ಸೇವಾ ಖರ್ಚು ೬ ದಿನ ೧೧ ಹೋಮ ಕುಂಡಗಳಲ್ಲಿ ಮಾಡಬೇಕಾದರೆ ೩, ೮೨,೫೦೦ ರೂ. ಕೊಡಬೇಕು. ಆರು ದಿನ ಒಂದು ಹೋಮ ಕುಂಡಕ್ಕೆ ೩೪,೮೦೦ ರೂ. ೧ ದಿನಕ್ಕೆ ೫,೮೦೦ ರೂ. ಆರು ದಿನಗಳ ಗಾಯತ್ರಿ ಹೋಮಕ್ಕೆ ೩೦,೦೦೦ ರೂ. ಈ ರೀತಿ ರೇಟುಗಳಿವೆ.

ಬುತ್ತಿ ಪೂಜೆ :

ಪಂಪಾಪತಿಗೆ ಬೇಸಗೆಯಲ್ಲಿ ಅತಿಪ್ರಿಯವಾದದ್ದು ಬುತ್ತಿ. ಬೇಡಿಕೊಂಡ ಭಕ್ತರು ಆರು ಸೇರು ಅಕ್ಕಿ ಅನ್ನ, ಆರು ಲೀಟರು ಹಾಲು, ಆರು ಲೀಟರು ಮೊಸರು, ಕಾಲು ಕೇಜಿ ಬೆಣ್ಣೆ ಯಾಲಕ್ಕಿ ಪುಡಿ ಕೊಡುತ್ತಾರೆ. ಅದನ್ನೆಲ್ಲ ಕಲೆಸಿ ಪಂಪಾಪತಿಗೆ (ಲಿಂಗಕ್ಕೆ) ಲೇಪಿಸುತ್ತಾರೆ. ಸಂಕಲ್ಪಮಾಡಿ, ಅಭಿಷೇಕವಾದ ನಂತರ ಸಹಸ್ರನಾಮ ಹೇಳಿ ಮೂರ್ತಿಗೆ ಲೇಪಿಸಿದ ಈ ಅನ್ನಕ್ಕೆ ಅಲಂಕಾರ ಮಾಡಿ ಪೂಜಿಸಿ ಕಾಯಿ ಕರ್ಪೂರ ಮಂಗಳಾರತಿಯಾದ ನಂತರ ಅದನ್ನು ಪ್ರಸಾದವಾಗಿ ಹಂಚುತ್ತಾರೆ. ಮಕ್ಕಳಾಗದವರು ಈ ಬುತ್ತಿ ತಿಂದರೆ ಸಂತಾನಫಲ ಪ್ರಾಪ್ತಿ. ಪ್ರಸಾದ ಹಂಚಿ ಉಳಿದ ಅನ್ನವನ್ನು ಪೂಜಾರಿಗಳು ತೆಗೆದುಕೊಳ್ಳುತ್ತಾರೆ.

ವರ್ಷದ ಇತರ ಆಚರಣೆಗಳೆಂದರೆ ಶಿವರಾತ್ರಿಯಂದು ಜಾಗರಣೆ, ಭಜನೆ, ಮರುದಿನ ಊರವರಿಗೆ ಊಟ. ಯುಗಾದಿಗೆ ಪಂಚಾಂಗ ಶ್ರವಣ, ನವರಾತ್ರಿಯಲ್ಲಿ ೯ ದಿನ ದೀಪ ಹಾಕುವುದು, ಬನ್ನಿಮುಡಿಯುವುದು. ದೇವರಿಗೆ ಮುಸ್ಲಿಂರು ಮೊದಲುಗೊಂಡು ಎಲ್ಲ ಜಾತಿಯವರು 'ನಡಕೊಳ್ಳುತ್ತಾರೆ' ಜಾತ್ರೆಯ ಸಂದರ್ಭದಲ್ಲಿ 'ಗಿರಿಜಾಕಲ್ಯಾಣ', 'ದಕ್ಷಯಜ್ಞ', 'ಮಾರ್ಕಂಡೇಯ' 'ಅಭಿಮನ್ಯು ಕಾಳಗ' ಮೊದಲಾದ ಬಯಲಾಟ ವಾಡುತ್ತಾರೆ.

ಮಲ್ಲಿಕಾರ್ಜುನ ಮಠ, ಚನ್ನಬಸವಸ್ವಾಮಿ ತೇರು :

ಕೆಲವು ಶತಮಾನಗಳ ಹಿಂದೆ ಇಳಕಲ್ಲಿನ ಚಿತ್ತರಗಿ ಮಠದಲ್ಲಿ ಮಹಂತ ಸ್ವಾಮಿಗಳು, ಅನ್ನದಾನ ಸ್ವಾಮಿಗಳ ಜತೆ ಕೊಟ್ಟೂರುಸ್ವಾಮಿಗಳು ದೇಶ ಸಂಚರಿಸುತ್ತ ಗಂಗಾವತಿಗೆ ಬಂದರು. ಆಗ ಗಂಗಾವತಿ ನಿಜಾಮನ ಆಳ್ವಿಕೆಗೊಳಪಟ್ಟಿತ್ತು. ಕೊಟ್ಟೂರುಸ್ವಾಮಿಗಳು ಗಂಗಾವತಿಯ ಹತ್ತಿರ ಇರುವ ಗುಡ್ಡದ ಗುಹೆಯಲ್ಲಿದ್ದ ದಿಗಂಬರ ಯೋಗಿಗಳಿಂದ ಆಶೀರ್ವದಿತರಾಗಿ, ಗಂಗಾವತಿಯ ಕಲ್ಮಠದ ಗುರುಪರಂಪರೆ ಪ್ರಾರಂಭಿಸಿದರು. ಈ ಪರಂಪರೆಯ ೭ನೇ ಗುರುಗಳು ಚನ್ನಬಸವಸ್ವಾಮಿ. ಬಾಗಲಕೋಟೆ ತಾಲೂಕು ಶಿರೂರು ಗ್ರಾಮದ ಈ 'ತಾತ' ಸರಳಜೀವಿ. ಜಾತಿಮತ ಪಂಥವೆಣಿಸದೆ, ದೀನ ದುರ್ಬಲರ ಸೇವೆ ಮಾಡುತ್ತ, ಮಠದಲ್ಲಿ ತಾವೇ ಎಲ್ಲ ಕೆಲಸ ಮಾಡಿಕೊಳ್ಳುತ್ತಿದ್ದರು. ಕಲ್ಮಠದ ಉತ್ತರಾಧಿಕಾರಿಗಳಾದ ಪತ್ರಯ್ಯಸ್ವಾಮಿಗಳಿಗೂ

ಇವರಿಗೂ ತಾತ್ತ್ವಿಕ ಭಿನ್ನಾಭಿಪ್ರಾಯ ವಾಗಿ ಮಠ ಬಿಟ್ಟು ಊರ ಹೊರಗೆ ಹರಿಯುತ್ತಿದ್ದ ಮರಗಮ್ಮನ ಹಳ್ಳದ ಹತ್ತಿರ, ಜಾಲಿ, ಎಕ್ಕಿ, ಪಾಪಾಸು, ಈಚಲು ಕಡಿಸಿ ಸಣ್ಣ ಗುಡಿಸಲು ಹಾಕಿಕೊಂಡು ನಿಂತರು. ಭಕ್ತರ ಸಂಖ್ಯೆ ಬೆಳೆದಂತೆ ಶ್ರೀಶೈಲದ ಮಲ್ಲಿಕಾರ್ಜುನನ ಹೆಸರಿನ ಗುಡಿ ಕಟ್ಟಿಸಿದರು. ಕಾಯಕ, ದಾಸೋಹ ಮತ್ತು ಪೂಜೆಗಳಿಗೆ ಅನುಕೂಲವಾಗುವಂತೆ ಕಟ್ಟಡಗಳೆದ್ದವು. ಈಗ ಈ ಪ್ರದೇಶ ಗಂಗಾವತಿಯ ಮುಖ್ಯ ಭಾಗವಾಗಿದ್ದು, ಅಜ್ಜನವರ ಸಮಾಧಿ ಕಟ್ಟಡ, ಕೋಟಿರೂಪಾಯಿ ವೆಚ್ಚದ ಕಲ್ಯಾಣ ಮಂಟಪ, ಅಡುಗೆ ಮನೆ, ಪ್ರಸಾದ ನಿಲಯ, ಪೂಜಾಗೃಹ, ವ್ಯಾಪಾರಿ ಮಳಿಗೆ ಮುಂತಾದವನ್ನು ಒಳಗೊಂಡಿದೆ. ೧೯೪೫ರಲ್ಲಿ ತೀರಿದ ತಾತನವರನ್ನು ಕಂಡವರಿದ್ದಾರೆ. ತಾತನವರೇ ನೇಮಿಸಿದ ಕಮಿಟಿ ಮಠದ ವ್ಯವಹಾರ ನೋಡಿಕೊಳ್ಳುತ್ತಿದೆ. ಸ್ವಾಮಿಗಳ ಹೆಸರಿನಲ್ಲಿ ಗಂಗಾವತಿಯಲ್ಲಿ APMCಯಲ್ಲಿ ಮಂದಿರ, ಚನ್ನಬಸವಸ್ವಾಮಿ ವೃತ್ತ, ಅಯೋಧ್ಯೆಯಲ್ಲಿ ಮಠ, ಶಾಲೆ, ಕಾಲೇಜುಗಳಾಗಿವೆ.

ಮಠದ ಗರ್ಭಗೃಹದಲ್ಲಿ ಗದ್ದುಗೆಯ ಮೇಲೆ ಚನ್ನಬಸವಸ್ವಾಮಿಗಳ ಕಪ್ಪು ಶಿಲಾವಿಗ್ರಹವಿದೆ. ಮೂವತ್ತು ವರ್ಷದೀಚೆ ಕಟ್ಟಿಸಿದ ಈ ಮಠ ವಿಶಾಲವಾದ ಆಧುನಿಕ ರಚನೆ. ಗದ್ದುಗೆಯ ಮೇಲೆ ಧಾರಾಪಾತ್ರೆ. ಮೂರ್ತಿಗೆ ಬೆಳ್ಳಿಕಣ್ಣು, ಗದ್ದುಗೆಯ ಕೆಳಭಾಗದಲ್ಲಿ ತಾತನ ಸಮಾಧಿ. ಹಾವುಗೆ ಇಟ್ಟಿದ್ದಾರೆ. ಮಠದ ಪಕ್ಕದಲ್ಲಿ ಪೂವಾಭಿಮುಖವಾಗಿ ಮಲ್ಲಿಕಾರ್ಜುನ ಗುಡಿ, ಗರ್ಭಗುಡಿಯ ನೆಲದ ಮೇಲೆ ಲಿಂಗವಿದೆ. ತ್ರಿಶೂಲ ನೆಟ್ಟಿದ್ದಾರೆ. ಧಾರಾಪಾತ್ರೆ, ತೂಗುದೀಪಗಳಿವೆ. ಅಂಗಳದಲ್ಲಿ ಬನ್ನಿ, ಬೇವಿನ ಕಟ್ಟೆ, ನಂದಿ ವಿಗ್ರಹ, ನಾಗನಕಲ್ಲುಗಳು. ಬನ್ನಿಗಿಡಕ್ಕೆ ಸೀರೆಯುಡಿಸಿದ್ದಾರೆ. "ಚನ್ನಮಲ್ಲಿಕಾರ್ಜುನನ ಟ್ರಸ್ಟ್ ಕಮಿಟಿ" ಆಫೀಸಿದೆ. ಉತ್ತರ, ಪಶ್ಚಿಮ ದಿಕ್ಕಿಗೆ ದ್ವಾರ ಬಾಗಿಲಿವೆ. ಅಂಗಳದಲ್ಲಿ ೧ ಲಕ್ಷ ೮೦ ಸಾವಿರ ರೂಪಾಯಿ ವೆಚ್ಚದಲ್ಲಿ ನಿಲ್ಲಿಸಲಾದ ಲಿಂಗಸ್ಥಂಭವಿದೆ.

ಪುಷ್ಯ ಶುದ್ಧ ತ್ರಯೋದಶಿ (ಡಿಸೆಂಬರ-ಜನೇವರಿ)ಯಿಂದ ಮೂರು ದಿವಸ ಜಾತ್ರೆ. ಒಂದು ತಿಂಗಳಿಂದ ಪುರಾಣ ಪ್ರವಚನವಿಟ್ಟು ಅದರ ಮಂಗಲದ ಸಂದರ್ಭದಲ್ಲಿ ಜಾತ್ರೆಯಿರುತ್ತದೆ. ವೀರೇಶ್ವರ, ಸಿದ್ಧರಾಮೇಶ್ವರ, ಗವಿಸಿದ್ದೇಶ್ವರ, ಚಳ್ಳಗುರ್ಕಿ ತಾತ, ಚನ್ನಬಸವ ತಾತ (ಪುಟ್ಟರಾಜ ಗವಾಯಿಗಳು ೧೯೭೮ರಲ್ಲಿ ಭಾಮಿನಿ ಷಟ್ಪದಿಯಲ್ಲಿ ಪುರಾಣ ರಚಿಸಿದ್ದಾರೆ) ಇವರಲ್ಲಿ ಯಾರೊ ಒಬ್ಬರ ಪುರಾಣವನ್ನು ಹಚ್ಚಿರುತ್ತಾರೆ.

ಜಾತ್ರೆಯ ಐದುದಿನ ಮೊದಲು ರಥಕ್ಕೆ ಕಳಸಾರೋಹಣವಾಗಿರುತ್ತದೆ. ಕಳಸವನ್ನು ಅಲ್ಲಾಭಕ್ಷ ಎಂಬ ಮುಸ್ಲಿಂ ಭಕ್ತರು ಕೊಡಿಸಿದ್ದಾರೆ. ಏಕಾದಶಿಯಂದು ಉಚ್ಚಯ್ಯ. ದ್ವಾದಶಿಯಂದು ಅಡ್ಡಪಾಲಿಕಿ (ಹೂವಿನ ಪಾಲಿಕಿ) ಉತ್ಸವ, ತ್ರಯೋದಶಿಯಂದು ರಥೋತ್ಸವ.

ಉಚ್ಚಯ್ಯ :

ಪಲ್ಲಕ್ಕಿಯಲ್ಲಿ ತಾತನ ಉತ್ಸವಮೂರ್ತಿಯನ್ನಿಟ್ಟು ಮೆರವಣಿಗೆಯಲ್ಲಿ ಮಠದಿಂದ ಊರಲ್ಲಿರುವ ಕಲ್ಮಠದವರೆಗೆ ಗಾಂಧಿ ಚೌಕದ ಮೂಲಕ ಬರುತ್ತಾರೆ. ಕಲ್ಮಠದಲ್ಲಿ ಪೂಜೆ,

ಕಾಯಿ ಕರ್ಪೂರವಾಗುತ್ತದೆ. ತಮ್ಮ ಮನೆಗಳ ಮುಂದೆ ಪಲ್ಲಕ್ಕಿ ಬಂದಾಗ ಭಕ್ತರು ನೀರು ಹಾಕಿ ಪೂಜಿಸಿ, ಕಾಯಿ, ಕರ್ಪೂರ ಮಾಡುತ್ತಾರೆ. ಡೊಳ್ಳು, ಬಾಜಾ ಬಜಂತ್ರಿಯ ವಾದ್ಯಮೇಳವಿರುತ್ತದೆ. ಮಹಿಳೆಯರು ಕಳಸ ಕನ್ನಡಿಯೊಂದಿಗಿರುತ್ತಾರೆ.

ಅಡ್ಡಪಲ್ಲಕ್ಕಿ :

ಎರಡನೆ ದಿನ ನಾನಾ ತರದ ಹೂಗಳಿಂದ ಪಲ್ಲಕ್ಕಿಯನ್ನು ಅಲಂಕರಿಸಿ ತಾತನ ಬೆಳ್ಳಿಯ ಉತ್ಸವಮೂರ್ತಿಯನ್ನಿಟ್ಟು ಸಾವಿರ ರೂಪಾಯಿಗಳ ವಿಶೇಷ ಹಾರ ಹಾಕಿ ಮೆರವಣಿಗೆಯ ಮೂಲಕ ಕಲ್ಮಠಕ್ಕೆ ಬರುತ್ತಾರೆ. ರಾತ್ರಿ ೯ಕ್ಕೆ ಪ್ರಾರಂಭವಾಗುವ ಈ ಮೆರವಣಿಗೆ ಕಲ್ಮಠಕ್ಕೆ ಹೋಗಿ ತಿರುಗಿ ಬರಬೇಕಾದರೆ ಬೆಳಗಿನ ಮೂರು ಗಂಟೆಯಾಗುತ್ತದೆ. ಹಿಂದಿಗಿರಿದ ನಂತರ ಮೂರ್ತಿಗೆ ಹಾಕಿದ ಹಾರವನ್ನು ಹರಾಜು ಮಾಡುತ್ತಾರೆ. ಈ ವರ್ಷ(೧೯೯೯) ಅದು ೫೫ ಸಾವಿರ ರೂಪಾಯಿಗೆ ಹರಾಜಾಗಿದೆ. ಹರಾಜಿನಲ್ಲಿ ಗೆದ್ದವರಿಗೆ ಹಾರ ಹಾಕಿ ಅವರ ಮನೆಯ ಜಗಲಿಯ ಮೇಲಿಡುತ್ತಾರೆ. ಇದರಿಂದ ಅವರ ಸಂಕಲ್ಪ ನೆರವೇರುತ್ತದೆಂಬ ನಂಬುಗೆ.

ಮೂರನೇ ದಿನ ಮಲ್ಲಿಕಾರ್ಜುನ ಲಿಂಗಕ್ಕೆ ಮಹಾರುದ್ರಾಭಿಷೇಕ, ಸಹಸ್ರನಾಮಾವಳಿ. ಬೆಳಿಗ್ಗೆ ೯ಕ್ಕೆ ಪುರಾಣ ಪ್ರವಚನ ಮುಕ್ತಾಯ ಮಾಡಲಾಗುತ್ತದೆ. ಮುಂದಿನ ವರ್ಷದ ಪುರಾಣದ ಕೆಲವು ನುಡಿಗಳನ್ನು ಹೇಳಿ ಪ್ರಾರಂಭವನ್ನೂ ಮಾಡಲಾಗುತ್ತದೆ. ಬೆಳಿಗ್ಗೆ ೧೧ ಗಂಟೆಗೆ ಮಡಿತೇರು. ಮಹತ್ವದ ಜನ ಮಾತ್ರ ಮಡಿಹುಡಿಯಿಂದ ೫ ಉಳಿಕಿ ತೇರೆಳೆಯುತ್ತಾರೆ. ತೇರೆಳೆಯುವವರೆಗೆ ಎಳೆವ ಜನ ಬಾಯಲ್ಲಿ ನೀರು ಕೂಡ ಹಾಕದಂತೆ ಮಡಿಯಲ್ಲಿರುತ್ತಾರೆ. ಹನ್ನೆರಡಕ್ಕೆ ಭೂರಿ ಗಣಾರಾಧನೆ. ಸಾರ್ವಜನಿಕರಿಗೆ ಪ್ರಸಾದ. ಲಡ್ಡು, ಅನ್ನ, ಸಾರಿನ ಊಟ. ಸಂಜೆ ೪ ಗಂಟೆಗೆ ಮಠದಿಂದ ಗಾಂಧಿ ಚೌಕದವರೆಗೆ ಮಹಾರಥವೆಳೆಯುತ್ತಾರೆ. ಇದರ ಮುಂದೆ ಸಣ್ಣ ತೇರೆಳೆಯುತ್ತ ಬಸವಣ್ಣನ ಸರ್ಕಲ್‌ವರೆಗೆ ತರುತ್ತಾರೆ. ಪೂಜೆಯ ನಂತರ ಎರಡೂ ಪುನಃ ಮಠಕ್ಕೆ ಬರುತ್ತವೆ. ಮುಂದಿರುವುದು ಮಲ್ಲಿಕಾರ್ಜುನ ಲಿಂಗದ ಸಣ್ಣತೇರು, ತಾತನದು ದೊಡ್ಡ ತೇರು.

ನಾಲ್ಕನೆಯ ದಿನ ಕಡುಬಿನ ಕಾಳಗ. ಎರಡೂ ದೇವರನ್ನು (ಮಲ್ಲಿಕಾರ್ಜುನ ಲಿಂಗ ಮತ್ತು ತಾತ) ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆಯ ಮೂಲಕ ಬಸವೇಶ್ವರ ಸರ್ಕಲ್‌ವರೆಗೆ ಬರುತ್ತಾರೆ. ಕಾಯಿ ಕರ್ಪೂರ ಮಾಡಿಸಿಕೊಂಡು ತಿರುಗಿ ಮಠಕ್ಕೆ ಬರುತ್ತಾರೆ. ಹೋಗುವಾಗ ಜೋಳದ ಹಿಟ್ಟಿನ ಸಣ್ಣ ಉಂಡಿಮಾಡಿ ಜನರಿಗೆ, ಅಂಗಡಿಗಳ ಕಡೆ ಎಲೆಯುತ್ತಾರೆ. ಅವನ್ನು ಪಡೆದ ಜನ ತಾತನೇ ಸಿಕ್ಕ ಎಂಬಷ್ಟು ಭಕ್ತಿಯಿಂದ, ಪ್ರಸಾದವೆಂದು ಸ್ವೀಕರಿಸುತ್ತಾರೆ.

೫ನೇ ದಿನ ತೇರಿನ ಕಳಸ ಇಳಿಸುತ್ತಾರೆ. ಇದು ಜಾತ್ರೆಯ ಮುಕ್ತಾಯ. ಊರಿನ ಪ್ರತಿ ಮನೆಗೆ ಲಡ್ಡು ಪ್ರಸಾದ ಹಂಚುತ್ತಾರೆ. ಎಲ್ಲ ಜಾತಿ ಜನಾಂಗದವರು ದೇವರಿಗೆ ನಡಕೊಳ್ಳುತ್ತಾರೆ. ಪ್ರತಿದಿವಸ ಬೇಡಿಕೊಂಡವರು ಮಹಾರುದ್ರಾಭಿಷೇಕ ಮಾಡಿಸುತ್ತಾರೆ. ಮಠದಲ್ಲಿ ದಾಸೋಹವಿದೆ. ಜಂಗಮ ಕುಲದ ಪೂಜಾರಿಗಳು ದಿನವೂ ಪೂಜೆ ಮಾಡುತ್ತಾರೆ.

ಜಾತ್ರೆಗಳು ಹಿಂದಿನಿಂದ ಬಂದ ಸಂಪ್ರದಾಯದಂತೆ ನಡೆಯುತ್ತ ಬಂದಿದ್ದರೂ ಈಚೆಗೆ

ಬಾಳಿದ ಚನ್ನಬಸವಸ್ವಾಮಿಯಂಥವರ ಜಾತ್ರೆಗಳೂ ಪ್ರಾರಂಭವಾಗುತ್ತವೆ. ಹೀಗೆ ಹೊಸದಾಗಿ ಶುರುವಾದರೂ ಹಳೆಯ ಅನುಭವಗಳು ಮತ್ತು ಪದ್ಧತಿಗಳೇ ಇವಕ್ಕೆ ಆಧಾರವಾಗುವುದನ್ನು ಗಮನಿಸಬಹುದು. ಈ ಅಂಶ ಜಾತ್ರೆಯ ಹುಟ್ಟು, ಬೆಳವಣಿಗೆ ಮತ್ತು ಲಕ್ಷಣಕ್ಕೆ ಸಂಬಂಧಿಸುವ ಮುಖ್ಯ ಸಂಗತಿ.

ಕೊಟ್ಟೂರು ಬಸವೇಶ್ವರ ರಥೋತ್ಸವ :

ಗಂಗಾವತಿಯ ತಹಶೀಲದಾರ ಆಫೀಸು ಮತ್ತು ಇತರ ಸರಕಾರಿ ಆಫೀಸುಗಳ ಹತ್ತಿರ ರಸ್ತೆಯ ಬದಿಗೆ ಕೊಟ್ಟೂರು ಬಸವೇಶ್ವರ ಗುಡಿಯಿದೆ. ಗರ್ಭಗುಡಿಯಲ್ಲಿ ನೆಲದ ಮೇಲೆ ನಂದಿವಿಗ್ರಹ. ಹಿಂದೆ ಸಣ್ಣ ಕಟ್ಟೆಯ ಮೇಲೆ ಫೋಟೊ ಸುಕನಾಶಿ ನವರಂಗಗಳಿವೆ. ಗೋಪುರ ಕಳಸಗಳಿವೆ. ಮೇಲ್ಛಾವಣಿಯ ನಾಲ್ಕು ಮೂಲೆಗೆ ನಾಲ್ಕು ನಂದಿ ವಿಗ್ರಹಗಳಿವೆ. ಗುಡಿಯ ಸುತ್ತಲೂ ರೂಮುಗಳಿವೆ. ಅಂಗಳದಲ್ಲಿ ಅರಳಿಮರ ಬೇವಿನಮರ, ನಂದಿವಿಗ್ರಹ ಕಟ್ಟೆ ಇದೆ. ಸುತ್ತಲೂ ಪೌಳಿ.

ಊರಲ್ಲಿರುವ ಕಲ್ಮಠದಲ್ಲೂ ಕೊಟ್ಟೂರೇಶ್ವರರ ಗದ್ದುಗೆಯಿದೆ. ಆದರೆ ಅದಕ್ಕೂ ಇಲ್ಲಿರುವ ಕೊಟ್ಟೂರು ಬಸವೇಶ್ವರಕ್ಕೂ ಸಂಬಂಧವಿಲ್ಲ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರು ಗುರುಬಸವನೆಂಬ ಪಂಚಾಗಣಾಧೀಶ್ವರರಿಂದ ಪ್ರಖ್ಯಾತವಿದ್ದು, ಅದಕ್ಕೂ ಈ ಮಠಕ್ಕೂ ಯಾವ ಸಂಬಂಧವಿದೆಯೊ ಅದೂ ತಿಳಿದಿಲ್ಲ.

ಶಿವರಾತ್ರಿ ಅಮವಾಸ್ಯೆಯಾದ ೫ ದಿನಕ್ಕೆ ಕೊಟ್ಟೂರು ಬಸವೇಶ್ವರ ಜಾತ್ರೆ ಯಾಗುತ್ತದೆ. ಅಮವಾಸ್ಯೆಯ ಮರುದಿನ ಕಂಕಣಧಾರಣೆ. ಪಂಚಕಲಶವಿಟ್ಟು ಪೂಜೆ ಮಾಡಿ, ಪೂಜಾರಿ, ಕಾರ್ಯಕರ್ತರು ಟ್ರಸ್ಟ್ ಕಮಿಟಿಯವರು ಕಂಕಣ ಕಟ್ಟಿಕೊಳ್ಳುವರು.

ಮರುದಿನ ಸಂಜೆ ಪಾಲಿಕಿ ಉತ್ಸವ. ಗುಡಿಯಿಂದ ಕಲ್ಮಠದ ಹತ್ತಿರ ಇರುವ ಎದುರು ಬಸವಣ್ಣನ ಗುಡಿಯವರೆಗೆ ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನು ಮೆರವಣಿಗೆಯಲ್ಲಿ ತಂದು ಪೂಜೆ ಮಾಡಿಕೊಂಡು ಹಿಂದಿರುಗುವದು. ಇದರ ಮರುದಿನ ಪಲ್ಲಕ್ಕಿಗೆ ಪ್ರಭಾವಳಿ ಕಟ್ಟಿ ಅಲಂಕರಿಸಿ ವಿಜೃಂಭಣೆಯಿಂದ ಪೇಟೆ ಬಸವೇಶ್ವರ ದೇವಸ್ಥಾನಕ್ಕೆ ಬರುತ್ತಾರೆ. ಕಾಯಿ, ಕರ್ಪೂರ ಮಾಡಿಸಿಕೊಂಡು ಹಿಂದಿರುಗುತ್ತಾರೆ.

ಇದರ ಮರುದಿನ ತೇರು. ಎದುರು ಬಸವಣ್ಣನ ವರೆಗೆ ಎಳೆಯುತ್ತಾರೆ. ಗಂಗಾವತಿಯಲ್ಲಿ ಪ್ರತಿ ರವಿವಾರ ವಾರದ ಸಂತೆ, "ಸಂತೆ ಮಾರುಕಟ್ಟೆ"ಯಲ್ಲಿರುತ್ತದೆ. ತೇರಿನ ದಿವಸ ರವಿವಾರ ಬಂದರೆ ಅಂದು ದೇವಸ್ಥಾನದ ಮುಂದೆ ಸಂತೆ ಮಾಡುವ ಪದ್ಧತಿಯಿದೆ.

ತೇರಿನ ದಿವಸ ಬೆಳಿಗ್ಗೆ ಮಡಿ ತೇರೆಳೆದು ಮಧ್ಯಾಹ್ನ ಗಣಾರಾಧನೆ. ಪ್ರಸಾದ ವಿತರಣೆಯಾಗುತ್ತದೆ. ಸಂಜೆ ಸಾರ್ವಜನಿಕರು ತೇರೆಳೆಯುತ್ತಾರೆ. ಈ ಜಾತ್ರೆಗೂ ಜನ ಸಾಕಷ್ಟು ಸಂಖ್ಯೆಯಲ್ಲಿ ಸೇರುತ್ತಾರೆ. ಜಂಗಮಕುಲದ ಪೂಜಾರಿ, ಪ್ರತಿದಿನಸ ಪೂಜೆ ಮಾಡುತ್ತಾರೆ.

ವರ್ಷದ ಅವಧಿಯಲ್ಲಿ ಮೇಲೆ ಹೇಳಿದ ದೊಡ್ಡ ಪ್ರಮಾಣದ ಜಾತ್ರೆಗಳಲ್ಲದೆ, ಊರಿನ ಇತರ ಕೆಲವು ದೈವಗಳ ಒಂದೊಂದು ದಿನದ ಸಣ್ಣ ಪ್ರಮಾಣದ ಉತ್ಸವವಾಗುತ್ತವೆ. ವೀರಭದ್ರೇಶ್ವರನದು ಉಗಾದಿ ಪಾಡ್ಯಕ್ಕೆ ಉತ್ಸವ. ವೈಶಾಖ ಶುದ್ಧ ಚತುರ್ದಶಿಯಂದು ಸುಂಕದಕಟ್ಟೆ ಪ್ರಾಣೇಶನ ತೇರು. ಇದರ ಎದುರೇ ವೈಶ್ಯ ಸಮಾಜದವರ ನಗರೇಶ್ವರ ದೇಗುಲವಿದ್ದು ಉತ್ಸವವಾಗುತ್ತದೆ. ವೈಶಾಖ ಶುದ್ಧ ತದಿಗೆಯಂದು ನೀಲಕಂಠೇಶ್ವರ ಉತ್ಸವ, ವಿಜಯದಶಮಿ ದಿವಸ ಪ್ರಸನ್ನ ವೆಂಕಟೇಶ್ವರ ತೇರುಗಳಾಗುತ್ತವೆ.

ಆನೆಗೊಂದಿ :

ಹೊಸಪೇಟೆಯಿಂದ ಹಂಪಿ ತಳವಾರಘಟ್ಟದ ಮೂಲಕ ತೆಪ್ಪದಲ್ಲಿ ತುಂಗಭದ್ರೆಯನ್ನು ದಾಟಿ ಆ ದಡಕ್ಕೆ ಬಂದರೆ ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನವಾಗಿದ್ದ 'ಆನೆಗೊಂದಿ'. ಹೆಸರಿಗೆ ತಕ್ಕಂತೆ ಹೆಬ್ಬಂಡೆ ಗುಡ್ಡಗಳ ನಡುವೆ ಮಲಗಿರುವ ಊರು. ತುಂಗಭದ್ರೆ ಈ ಪ್ರದೇಶದಲ್ಲಿ ಕಲ್ಲುಗುಡ್ಡಗಳನ್ನು ಕೊರೆದುಕೊಂಡು ದಾಟಿ ಹೋಗುತ್ತಾಳೆ. ಬಾಳೆ, ಬತ್ತ, ಕಬ್ಬುಗಳಿಂದ ನಿತ್ಯ ಸಸ್ಯಶ್ಯಾಮಲೆಯಾದ ಈ ಪ್ರದೇಶ 'ಕಲ್ಲು', 'ಹಸಿರು'ಗಳ ವೈಶಿಷ್ಟ್ಯದಿಂದ ಕೂಡಿದೆ. ವಾಲಿಖಿಲ್ಲಾ ವಾಲಿಭಂಡಾರ, ಅಂಜನಾದ್ರಿ, ಮೊದಲಾದ ಪುರಾಣ ಕಾಲದ ಪ್ರಖ್ಯಾತ 'ಕಿಷ್ಕಿಂದಾ' ಚಾರಿತ್ರಿಕವಾದ ಮಹತ್ವವುಳ್ಳ ಗುಡಿ ಗುಂಡಾರ, ಶಾಸನಾದಿ ಸ್ಮಾರಕಗಳಿಂದ ಹೆಸರಾಗಿದೆ. ವಿಜಯನಗರ ಕಾಲದ "ರಂಗನಾಥ ಸ್ವಾಮಿ" ದೇಗುಲ ಇಂದಿಗೂ ಮಹಾರಾಜರ ಸಂತತಿಯವರಿಂದ ಬೆಂಬಲಿತವಾಗಿ ಶ್ರೀವೈಷ್ಣವ ಬ್ರಾಹ್ಮಣರಿಂದ ವೈಖಾನಸ ಸಂಪ್ರದಾಯದಂತೆ ಪೂಜೆಗೊಳ್ಳುತ್ತಿದೆ. ಪ್ರತಿವರ್ಷ ಚೈತ್ರ ಕೃಷ್ಣಪಕ್ಷದ ಪಂಚಮಿಯಿಂದ ನವಮಿಯವರೆಗೆ ನಡೆಯುವ ರಂಗನಾಥಸ್ವಾಮಿ ಜಾತ್ರೆಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ನೆರೆಯುತ್ತಾರೆ.

ಊರಿನ ಮಧ್ಯೆ ರಸ್ತೆಯ ಬದಿ ದೇಗುಲದ ಆವಾರ ಗೋಡೆ, ಗರ್ಭಗೃಹ, ಅಂತರಾಳ, ರಂಗಮಂಟಪ, ಮುಖಮಂಟಪ ಅರ್ಧ ಪ್ರಾಕಾರಗಳಿವೆ. ಪೂರ್ವಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಶೇಷಶಾಯಿ ವಿಷ್ಣುವಿನ ಕಪ್ಪು ಶಿಲಾವಿಗ್ರಹ. ವರ್ತುಲಾಕಾರದ ವಿಸ್ತಾರವಾದ ಪ್ರಭಾವಳಿ. ಮೇಲೆ ತೀರ ಚಿಕ್ಕದಾದ ಗೋಪುರವಿದ್ದು ಕಳಸವಿಡುವ ಪದ್ಧತಿಯಿಲ್ಲ. ಸುಕನಾಶಿಯಲ್ಲಿ ರಂಗನಾಥ ಶ್ರೀದೇವಿ ಭೂದೇವಿಯರ ಉತ್ಸವ ಮೂರ್ತಿಗಳು. ರಂಗಮಂಟಪದ ಹೊರಗೋಡೆಯ ದ್ವಾರಪಾಲಕರಾಗಿ ಗರುಡ, ಹನುಮರು. ಇಲ್ಲೇ ಈಚೆ ಬರೆಸಿದ ಲಕ್ಷ್ಮಿ, ರಾಮ, ಹನುಮ, ವೆಂಕಟೇಶ್ವರ ಮೊದಲಾದ ಬಣ್ಣದ ಚಿತ್ರಗಳು. ಅಂಗಳದಲ್ಲಿ ಗರುಡಗಂಭ, ಬಲಿಪೀಠ, ಕಲ್ಲಿಂದ ಮುಚ್ಚಿರುವ ಬಾವಿ. ಬಲಬದಿಗೆ ಪ್ರತ್ಯೇಕವಾದ ಲಕ್ಷ್ಮಿಗುಡಿ. ಮುಖಮಂಟಪದ ಮೇಲ್ಛಾವಣಿಯಲ್ಲಿ ಶ್ರೀವೈಷ್ಣವರ ಗುರುತು. ದ್ವಾರಬಾಗಿಲು ಹೊರಗಿನ ಅಂಗಳದಲ್ಲಿ ಲೋಹದ ದೀಪಸ್ಥಂಭ, ಹಾಳಾದ ಕಲ್ಲು ಮಂಟಪಗಳು. ರೋಡಿನಲ್ಲಿ ತೇರಿದೆ. ಗುಡಿಯ ಹಿಂದೆ ಕಲ್ಲುಗುಡ್ಡ ಲಕ್ಷ್ಮೀದೇವಿ ಕಪ್ಪು ಶಿಲಾವಿಗ್ರಹ, ಸೀರೆಯುಡಿಸಿದ್ದಾರೆ. ಪದ್ಮಾಸನದಲ್ಲಿ ಕೂತ ನಾಲ್ಕು ಕೈಗಳ ವಿಗ್ರಹ ಹಿತ್ತಾಳೆ ಪ್ರಭಾವಳಿ. ಎರಡೂ ದೇವರಿಗೆ ಪ್ರತಿದಿನ ಪೂಜೆ, ಬಲಿ ಅನ್ನ ಇಡಲಾಗುವುದು.

ಜಾತ್ರೆ :

ಚೈತ್ರ ಬಹುಳ ಪಂಚಮಿಯಿಂದ ಐದು ದಿವಸ ಪಂಚಾಹ್ನಿಕಯಾಗ ಶಾಲೆಯಲ್ಲಿ ನವಗ್ರಹ ಸ್ಥಾಪನೆ, ಕಳಸ ಸ್ಥಾಪನೆ, ನವಧಾನ್ಯಗಳನ್ನು ನೆನೆಸಿ ಅಂಕುರಾರ್ಪಣೆ, ಪೂಜೆ, ಅಗ್ನಿ ಪ್ರತಿಷ್ಠೆ, ಅಗ್ನಿ ಆಹ್ವಾಹನೆ, ಹೋಮ ಮತ್ತು ಪ್ರಸಾದ ವಿತರಣೆ. ಊರಲ್ಲಿ ಆಹ್ವಾನ ಪತ್ರಿಕೆಯ ವಿತರಣಾ ಕಾರ್ಯಕ್ರಮ. ಇದಕ್ಕಾಗಿ ಪಲ್ಲಕ್ಕಿಯಲ್ಲಿ ಸುದರ್ಶನ ಮೂರ್ತಿ ಇಟ್ಟು ಪೂಜಿಸಿ ಬ್ಯಾಂಡ್ ಸಮೇತ ಊರಲ್ಲಿ ಹೊರಡುತ್ತಾರೆ. ತಿರುಗಿ ಬಂದ ನಂತರ ಗರುಡಗಂಭಕ್ಕೆ ಪೂಜೆ ಮಾಡಿ ಗರುಡಪಟ ಏರಿಸುತ್ತಾರೆ.

ರಾತ್ರಿ ಕಲ್ಯಾಣೋತ್ಸವ. ಇದು ಸುಮಾರು ನಾಲ್ಕೂವರೆ ತಾಸು ನಡೆಯುವ ವಿಧಿಯಾಚರಣೆ. ರಾಜವಂಶದವರು, ಆಗಮಿಕರು, ಪೂಜಾರಿಗಳು, ರಂಗನಾಥ ಮತ್ತು ಶ್ರೀದೇವಿ ಭೂದೇವಿಯರ ಲಗ್ನವನ್ನು ವೈಖಾನಸ ಆಗಮ ಪದ್ಧತಿಯಂತೆ ನೆರವೇರಿಸುತ್ತಾರೆ. ಪೂಜೆ ಪ್ರಸಾದದೊಂದಿಗೆ ಈ ಕಾರ್ಯಕ್ರಮ ಮುಗಿಯುತ್ತವೆ.

ಮರುದಿನ ಬೆಳಿಗ್ಗೆ ಮತ್ತು ಸಂಜೆ ಗರುಡೋತ್ಸವ. ಕಲ್ಯಾಣೋತ್ಸವದ ಮೂರ್ತಿಗಳನ್ನು ಗರುಡ ಪೀಠದ ಮೇಲೆ ಇಟ್ಟು ಬ್ಯಾಂಡ್ ಮೇಳದೊಂದಿಗೆ ಊರಲ್ಲಿ ಮೆರವಣಿಗೆ ಬರುತ್ತಾರೆ. ಗುಡಿಗೆ ತಿರುಗಿ ಬಂದ ನಂತರ ಕಾಯಿ ಕರ್ಪೂರ ಮಂಗಳಾರತಿ, ಗರುಡ ಪ್ರಸಾದ ವಿತರಣೆ. ಸಾಯಂಕಾಲ ಯಥಾರೀತಿ. ತೇರಿನ ಮುಂದೆ ರಥಾಂಗ ಹೋಮ ಮಾಡಿ ಪೂಜಿಸಿ ಬಲಿ ಅರ್ಪಿಸುವುದು. ಇಲ್ಲಿ ಕುಂಕುಮ ಭಂಡಾರ ಬೆರೆತ ಅನ್ನವೇ ಬಲಿ. ಕುಂಬಳಕಾಯಿ, ಟೆಂಗಿನಕಾಯಿ ಬಲಿಯೂ ಇರುತ್ತದೆ. ೧೬ ಬುಟ್ಟಿ ಬಿಳಿ ಅನ್ನ, ಕೆಂಪು ಅನ್ನ, ಇದ್ದಲಿ ಬೆರಸಿದ ಕಪ್ಪು ಅನ್ನ ಮತ್ತು ಅರಿಶಿಣ ಬೆರೆತ ಅನ್ನವನ್ನು ತೇರು ಹೋಗಿ ಬರುವಲ್ಲೆಲ್ಲ (ಬಲಿಯನ್ನ) ಚಲ್ಲುತ್ತ ಬರುತ್ತಾರೆ. ಹೀಗ ಊರಮ್ಮನ ಗುಡಿಯವರೆಗೆ ಚಲ್ಲುವುದು. ದೇವಸ್ಥಾನಗಳು ಮತ್ತು ಅರಮನೆಗಳಿಗೆ ಕಾಯಿ ಒಡೆಯುವುದು. (ಅರಮನೆ ಸುಸ್ಥಿತಿಯಲ್ಲಿದ್ದು ರಾಜವಂಶದವರು ಹೊಸಪೇಟೆ ಮೊದಲಾದ ಊರುಗಳಲ್ಲಿದ್ದಾರೆ). ದೇವರ ಪಲ್ಲಕ್ಕಿಯನ್ನು ತೇರಿನ ಹತ್ತಿರ ತಂದು ಐದು ಸುತ್ತು ಪ್ರದಕ್ಷಿಣೆ ಬಂದು ಪೂಜೆ ಮಾಡಿ ಕಾಯಿ ಒಡೆದು ದೇವರನ್ನು ತೇರಿಗೆ ಏರಿಸುತ್ತಾರೆ. ಅಲ್ಲಿ ದೇವರು ಪೂಜಿಸಿ ಕರ್ಪೂರ ತೋರಿಸಿದ ಕೂಡಲೆ ಊರ ಜನ ಗಾಲಿಗಳಿಗೆ ಕಾಯಿ ಒಡೆಯುತ್ತಾರೆ. ಮತ್ತೊಂದು ಮಂಗಳಾರತಿಯಾದ ಕೂಡಲೇ ಕಲೆತಿರುವ ಎಲ್ಲ ಜಾತಿಗಳ ಸಾವಿರಾರು ಜನ ೧೫ ಅಡಿ ತೇರೆಳೆಯುತ್ತಾರೆ. ಇದಕ್ಕೆ ಮಡಿತೇರೆನ್ನುತ್ತಾರೆ. ಇದಾದ ನಂತರ ರಾಮದೇವರ ಗುಡಿಗೆ ಹೋಗಿ ಪೂಜೆ ಮಾಡಿ ತೇರಿನ ಸಕ್ಕರೆ ಪ್ರಸಾದ, ಪುಳಿಯೋಗರೆ ನೈವೇದ್ಯ ಮಾಡಿ ವಿತರಿಸುತ್ತಾರೆ.

ಸಂಜೆ ೬ ಗಂಟೆಗೆ ಸಾರ್ವಜನಿಕರು ತೇರೆಳೆವ ವಿಧಿ. ತೇರೆಳೆವ ಮೊದಲು ದೇವರ ಧ್ವಜವನ್ನು ಹರಾಜು ಮಾಡುತ್ತಾರೆ. ಉತ್ಸವಮೂರ್ತಿಗಳ ಜತೆ ಪೂಜಾರಿಯೊಬ್ಬರೇ ರಥದಲ್ಲಿರುತ್ತಾರೆ. ಮೊದಲು ಊರಿನ ಪ್ರಮುಖ ಬೀದಿಗಳಲ್ಲಿ ಬರುತ್ತಿದ್ದ ತೇರು, ಲೈಟ್‌ಕಂಬ, ತಂತಿಗಳಿಂದಾಗಿ

ಈಗ ಬರಿ ಆಂಜನೇಯ ಪಾದಗಟ್ಟೆಯವರೆಗೆ ಬಂದು ಹಿಂದಿರುಗುತ್ತದೆ. ತೇರಿಗೆ ಜನ ಬಾಳೆಹಣ್ಣು ಉತ್ತತ್ತಿ ಎಸೆಯುತ್ತಾರೆ. ತೇರು ಯಥಾಸ್ಥಾನಕ್ಕೆ ಬಂದಕೂಡಲೆ ದೇವರನ್ನು ಪಲ್ಲಕ್ಕಿಯಲ್ಲಿಟ್ಟು ಆರತಿಯಾಗಬೇಕು. ಧ್ವಜಪಟವನ್ನು ಹರಾಜಿನಲ್ಲಿ ಹೆಚ್ಚು ಹಣಕ್ಕೆ ಕೂಗಿ ಪಡೆದವರು, ಮಹಾರಾಜರು, ಪಲ್ಲಕ್ಕಿ, ವಾದ್ಯ ಮೇಳದೊಂದಿಗೆ ಊರಲ್ಲಿ ಮೆರವಣಿಗೆ ಬರುತ್ತಾರೆ. ದೇವರಿಗೆ ಆಪ್ತಾಗಿರಿ ಹಿಡಿದಿರುತ್ತಾರೆ. ತಿರುಗಿ ಬಂದ ನಂತರ ದೇವರನ್ನು ಗುಡಿಯಲ್ಲಿಟ್ಟು ಮಂಗಳಾರತಿ ಮಾಡಿ ಪ್ರಸಾದ ವಿತರಿಸುವುದು. ಈ ಕಾರ್ಯಕ್ರಮಗಳನ್ನು ಆಮಂತ್ರಣ ಪತ್ರಿಕೆಯಲ್ಲಿ ಬ್ರಹ್ಮರಥೋತ್ಸವ ಮತ್ತು ಧೂಳೋತ್ಸವ ಎಂದು ನಮೂದಿಸಿದ್ದಾರೆ. ಮರುದಿನ ಪಾರ್ವಟೋತ್ಸವ (ಮೃಗಯಾತ್ರಾ) ಇದನ್ನು ಜನ 'ಕಡುಬಿನ ಕಾಳಗ' ಎನ್ನುತ್ತಾರೆ. ಈ ಸಂದರ್ಭದಲ್ಲಿ ಪಲ್ಲಕ್ಕಿಯಲ್ಲಿ ಲಕ್ಷ್ಮೀದೇವಿ ವಿಗ್ರಹ, ಕುದುರೆಯ ವಾಹನದ ಮೇಲೆ ರಂಗಸ್ವಾಮಿ ವಿಗ್ರಹಗಳಿರುತ್ತವೆ. ಜತೆಗೆ ಸುದರ್ಶನ ಚಕ್ರ ಕೂಡ. ಮೆರವಣಿಗೆ ಮಹಾರಾಜರ ಅರಮನೆಗೆ ಬರುತ್ತದೆ. ಅಲ್ಲಿ ದೇವರನ್ನು ಕೂರಿಸಿ ಸಂಕಲ್ಪಮಾಡಿ ಪೂಜೆಯಾಗುತ್ತದೆ. 'ತಿರುಮಂಗೈ ಆಳ್ವಾರ್' ಕತೆಯನ್ನು (ಕನ್ನಡದಲ್ಲಿದೆ) ಅರ್ಚಕರು ಓದುತ್ತಾರೆ. ನಂತರ ಕಳ್ಳರ 'ಆಟ', ಸೇವಕನೊಬ್ಬ ಸುದರ್ಶನ ಚಕ್ರ ಹಿಡಿದುಕೊಳ್ಳುತ್ತಾನೆ. ಮಡ್ಡೇರವ (ಕಬ್ಬೇರು, ಬೋವೇರು) ದೊಣ್ಣೆ ಹಿಡಕೊಳ್ಳುತ್ತಾನೆ. "ಆನೆಗೊಂದಿ ಮಹಾರಾಜರು ಬಂದರಪೋ" ಎಂದಕೂಡಲೆ ಸೇವಕ ಓಡುತ್ತಾನೆ. ಮಡ್ಡೇರವ ಅವನ ಬೆನ್ನು ಹತ್ತಿ ಡೊಣ್ಣೆಯಿಂದ ಹೊಡೆಯ ಲೆತ್ನಿಸುತ್ತಾನೆ.

"ಆನೆಗೊಂದಿ ಪೂಜಾರರು ಬಂದರಪೊ"
"ಆನೆಗೊಂದಿ ತಲಾರಿ ಬಂದರಪೊ"
"ಆನೆಗೊಂದಿ ಜನ ಬಂದರಪೋ"

ಎಂದು ದೇವರಕಟ್ಟೆಯ ಸುತ್ತ ಐದು ಸುತ್ತು ಓಡಾಡುತ್ತಾರೆ. ಇದೇ ಇಲ್ಲಿ "ಕಡುಬಿನ ಕಾಳಗ" (ಉತ್ತರ ಕರ್ನಾಟಕದ ಆಡುಮಾತಿನಲ್ಲಿ ಏಟು ಹಾಕುವುದನ್ನು "ಕಡುಬು ತಿನ್ನಿಸುವುದು" ಎಂದು ಹೇಳುತ್ತಾರೆ) ಇದರ ನಂತರ ಆರತಿ ಪ್ರಸಾದ ವಿತರಣೆ. ದೇವರನ್ನು ಗುಡಿಗೆ ತರುವುದು. ದಾರಿಯಲ್ಲಿ ಭಕ್ತರು ದೇವರಿಗೆ ಕಾಯಿಕರ್ಪೂರ ಮಾಡುತ್ತಾರೆ.

ಮಾರನೆಯ ದಿನ ಬೆಳಿಗ್ಗೆ 'ವಸಂತೋತ್ಸವ'. ಸಾಯಂಕಾಲ 'ಪುಷ್ಪಯಾಗ'. ದೇವರಿಗೆ ಪುಣ್ಯಾಹವಾಚನ ಹೇಳಿ ತಲೆಗೆ ಎಣ್ಣೆ ಹಚ್ಚಿ ಕೇಸರಿ ಅರಿಶಿಣ ಅರ್ಪಿಸಿ ನೆರೆದ ಹಿರಿಯರಿಗೆ ಕೇಸರಿ ಬಣ್ಣತೊಡೆದು, ಎಲ್ಲರೂ ಗ್ರಾಮದಲ್ಲಿ ಬರುತ್ತ ಎದುರಾದವರಿಗೆ ಬಣ್ಣ ತೊಡೆಯುತ್ತ ಬರುತ್ತಾರೆ. ಸುದರ್ಶನ ಮೂರ್ತಿಯೊಂದಿಗೆ ನದಿಯ ದಡಕ್ಕೆ ಬಂದು ಸ್ನಾನ ಮಾಡಿಸಿ, 'ಶಟಾರಿ'ಯನ್ನು ತೊಳೆದು ಸಂಕಲ್ಪ ಹೇಳಿ ಪೂಜೆ ಮಾಡಿ, ಆರತಿ, ಎಡೆ ಮಾಡಿ ಪ್ರಸಾದ ವಿತರಿಸುತ್ತಾರೆ. ಜಯ ಘೋಷದೊಂದಿಗೆ ಗುಡಿಗೆ ಬರುತ್ತಾರೆ. ಇತ್ತ ಆಗಮಿಕರು ಪೂಜೆ ಮಾಡಿ ಧ್ವಜಪಟವನ್ನು ಇಳಿಸುತ್ತಾರೆ. ಜಾತ್ರೆಯ ಪ್ರಾರಂಭದಲ್ಲಿ ಕಟ್ಟಿಕೊಂಡ ಕಂಕಣವನ್ನು ವಿಸರ್ಜಿಸುತ್ತಾರೆ. ರಾಜರಿಗೂ ಕಂಕಣಧಾರಣವಿರುತ್ತದೆ. ಅವರಿಲ್ಲದೆ ಯಾವ ಕಾರ್ಯಕ್ರಮವೂ ನಡೆಯುವುದಿಲ್ಲ. (ಈಗಿರುವ 'ರಾಜರು' - "ಶ್ರೀ ರಾಜಾ ರಾಮದೇವರಾಯಲು", 'ಶ್ರೀರಾಜಾ

ನರಸಿಂಹದೇವರಾಯಲು' - ಆಮಂತ್ರಣ ಪತ್ರಿಕೆ) ದೇವರಿಗೆ ಆರತಿ ಎತ್ತಿ, ಅಕ್ಕಿ ಕಡಲೆಬೇಳೆ ಹುಗ್ಗಿ, ಮುದಗನ್ನ ಪ್ರಸಾದವಾಗಿ ವಿತರಿಸುತ್ತಾರೆ.

ಅಂದು ರಾತ್ರಿ ಪುಷ್ಪಯಾಗ, ತರತರದ ಹೂಗಳಿಂದ ಮಂಟಪವನ್ನು ಅಲಂಕರಿಸಿ, ರಂಗನಾಥನನ್ನೂ ಅಲಂಕರಿಸಿ, ಅಷ್ಟದಿಕ್‌ಪಾಲಕರನ್ನು ಸಂಕಲ್ಪಿಸಿ ಅವರವರ ವಾದ್ಯ ಸಮೇತ ಅವರನ್ನು ಕಳಿಸಿ, ಕಾಯಿಕರ್ಪೂರದ ಆರತಿ ಮಾಡಿ ಹೂವನ್ನು ಸಮರ್ಪಿಸುವುದು, ನಂತರ ಶಮನೋತ್ಸವ, ಸಂಕಲ್ಪ ಮಾಡಿ ರಂಗನಾಥನನ್ನು ಇಬ್ಬರೂ ದೇವಿಯರ ಜತೆ ಕೂಡಿಸುವುದು. ಕಡಲೆಬೇಳೆ ಪ್ರಸಾದ ವಿತರಿಸುವುದು. ದಿವಾನ ಅರಮನೆ ತಟ್ಟೆ, ಪೂಜಾದ್ರವ್ಯಗಳೊಂದಿಗೆ ದೇವರ ವಸ್ತ್ರ ತೆಗೆದುಕೊಂಡು ಅರಮನೆಗೆ ಬಂದು ಆಶೀರ್ವದಿಸಿ ಸೀರೆ ಕಣ ಅರ್ಪಿಸುವುದು. ಜಾತ್ರೆಯ ಪ್ರತಿದಿವಸ ನೈವೇದ್ಯ ಅರಮನೆಗೆ ಹೋಗುತ್ತದೆ.

ಅರ್ಚಕರ ದೃಷ್ಟಿಯಿಂದ ಕೊನೆಯ ಮುಖ್ಯ ಕೆಲಸವೆಂದರೆ ಜಾತ್ರೆಗಾಗಿ ಟ್ರಶರಿಯಿಂದ ಪಡೆದ, ದೇವರ ಎಲ್ಲ ಆಭರಣಗಳನ್ನು (ಬಂಗಾರದ ಕಿರೀಟ, ಬೆಳ್ಳಿ ಕಿರೀಟ, ಕವಚ, ಬಳೆ ಇತ್ಯಾದಿ) ಲೆಕ್ಕದ ಪ್ರಕಾರ ತಿರುಗಿ ಅರ್ಪಿಸುವುದು.

ಜಾತ್ರೆಯ ತೇರು ಉತ್ಸವಗಳನ್ನು ಮೊದಲು ಒಡ್ಡರು ಕಟ್ಟುತ್ತಿದ್ದರು. ಈಗ ಗಂಗಾಮತಸ್ಥರು ಈ ಎಲ್ಲ ಕೆಲಸ ಮಾಡುತ್ತಾರೆ. ದೇವಸ್ಥಾನದಿಂದ ಇವರಿಗೆ ೨೦೦೦ ರೂ. ಸಂಭಾವನೆ ಇದೆ. ಗರುಡೋತ್ಸವದ ದಿವಸ ಸಾರ್ವಜನಿಕರಿಗೆ ರಾಜರು ಊಟ ಹಾಕಿಸುತ್ತಾರೆ. ಜಾತ್ರೆಯ ದಿವಸ ಶ್ರೀಮಂತ ಭಕ್ತರು ಹಾಕಿಸುತ್ತಾರೆ. ಜಾತ್ರೆಯ ವಾರವೆಲ್ಲಾ ನಾನಾ ವಿಧದ ಅಂಗಡಿಗಳಿರುತ್ತವೆ. ತೇರಿಗೆ ಹತ್ತುಸಾವಿರದ ವರೆಗೆ ಜನ ಸೇರುತ್ತಾರೆ.

ಇತರ ವಾರ್ಷಿಕ ಆಚರಣೆಗಳು :

ವಿಜಯದಶಮಿಯ ದಿವಸ ಕುದುರೆ ಉತ್ಸವ. ಮೆರವಣಿಗೆ ಊರಲ್ಲಿ ಹೊರಟು ಬನ್ನಿ ಮಹಾಕಾಳಿಗೆ ಪೂಜೆ ಸಲ್ಲಿಸಿ ಬನ್ನಿ ತೆಗೆದುಕೊಂಡು ಗುಡಿಗೆ ಬಂದು ಆರತಿ ಎತ್ತಿದ ನಂತರ ಊರಲ್ಲಿ ಎಲ್ಲರೂ ಬನ್ನಿ ಮುಡಿಯಲು ಪ್ರಾರಂಭಿಸುವುದು. ಕಾರ್ತಿಕದಲ್ಲಿ ದೇವರು ಕುದುರೆಯ ಮೇಲೆ ಊರಲ್ಲಿ ಹೋಗಿ ಬರುವ ಆಚರಣೆ, ಎಡಬಲಕ್ಕೆ ದೀಪ ಹಿಡಿದಿರುತ್ತಾರೆ. ಗುಡಿಯ ಸುತ್ತಲೂ ದೀಪ ಹಾಕುತ್ತಾರೆ.

ಊರಮ್ಮ :

ಆನೆಗೊಂದಿ ಊರ ಹೊರಗೆ ಗಂಗಾವತಿ ರಸ್ತೆಯಂಚಿಗೆ ಹೊಲಗಳಲ್ಲಿ ಕಲ್ಲುಕಟ್ಟೆಯ ಗೂಡಿನಲ್ಲಿ ಊರಮ್ಮನ ಚಪ್ಪಟೆ ಕಲ್ಲಿದೆ. ಅರಿಶಿಣ ಕುಂಕುಮ ತೊಡೆದಿದ್ದಾರೆ. ಎದುರಿಗೆ ಮೂರು ಪಾದಗಟ್ಟೆಗಳಿವೆ. ಕಟ್ಟಿಗೆಗೆ ಹಸಿರು ಬಳೆ ಚುಚ್ಚಿದ್ದಾರೆ. ಕಟ್ಟೆಯ ಮುಂಭಾಗದಲ್ಲಿ ಈಚೆಗೆ ಸಿಮೆಂಟಿನಲ್ಲಿ ಮಂಟಪ ಕಟ್ಟಿದ್ದಾರೆ.

ಮೂರು ವರ್ಷಕ್ಕೊಮ್ಮೆ ಊರಮ್ಮ (ಗ್ರಾಮದೇವಿ)ನ ಜಾತ್ರೆ. ಮಾಡದೆ ಇದ್ದರೆ 'ಇಲ್ಲದ ಕಿರಿಕಿರಿ' ಎಂದು ಜನರ ಅಭಿಮತ. ನಾಯಕ ಕುಲದವರು ಪೂಜಾರಿ, ಜಾತ್ರೆಯಲ್ಲಿ ಕೋಣ

ಬಲಿ ಕೊಡುತ್ತಿದ್ದರು. ಈಗ ಕುರಿಗಳ ಬಲಿ ಮಾತ್ರ ಇದೆ. ಎಲ್ಲರ ಮನೆಗಳಲ್ಲಿ ಹೋಳಿಗೆ ಕಡಬು ಎಡೆ ಮಾಡುತ್ತಾರೆ. ಮೂರು ದಿನಗಳ ಈ ಜಾತ್ರೆಯಲ್ಲಿ ಊರಿನ ಎಲ್ಲ ಜನ ಭಾಗಿಯಾಗುತ್ತಾರೆ.

ಆನೆಗೊಂದಿಯಲ್ಲಿ ಸುಮಾರು ಹತ್ತು ಸಾವಿರ ಜನಸಂಖ್ಯೆಯಿದೆ. ಪೀರನ ಹಬ್ಬ (ಅಲಾಯಿ) ಕೂಡ ವಿಜೃಂಭಣೆಯಿಂದ ನಡೆಯುತ್ತದೆ.

ಕನಕಗಿರಿ :

ಗಂಗಾವತಿಯಿಂದ ಕುಷ್ಟಗಿಯ ಕಡೆ ಬಯಲು ಸೀಮೆ. ನೀರಾವರಿ ಸೌಲಭ್ಯ ಸಿಕ್ಕುವವರೆಗೆ ಮಾತ್ರ ಬತ್ತದ ಗದ್ದೆಗಳು. ಗಂಗಾವತಿಯಿಂದ ೨೦ ಕಿಲೋಮೀಟರ್ ದೂರದ ಇಂಥ ಬಯಲಲ್ಲಿದೆ ಇತಿಹಾಸ ಪ್ರಸಿದ್ಧವಾದ 'ಕನಕಗಿರಿ'. ಬಸ್‌ಸ್ಟ್ಯಾಂಡಿನಿಂದ ಹಳ್ಳಕ್ಕೆ ಕಟ್ಟಿರುವ ಸಣ್ಣ ಸೇತುವೆ ದಾಟಿದರೆ ಕೋಟೆ ಬಾಗಿಲು, ಹಳ್ಳದ ಸುತ್ತ ಅಲ್ಲಲ್ಲಿ ಹಾಳಾದ ಕಲ್ಲು ಕೋಟೆ ಕಾಣಿಸುತ್ತದೆ. ಕೋಟೆ ಬಾಗಿಲು ದಾಟಿ ಊರಲ್ಲಿ ಕಾಲಿಡುತ್ತಿದ್ದಂತೆ ಪ್ರಖ್ಯಾತ ಕನಕರಾಯನ ದೇಗುಲ. 'ಕನಕಾಚಲ ಲಕ್ಷ್ಮೀನರಸಿಂಹ' ಎಂದು ಇದರ ಪೂರ್ಣ ಹೆಸರು. ಗರ್ಭಗೃಹ, ಸುಕನಾಶಿ, ರಂಗಮಂಟಪ, ಮುಖಮಂಟಪ, ಪ್ರಾಕಾರ ಪ್ರವೇಶದ್ವಾರಗಳು, ಆವಾರ ಗೋಡೆಯಿಂದ ರಕ್ಷಿತವಾಗಿದ್ದು ಈ ಸ್ಥಳ ಹಲವು ಎಕರೆ ವ್ಯಾಪಿಸಿದೆ. ಮುಖಮಂಟಪದ ೧೬ ಕಂಬಗಳು ವಿಜಯನಗರ ಶಿಲ್ಪ ಶೈಲಿಯ ಉತ್ತಮ ಪ್ರತಿನಿಧಿಗಳು. ನರಸಿಂಹ ಸಾಲಿಗ್ರಾಮ ಗರ್ಭಗೃಹದಲ್ಲಿದ್ದು ಪಂಚಲೋಹದ ಕವಚದಿಂದಿದೆ. ಅಭಿಷೇಕ ಮಾಡುವಾಗ ಮಾತ್ರ ಕವಚ ತೆಗೆಯುತ್ತಾರೆ. ಲಕ್ಷ್ಮಿಯ ಪ್ರತ್ಯೇಕ ಗುಡಿ ಪಕ್ಕದಲ್ಲಿದೆ. ಗೋಪುರ ಕಳಸಗಳಿವೆ. ಗುಡಿಯ ಮಹಾದ್ವಾರ ಬಾಗಿಲ ಹತ್ತಿರದ ಮಂಟಪ ಗುಡಿಗಳಲ್ಲಿ ಪಾಳೆಯಗಾರ ರಾಜ ರಾಣಿಯರ ವಿಗ್ರಹಗಳು, ಇನ್ನೊಂದರಲ್ಲಿ ಏಳೆಂಟು ಅಡಿ ಎತ್ತರದ ಕೈಮುಗಿದು ನಿಂತ ಹನುಮಂತನ ವಿಗ್ರಹಗಳಿವೆ. ಅಂಗಳದಲ್ಲೂ ಗರುಡಗಂಭ, ಬಾವಿಗಳಿವೆ.

ಜಾತ್ರೆ :

ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ (ಫೆಬ್ರುವರಿ) ೧೩ ದಿನಗಳ ದೊಡ್ಡ ಜಾತ್ರೆ ಯಾಗುತ್ತದೆ.

ಫಾಲ್ಗುಣ ಶುದ್ಧ ತ್ರಯೋದಶಿಯಂದು ಅಂಕುರಾರ್ಪಣೆ, ಲಗ್ನ ಪತ್ರಿಕೆಯ ಪೂಜೆ. 'ಶ್ರೀ ಕನಕಾಚಲ ಲಕ್ಷ್ಮೀನರಸಿಂಹ ಪ್ರಸನ್ನ' ಎಂದು ಬರೆದ ತಾಡೋಲೆಗಳನ್ನು ಭಕ್ತಾದಿಗಳಿಗೆ ಹಂಚುವ ವಿಶಿಷ್ಟ ವಿಧಿ. ಒಂದು ತಾಳೋಲೆಯ ಮೇಲೆ ವಿವರಗಳಿರುತ್ತವೆ. ಬಾಜಾ ಬಜಂತ್ರಿ ಸಹಿತ ದೇವರ ಪಾಲಿಕಿಯನ್ನು ಧ್ವಜದ ಕಟ್ಟೆಯ ಹತ್ತಿರ ತಂದು ಪೂಜೆ, ಮಂಗಳಾರತಿ ಮಾಡಿ ೧೨ ದಿನಗಳ ಜಾತ್ರೆಯ ಕಾರ್ಯಕ್ರಮ ಓದಿ ಲಗ್ನಪತ್ರಿಕೆ (ಮೇಲೆ ಹೇಳಿದಂತೆ ಬರೆದ ತಾಡೋಲೆ)ಗಳನ್ನು ಹಂಚುತ್ತಾರೆ. ಕಂಕಣ ಕಟ್ಟಿಕೊಂಡ ನಂತರ ಈ ಊರಿನ ವಾಲ್ಮೀಕಿ ಜನ ಮನೆ ಅರಿವೆ ಮೊದಲಾಗಿ ಮನೆಯ ಎಲ್ಲವನ್ನೂ ಮಡಿಮಾಡಿ, ಹಳೆಯ ಗಡಿಗೆ ಮಡಿಕೆಗಳನ್ನು ಬಳಸದೆ ಹೊಸವನ್ನು ಬಳಸುತ್ತಾರೆ. ಕಡುಬಿನ ಕಾಳಗ ಆಗುವವರೆಗೆ ಮನೆಯಲ್ಲಿ ರೊಟ್ಟಿ ಸುಡುವುದಿಲ್ಲ.

ಮರುದಿನ ಧ್ವಜಾರೋಹಣ. ಧ್ವಜಸ್ಥಂಭಕ್ಕೆ ಗರುಡ ಧ್ವಜವನ್ನು ಏರಿಸುವುದು. ಪೂಜಾರಿ, ಕಾರ್ಯದರ್ಶಿ, ಅಧ್ಯಕ್ಷರು, ಮೊದಲಾದ ಸಂಬಂಧಪಟ್ಟ ಗಣ್ಯರು, ಕಂಕಣ ಕಟ್ಟಿಕೊಳ್ಳುತ್ತಾರೆ. ಇದನ್ನು 'ಕಂಕಣಧಾರಣ, ದೇವಯಾಗ ಪ್ರಾರಂಭ' ಎಂದು ಸೂಚಿಸಿದೆ.

ಮುಂದಿನ ಐದು ದಿನ ಕ್ರಮವಾಗಿ 'ಪುಷ್ಪ ಮಂಟಪಾರೋಹಣ', 'ಹಂಸಾರೋಹಣ', 'ಸಿಂಹಾರೋಹಣ', 'ಹನುಮಂತೋತ್ಸವ', 'ಶೇಷೋತ್ಸವ' ಈ ಉತ್ಸವಗಳು (ಉಚ್ಛಾಯ) ಎರಡೂ ಹೊತ್ತು ನಡೆಯುತ್ತವೆ. ರಾತ್ರಿ ನಡೆಯುವ ಉತ್ಸವ ಮರುದಿನ ಬೆಳಿಗ್ಗೆ ಕೂಡ ನಡೆಯುತ್ತದೆ. ಅಂದು ಸಾಯಂಕಾಲ ಬೇರೆ ಉತ್ಸವ. ಇದೇ ಮತ್ತೆ ಮರುದಿನ ಬೆಳಿಗ್ಗೆ ಆಗಬೇಕು. ಈ ಕ್ರಮದಲ್ಲಿ ಎಲ್ಲ ಉತ್ಸವ ನಡೆಯುತ್ತವೆ. ಹಲಗೆಗಳನ್ನು ಜೋಡಿಸಿ ಮಾಡಿದ ಉತ್ಸವ ಸಾಧನವನ್ನು ಗೊಲ್ಲರು, ಲಿಂಗಾಯತರು, ಮುಸ್ಲಿಂರು ಮುಂತಾದ ಹಲವು ಜಾತಿಯ ೩೦ ಜನ 'ಕಾಮಾಟರು' ಹೊರುತ್ತಾರೆ. ಇವರಿಗೆ ಪ್ರತಿದಿನವೂ ಕೂಲಿ ಹಣ ನೀಡುತ್ತಾರೆ. ಈ ಉತ್ಸವಗಳು ಗುಡಿಯಿಂದ ಬಜಾರಗುಂಟ ವಾದ್ಯಮೇಳದೊಂದಿಗೆ ತೇರು ಹನುಮಪ್ಪನವರೆಗೂ ಮೆರವಣಿಗೆಯಲ್ಲಿ ಹೋಗಿಬರುವವು. ದಾರಿಯಲ್ಲಿ ಭಕ್ತಾದಿಗಳು ಕಾಯಿ, ಕರ್ಪೂರ, ಮಂಗಳಾರತಿ ಮಾಡಿಸುತ್ತಾರೆ.

ಫಾಲ್ಗುಣ ಬಹುಳ ಪಂಚಮಿಯಂದು ನಡೆಯುವ, "ಗರುಡೋತ್ಸವ" ಈ ಎಲ್ಲ ಉತ್ಸವಗಳಲ್ಲಿ ಪ್ರಮುಖವಾದುದು. ಅಂದು ಸುತ್ತಮುತ್ತಲ ಗ್ರಾಮಗಳ ಜನ ಸಹಸ್ರಾರು ಸಂಖ್ಯೆಯಲ್ಲಿ ನೆರೆಯುತ್ತಾರೆ. ಇಡೀ ರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳಿಗ್ಗೆ ತಮ್ಮ ಊರುಗಳಿಗೆ ಹೋಗಿ ಎರಡು ದಿನ ಬಿಟ್ಟು, ರಥೋತ್ಸವಕ್ಕೆ ಮತ್ತೆ ಬರುತ್ತಾರೆ. ಅಂದು ರಾತ್ರಿ ಕಲ್ಯಾಣೋತ್ಸವ. ನಂತರ ಈ ಗರುಡೋತ್ಸವ, ಇದು ಬೆಳಿಗ್ಗೆ ೪-೩೦ರ ಸಮಯ ಹೊರಡುತ್ತದೆ. ಲಕ್ಷ್ಮೀನರಸಿಂಹನ ಜತೆ ಶ್ರೀದೇವಿ, ಭೂದೇವಿಯರ ಲಗ್ನ ನಡೆಯುತ್ತದೆ. ಅಂದು ಹಾಜರಿರುವ ತಹಶೀಲದಾರರೊ, ಎಂ.ಎಲ್.ಎ.ಯೊ ಅಥವಾ ಎಂ.ಪಿ.ಗಳು ಕನ್ಯಾದಾನ ಮಾಡುತ್ತಾರೆ. ಲಗ್ನದ ಎಲ್ಲ ವಿಧಿವಿಧಾನಗಳು ಜರುಗುತ್ತವೆ.

ಷಷ್ಠಿಯಂದು ಗಜೋತ್ಸವ. ಸಪ್ತಮಿಯಂದು ಸಂಜೆ ರಥೋತ್ಸವ. ಲಕ್ಷಗಟ್ಟಲೆ ಜನ ಸೇರುತ್ತಾರೆಂಬ ಪ್ರತೀತಿ. ಬೆಳಿಗ್ಗೆ ತೇರಿನ ಹತ್ತಿರ ಹೋಮಹವನ, ಬಿಳಿ, ಕಪ್ಪು, ಕೆಂಪು ಅನ್ನವನ್ನು ಬಂಡಿಯಲ್ಲಿ ಹೇರಿಕೊಂಡು (ರಥ ಬಲಿಹರಣ) ಪೂಜಾರಿಗಳು ಊರಲ್ಲಿ ಉಗ್ಗುತ್ತ ಬರುತ್ತಾರೆ. ಇಲ್ಲಿ ಮಡಿತೇರಿನ ಪದ್ಧತಿ ಇಲ್ಲ. ಸಂಜೆ ಒಂದೇ ಸಲ ಎಲ್ಲ ಜಾತಿ ಜನ ಸೇರಿ ತೇರೆಳೆಯುತ್ತಾರೆ. ತೇರಿನಲ್ಲಿ ಪೂಜಾರರು, ತೇರು ನಿಂತರೆ ದೇವರಿಗೆ ಮಂಗಳಾರತಿ ಮಾಡುತ್ತಾರೆ. ಬಡಿಗರು ಚವರಿ ಹಾಕುತ್ತಿರುತ್ತಾರೆ. ಇಬ್ಬರು ಮೂವರು ಕಾಮಾಟರು ತೇರಿನ ಉಸ್ತುವಾರಿಗಾಗಿ ಹತ್ತಿನಿಂತಿರುತ್ತಾರೆ. ಜನ "ವೆಂಕಟರಮಣ ಗೋವಿಂದಾ, ಗೋವಿಂದಾ", "ಕನಕಾಚಲಪತಿ ಗೋವಿಂದಾ, ಗೋವಿಂದಾ" ಇತ್ಯಾದಿ ಕೂಗುತ್ತ ತೇರು ಹನುಮಪ್ಪನವರೆಗೂ ಎಳೆದು ಹಿಂದೆ ತರುತ್ತಾರೆ. ನೆರೆದ ಜನ ತೇರಿಗೆ ಬಾಳೆಹಣ್ಣು, ಉತ್ತತ್ತಿ ಎಸೆಯುತ್ತಾರೆ.

ಅಷ್ಟಮಿಯಂದು ಕಡುಬಿನ ಕಾಳಗ. ಕುದುರೆ ವಾಹನದ ಮೇಲೆ ಉತ್ಸವಮೂರ್ತಿ ಇಟ್ಟುಕೊಂಡು ತೇರು ಹನುಮಪ್ಪನವರೆಗೆ ಹೋಗಿ ಬರುತ್ತಾರೆ. ಇಂದು ನರಸಿಂಹ ಮಾತ್ರ ಉತ್ಸವದಲ್ಲಿರುತ್ತಾನೆ. ಲಕ್ಷ್ಮೀಯನ್ನು ಪಾಲಕಿಯಲ್ಲಿಟ್ಟುಕೊಂಡು ಹೋಗುತ್ತಾರೆ. ಆಕೆಯನ್ನು ಹುಡುಕಿ, ಹುಡುಕಿ ಸಿಗದೆ ಇದ್ದಾಗ ಕಂಬಕಂಬಕ್ಕೆ ಹಾಯ್ದು ಬಂದು ಕೂರುತ್ತಾನೆ. ಆಗ ಲಕ್ಷ್ಮೀ ಇರುವ ಪಾಲಕಿಯನ್ನು ಎದುರು ತರುತ್ತಾರೆ. ಆತನಿಗೆ ಆಕೆ ಬೇಟಿಯಾದುದಕ್ಕೆ ಖುಷಿಯಾಗುತ್ತದೆ. ಈ ಪ್ರಸಂಗಕ್ಕೆ ಇಲ್ಲಿ ಕಡುಬಿನ ಕಾಳಗವೆನ್ನುತ್ತಾರೆ.

ಮರುದಿನ ಪಾಲಿಕಿಯಲ್ಲಿ ದೇವರನ್ನು ಚಕ್ರತೀರ್ಥಕ್ಕೆ ತರುತ್ತಾರೆ. ಎಲ್ಲರೂ ಸ್ನಾನ ಮಾಡುತ್ತಾರೆ; ದೇವರಿಗೂ ಮಾಡಿಸುತ್ತಾರೆ. ಗುಡಿಗೆ ಬರುತ್ತಾರೆ, ಇದು ಅವಭೃತ ಸ್ನಾನ. ಧ್ವಜವನ್ನು ಇಳಿಸುವುದು ಈ ದಿನವೇ.

ದಶಮಿಯಂದು ಪುಷ್ಪಯಾಗ. ರಾತ್ರಿ ಬಾಳೆಹಣ್ಣು ಸೀಕರಣೆ, ಪಂಚಾಮೃತ ವಿತರಣೆ. ಜಾತ್ರೆಯಲ್ಲಿ ಹಿಂದೆ ಪಂಚಮಿಯಿಂದ 'ಹುತ್ರಿ ಆಡುವ' ವಿಶೇಷ ಪದ್ಧತಿಯಿತ್ತು. ಹತ್ತು ವರ್ಷದಿಂದೀಚೆ ಅದನ್ನು ರದ್ದುಪಡಿಸಿದ್ದಾರೆ. ದೇಗುಲದಲ್ಲಿ ಬಸವಿಯರಿಗೆ ಮುದ್ರೆ ಹಾಕಲಾಗುತ್ತಿತ್ತು. ಹಾಗೆ ದೇವರು ಹೊತ್ತ ಬಸವಿಯರನ್ನು ಹರಿಜನ ಮತ್ತು ಗೊಲ್ಲ ಹುಡುಗರು ಹೊತ್ತುಕೊಂಡು ಕುಣಿಯುತ್ತ ಬಾಜಾ ಬಜಂತ್ರಿಯೊಂದಿಗೆ ಹಣ ಎತ್ತುತ್ತಿದ್ದರು. ನಂತರ ಕಾಯಿ ಕರ್ಪೂರ ಮಾಡಿಸಿ ಸಂಜೆ ದೇವದಾಸಿಯರಿಗೆ ಸೀರೆ ಮಾಡಿಸುತ್ತಿದ್ದರು. ಇದಕ್ಕೆ 'ಹುತ್ರಿಆಟ' ಎನ್ನುತ್ತಿದ್ದರು.

ಯುಗಾದಿ, ಗೋಕುಲಾಷ್ಟಮಿ, ನವರಾತ್ರಿ, ಮಹಾನವಮಿ ಮೊದಲಾದ ಹಬ್ಬದ ದಿನಗಳಲ್ಲಿ ಗುಡಿಯಲ್ಲೇ ಉತ್ಸವಗಳು ಜರಗುತ್ತವೆ. ಬೇಡಿಕೊಂಡ ಭಕ್ತಾದಿಗಳು ಹಣ ಕೊಟ್ಟು ಆಗಾಗ ಉತ್ಸವಗಳನ್ನು ಹೊರಡಿಸುವದೂ ಇದೆ.

ಪಂಚರಾತ್ರಿ ಆಗಮದ ಪ್ರಕಾರ ಪೂಜೆ ಮಾಡುವ ಶ್ರೀವೈಷ್ಣವ ಬ್ರಾಹ್ಮಣರು, ಆರು ಸೋದರರಿದ್ದು ಪ್ರತಿವರ್ಷ ಒಬ್ಬೊಬ್ಬರಂತೆ ಪೂಜೆ ಮಾಡುತ್ತಿದ್ದಾರೆ. ಭಕ್ತರು ದೇವರಿಗೆ ಪೂಜಾಭಿಷೇಕದ ಜತೆ ದಾಸೋಗ ಏರ್ಪಡಿಸುತ್ತಾರೆ. ಅಂದರೆ ದಾಸಪ್ಪಗಳ ಗೋಪಾಳಕ್ಕೆ ಪೂಜೆ ಎಡೆ ಮಾಡಿ, ಅವರು ಊಟ ಮಾಡಿದ ನಂತರವೇ ತಾವು ಊಟ ಮಾಡುತ್ತಾರೆ. ಜವುಳ, ಲಗ್ನ, ಉಪನಯನ ಮೊದಲಾದ ಕಾರ್ಯಗಳು ದೇಗುಲದಲ್ಲಿ ನಡೆಯುತ್ತವೆ.

ಜಾತ್ರೆಯ ಬಾಬುದಾರರು ಗೊಲ್ಲರು, ಬಡಿಗರು, ಬಸವಿಯರು, ಕುಂಬಾರರು, ಕಂಬಾರರು, ಕಾಮಾಟರು, ಪುರೋಹಿತರು, ಜೀನಗಾರರು ಮೊದಲಾದವರು. ತಹಶೀಲದಾರರ ಅಧ್ಯಕ್ಷತೆಯಲ್ಲಿ ದೇವಸ್ಥಾನಟ ಕಮಿಟಿ ಇದೆ.

ಸುಮಾರು ೨೦ ಸಾವಿರ ಜನಸಂಖ್ಯೆಯಿರುವ ಕನಕಗಿರಿಯಲ್ಲಿ ಎಲ್ಲ ಜಾತಿ ಜನರಿದ್ದಾರೆ. ಊರಲ್ಲಿ ದುರಗವ್ವ, ದ್ಯಾಮವ್ವ, ನಗರೇಶ್ವರ, ಬಸವಣ್ಣ, ಪಂಪಾಪತಿ, ಹಂಪಮ್ಮ, ನೀಲಕಂಠೇಶ್ವರ ಮೊದಲಾದ ಹಲವಾರು ಹಳೆಯ ಗುಡಿಗಳಿವೆ.

ಇತರ ಜಾತ್ರೆಗಳು :

ಈ ಊರಿನ ತೊಂಡೆ ತೇರಪ್ಪ ಅಥವಾ ಕಂಟಿರಂಗ ಎಂಬ ಹನುಮಂತನ ಒಂದು ದಿನದ ಜಾತ್ರೆ ಶ್ರಾವಣದ ಕಡೆ ಸೋಮವಾರ ನಡೆಯುತ್ತವೆ. ಅಭಿಷೇಕ ಮಾಡಿ ಗುಡಿಯಿಂದ ಪಾದಗಟ್ಟೆಯವರೆಗೆ ತೇರೆಳೆದು ಉತ್ಸವಮೂರ್ತಿಯನ್ನು ರಾತ್ರಿ ಪೂಜಾರಿಯ ಮನೆಗೆ ತರುತ್ತಾರೆ. ಈಡಿಗ ಕುಲದ ಪೂಜಾರಿಗಳಿದ್ದಾರೆ. ಒಂದೇ ದಿನದ ಜಾತ್ರೆಯಾದರೂ ಸುತ್ತ ಮುತ್ತಲ ಹಳ್ಳಿಗಳ ೩೦-೪೦ ಸಾವಿರ ಜನ ಸೇರುತ್ತಾರೆ.

ಹಿರೇಹಾಳ ಬಸಪ್ಪ :

ಲಿಂಗಾಯತರು ಹೆಚ್ಚು ಸೇರುವ ಒಂದು ದಿನದ ಜಾತ್ರೆ ಶ್ರಾವಣದ ಕಡೇ ಸೋಮವಾರ ನಡೆಯುತ್ತದೆ. ನಂದಿಕೋಲು ಕುಣಿತ ವಿಶೇಷ. ಹಾಲಪ್ಪನ ಮಠದಿಂದ ಗುಡಿಗೆ ಬರುವ ಮುಖ್ಯ ಕಾರ್ಯಕ್ರಮ ಈ ಜಾತ್ರೆಯಲ್ಲಿದೆ. ಇಡೀ ರಾತ್ರಿ ಭಜನೆ ಮಾಡುತ್ತಾರೆ.

ವಡಿಕೀತಾತನ ಜಾತ್ರೆ :

ಕನಕಗಿರಿಯ ಸಮೀಪ ವಡಿಕೀತಾತನ ಜಾತ್ರೆ ತುಂಬ ವಿಶಿಷ್ಟವಾದುದು. ಹಿರೇ ಲಕ್ಷ್ಮಪ್ಪಯ್ಯ (ವಡಿಕಿ ತಾತ) ೧೮೬೦ರಲ್ಲಿ ಜನಿಸಿ, ೧೯೫೪ರಲ್ಲಿ ನಿಧನರಾದರು. ಬುಡ್ಡಪ್ಪಯ್ಯ, ಗಂಗಮ್ಮ ಅವರ ತಂದೆ ತಾಯಿಗಳು. ದಿಗಂಬರರಾಗಿದ್ದು, ಸಾಧಕರಾಗಿ, ತತ್ವಪದ ಹಾಡುತ್ತ ಲಿಂಗಸಗೂರು ತಾಲೂಕು ಯಲಗಟ್ಟಿಗೆ ಬಂದು ಮದುವೆಯಾಗಿ ಉಳಿದರು.

ಎರಡು ದಿನ ತೇರಾಗುತ್ತದೆ. ಮೊದಲದಿನ ಬರಿ ಗಂಡಸರು ಮಾತ್ರ ತಾತನ ತೇರೆಳೆಯುತ್ತಾರೆ. ಪ್ರತಿಯೊಂದು ಕೆಲಸ ಗಂಡಸರೇ ಮಾಡುವುದು. ಮರುದಿನ ಹೆಂಗಸರು ಲಚುಮಮ್ಮನ ತೇರೆಳೆಯುತ್ತಾರೆ. ಅಂದು ಊದುವ, ಬಾರಿಸುವ, ತೇರೆಳೆವ, ಪೂಜುವ ಪ್ರತಿಯೊಂದು ಕೆಲಸವನ್ನು ಹೆಂಗಸರೇ ಮಾಡಬೇಕೆಂಬ ನಿಯಮ. ಹೆಚ್ಚಿನ ವಿವರಗಳನ್ನು ಸಂಗ್ರಹಿಸಬೇಕಿದೆ.

ನವಲಿ :

ಗಂಗಾವತಿಯಿಂದ ೩೫ ಕಿಲೋಮೀಟರು ದೂರದಲ್ಲಿರುವ ನವಲಿಯಲ್ಲಿ ಭೋಗಾಪುರೇಶ (ಹನುಮಂತ) ಪ್ರಸಿದ್ಧ ದೈವ. ದೇವಾಲಯದಲ್ಲಿ ಗರ್ಭಗೃಹ, ಸುಕನಾಶಿ, ನವರಂಗ, ಮುಖಮಂಟಪ, ದ್ವಾರಗೋಪುರಗಳಿವೆ. ಪ್ರಾಕಾರ ಪೂರ್ಣಗೊಂಡಿಲ್ಲ. ವಿಶೇಷವೆಂದರೆ ಗರ್ಭಗೃಹದ ಆಂಜನೇಯ ಭಿನ್ನವಾಗಿದ್ದು (ಒಡೆದಿದ್ದು) ಅದೇ ಪೂಜಲ್ಪಡುತ್ತಿದೆ. ಕಳ್ಳರು ಹಣದ ಆಶೆಗಾಗಿ ವಿಗ್ರಹವನ್ನು ತುಂಡು ಮಾಡಿದರು. ಪೂಜಾರಿಯ ಕನಸಿನಲ್ಲಿ ಮುಖ್ಯ ಪ್ರಾಣ ಬಂದು ವಿಗ್ರಹದ ತುಂಡುಗಳನ್ನು ಗರ್ಭಗುಡಿಯಲ್ಲೇ ಇಟ್ಟು ೭ ದಿನ ಬಾಗಿಲು ಮುಚ್ಚಿ, ಹೊರಗೆ ಮಾತ್ರ ಪೂಜಿಸಲು ಹೇಳಿದ. ಅರ್ಚಕ ಕುತೂಹಲದಿಂದ ೬ನೇ ದಿನ ಬಾಗಿಲು ತೆರೆದ. ವಿಗ್ರಹ ಪೂರ್ತಿ ಹೊಂದಿಕೊಂಡಿರಲಿಲ್ಲ. ಒಡೆದ ವಿಗ್ರಹಕ್ಕೆ ಪೂಜೆ ಸಲ್ಲುತ್ತಿದೆ.

ಚೈತ್ರ ಶುದ್ಧ ಸಪ್ತಮಿಯ ದಿನ ಭೋಗಾಪುರೇಶ ತೇರಾಗುತ್ತದೆ.

ಯಲಬುರ್ಗಾ ತಾಲೂಕಿನ ಜಾತ್ರೆಗಳು

ನಮ್ಮ ನಾಡಿನ ತೀರ ಹಿಂದುಳಿದ ತಾಲೂಕು ಕೇಂದ್ರಗಳಲ್ಲಿ ಯಲಬುರ್ಗಿಯೂ ಒಂದು. ಕೊಪ್ಪಳ ಜಿಲ್ಲೆಯ ಈ ತಾಲೂಕು ಕೇಂದ್ರ ಹಿಂದೊಮ್ಮೆ ಸಿಂದ್ ಅರಸರ ರಾಜಧಾನಿಯಾಗಿತ್ತು. ಈ ಊರಲ್ಲಿ ಹಜರತ್ ಸೈಯ್ಯದ್ ಶಹ ಅಷರಫ್ ಆಲಿ ವಲಿ ಉರುಸು ಮತ್ತು ಮೊಗ್ಗಿ ಬಸವೇಶ್ವರ ಜಾತ್ರೆಗಳು ಪ್ರತಿ ವರ್ಷ ನಡೆಯುತ್ತವೆ.

ಉರುಸು :

ಯಲಬುರ್ಗಾದ ಮುಖ್ಯ ಬಜಾರಿನ ಬೀದಿಗಂಟಿಕೊಂಡೆ ಅಷರಫ್ ಆಲಿ ವಲಿ ಅವರ ದರ್ಗಾ ಇದೆ. ಬೇವಿನಮರದ ಕಟ್ಟೆ, ಕಲ್ಲು ಹಾಸಿಗೆಯ ಅಂಗಳ, ಸುತ್ತಲೂ ಕಾಂಪೌಂಡ್, ಎರಡು ಗೋರಿಗಳು. ಸಿಮೆಂಟಿನಿಂದ ಮಿನಾರ್, ಗುಮ್ಮಟಗಳ ಆಕಾರಗಳನ್ನು ರಚಿಸಿದ್ದಾರೆ. ಕಟಾಂಜನದ ಒಳಗೆ ಇರುವ ಗೋರಿಗೆ ಹಸಿರು ಬಟ್ಟೆ ಹೊದಿಸಿದ್ದಾರೆ. ಪಕ್ಕದ ಗೋರಿಗೆ ಬಿಳಿಯ ಬಟ್ಟೆಯ ಹೊದಿಕೆ, ಕಟಾಂಜನಕ್ಕೆ ಚಂದ್ರ, ನಕ್ಷತ್ರಗಳನ್ನು ಅಳವಡಿಸಿದ್ದಾರೆ.

ದರ್ಗಾದ ವ್ಯವಸ್ಥಾಪಕ ಮಂಡಳಿ ಮತ್ತು ಭಕ್ತರು ಸೇರಿ ಪ್ರತಿವರ್ಷ ಫೆಬ್ರವರಿಯಲ್ಲಿ ಮೂರು ದಿನಗಳ ಉರುಸು ಮಾಡುತ್ತಾರೆ. ೧೯೯೯ರಲ್ಲಿ ನಡೆದ ಉರುಸಿನ ಕಾರ್ಯಕ್ರಮಗಳು ಈ ರೀತಿ ಇವೆ -

ಹಜರತ್ ಸೈಯ್ಯದ್ ಶಾಹ ಅಬ್ದುಲ್ ಖಾದರ ಹುಸೇನಿಯಲ್ ಖಾದರಿ ಸಜ್ಜಾ ನಸೀನ್, ಹನುಮಸಾಗರ ಮತ್ತು ಇಳಕಲ್ಲಿನ ಹಜರತ್ ಸೈಯ್ಯದ್ ಶಾಹಾ ಮುರ್ತುಜಾ ಹುಸೇನಿ ಉಲ್ ಖಾದರ ಉರ್ಫ್ ಫೈಸಲ್ ಪಾಷಾ ಅವರ ಹಸ್ತದಿಂದ ಗಂಧವನ್ನರ್ಪಿಸುವ ಕಾರ್ಯಕ್ರಮ. ಭಾವೈಕ್ಯತಾ ಸಭೆಯಲ್ಲಿ ಮೇಲೆ ಹೇಳಿದವರಲ್ಲದೆ ಯಲಬುರ್ಗಾ ಸಂಸ್ಥಾನ ಹಿರೇಮಠದ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಗಂಗಾವತಿಯ ಹಜರತ್ ಖಿಬಿಲಾ ಸೈಯ್ಯದ್ ಯೂಸೂಫ್ ಪೀರ್ ಖಾದರಿ ಉರ್ಫ್ ಫೀರಜಾನಿ ಸಾಹೇಬ, ಹುಲಿಗಿಯ ಹಜರತ್ ಖಿಬಿಲಾ ಸೈಯ್ಯದ್ ಮಹಮ್ಮದ ಶಫೀ ಅಲ್ ಖಾದರಿ ಚಿಸ್ತಿ ನಿಜಾಮಿ ಅವರೂ ಹಾಜರಿದ್ದರು. ಮೊದಲ ದಿನ 'ಗಂಧ', ಎರಡನೆ ದಿನ 'ಉರುಸು', ಮೂರನೇ ದಿನ 'ಜಿಯಾರತ್'.

ಜುಮ್ಮಾ ಮಸೂತಿ, ಫರೀದ್‌ದಿನ್ ವಲಿ ದರಗಾದಿಂದ ಬ್ಯಾಂಡ್ ಬಾಜಿ ಸಮೇತ ಗಂಧ ಹೊರಟು ಅಷರಫ್ ಅಲಿ ದರಗಾಕ್ಕೆ ಮೆವರಣಿಗೆಯಲ್ಲಿ ಬರುತ್ತದೆ. ಮೇಲೆ ಹೇಳಿದ ಇಬ್ಬರು ಹಜರತ್‌ರು ಅದನ್ನು ಅರ್ಪಿಸಿದರು. ಅಂದು ರಾತ್ರಿ ಭಾವೈಕ್ಯತಾ ಸಭೆ ಮತ್ತು ಜನಪದ ಕಲಾವಿದರಿಂದ ಗೀಗೀ ಪದಗಳು.

ಮರುದಿನದ 'ಉರುಸಿ'ನಂದು ನೆರೆದ ಜನಕ್ಕೆ ಕಮಿಟಿಯವರು ಊಟ ಹಾಕಿಸುತ್ತಾರೆ. ಜಾನಪದ ರಸಮಂಜರಿ ಕಾರ್ಯಕ್ರಮ ನಡೆಯುತ್ತದೆ. ಜಿಯಾರತ್‌ನಂದು ಕುರಾನ್ ಪಠಣ. ಉರುಸಿನಂದು ಬೇಡಿಕೊಂಡ ಭಕ್ತರು ದೀಡ ನಮಸ್ಕಾರ ಹಾಕುತ್ತಾರೆ. ಅವರವರ ಮನೆಗಳಲ್ಲಿ ಕುರಿ ಬೇಟೆಯಾಗುತ್ತದೆ. ಉರುಸಿಗೆ ಸೇರುವ ಜನಗಳಲ್ಲಿ ಮುಕ್ಕಾಲು ಭಾಗ ಹಿಂದುಗಳೆ.

ಪ್ರತಿ ದಿನ ಪೂಜೆ ಮತ್ತು ಪ್ರತಿ ಗುರುವಾರ ಓದಿಕಿ ಇರುತ್ತವೆ. ದರ್ಗಾದ ವ್ಯವಸ್ಥಾಪಕ ಮಂಡಳಿಯ ಕೆಲವರನ್ನು ಅಷರಫ್ ಅಲಿ ಯಾರು? ಎಂದು ಹೇಳಿದರೆ, "ಯಾರೋ ಗೊತ್ತಿಲ್ಲ, ಸುಮಾರು ೬೦ ವರ್ಷದ ಹಿಂದೆ ಈ ಪ್ರದೇಶವೆಲ್ಲಾ ಕಳ್ಳಿ, ಡಬಗಳ್ಳಿ, ಗಲೀಜಿತ್ತು. ಅಷರಫ್ ಅಲಿ ಇಲ್ಲಿ ಬಂದು ಉಳಿದು, ಇಲ್ಲೇ ಸಮಾಧಿಯಾದರು. ಸುಮಾರು ೨೬ ವರ್ಷದಿಂದ ಅವರ ಉರುಸು ಮಾಡುತ್ತಿದ್ದೇವೆ".

ಮೊಗ್ಗಿ ಬಸವೇಶ್ವರ ಜಾತ್ರೆ :

ಊರ ಹೊರಭಾಗದಲ್ಲಿ ಪೂರ್ಬಾಭಿಮುಖವಾಗಿ ಹೊಸದಾಗಿ ಕಟ್ಟಿಸಿರುವ ಮೊಗ್ಗಿ ಬಸವೇಶ್ವರ ದೇಗುಲದ ಗರ್ಭಗುಡಿಯಲ್ಲಿ ಗದ್ದಿಗೆಯ ಮೇಲೆ ನಂದಿ ವಿಗ್ರಹವಿದೆ. ೩೦ ವರ್ಷಗಳ ಹಿಂದೆ ಇಲ್ಲಿ ಬರಿ ಒಂದು ಕಲ್ಲು ಗುಂಡಿತ್ತು. ನಂತರ ನಂದಿಯ ಸ್ಥಾಪನೆ ಯಾಯಿತು. ಗದ್ದಿಗೆಯ ಪಕ್ಕಕ್ಕೆ ಹಳೆಯ ನಂದಿ ವಿಗ್ರಹ ಮತ್ತು ಹಾವಿನ ಕಲ್ಲುಗಳಿವೆ.

ದೇಗುಲ ನಿರ್ಮಾಣದ ಮತ್ತು ಜಾತ್ರೆಯ ಕುರಿತು ಶಿವಬಸಪ್ಪ ಹೂಗಾರ ಅವರು ಒಂದು ಘಟನೆ ಹೇಳಿದರು - ಸುಮಾರು ೩೦ ವರ್ಷದ ಹಿಂದೆ ಇಟಗಿಯ ದೇವರ ಗೂಳಿ (ಎಣ್ಣೆ ಮಾರುವ ಎತ್ತು ಎಂದು ಕೂಡ ಅವರು ಒಂದು ಸಲ ಹೇಳಿದರು). ಈ ಭಾಗದಲ್ಲಿದ್ದ ಗದ್ದೆ ಹೊಕ್ಕು ಕಾಟ ಕೊಡುತ್ತಿತ್ತು. ರೈತರು ಅದನ್ನು ಹೊಡೆದೋಡಿಸುತ್ತಿದ್ದರು. ಒಂದು ಸಲ ಅದು ಗದ್ದೆಯ ಜವುಗಿನಲ್ಲಿ ಹುಗಿದು ಹೋಯಿತು. ಜನ ಕಷ್ಟಪಟ್ಟು ಅಗಿದು ನೋಡಿದಾಗ ಶಿಲೆಯಾಗಿತ್ತು. ಗದ್ದಿ ಬಸವಣ್ಣ ಅಂತ ಅದನ್ನು ಪೂಜಿಸತೊಡಗಿದರು. ಇಟಗಿಯ ಜನ ಈಗಲೂ ಶ್ರಾವಣಮಾಸದಲ್ಲಿ ಮತ್ತು ಜಾತ್ರೆಗೆ ಬಂದು ಕಾಣಿಕೆ ಸಲ್ಲಿಸುತ್ತಾರೆ.

ಇನ್ನೊಂದು ಘಟನೆ ನಡೆಯಿತು - ಸುಮಾರು ೪೦ ವರ್ಷದ ಹಿಂದೆ ಪಂಚಮಸಾಲಿ ಕುಲದ ಗುರುಪಾದಶೆಟ್ಟಿ ಎಂಬವರ ಮೈಯ್ಯಲ್ಲಿ ದೇವರು ಬರುತ್ತಿತ್ತು. ಜನರು ಲಕ್ಷ್ಮಮ್ಮ ಬಂದಾಳ, ಬಸವಣ್ಣ ಬಂದಾನ ಅಂತ ಭಾವಿಸುತ್ತಿದ್ದರು. ಆವೇಶದಲ್ಲಿ ಕುಣಿಯುತ್ತಿದ್ದ ಗುರುಪಾದಶೆಟ್ಟಿಗೆ ಕೇಳಿಕೊಂಡರೆ ಮಕ್ಕಳಾಗುತ್ತವೆಂದು ಪ್ರತೀತಿ ಇತ್ತು. ಮೊದಲಿದ್ದ ಲಕ್ಷ್ಮಮ್ಮ ಹಿಂದೆ ಬಿದ್ದು ಪೂಜೆಯಿಲ್ಲದಂತಾಯಿತು. ಆದರೂ ವರ್ಷದಲ್ಲಿ ಒಂದು ಸಲ ಆಕೆಗೆ ಉಡಿತುಂಬುವ ವಿಧಿಯಾಚರಣೆ ಉಳಿದು ಬಂದಿದೆ. ಆಗ ತೀರ ಚಿಕ್ಕ ಗುಡಿಯಿತ್ತು. ಆಗಿನ ಹಿರಿಯರಾದ ಟೆಂಗಿನಕಾಯಿ ಸಂಗಪ್ಪ, ಶಂಕರ ಗೌಡರು, ಉಳ್ಳಾಗಡ್ಡಿ, ರುದ್ರಪ್ಪ ಗಡಾದ, ಮಹಂತಯ್ಯ ಗಂಧದ ಮೊದಲಾದವರು ಕೂಡಿಕೊಂಡು, ಊರಲ್ಲಿ ಒಂದೂ ಜಾತ್ರೆಯಿಲ್ಲ, ಬಸವ ಜಯಂತಿ

ದಿವಸ ಬಸವಣ್ಣನ ತೇರು ಪ್ರಾರಂಭ ಮಾಡೋಣ ಅಂತ ನಿರ್ಣಯಿಸಿದರು. ಹಳೆಯ ಬಂಡಿಯಲ್ಲಿ ಉತ್ಸವಮೂರ್ತಿಯಿಟ್ಟು ಗುಡಿಯ ಉತ್ತರ ಭಾಗಕ್ಕೆ ಎಳೆಯುತ್ತಿದ್ದರು. ಅದು ಕೊಳಚೆ ಪ್ರದೇಶ. ಈಗ ನಾಲ್ಕಾರು ವರ್ಷದ ಹಿಂದೆ ಗೋವೆಯಿಂದ ತೇರು ಮಾಡಿಸಿಕೊಂಡು ಬಂದಿದ್ದಾರೆ ಊರ ಹಿರಿಯರು. ಗುಡಿ ಎದುರಿಗಿರುವ ರಸ್ತೆಯಲ್ಲಿ ಬಸವಣ್ಣನ ಗುಡಿಯವರೆಗೆ (ಪಾದಗಟ್ಟೆಯಿದೆ) ತೇರೆಳೆಯಲು ಶುರು ಮಾಡಿದರು. ಐದು ದಿನಗಳ ಕಾರ್ಯಕ್ರಮವಾಗಿ ಹಿಗ್ಗಿಸಿದರು. ಬಸವಜಯಂತಿಯ ಅಂಗವಾಗಿ ನಡೆಯುವ ಈ ಜಾತ್ರೆಯ ಕಾರ್ಯಕ್ರಮಗಳು :

ಮೊದಲದಿನ ಮುಂಜಾನೆ ೬.೩೦ ಗಂಟೆಗೆ ನಂದಿ ಧ್ವಜಾರೋಹಣ. ಎರಡನೆಯ ದಿನ ಬೆಳಿಗ್ಗೆ ನಂದಿ ವಿಗ್ರಹಕ್ಕೆ ಮಹಾರುದ್ರಾಭಿಷೇಕ. ಮಧ್ಯಾಹ್ನ ಸಾಮೂಹಿಕ ವಿವಾಹ. ಸಾರ್ವಜನಿಕರ ನೆರವಿನಿಂದ, ಜಾತಿ-ಭೇದವಿಲ್ಲದಂತೆ ಇಪ್ಪತ್ತು, ಮೂವತ್ತು ಜೋಡಿ ವಿವಾಹಗಳಾಗುತ್ತವೆ. ತಾಳಿ, ವಸ್ತ್ರ, ಬಾಸಿಂಗ, ಹೂಹಾರ ದಂಡಿ, ಮಂಟಪ, ದೀಪ, ಪ್ರಸಾದ ಮೊದಲಾದ ವಸ್ತುಗಳನ್ನು ತರುವುದು ಮತ್ತು ಕೆಲಸ ಮಾಡಿಸುವುದನ್ನು ಊರಿನ ಇದ್ದುಳ್ಳವರು ಹಂಚಿಕೊಂಡಿರುತ್ತಾರೆ. ಹಿರೇಮಠ ಸಂಸ್ಥಾನದ ಮಹಾಸ್ವಾಮಿಗಳು ಸಾನಿಧ್ಯ ವಹಿಸುತ್ತಾರೆ. ಬೆಳಿಗ್ಗೆ ಪೂಜಾರಿಯ ಮನೆಯಿಂದ ಮೆರವಣಿಗೆಯಲ್ಲಿ ಕಳಸ ತರುತ್ತಾರೆ. ಮರಡಿ ಮಠದಿಂದ ಹಗ್ಗ, ಸಂಸ್ಥಾನ ಹಿರೇಮಠದಿಂದ ಮತ್ತೊಂದು ಕಳಸ ಇವನ್ನು ಕೂಡ ಹಲಗೆ, ಬ್ಯಾಂಡ್, ಕರಡಿಮಜಲು ಮೇಳದಿಂದ ಗುಡಿಗೆ ತರುತ್ತಾರೆ. ಸಂಜೆ ನಾಲ್ಕು ಗಂಟೆಗೆ ರೋಹಿಣಿ ನಕ್ಷತ್ರದಲ್ಲಿ (ಅಕ್ಷಯ ತೃತೀಯ) ರಥ ಎಳೆಯುತ್ತಾರೆ. ರಥದಲ್ಲಿ ಉತ್ಸವಮೂರ್ತಿಯ ಜತೆ ಪೂಜಾರಿ ಕೂತಿರುತ್ತಾನೆ. 'ಜಯ ನಮಃ ಪಾರ್ವತಿ ಪತಿ-ಪತಿ-ಹರಹರ ಮಾದೇವ' ಎಂಬ ಘೋಷ ಮೊಳಗುತ್ತದೆ. ಸುತ್ತಲ ಹಳ್ಳಿಗಳಿಂದ ಬಂದ ಜನ ತೇರಿಗೆ ಉತ್ತತ್ತಿ, ಬಾಳೆಹಣ್ಣು ಎಸೆಯುತ್ತಾರೆ.

ಮರುದಿನ ಸಂಜೆ ೧೦೧ ಜೋಡಿ ಎತ್ತುಗಳ ಮೆರವಣಿಗೆ. ದಂಡಿಗಿಯ ನೆಲ್ಲುಹುಲ್ಲಿನ ಆನೆಯ ಮೇಲೆ ಬಸವೇಶ್ವರರ ಭಾವಚಿತ್ರವನ್ನಿಟ್ಟು ಊರ ಪ್ರಮುಖ ಬೀದಿಗಳಲ್ಲಿ ದೊಡ್ಡ ಪ್ರಮಾಣದ ಮೆರವಣಿಗೆ ಹೊರಡುತ್ತದೆ. ರಾತ್ರಿ ಹತ್ತು ಗಂಟೆಗೆ ಗುಡಿಗೆ ಮರಳುತ್ತದೆ. ಈ ದಿನವೇ 'ಮರಿಪ್ರಸ್ತ' ಎಂದು ಅನ್ನಸಂತರ್ಪಣೆಯಾಗುತ್ತದೆ. ನಾಲ್ಕು ಮತ್ತು ಐದನೇ ದಿನ ಸಂಜೆ ವಿವಿಧ ಸಂಘ ಸಂಸ್ಥೆಯವರು ಸರ್ವ ಧರ್ಮ ಸಮ್ಮೇಳನ, ಭಾವೈಕ್ಯ ಗೋಷ್ಠಿ, ವಚನ ಸಂಗೀತೋತ್ಸವ ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಸರ್ವಧರ್ಮ ಸಮ್ಮೇಳನದಲ್ಲಿ ವೀರಶೈವ, ಮುಸ್ಲಿಂ, ಜೈನ, ವೈದಿಕ ಪಂಥಗಳಿಗೆ ಸಂಬಂಧಪಟ್ಟ ವಿಷಯಗಳ ಕುರಿತು ವಿದ್ವಾಂಸರು ಉಪನ್ಯಾಸ ನೀಡುತ್ತಾರೆ. ಕನ್ನಡ ಕ್ರಿಯಾ ಸಮಿತಿಯವರು ಇದನ್ನು ನಡೆಸುತ್ತಾರೆ. ಉಪನ್ಯಾಸ, ಜಾನಪದ, ರಸಮಂಜರಿ ಕಾರ್ಯಕ್ರಮಗಳನ್ನು ಆರನೇ ದಿನ ಟೆಂಪೊ ಮಾಲಿಕರ ಸಂಘ, ಪಿಗ್ಮಿ ಏಜೆಂಟರು (೧೯೯೯) ನಡೆಸುತ್ತಾರೆ. ೧೦೧ ಜೋಡೆತ್ತಿನ ಹಳಿ ಬಂಡಿ ಮೆರವಣಿಗೆಯಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಣೆ ಮಾಡುತ್ತಾರೆ. ಉತ್ತಮ ಜವಾರಿ ಎತ್ತು ಮತ್ತು ಸೀಮೆ ಎತ್ತುಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡುತ್ತಾರೆ. ಈ ಊರಲ್ಲಿ ಹಿಂದಿನಿಂದಲೂ ದೊಡ್ಡಾಟದ ಕಲಾವಿದರು ಮತ್ತು ಮೂರ್‍ನಾಲ್ಕು ಮೇಳಗಳು

ಪ್ರಸಿದ್ಧವಿದ್ದು, ಜಾತ್ರೆಯ ಸಂದರ್ಭದಲ್ಲಿ ಕುರುಕ್ಷೇತ್ರ, ದ್ರೌಪದಿ ಸ್ವಯಂವರ, ನಳದಮಯಂತಿ ಮೊದಲಾದ ಬಯಲಾಟ ಗಳನ್ನಾಡುತ್ತಾರೆ. ಜಾತ್ರೆಯಲ್ಲಿ ಎಲ್ಲಾ ತರದ ನೂರಾರು ಅಂಗಡಿಗಳಿರುತ್ತವೆ. ಊರಲ್ಲಿ ನಡೆವ ವಾರದ ಸಂತೆ ಜಾತ್ರೆಯ ಸಂದರ್ಭದಲ್ಲಿ ಗುಡಿಯ ಮುಂದೆ ನಡೆಯುತ್ತದೆ. ಊರಲ್ಲಿ ಪಟ್ಟಿ ಎತ್ತಿ ಹಿರಿಯರ ಸಮಿತಿ ಜಾತ್ರೆಯ ವೆಚ್ಚ ತೂಗಿಸುತ್ತದೆ. ಗುಡಿಗೆ ಮೊದಲು ನಿರ್ದಿಷ್ಟ ಪೂಜಾರಿ ಇರಲಿಲ್ಲ. ಈಚೆಗೆ ಒಬ್ಬರನ್ನು ನೇಮಿಸಿದ್ದಾರೆ. ಬೇಡಿಕೊಂಡ ಹೆಂಗಸರು, ಗಂಡಸರು ಈಶ್ವರ ದೇಗುಲದ ಗುಡಿಯವರೆಗೆ ದೀಡ ನಮಸ್ಕಾರ ಹಾಕುವ ಪದ್ಧತಿ ಇದೆ.

ಈ ಊರಿನ ಇತರ ಉತ್ಸವಗಳು :

ಶ್ರಾವಣ ಮಾಸದ ಕಡೆಯ ಸೋಮವಾರದಂದು ಸಂಸ್ಥಾನ ಹಿರೇಮಠದಿಂದ ಪಲ್ಲಕ್ಕಿ ಉತ್ಸವ ಹೊರಟು ಚವುತಿಮಠದವರೆಗೆ ಮೆರವಣಿಗೆಯಲ್ಲಿ ಬರುತ್ತದೆ. ಉಚ್ಚಾಯ ಕೂಡ ಇರುತ್ತದೆ. ನೇಕಾರರು (ಸಾಳೇರು) ನೀಲಕಂಠಯ್ಯನ ಮಠದಲ್ಲಿ ರುದ್ರಾಭಿಷೇಕ, ಉತ್ಸವ ಏರ್ಪಾಟು ಮಾಡುತ್ತಾರೆ. ಮರಡಿಮಠದಲ್ಲಿ ಪುರಾಣ ಹಚ್ಚಿರುತ್ತಾರೆ. ಎರಡೂ ಮಠದ ಉತ್ಸವಗಳಲ್ಲಿ ಆನೆ ತರಿಸುತ್ತಾರೆ. ಕುದುರೆ ಕುಣಿತ, ಡೊಳ್ಳಿನ ಮಜಲು, ಭಜನೆ ಮೇಳಗಳಿರುತ್ತವೆ. ಶಿವರಾತ್ರಿ ದಿವಸ ಕಲ್ಮಠದಲ್ಲಿ ಹತ್ತು ಹನ್ನೆರಡು ದಿವಸದ ಪುರಾಣ ಹಚ್ಚಿ ರಾತ್ರಿ ಜಾಗರಣೆ ಮಾಡಿ ಸಂಜೆ ಉತ್ಸವವಿರುತ್ತದೆ. ಭಾರತ ಹುಣ್ಣಿಮೆಯಂದು ಊರವರು ಸೇರಿ ಎಲ್ಲಮ್ಮನ ಜಾತ್ರೆ ಮಾಡುತ್ತಾರೆ. ಗುಡಿ ಇದೆ, ನಿರ್ದಿಷ್ಟ ಪುಜಾರಿ ಇಲ್ಲ. ಜಾತ್ರೆ ದಿನ ಬೆಳಿಗ್ಗೆ ತಾಳಿ, ದಂಡೆ ತರುವ ವಿಧಿ, ಪ್ರಮುಖ ಬೀದಿಗಳಲ್ಲಿ ವಿಜ್ರಂಭಣೆಯಿಂದ ಉತ್ಸವ ನಡೆದು ಪ್ರಸಾದ ವಿತರಣೆಯಾಗುತ್ತದೆ. ಶ್ರಾವಣ ಮಾಸದಲ್ಲಿ ಏಳು ಕೋಟಿ ಮಲ್ಲಯ್ಯನ ಉತ್ಸವ, ಅನ್ನ ಸಂತರ್ಪಣೆ ಇರುತ್ತದೆ. ಯುಗಾದಿ ಪಾಡ್ಯದಂದು ತೋಪಿನ ಹನುಮಪ್ಪನ ಕೊಂಡವಾಗುತ್ತದೆ. ಉಪ್ಪಾರ ಕುಲದ ಪೂಜಾರಿಗಳು ಅದರಲ್ಲಿ ಹಾರುತ್ತಾರೆ. ಸಂಜೆ ಉಚ್ಚಾಯವಿರುತ್ತದೆ.

ಈ ಊರಲ್ಲಿ ೧೧ ಮಸೀದಿ ೧೭ ಮಠಗಳಿವೆ. ಈ ಊರ ಜಮೀನೆಲ್ಲ ಮಾಲಿಪಾಟೀಲರು, ಪೋಲಿಸ್ ಪಾಟೀಲರು, ಮಠಗಳು ಮತ್ತು ಬ್ರಾಹ್ಮಣರ ವಶ ದಲ್ಲಿದ್ದವು. ಟೆನೆನ್ಸಿ ಕಾಯಿದೆಯಿಂದಾಗಿ ಅವು ರೈತರ ಪಾಲಾದವು. ಒಂದು ಉದಾಹರಣೆ ಹೇಳುವುದಾದರೆ ಸಂಸ್ಥಾನ ಹಿರೇಮಠಕ್ಕೆ ೭೦೦ ಎಕರೆ ಜಮೀನಿತ್ತು. ಲಿಂಗಾಯತ ಮಠಗಳು ಮತ್ತು ಮುಸ್ಲಿಂರ ಬಾಂಧವ್ಯ ವಿಶೇಷವಾಗಿತ್ತು. ಹನ್ನೊಂದು ಅಲಾವಿದೇವರು ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠದ ಹತ್ತಿರದ ಬಂಕದಲ್ಲಿ ಕೂರುತ್ತಿದ್ದವು. ಅವಕ್ಕೆ 'ಮಠದ ದೇವರು' ಎಂದೇ ಕರೆಯುತ್ತಿದ್ದರು. ಉರುಸಿನಲ್ಲಿ ಈ ಮಠದ ಸ್ವಾಮಿಗಳು ಹೋಗಿ ಗೋರಿಗೆ ಗಂಧ ಏರಿಸಿದ ನಂತರವೇ ಇತರ ಎಲ್ಲಾ ವಿಧಿಗಳು ನಡೆಯುವ ಪರಿಪಾಠವಿತ್ತು. ಮಸೀದಿಗೆ ಓದಿಸುವ ಸಕ್ಕರೆ, ಉಡುಗೊರೆ ಮಠದಿಂದ ಹೋಗುತ್ತಿದ್ದವು.

ಊರ ಮುಖ್ಯ ಬೀದಿಯಲ್ಲಿ ದುರಗಮ್ಮನ ಗುಡಿ ಇದೆ. ಬಡಿಗರು, ಪೂಜಾರಿಗಳು, ನವರಾತ್ರಿಯಲ್ಲಿ ಘಟಸ್ಥಾಪನೆ ಮಾಡಿ ದೇವಿಪುರಾಣ ಹಚ್ಚುತ್ತಾರೆ. ೯ ದಿವಸ ಪುರಾಣ ಪ್ರವಚನ. ಮೆರವಣಿಗೆಗೆ ಶಿರಹಟ್ಟಿಯ ಫಕೀರಸ್ವಾಮಿ ಮಠದಿಂದ ಆನೆ ತರಿಸುತ್ತಾರೆ. ದೇವಸ್ಥಾನದಿಂದ ಊರ ಪ್ರಮುಖ ಬೀದಿಗಳಲ್ಲಿ ದೇವಿ ಫೋಟೋದ ಮೆರವಣಿಗೆ, ನಂತರ ಸಾರ್ವಜನಿಕ ಪ್ರಸಾದ ವಿತರಣೆಗಳಿರುತ್ತವೆ. ಶಿವರಾತ್ರಿಯಲ್ಲಿ ಕುರುಬರು ಬೀರಪ್ಪನ ಪಾಲಿಕಿ ಉತ್ಸವ ಮಾಡುತ್ತಾರೆ. ಈ ಊರ ಸುಮಾರು ೨೫,೦೦೦ ಜನಸಂಖ್ಯೆಯಲ್ಲಿ ಕುರುಬರೇ ಹೆಚ್ಚಿದ್ದಾರೆ.

ಮಂಗಳೂರು :

ಯಲಬುರ್ಗಾ ತಾಲೂಕಿನ ಬಯಲು ಸೀಮೆಯ ದೊಡ್ಡ ಗ್ರಾಮ ಮಂಗಳೂರು. ಸುಮಾರು ೯,೦೦೦ ಜನಸಂಖ್ಯೆಯಿದೆ. ಸಹಸ್ರಮಾನದಷ್ಟು ಪ್ರಾಚೀನವಾದ ಮಂಗಳೇಶ್ವರ ದೇವಾಲಯದಿಂದ ಊರಿಗೆ ಈ ಹೆಸರು ಬಂದಿತೆಂದು ಹಿರಿಯರು ಒಂದು ಕತೆ ಹೇಳುತ್ತಾರೆ. ಕಂಬಳಿ, ಅಂಬಳಿ ಅಂತ ಎರಡೂರು. ಈ ಗ್ರಾಮಗಳ ಹುಡುಗರು ಇಲ್ಲಿ ದನ ಮೇಯಿಸುತ್ತಿದ್ದರು. ಆಗ ಇದು ಕಾನ ಅಡವಿ. ಒಂದು ಆಕಳು ಡಬಗಳ್ಳಿಯ ಹುತ್ತದ ಮೇಲೆ ಹಾಲು ಕರೀತಿತ್ತು. ಮನೆಯಲ್ಲಿ ಹಾಲು ಕೊಡುತ್ತಿರಲಿಲ್ಲ. ಯಜಮಾನರು ಪ್ರಶ್ನೆ ಕೇಳಿಸಿದರು. ಹುತ್ತದಲ್ಲಿ ಈಶ್ವರ ಇದೆ, ಅದಕ್ಕೆ ಆಕಳು ಹಾಲು ಕರೆಯುತ್ತಿದೆ ಅಂತ ಬಂತು. ಎರಡೂ ಊರ ಹಿರಿಯರು ಕೂಡಿ ಹುತ್ತ ಅಗಿದರು. ಈಶ್ವರಲಿಂಗ ಸಿಕ್ಕಿತು. ಕಾನ ಅಡವಿ ಬಯಲು ಮಾಡಿ ಮಂಗಳವಾರ ಸಿಕ್ಕಿದೆ, 'ಮಂಗಲ' ಅಂತ 'ಮಂಗಳೇಶ್ವರ' ಎಂಬ ಹೆಸರಿಟ್ಟರು. ಕಂಬಳಿ ಅಂಬಳಿ ಎರಡೂ ಕಲೆತು ಮಂಗಳೂರಾಯಿತು. ಇನ್ನೊಬ್ಬರ ಪ್ರಕಾರ ಬಾದಾಮಿ ಚಾಲುಕ್ಯ ಅರಸ ಮಂಗಲೇಶ ಈ ಗುಡಿಯನ್ನು ಕಟ್ಟಿಸಿರಬೇಕು.

ಮಂಗಳೇಶ ದೇವಾಲಯ ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹದಲ್ಲಿ ಲಿಂಗವಿದೆ. ವಿಶೇಷವೆಂದರೆ ಲಿಂಗದ ನೀರಹರಿ ಬಲಗಡೆ ಇದೆ. ಸುಕನಾಶಿಯಲ್ಲಿ ನಂದಿವಿಗ್ರಹ ಲಿಂಗಕ್ಕೆ ಅಭಿಮುಖವಾಗಿರದೆ ಪಕ್ಕಕ್ಕೆ ಇದೆ. ಮುಖಮಂಟಪದಲ್ಲಿ ಕಟಾಂಜನ. ಬಲಭಾಗದ ಗರ್ಭಗೃಹದಲ್ಲಿ ಕಿರೀಟಧಾರಿ ಪಾರ್ವತಿ ಶಿಲಾ ವಿಗ್ರಹ, ಸೀರೆಯುಡಿಸಿದ್ದಾರೆ. ಅಂಗಳದಲ್ಲಿ ಕಂಬ, ನಂದಿ ವಿಗ್ರಹಗಳಿವೆ. ಗೋಪುರ ಕಳಸಗಳಿವೆ. ಇದು ಆಧುನಿಕ ರಚನೆ. ಪಾರ್ವತಿ ಗುಡಿಗೆ ಗೋಪುರ ಕಳಸಗಳಿಲ್ಲ. ಮುಖಮಂಟಪದಲ್ಲಿ ಅರ್ಧ ಅಡಿ ಎತ್ತರದ ಗಣಪತಿ ವಿಗ್ರಹವಿದೆ. ದ್ವಾರಬಾಗಿಲ ಹೊರಗೆ ಅಂಗಳದಲ್ಲಿ ಅರಳಿಕಟ್ಟೆ, ನಂದಿವಿಗ್ರಹ, ಹಾವಿನ ಶಿಲೆಗಳಿವೆ.

ಪ್ರತಿ ವರ್ಷ ಫಾಲ್ಗುಣ ಶುದ್ಧ ನವಮಿಯಂದು ರಥೋತ್ಸವ. ಅದಕ್ಕೂ ೬ ದಿನ ಮೊದಲೆ ಜಾತ್ರೆಯ ಕೆಲಸಗಳು ಪ್ರಾರಂಭ. ಮೊದಲ ದಿನ ದೇವರ ಪಟ ಕಟ್ಟುವುದು. ಬಟ್ಟೆಯ ಮೇಲೆ ನಂದಿ ಚಿತ್ರ ಬರೆದು ದೀಪಸ್ಥಂಬಕ್ಕೆ ಕಟ್ಟುತ್ತಾರೆ. ಪಂಚ ಕಳಶ ಹೂಡಿ ಪೂಜಿಸಿ ದೇವರಿಗೆ ಕಂಕಣ ಕಟ್ಟುತ್ತಾರೆ. ಪೂಜಾರಿಗಾಗಲಿ, ಇತರರಿಗಾಗಲಿ ಕಂಕಣ ಕಟ್ಟುವುದಿಲ್ಲ. ಪೂಜೆ ಮಾಡಿ ಹಂದರ ಹಾಕುತ್ತಾರೆ. ಲಗ್ನಪತ್ರಿಕೆ ಬರೆಯುತ್ತಾರೆ. ಅಂದು ಸಾರ್ವಜನಿಕರಿಗೆ ಪ್ರಸ್ತ. ದೇವರನ್ನು

ಪಲ್ಲಕ್ಕಿಯಲ್ಲಿ ಹೊರಡಿಸಿ ಕಲ್ಯಾಣ ಮಂಟಪದ ಹತ್ತಿರ ಬಂದು ತೇರಿನ ಪೂಜೆ ಮಾಡುತ್ತಾರೆ. ಹಿರೇಮಠದ ಪಟ್ಟದ ದೇವರನ್ನು ಕರೆತಂದು ಜೀರರ, ಅಕ್ಕಸಾಲಿಗರ ಮನೆಗಳಿಗೂ ಹೋಗಿ ಬರುತ್ತಾರೆ. ಅಲ್ಲಿಂದ ಮುಂದಿನ ಐದು ದಿನ ವಿವಿಧ ವಾಹನಗಳ ಉತ್ಸವಗಳು. ಮಯೂರೋತ್ಸವ, ವ್ಯಾಘ್ರೋತ್ಸವ, ಸರ್ಪೋತ್ಸವ, ನಂದಿಉತ್ಸವ, ಚಕ್ರೋತ್ಸವ. ದಶಮಿದಿಂಡಿನಲ್ಲಿ ಈ ವಾಹನಗಳನ್ನು ಇಟ್ಟು ಹೊತ್ತುಕೊಂಡು ಹೋಗುತ್ತಾರೆ. ಇದನ್ನು ಯಾರಾದರೂ ಹೊರಬಹುದು. ಇಂಥವರೇ ಹೊರಬೇಕೆಂದಿಲ್ಲ. ಉತ್ಸವಗಳು (ಉಚ್ಚಾಯ) ಗುಡಿಯಿಂದ ಊರಲ್ಲಿರುವ ಕಲ್ಯಾಣ ಮಂಟಪದವರೆಗೆ ಮೆರವಣಿಗೆ ಮೇಳದೊಂದಿಗೆ ಹೋಗಿ ಬರುತ್ತವೆ. ಸನೇವು (ಸನಾದಿ) ಕರಡಿ ಮಜಲು ಮೊದಲಾದ ವಾದ್ಯ ಮೇಳವಿರುತ್ತದೆ. ೫ನೇ ದಿನ ಕಲ್ಯಾಣ ಮಂಟಪದಲ್ಲಿ ಪಾರ್ವತಿಯ ಜತೆ ಮಂಗಳೇಶ್ವರನ ಮದುವೆ. ಕೊಮಟಿಗರು ಹೆಣ್ಣಿನ ಕಡೆಯವರಾಗಿ, ದೈವದವರು ಗಂಡಿನ ಕಡೆಯವರಾಗಿ ಲಗ್ನದ ಎಲ್ಲ ಕ್ರಮಗಳನ್ನು ಪೂರೈಸುತ್ತಾರೆ. ಪಾರ್ವತಮ್ಮನ, ಮಂಗಳೇಶ್ವರನ ಪ್ರತ್ಯೇಕ ಆಹೇರು ಬರೆಯುತ್ತಾರೆ. ಅಂದು ಸಾರ್ವಜನಿಕರಿಗೆ ಊಟ. ಸಂಜೆ ನಾಲ್ಕೂವರೆಗೆ ಮಹಾರಥೋತ್ಸವ. "ಜಯ ನಮಃ ಪಾರ್ವತಿ ಪತಿ ಹರಹರ ಮಹದೇವ" ಎಂದು ಕೂಗುತ್ತ ರಥ ಎಳೆಯುತ್ತಾರೆ. ತೇರಿನಲ್ಲಿ ಉತ್ಸವಮೂರ್ತಿ, ಸ್ವಾಮಿಗಳು, ಪೂಜಾರರು ಮತ್ತು ಗಾಲಿಗಳ ಹತ್ತಿರ ಬಡಿಗರು ಕೂತಿರುತ್ತಾರೆ. ಈ ಸಂದರ್ಭದಲ್ಲಿ ಸುತ್ತಮುತ್ತಲ ಗ್ರಾಮಗಳ ೮-೧೦ ಸಾವಿರ ಜನ ಸೇರುತ್ತಾರೆ.

ಮರುದಿನ ಶಿವಭಜನೆ, ಕೀರ್ತನೆ, ಮುಂಗ್ಯೆ ಆಟ, ಸಿನೇಮಾ, ನಾಟಕ, ಬಯಲಾಟ ಮೊದಲಾದ ಮನರಂಜನಾ ಕಾರ್ಯಕ್ರಮಗಳು. ೭ನೇ ದಿನ ಮಂಗಳೇಶ್ವರನಿಗೆ ಅಭಿಷೇಕ, ಮಧ್ಯಾಹ್ನ ಮಹಾಗಣಾರಾಧನೆ, ಪಟ್ಟದ ದೇವರು ಮತ್ತು ಜಂಗಮರಿಗೆ ಊಟ ಹಾಕಿಸುತ್ತಾರೆ. ೯ನೇ ದಿನ ಮಂಗಳೇಶ್ವರ ಕುದುರೆ ಏರಿ 'ಕಡುಬಿನ ಕಾಳಗ'ಕ್ಕೆ ಹೊರಡುವುದು. ಇಲ್ಲಿ ಇದು ಹೆಣ್ಣಿನ ಮನೆಗೆ ಗಂಡಿನ ಕಡೆಯವರು ಹೋಗಿ 'ಹೆಣ್ಣು ಕರೆತರುವ' ಸಂದರ್ಭದ ನಾಟಕೀಯ ಸನ್ನಿವೇಶವಾಗುತ್ತದೆ. 'ಕನ್ಯಾ ಕರ್ಯಾಕ ಬಂದೀವಿ, ಕಳಿಸಿ ಕೊಡಿರಿ' ಎಂದು ಗಂಡಿನ ಕಡೆಯವರು ಕೇಳಿದರೆ, ಹೆಣ್ಣಿನ ಕಡೆಯವರು, 'ಈಗ ನಮಗ ಅನುಕೂಲ ಇಲ್ಲಾ, ಮುಂದಿನ ವಾರ ಬರ್ರಿ' ಎಂದೋ 'ಹಿರ್ಯಾರು ಹಂಪಿ ಜಾತ್ರಿಗೆ ಹೋಗ್ಯಾರ, ಆಮ್ಯಾಲ ಬರ್ರಿ' ಎಂದೋ ಪೀಡಿಸುತ್ತಾರೆ. ಕೊನೆಗೆ ಪಾರ್ವತಿ ದೇವಿಯನ್ನು ಕಳಿಸಿ ಕೊಡುತ್ತಾರೆ. ಗೃಹಪ್ರವೇಶವಾಗುತ್ತದೆ. ಕೆಲವರ್ಷಗಳ ಹಿಂದೆ ಕಡುಬಿನ ಕಾಳಗದಂದು ಕುಂಕುಮ ಎಸೆದಾಡುವ ಪದ್ಧತಿಯಿತ್ತು. ಅದು ಅತಿರೇಕಕ್ಕೆ ಹೋದುದರಿಂದ ರದ್ದು ಮಾಡಿದ್ದಾರೆ. ದೇವಿಯನ್ನು ಕರೆದು ತಂದು ಐದು ಸುತ್ತು ಪ್ರದಕ್ಷಿಣೆ ಹಾಕಿ ಹಾಲು ಉಕ್ಕಿಸುತ್ತಾರೆ. ಪಟ ಕಟ್ಟುವ ದಿವಸ ಒಂಬತ್ತು ಹರಿವಾಣಗಳಲ್ಲಿ ಒಂಬತ್ತು ವಿಧದ ಧಾನ್ಯಗಳನ್ನು ಮೊಳಕೆಗೆ ಇಟ್ಟಿರುತ್ತಾರೆ. ಹಾಲು ಯಾವ ದಿಕ್ಕಿಗೆ ಉಕ್ಕುತ್ತದೆಯೊ, ಆ ಕಡೆ ಮಳೆ ಬೆಳೆ ಸಮೃದ್ಧವಾಗುತ್ತದೆ, ಹರಿವಾಣದಲ್ಲಿ ಯಾವ ಧಾನ್ಯ ಚೆನ್ನಾಗಿ ಮೊಳಕೆ ಬಂದಿರುತ್ತದೆಯೊ, ಆ ಧಾನ್ಯ ಬಿತ್ತುವುದು ಯೋಗ್ಯವೆಂದು ರೈತರು ಭಾವಿಸುತ್ತಾರೆ. ರಥೋತ್ಸವ ವಾದ ಐದು ದಿನಕ್ಕೆ ಕಳಸ ಇಳಿಸುತ್ತಾರೆ. ಮಹಾಪ್ರಸ್ತಾ ನಡೆಯುತ್ತದೆ.

ವರ್ಷದ ಇತರ ಆಚರಣೆಗಳಲ್ಲಿ ಕಾರ್ತಿಕದಲ್ಲಿ ಒಂದು ತಿಂಗಳು ದೀಪ ಹಚ್ಚುವುದು, ಶ್ರಾವಣದಲ್ಲಿ ಪಲ್ಲಕ್ಕಿ ಉತ್ಸವ, ಬನ್ನಿ ಮುಡಿಯುವ ಹಬ್ಬದಂದು ದಶಮಿ ದಿಂಡಿನಲ್ಲಿ ದೇವರು ಹಳ್ಳಕ್ಕೆ ಹೋಗಿ ಬನ್ನಿ ಮುಡಿಯುವುದು ಮುಂತಾದ ಕಾರ್ಯಕ್ರಮಗಳಿರುತ್ತವೆ. ಲಿಂಗಾಯತ ಜೀರರು ಪೂಜಾರಿಗಳು, ಇವರ ನಾಲ್ಕು ಮನೆಗಳಿವೆ. ಎಣ್ಣೆ ದೀವಿಗೆ, ಆಪ್ತಗಿರಿ, ದೇವರು ಹೊರುವವರಿಗೆ ಮಾನ್ಯದ ಭೂಮಿ ('ಮಾನೇವು')ಗಳಿವೆ. ೪೦ ವರ್ಷದ ಹಿಂದೆ ಪಾತ್ರದವರು (ದೇವದಾಸಿಯರು) ಇದ್ದರು. ಅವರಿಗೂ ಮಾನ್ಯದ ಜಮೀನಿದ್ದವು. ಈ ಊರಲ್ಲಿ ಗಾಣಿಗರು, ಲಿಂಗಾಯತರು, ಶೆಟ್ಟರು, ಕುರುಬರು, ಉಪ್ಪಾರರು, ಮಾದಿಗರು, ಮುಚಿಗೇರು, ಬ್ಯಾಗಾರು, ಬ್ರಾಹ್ಮಣರು, ಕಬ್ಬೇರರು, ಮುಸ್ಲಿಂರು, ಬೇಡರಿದ್ದಾರೆ. ಶಾಮಲಂಕಾವಲಿ ಉರುಸು, ಮುದುಕಜ್ಜನ ಪ್ರಸ್ತಾ, ಹನುಮಂತ ದೇವರ ಉಚ್ಚಾಯಗಳು ನಡೆಯುತ್ತವೆ. ಮಂಗಳೇಶ್ವರನಲ್ಲದೆ, ವೆಂಕಟರಮಣ, ಮರಿಯವ್ವ, ದ್ಯಾಮವ್ವ, ಶರಣ ಬಸಪ್ಪ, ದರಗಾ, ಹನುಮಂತ, ಮುದುಕಜ್ಜನ ಗುಡಿಗಳಿವೆ.

ರ್‍ಯಾವಣಕಿ :

ಯಲಬುರ್ಗಾದಿಂದ ೧೫ ಕಿಲೋಮೀಟರು ದೂರದಲ್ಲಿರುವ 'ರ್‍ಯಾವಣಕಿ' ಸುಮಾರು ೩೫೦ ಮನೆಗಳ ಗ್ರಾಮ. ಬಿಜ್ಜಳನನ್ನು ಕೊಲೆ ಮಾಡಿದ ಜಗದೇವಯ್ಯ, ಮಲ್ಲಿಬೊಮ್ಮಯ್ಯಗಳು ಹುಟ್ಟಿದ ಊರು ಎಂದು ಖ್ಯಾತಿಯಿದ್ದರೂ, ಇಲ್ಲಿ ಅವರ ಸ್ಮಾರಕಗಳೆಂದರೆ ಕಲ್ಲಿನಾಥನ ಗುಡಿಯ ಅಂಗಳದ ಬೇವಿನಮರದ ಕಟ್ಟೆಯ ಮೇಲಿರುವ ಎರಡು ಸಣ್ಣ ನಂದಿ ವಿಗ್ರಹಗಳು, ಬಿಜ್ಜಳನ ಕೊಲೆ ಮಾಡಿ ಇಲ್ಲಿ ಕಲ್ಲಾದರು ಎಂದು ಜನರ ನಂಬಿಕೆ. ಪೂರ್ವಾಭಿಮುಖವಾಗಿರುವ ಕಲ್ಲಿನಾಥನ ಗುಡಿಯಲ್ಲಿ ಲಿಂಗವಿದೆ. ಹೊರಕೋಣೆಯಲ್ಲಿ ನಂದಿವಿಗ್ರಹ, ಕಟ್ಟಿಗೆ ಕಂಬಗಳ ಸಾದಾ ಗುಡಿ ಇದು.

ಯುಗಾದಿಯ ಮರುದಿನ ಒಂದು ದಿನದ ಜಾತ್ರೆಯಾಗುತ್ತದೆ. ಗುಡಿಯ ಎದುರು ಕೊಂಡದಲ್ಲಿ ನೀರು ತುಂಬಿಸುತ್ತಾರೆ. ಕವಳಗೇರಿಯ ಉಪ್ಪಾರರು, ಕೊಂಡ ಹಾರುವವರು. ಐದು ಕಳಸ ಹೂಡಿ ಸುರಗಿಯ ದಾರ ಸುತ್ತಿ, ಉಪ್ಪಾರರಿಗೆ ಆ ದಾರ ಕಟ್ಟಿದ ನಂತರ ಅವರು ಕೊಂಡ "ತುಳುಕುತ್ತಾರೆ". ಇದಾದ ನಂತರ ಉತ್ಸವ. ಬಂಡಿಯಲ್ಲಿ ಉತ್ಸವ ಮೂರ್ತಿಯಿಟ್ಟು ಬೇವಿನಗಿಡದವರೆಗೆ (ಪಾದಗಟ್ಟೆ) ಎಳೆಯುತ್ತಾರೆ.

ಹನುಮಪ್ಪನ ಜಾತ್ರೆ : ಊರಿಂದ ಒಂದೂವರೆ ಕಿಲೋಮೀಟರು ದೂರ ಹೊಲದಲ್ಲಿ ವೀರಣ್ಣನ ಗುಡಿ ಇದೆ. ಹನುಮಂತ ದೇವರಿಗೆ ಇಲ್ಲಿಯ ಜನ ವೀರಣ್ಣ ಎಂದು ಕರೆಯುತ್ತಾರೆ. ಗುಡಿಯ ಹಿಂಭಾಗದ ಹೊರಗೋಡೆ ಗೂಡಿನಲ್ಲಿ ಕೈ ಮುಗಿದು ಮಂಡಿಯೂರಿ ಕುಳಿತ ವ್ಯಕ್ತಿಯ ಉಬ್ಬು ಶಿಲ್ಪವಿದ್ದು ಇದೇ ನಿಜವಾದ ವೀರಣ್ಣ ಎಂದು ಪೂಜಾರಿ ಹೇಳಿದ. ಲಕ್ಕಿಪತ್ರಿ ಏರಿಸಿ ಪೂಜಿಸುತ್ತಿದ್ದರು. ಇದರ ಎದುರೇ 'ಹೇಳಿಕೆ'ಯಾಗುತ್ತದೆ.

ಗರ್ಭಗುಡಿಯಲ್ಲಿ ಕರಿಯ ಶಿಲೆಯ ಹನುಮಂತನ ವಿಗ್ರಹವಿದೆ. ಅಂಗಳದಲ್ಲಿ ಕಟ್ಟೆ, ಕಂಬ, ಬೇವಿನ ಮರಗಳು, ನಾಗನಕಲ್ಲು, ನಂದಿ ವಿಗ್ರಹ, ನಾಲ್ಕು ಗಾಲಿಯ ಸಣ್ಣ ತೇರು

(ಉಚ್ಚಾಯ) ಬರಮ ದೇವರ ಪಾದಗಟ್ಟೆ ಇವೆ. ವಿಶೇಷವೆಂದರೆ ಅಂಗಳದ ದೀಪದ ಕಟ್ಟೆಯ ಮೇಲೆ (ಗರ್ಭಗುಡಿಗೆ ಅಭಿಮುಖವಾಗಿ) ನಾಲ್ಕು ಜೊತೆ ದೊಡ್ಡ ಗಾತ್ರದ ತೊಗಲಿನ ಪಾದರಕ್ಷೆಗಳು, ಎರಡು ಜತೆ ಹಾವುಗೆಗಳಿರುವುದು. ಬೇಡಿಕೊಂಡ ಭಕ್ತರು ಇವನ್ನು ಮಾಡಿಸಿಟ್ಟಿದ್ದಾರೆ. ಯಾರಿಗಾದರೂ ಪೀಡೆ ಪಿಶಾಚಿ ಬಂದಾಗ ಇವುಗಳಿಂದ ಹೊಡೆದರೆ ಪೀಡೆ ಕಳೆಯುತ್ತದೆ ಎಂಬ ನಂಬುಗೆ ಇದೆ. ಒಂದು ಜತೆ ತೊಗಲಿನ ಚಪ್ಪಲಿ ಮಾಡಿಸಬೇಕಾದರೆ ಐದಾರು ಸಾವಿರ ರೂಪಾಯಿ ವೆಚ್ಚ ತಗಲುತ್ತದೆ. ಅವನ್ನು ಒಂದೇ ದಿನದಲ್ಲಿ, ಮಡಿ ಹುಡಿಯಿಂದ ಮಾಡಬೇಕೆಂಬ ನಿಯಮವಿದೆ. ಈ ಕಟ್ಟೆಯ ಕೆಳಗೆ ಗೂಡಿನಲ್ಲಿ ಗೋವಿಂದ ಆದವರು (ದಾಸಪ್ಪ, ದಾಸಮ್ಮ) ತೆಗೆದುಕೊಳ್ಳುವ ಗೋಪಾಳ ಬುಟ್ಟಿಗಳಿವೆ. ಪಕ್ಕಕ್ಕೆ ಗೌರಿ ಕಳಸಗಳಿವೆ. ಹರಕೆ ಮಾಡಿಕೊಂಡವರು ಕಂಬಳಿ ಹಾಸಿ ಗೋಪಾಳಬುಟ್ಟಿ ಇಟ್ಟು ಪೂಜೆ ಮಾಡಿ ಪ್ರಸ್ತಾ ಮಾಡಿಸುತ್ತಾರೆ. ಗೌರಿ ಕಳಸಗಳನ್ನು ಜೀರರಿಂದ ಹಣ ಕೊಟ್ಟು ಮಾಡಿಸುತ್ತಾರೆ. ಅವನ್ನು ದೇವರಿಗೆ (ವೀರಣ್ಣ) ಅರ್ಪಿಸುತ್ತಾರೆ.

ಪ್ರತಿ ವರ್ಷ ಚೈತ್ರ ಶುದ್ಧ ರಾಮನವಮಿಯಂದು ತೇರೆಳೆಯುತ್ತಾರೆ. ಐದು ದಿನ ಜಾತ್ರೆ. ಲಿಂಗಾಯತರು ಪೂಜಾರಿಗಳು. ಮೊದಲ ದಿನ ಉತ್ಸವ, ಅಗ್ನಿಕೊಂಡ, ಹೇಳಿಕೆ, ಪ್ರಸ್ತಾ. ಮರು ದಿನ ಬೆಳ್ಳಿ ದೇವರ ಮೆರವಣಿಗೆ ಮತ್ತು ತೇರು. ಊರಿಂದ ಗುಡಿಯವರೆಗೆ ಬೆಳ್ಳಿಮೂರ್ತಿಯನ್ನು ಕೈಲಿ ಹಿಡಿದುಕೊಂಡು ಮೆರವಣಿಗೆಯಲ್ಲಿ ಬರುತ್ತಾರೆ. ಜನ ಉಚ್ಚಾಯವನ್ನು ಕಾಳಮ್ಮನ ಗುಡಿಯವರೆಗೆ ಎಳೆದು ತರುತ್ತಾರೆ. 'ವೀರಣ್ಣ ಗೋವಿಂದ ಗೋವಿಂದಾ', 'ರಾಮ, ರಾಮ ಗೋವಿಂದಾ' ಎಂದು ಜನ ಕೂಗುತ್ತಾರೆ. ಇಬ್ಬರು ಪೂಜಾರಿಗಳು ಒಂದು ದಿನ ಉಪವಾಸವಿದ್ದು, ಪಕ್ಕದಲ್ಲಿರುವ ಬಾವಿಯ ಹತ್ತಿರ ಸ್ನಾನ ಮಾಡಿ, ಗುಡಿಗೆ ಮೂರು ಸುತ್ತು ಪ್ರದಕ್ಷಿಣೆ ಬಂದು ರಾತ್ರಿ ಹನ್ನೊಂದರ ಸುಮಾರು ಕೊಂಡ ಹಾಯುತ್ತಾರೆ. ಕಳಸ ಊರಿಂದ ಮೆರವಣಿಗೆಯಲ್ಲಿ ಬಂದಿರುತ್ತದೆ. ಕುಟ್ಟಿದ ಜೋಳದ ಕಿಚಡಿಯ ಹುಗ್ಗಿಯ ಊಟವಿರುತ್ತದೆ. ಗರ್ಭಗುಡಿಯ ಹಿಂಭಾಗದ ವೀರಣ್ಣನಿಗೆ ಪೂಜೆ ಮಾಡಿ ಲಕ್ಕಿ ಪತ್ರಿ ಏರಿಸುತ್ತಾರೆ. ಆತ ಯಾವ ಕಡೆ ದಳ ಕೊಡುತ್ತಾನೊ ಅದರ ಆಧಾರದಲ್ಲಿ ಪೂಜಾರಿ ಆ ವರ್ಷದ ಭವಿಷ್ಯವನ್ನು ('ಹೇಳಿಕೆ') ಎರಡೆ ನುಡಿಯಲ್ಲಿ ಹೇಳುತ್ತಾನೆ. ಈ ವರ್ಷ 'ಸುಖ ಆಗುತ್ತೆ' ಎಂದು ಹೇಳಿಕೆಯಾಗಿದೆ. ಇದೇ ರೀತಿ ಕಾರ್ತಿಕದಲ್ಲಿ ಛಟ್ಟಿ ಅಮಾವಾಸ್ಯೆಯಂದು ರವಿವಾರವಿದ್ದರೆ 'ಹೇಳಿಕೆ'ಯಾಗುತ್ತದೆ.

ಕಲ್ಲೂರ :

ಯಲಬುರ್ಗಾ ತಾಲೂಕಿನ ಚಾರಿತ್ರಿಕವಾಗಿ ಪ್ರಖ್ಯಾತವಾಗಿರುವ ಗ್ರಾಮಗಳಲ್ಲಿ ಕಲ್ಲೂರು ಒಂದು. ಇಲ್ಲಿಯ ಕಲ್ಲಿನಾಥ ದೇವಾಲಯದಲ್ಲಿ ಆರೇಳು ಶಾಸನಗಳಿವೆ. ಕೋಟೆಯಂಥ ಆವಾರ ಮಹಾದ್ವಾರದ ಒಳಗೆ ಅಂಗಳ. ನಂದಿ ವಿಗ್ರಹವಿರುವ ಕಟ್ಟೆ, ಮಂಟಪ, ಇದಕ್ಕೂ ಗೋಪುರ ಕಳಸ. ವಿಜಯನಗರದ ಶಿಲ್ಪಶೈಲಿಯ ಮುಖಮಂಟಪ, ಚಾಲುಕ್ಯರ ಕಾಲದ ಮತ್ತು ಚಂದ್ರಹಾಸ ನಿರ್ಮಿಸಿದ್ದೆಂದು ಪ್ರತೀತಿಯಿರುವ ರಂಗಮಂಟಪ, ಶುಕನಾಸಿ, ಗರ್ಭಗೃಹ, ಗೋಪುರ, ಕಳಸಗಳು. ರಂಗಮಂಟಪಕ್ಕೆ ದಕ್ಷಿಣೋತ್ತರಗಳಲ್ಲಿ ಬಾಗಿಲಿವೆ. ಪ್ರತಿ ಕಂಬದಲ್ಲೂ

ಮನುಷ್ಯ, ಪಶು, ಪಕ್ಷಿ, ದೈವಗಳ ಉಬ್ಬು ಶಿಲ್ಪಗಳಿದ್ದು ಬಣ್ಣ ಕೊಡಿಸಿದ್ದಾರೆ. ರಂಗಮಂಟಪದ ಗೋಡೆಗಳ ಮೇಲೆ ಕುಕನೂರಿನ ಮಾರುತಿ ಪೇಂಟರ್ ಬಣ್ಣದ ಚಿತ್ರ ಬಿಡಿಸಿದ್ದಾರೆ. ೧,೦೦೧ ರೂ. ಕೊಟ್ಟು ವಂಶಪಾರಂಪರ್ಯ ರುದ್ರಾಭಿಷೇಕ ಮಾಡಿಸುವವರ ನಾಮಫಲಕಗಳಿವೆ. ನವರಂಗದ ಎರಡೂ ಬದಿ, ಎರಡು ಲಿಂಗಗಳಿದ್ದು ಬಿಜ್ಜಳನ ಕೊಲೆ ಮಾಡಿದ ಜಗದೇವಯ್ಯ, ಮಲ್ಲಿಬೊಮ್ಮಯ್ಯಯರ ಸ್ಮಾರಕಗಳೆಂದು ಹೇಳುತ್ತಾರೆ. ಈ ಊರಿನ ಧೂಪದ ರಾಚೇಶ ಬರೆದ 'ಮೊಲ್ಲೆ ಬೊಮ್ಮಯ್ಯಗಳ ಕಾವ್ಯ'ವನ್ನು ಗದುಗಿನ ತೋಂಟದಾರ್ಯ ಮಠ ಪ್ರಕಟಿಸಿದೆ. ಶರಣರಿಗೆ ತೊಂದರೆ ಕೊಟ್ಟ ಬಿಜ್ಜಳನನ್ನು ಕೊಂದುಹಾಕುವವರೆಗೆ ಕೈಯ್ಯಿಂದ ಊಟ ಮಾಡಲಾರೆವೆಂದು ತಾಯಿಗೆ ಮಾತುಕೊಟ್ಟ ಈ ಶರಣರು ನಾಯಿಗಳಂತೆ ಬಾಯಿಂದ ಊಟ ಮಾಡುತ್ತಿದ್ದವಂತೆ. ಅರಸನ ಹತ್ತಿರ ದೀವಟಿಗೆ ಹಿಡಿವ ಕೆಲಸಕ್ಕೆ ಸೇರಿ ಸಂದರ್ಭ ನೋಡಿ ಕೊಲೆ ಮಾಡಿ ಬಂದು ತಾಯಿಯ ಕೈಯ್ಯಿಂದ ಊಟ ಮಾಡಿ ಇಲ್ಲಿ ಲಿಂಗವಾದರಂತೆ. ಇವರ ಆರಾಧ್ಯ ದೈವ ಕಲ್ಲಿನಾಥ. ಹೀಗೆ ಕರ್ನಾಟಕದ ಮಹತ್ವದ ಚಾರಿತ್ರಿಕ ಘಟನೆಗೆ ಕಾರಣವಾಗಿರುವ ಈ ದೈವ ಈಗಲೂ ಪೂಜೆಗೊಳ್ಳುತ್ತಿದೆ.

ವಾರ್ಷಿಕ ಆಚರಣೆಗಳಲ್ಲಿ ಜಾತ್ರೆಯಂಥ ಸದ್ದುಗದ್ದಲದಲ್ಲಿ ನಡೆವ ಕಾರ್ಯಕ್ರಮ ಕಾರ್ತಿಕದ ದೀಪೋತ್ಸವ. ಐದು ದಿನಗಳ ಈ ಉತ್ಸವಕ್ಕೆ ವಿಜಾಪುರ, ಬೆಳಗಾವಿ ಮೊದಲಾದ ದೂರದ ಊರುಗಳ ಮತ್ತು ಸುತ್ತಮುತ್ತಲ ಗ್ರಾಮಗಳ ಜನ ನೆರೆಯುತ್ತಾರೆ. ಪಲ್ಲಕ್ಕಿ ಉತ್ಸವವಾಗುತ್ತದೆ. ಬೇಡಿಕೊಂಡ ಭಕ್ತರು ಗುಡಿಯ ತುಂಬ ದೀಪಾ ಹಚ್ಚುತ್ತಾರೆ. ವಿಶೇಷವೆಂದರೆ ಈ ಊರಿನ ಕುಂಬಾರರೆ ತಯ್ಯಾರು ಮಾಡಿದ ಮದ್ದನ್ನು ಸುಡುವ ಕಾರ್ಯಕ್ರಮ. ಎತ್ತುಗಳ ನೂರಾರು ಕೊಂಬುಗಳಲ್ಲಿ ಮದ್ದು ತುಂಬಿ (ಇವಕ್ಕೆ 'ವಡಾಕಿ-ಕೋಲು' ಎಂದು ಹೇಳುತ್ತಿದ್ದರು. ದೇಗುಲದ ಒಳ ಆವರಣದ ತಿಂಗಳದಲ್ಲಿ ತಗ್ಗು ತೆಗೆದು ಹುಗಿದು, ಇಡಿ ರಾತ್ರಿ ಹಾರಿಸುತ್ತಾರೆ. ಬಣ್ಣ ಬಣ್ಣದ ಚಿತ್ತಾರಗಳನ್ನು ಆಕಾಶದಲ್ಲಿ ಬಿಡಿಸುವ ಮದ್ದಿನ ವೈಭವ ನೋಡಲು ಸಹಸ್ರಾರು ಜನ ನೆರೆಯುತ್ತಾರೆ. ಕಂಬಾರರಿಗೆ 'ಮದ್ದಿನ ಮಾನೇವು' ಎಂಬ ಹೊಲಗಳಿವೆ. ಇದೇ ರೀತಿ ನರ್ತಕರಿಗೆ ('ಪಾತ್ರದವರು'), ಪೂಜಾರಿಗಳಿಗೆ, ಇತರ ಸೇವಕ ವರ್ಗಕ್ಕೆ ಹಿಂದೆ ಮಾನ್ಯದ ಭೂಮಿಗಳಿದ್ದವು.

ಶ್ರಾವಣದಲ್ಲಿ ಪಲ್ಲಕ್ಕಿ ಉತ್ಸವ. ಗುಡಿಯ ಒಳಗೆ ಪಾಲಕಿಯಲ್ಲಿ ದೇವರನ್ನಿಟ್ಟು ಪ್ರದಕ್ಷಿಣೆ ಬರುತ್ತಾರೆ. ನಂದಿ ವಿಗ್ರಹದ ಮೆರವಣಿಗೆಯಲ್ಲಿ ಸ್ವಾಮಿಗಳನ್ನು ಕರೆತಂದು, ಜಂಗಮನಿಗೆ 'ಗಣಾರಾಧನೆ' ಮಾಡುತ್ತಾರೆ. ಡೊಳ್ಳಿನ ಮೇಳವಿರುತ್ತದೆ. ಈ ದೇಗುಲದ ಹಲವು ವಿಶೇಷ ಕ್ರಮಗಳು ಗಮನಾರ್ಹವಾಗಿವೆ. ಇಲ್ಲಿ ಒಂದಲ್ಲ 'ಜೋಡುಗಾಯಿ' (ಎರಡು ಟೆಂಗಿನಕಾಯಿ) ಒಡೆಸಬೇಕು. ಒಂದು ಸಲ ಒಬ್ಬ ಬಡವ ತಾನು ಒಂದೇ ಕಾಯಿ ಒಡೆಸುವುದಾಗಿ ಹಟ ಹಿಡಿದ. ಪೂಜಾರಿ ಒಡೆದಾಗ ಅದು ನಾಲ್ಕು ಹೋಳಾಯಿತು. (ಅದರ ಫೋಟೋ ಇದೆ) ದೇವರಿಗೆ ಬಜಾರಿನಲ್ಲಿ ಕೊಂಡು ತಂದ ಹೂಮಾಲೆ ಸಲ್ಲುವುದಿಲ್ಲ. ಜೀರರಿಗೆ ಹೇಳಿದರೆ ಅವರು ಮಡಿಯಿಂದ ಹೂ ತಂದು ಮಾಲೆ ಮಾಡಿ ಹಾಕುತ್ತಾರೆ. ದೇವರಿಗೆ ನೇರವಾಗಿ ಎಡೆ

ನೀಡುವಂತಿಲ್ಲ. ಎಡೆಗೆ ಬೇಕಾದ ಸಾಮಾನು ಜೀರರಿಗೆ ಕೊಡಬೇಕು. ಅವರು ಮಡಿಯಿಂದ ಅದನ್ನು ತಯಾರಿಸಿ ಅರ್ಪಿಸುತ್ತಾರೆ. ಜಂಗಮರು ಪೂಜಾರಿಗಳು.

ಯುಗಾದಿಯಲ್ಲಿ ೧೦೧ ಕೊಡಗಳನ್ನು ಹೊತ್ತು ಗಂಡಸರು, ೧೦೧ ಕಳಸ (ಆರತಿ) ಹಿಡಿದು ಹೆಂಗಸರು ಗಂಗೆಗೆ (ಹಳ್ಳ) ಹೋಗಿ ಪೂಜಿಸಿ ಮೆರವಣಿಗೆಯಲ್ಲಿ ನೀರು ತಂದು ಲಿಂಗದ ಮೇಲೆ ಹಾಕುವ 'ವಿಶಿಷ್ಟ' ಆಚರಣೆ ಇದೆ.

ಸುಮಾರು ಆರೇಳು ನೂರು ಮನೆಗಳ ಈ ಗ್ರಾಮದಲ್ಲಿ ಬ್ರಾಹ್ಮಣರಿಲ್ಲ. ಆದರೆ ಮಂಗಳೂರಿನ ಒಂದು ಬ್ರಾಹ್ಮಣ ಕುಟುಂಬ ವರ್ಷಕ್ಕೊಮ್ಮೆ ತಪ್ಪದೆ ಈ ಗುಡಿಗೆ ಬಂದು ಗುಡಿಯನ್ನು ತಮ್ಮ ಸ್ವಾಧೀನ ತೆಗೆದುಕೊಂಡು ಪೂಜೆ ಮಾಡುತ್ತಾರೆ. ಗುಡಿಯಲ್ಲಿ ಆಗಾಗ ಸಾಮೂಹಿಕ ಮದುವೆ, ಜವುಳ ತೆಗೆಸುವ ವಿಧಿಗಳೂ ಜರುಗುತ್ತವೆ. ದೇಗುಲದ ಹೊರ ಅಂಗಳದ ದೀಪಸ್ಥಂಭದ ಕಟ್ಟೆಯ ಮೇಲೆ 'ಲಕ್ಷ್ಮಿ'ಯ ಶಿಲಾವಿಗ್ರಹವಿದ್ದು ಗ್ರಾಮದ ಹೆರಿಗೆಯ ತೊಂದರೆಯಿರುವ ಹೆಂಗಸರು ಇದನ್ನು ತಬ್ಬ ಹಾಕುತ್ತಾರೆ. ಹೆರಿಗೆ 'ಸುರಳೀತ' ಆದ ನಂತರ ಇದನ್ನು ಎತ್ತಿಟ್ಟು ಪೂಜುತ್ತಾರೆ. ಹುಣ್ಣಿಮೆ, ಅಮಾವಾಸ್ಯೆ ಮತ್ತು ಮೇಲೆ ಹೇಳಿದ ವಿಶೇಷ ಹಬ್ಬಗಳಂದು ಬೇಡಿಕೊಂಡವರು ಗುಡಿಯಲ್ಲಿ ದೀಡ ನಮಸ್ಕಾರ ಹಾಕುವ ಪದ್ಧತಿ ಇದೆ. ಈ ಊರಿನ ಇನ್ನೊಂದು ವೈಶಿಷ್ಟ್ಯವೆಂದರೆ 'ಬಗರಿಕಾರರ' ಏಳೆಂಟು ಮನೆಗಳಿದ್ದು ಅವರು ತಬಲಾ, ಡಗ್ಗಾ, ಡೋಲಕ್ ಮೊದಲಾದ ಚರ್ಮವಾದ್ಯಗಳನ್ನು ತಯಾರು ಮಾಡಿ ದೂರದ ಊರುಗಳಿಗೆ ಹೋಗಿ ಮಾರಾಟ ಮಾಡುತ್ತಾರೆ. ರಿಪೇರಿ ಕೂಡ ಮಾಡುತ್ತಾರೆ. ದಲಿತರ ಸಮಸ್ಯೆಯಿಂದ ಈ ಊರು ಹಿಂದೊಮ್ಮೆ ಪ್ರಚಾರದಲ್ಲಿತ್ತು.

ಕುಕನೂರು :

ಯಲಬುರ್ಗಾ ತಾಲೂಕಿನ ಕುಕನೂರು ವಿಶಾಲವಾದ ಬಯಲು ಪ್ರದೇಶದಲ್ಲಿರುವ ದೊಡ್ಡ ಗ್ರಾಮ. ಸುಮಾರು ೩೦-೩೫ ಸಾವಿರ ಜನಸಂಖ್ಯೆ ಇರುವ ಇಲ್ಲಿ 'ಎಲ್ಲ ಜಾತಿ' ಜನರಿದ್ದಾರೆ. ಊರಲ್ಲಿ ೧೦೭ ಈಶ್ವರ ಲಿಂಗಗಳಿದ್ದು ಇನ್ನೊಂದು ಇದ್ದಿದ್ದರೆ 'ದಕ್ಷಿಣಕಾಶಿ' ಎಂಬ ಖ್ಯಾತಿ ಪಡೆಯುತ್ತಿತ್ತು ಎಂದು ಇಲ್ಲಿಯ ಬ್ರಾಹ್ಮಣರು ಹೇಳುತ್ತಾರೆ. ಮಹಾಮಾಯೆ ದೇಗುಲದ ಸುತ್ತಮುತ್ತ ಅವರ ೧೦೦ ಮನೆಗಳಿವೆ. ನಾಯಕರು ಪೂಜುವ ದುರಗಮ್ಮ, ಜೋಡ ಹನುಮಪ್ಪ, ಶಿಬಾರ, ದ್ಯಾಮವ್ವ, ರಾಘವಾನಂದ ಅವಧೂತ ಆಶ್ರಮ, ವೀರಭದ್ರ, ಗುದ್ನೇಶ್ವರ ಗುಡಿ ಮೊದಲಾದ ದೈವ ದೇಗುಲಗಳು ಇಲ್ಲಿವೆ.

ಗುದ್ನೆಪ್ಪನ ಜಾತ್ರೆ :

ಕುಕನೂರಿನ ಪೂರ್ವಕ್ಕೆ ೨-೩ ಕಿಲೋಮೀಟರ್ ದೂರದಲ್ಲಿ ರಸ್ತೆಯ ಬದಿಗೆ ಐ.ಟಿ.ಐ. ಕಾಲೇಜು, ಡಿಗ್ರಿ ಕಾಲೇಜು, ನವೋದಯ ಶಾಲೆಗಳಿವೆ. ಗುದ್ನೇಶ್ವರಮಠ ಎಂಬ ಈ ಊರಲ್ಲಿ ನೂರಿನ್ನೂರು ಜಂಗಮರ ಮನೆಗಳಿವೆ. ಬೇರೆ ಕುಲದವರು ಇಲ್ಲಿ ವಾಸವಾದರೆ ಕಷ್ಟವಿದೆ ಎಂಬ

ಭಾವನೆ ಬಲವಾಗಿ ಬೇರೂರಿದೆ. ಗುದ್ನೆಪ್ಪನಾದ ರುದ್ರಮುನಿಸ್ವಾಮಿಗಳ ಚರಿತ್ರೆಯಲ್ಲಿ ಈ ಅಂಶ ಪ್ರಸ್ತಾಪವಾಗಿದೆ.

ಗುದ್ನೆಪ್ಪನ ಮಠದಲ್ಲಿ ಹಲವಾರು ನಂದಿ ವಿಗ್ರಹಗಳ ಗುಡಿಗಳಿವೆ. ಗುದ್ನೆಪ್ಪನ ಉತ್ಸವಮೂರ್ತಿಗಳೂ ನಂದಿವಿಗ್ರಹಗಳೇ. ಗುಡಿ ಪೂರ್ವಾಭಿಮುಖವಾಗಿದೆ. ಕೋಟೆಯಂಥ ಆವಾರ ಗೋಡೆಗಳ ಮಧ್ಯೆ ಸುಮಾರು ೩೦ ವರ್ಷಗಳ ಹಿಂದೆ ಕಟ್ಟಿದ ಆಧುನಿಕ ಗುಡಿ. ಹೊರಗೋಡೆ, ಗೋಪುರ ಕಳಸ, ಗರ್ಭಗುಡಿಗಳಿವೆ. ಗರ್ಭಗೃಹದಲ್ಲಿ ಗದ್ದುಗೆಯ ಮೇಲೆ ೭ ಹೆಡೆ ಸರ್ಪದಡಿ ಬೆಳ್ಳಿಯ ಮಾನವ ಮುಖ, ಬೆಳ್ಳಿಯ ಬೆತ್ತ. ಅದರ ಕೆಳಗೆ ಭಕ್ತರು ಕೊಟ್ಟ ಕಂಚಿನ ೬೮ ಲಿಂಗಗಳು. ಗದ್ದುಗೆಯ ಹಿಂದೆ ಕಟ್ಟಿಗೆಯ ಹಲಗೆಯ ಮೇಲೆ ಬರೆಸಿಟ್ಟಿರುವ ಗುದ್ನೇಶ್ವರರ ಚಿತ್ರ ಫಲಕ, ಧಾರಾಪಾತ್ರೆ ತೂಗುಬಿಟ್ಟಿದ್ದಾರೆ. ಜಂಗಮರು ಪ್ರತಿ ದಿವಸ ಪೂಜೆ ಮಾಡುತ್ತಾರೆ ಮತ್ತು ಇಲ್ಲಿಯ ವಿಶೇಷವೆಂದರೆ ವರ್ಷವಿಡಿ ರಾತ್ರಿ ೮ ಗಂಟೆಗೆ ನಂದಿಯ ಉತ್ಸವಮೂರ್ತಿಯನ್ನು ಚೌಕಿಯ ಮೇಲಿಟ್ಟು ತಲೆಯ ಮೇಲೆ ಹೊತ್ತು ಭಜನೆ ಮೇಳದೊಂದಿಗೆ ಗುಡಿಯ ಹೊರಸುತ್ತು ಒಂದು ಸಲ, ಗುಡಿಯ ಒಳಗೆ ೨ ಸಲ ಪ್ರದಕ್ಷಿಣೆ ಬರುತ್ತಾರೆ. ಧೂಪಾರತಿ, ಹಗಲುದೀವಟಿಗೆ ಇರುತ್ತವೆ. ದೇಗುಲದ ಹೊರಗೋಡೆಯಲ್ಲಿ ಉತ್ಸವ ಮೂರ್ತಿಗಳಿವೆ. ಅಂಗಳದಲ್ಲಿ ಪ್ರತ್ಯೇಕ ಕಲ್ಲಿನ ಮೇಲೆ ಕತ್ತಿ ಗುರಾಣಿ ಹಿಡಿದ ಪುರುಷ ಶಿಲ್ಪವಿದ್ದು ಅದನ್ನು ಜನ, ಭರಮಪ್ಪನೆಂದು ಭಾವಿಸಿದ್ದಾರೆ. ಕೋಟೆಯಂಥ ಆವಾರದ ಹೊರಭಾಗದಲ್ಲಿ ದೇವರಿಗೆ ಅಭಿಮುಖವಾಗಿ ದೀಪಸ್ಥಂಭವಿದೆ.

ಇತ್ತ ಕುಕನೂರ ಊರಮಧ್ಯೆ ಗುಡಿ ಓಣಿಯಲ್ಲಿ ಹಳೆಯ ಮನೆಯಂಥ ಗುದ್ನೇಶ್ವರ ಗುಡಿ ಇದೆ. ಅಲ್ಲಿ ಇಸ್ಪೀಟಾಡುತ್ತಿದ್ದವರು, ರಜಾಕರ ಹಾವಳಿಯ ನಂತರ ಇದನ್ನು ಕಟ್ಟಿಸಿದ್ದಾರೆಂದು ಹೇಳಿದರು. ಗರ್ಭಗುಡಿಯಲ್ಲಿ ಪಾಣಿಪೀಠದ ಮೇಲೆ ಏಳು ಹೆಡೆ ಸರ್ಪದಲ್ಲಿ ಮಾನವ ಮುಖವಿದೆ. ಪಕ್ಕದ ಗೋಡೆಯಲ್ಲಿ ಕಲ್ಲಿನ ಗಣಪತಿ. ಹೊರಗಿನ ಕೋಣೆಯಲ್ಲಿ ಹಾಳಾಗಿರುವ ನಂದಿ ವಿಗ್ರಹ. ಗರ್ಭಗುಡಿಯ ಹೊರಭಾಗದಲ್ಲಿ ಗುದ್ನೆಪ್ಪನ ಚಿತ್ರವಿದೆ. ಈ ಗುಡಿಗೆ ೩೨ ಎಕರೆ ಜಮೀನಿದೆ ಎಂದು ಆಡುವವರು ಹೇಳಿದರು. ಬಿದ್ದು ಹೋಗಿದ್ದ ಈ ಗುಡಿಯನ್ನು ಹುಸೇನಸಾಬ ಗದ್ವಾಲರು (ಪಾಪಣ್ಣನವರು) ಮುತುವರ್ಜಿ ವಹಿಸಿ ಕಟ್ಟಿಸಿದರಂತೆ.

ಕುಕನೂರ ಭಾಗದಲ್ಲಿ ನಡೆಯುವ ಅತಿ ದೊಡ್ಡದಾದ ಗುದ್ನೆಪ್ಪನ ಜಾತ್ರೆ ಹೊಸ್ತಿಲ ಹುಣ್ಣಿಮೆಯ ಎಡಬಲ (ಡಿಶೆಂಬರ) ನಡೆಯುತ್ತದೆ. ಸುತ್ತಮುತ್ತಲ ಹಳ್ಳಿಗಳ ಜನವಲ್ಲದೆ ಬಳ್ಳಾರಿ, ಗಂಗಾವತಿ ಮೊದಲಾದ ಕಡೆಯಿಂದ ತುಂಬ ಜನ ಸೇರುತ್ತಾರೆ. ೧೫ ದಿನ ನಡೆಯುವ ಜಾತ್ರೆಗೆ ನಾನಾ ವಿಧದ ಅಂಗಡಿಗಳು ತೆರೆದಿರುತ್ತವೆ.

ಜಾತ್ರೆಯ ಮೊದಲದಿನ ಧ್ವಜಾರೋಹಣ, ಬಸವ ಪಟ ಕಟ್ಟುವುದು. ಒಂದು ಜತೆ ಧೋತರದ ಮೇಲೆ ಓಂಕಾರ ಹಾಕಿ ರುದ್ರಮುನಿಸ್ವಾಮಿಗಳ ಹೆಸರು, ವಿವಾಹಮಂಟಪ, ಈಶ್ವರ,

ನಂದಿಗಳನ್ನು ಬಿಡಿಸಿ ಬಸವಣ್ಣನ ಗುಡಿಯ ಸುತ್ತ ಐದು ಸಲ ಪ್ರದಕ್ಷಿಣೆ ಬಂದು ದೀಪಸ್ಥಂಭಕ್ಕೆ ಏರಿಸುತ್ತಾರೆ. ತೇರಿನ ಕಳಸ ಇಳಿಸುವ ದಿವಸ ಈ ಪಟ್ಟವನ್ನು ಬಿಚ್ಚುತ್ತಾರೆ. ಮರುದಿನದಿಂದ ಮುಂದೆ ೮ ದಿನಗಳವರೆಗೆ ಬಂಡಿ ಹುಚ್ಚಯ್ಯ (ಉತ್ಸವ) ವನ್ನು ಕ್ರಮವಾಗಿ ಜೋಡಿಬಸವಣ್ಣನ ಗುಡಿ, ನೀಲಗುಂದಮಠ, ಗದ್ದಿ ಲಿಂಗಣ್ಣನ ಗುಡಿ, ನಾಗಪ್ಪನ ಕಲ್ಲು, ಪಲ್ಲಕ್ಕಿ ಗುಡಿ, ಪಾದಗಟ್ಟೆಯವರೆಗೆ ಎಳೆಯುತ್ತ ಹೋಗುತ್ತಾರೆ. ಉಚ್ಚಯ್ಯನನ್ನು ಪ್ರತಿದಿವಸ ಮೆರವಣಿಗೆಯಲ್ಲಿ ಪಾಲಕಿಯನ್ನು ಮುಂದಿಟ್ಟುಕೊಂಡು ಎಳೆಯುವ ಪದ್ಧತಿಯಿದೆ. ಗಂಟೆ, ಜಾಗಟೆ, ನಗಾರಿ, ನೌಬತ್ತುಗಳ ಮೇಳವಿರುತ್ತದೆ. ಡೊಳ್ಳು, ಹಲಗೆಗಳಿರುವುದಿಲ್ಲ. ಉಚ್ಚಯ್ಯ ಮತ್ತು ಪಾಲಕಿ ತಿರುಗಿ ಬಂದಾಗ ಮಾಮೂಲಿನಂತೆ ಪಾಲಕಿ ಗುಡಿಯ ಹೊರಗೆ ಒಂದು ಸುತ್ತು, ಒಳಗೆ ಎರಡು ಸುತ್ತು ಬಂದು, ಮಂಗಳಾರತಿ ಪ್ರಸಾದ ವಿತರಣೆಯಾಗುತ್ತವೆ. ಏಳು ದಿನಗಳ ವಿಶೇಷ ಪ್ರಸಾದವೆಂದರೆ ಸಜ್ಜೆ, ನೆನೆಯಕ್ಕಿ, ಕೊಬ್ಬರಿ, ಹುಳಿಗಡಲಿ. ಇಲ್ಲಿಯ ಉಚ್ಚಯ್ಯನೆಂದರೆ ಚಕ್ಕಡಿಯ ಮೇಲೆ ಹಲಗೆಯಿಟ್ಟು, ಅದರ ಮೇಲೆ ಚನ್ನಬಸವಣ್ಣನ ಪ್ರತೀಕವಾದ ನಂದಿ ಉತ್ಸವಮೂರ್ತಿಯನ್ನು ಮೆರೆಸುವುದು. ಜಾತ್ರೆಯ ೮ನೇ ದಿವಸ ದೊಡ್ಡ ಉಚ್ಚಯ್ಯ, ೯ನೇ ದಿವಸ ಪಂಚಕಳಸಗಳಿರುವ ದೊಡ್ಡ ರಥದ ಉತ್ಸವ. ತೇರನ್ನು ಪಾದಗಟ್ಟೆಯವರೆಗೆ ಎಳೆಯುತ್ತಾರೆ. ತೇರಿನ ದಿನ ೫೦-೬೦ ಸಾವಿರ ಜನ ಸೇರುತ್ತಾರೆಂದು ಅಂದಾಜು. ತೇರಿನಲ್ಲಿ ಅದನ್ನು ಕಟ್ಟುವ ೨೦-೨೫ ಜನ ಜಂಗಮರು ಹತ್ತಿರುತ್ತಾರೆ. ಜತೆಗೆ ಉತ್ಸವಮೂರ್ತಿ. ಪಲ್ಲಕ್ಕಿಯಲ್ಲಿ ಕನಕಗಿರಿಯಿಂದ ಬಂದಿರುವನೆಂಬ ಪ್ರತೀತಿ ಇರುವ ಹಾವಿನ ಹೆಡೆ ಸಹಿತದ ನಂದಿ ವಿಗ್ರಹವನ್ನು ('ಕನಕರಾಯ' ಎನ್ನುತ್ತಾರೆ) ಇಟ್ಟಿರುತ್ತಾರೆ. ೧೦ನೇ ದಿವಸ ಕಡುಬಿನ ಕಾಳಗ. ರುದ್ರಮುನಿ, ಅಳಿಯಪ್ಪನಿಗೆ (ಅಳಿಯ ಚನ್ನಬಸವೇಶ್ವರ) ಹೆಣ್ಣು ಕೊಟ್ಟು ಲಗ್ನ ಮಾಡಿದನೆಂಬ ಕಾರಣಕ್ಕಾಗಿ, ಕುಕನೂರಿನ ತಳವಾರ ಕುಲದ ಬಸವಿಯ ಜತೆ ಲಗ್ನವಾಗದ ಹುಡುಗನನ್ನು ಕೂರಿಸಿ ಲಗ್ನದ ಎಲ್ಲ ಕಾರ್ಯಗಳನ್ನು ಮಾಡುವ ವಿಶೇಷ ಆಚರಣೆ ಇಂದಿಗೂ ಚಾಲ್ತಿಯಲ್ಲಿದೆ. ಈಚಿನವರೆಗೂ ಗುದ್ನೆಪ್ಪನಿಗೆ ಬಸವಿಯರನ್ನು ಬಿಡುವ ಸಂಪ್ರದಾಯವಿತ್ತು. ಇಲ್ಲಿ ಕಡುಬಿನ ಕಾಳಗವೆಂದರೆ ಜೋಳದ ಹಿಟ್ಟಿನಿಂದ ಗುಂಡಗಡಬು ಮಾಡಿ ತೇರಿನ ಸುತ್ತ ಉಗ್ಗುವುದು.

ಜಾತ್ರೆಯ ೧೬ನೇ ದಿವಸ ಕಳಸ ಇಳಿಸುತ್ತಾರೆ. ಅಂದು ಕುಕನೂರಲ್ಲಿರುವ ಗುದ್ನೆಪ್ಪನ ಗುಡಿಗೆ ಪಾಲಕಿಯಲ್ಲಿ ದೇವರು ಬರುವ ಕಾರ್ಯಕ್ರಮ. ಛತ್ರಿ, ಚಾಮರ, ನಿಶಾನಿ ಸಹಿತ ವಾದ್ಯಮೇಳದೊಂದಿಗೆ ಮೆರವಣಿಗೆ ಹೊರಡುತ್ತದೆ. ಕುಕನೂರ ಗುಡಿಗೆ ಬಂದು ಪೂಜೆ, ಕಾಯಿ ಕರ್ಪೂರ ಮಾಡಿಸಿಕೊಂಡು ತಿರುಗಿ ಬಾವಿ ಬಸವಣ್ಣನ ಮೂಲಕ ಗುದ್ನೆಪ್ಪನ ಮಠಕ್ಕೆ ಬರುತ್ತವೆ. ಬಾವಿ ಬಸವಣ್ಣನ ಹತ್ತಿರ ಜೋಳದ ಸಂಗಟಿ ಎಡೆಮಾಡಿ ಪ್ರಸಾದವಾಗಿ ಸ್ವೀಕರಿಸುತ್ತಾರೆ.

ವರ್ಷದ ಕೆಲವು ವಿಶೇಷ ತಿಥಿಗಳಂದು ಹಲವಾರು ಬಗೆಯ ಆಚರಣೆಗಳ ಸಂಪ್ರದಾಯ ಇಲ್ಲಿದೆ. ಚೈತ್ರಶುದ್ಧ ಪ್ರತಿಪದೆಯಂದು ಪಾಲಕಿಯಲ್ಲಿ ಮೆರವಣಿಗೆ ಪಾದಗಟ್ಟೆಯವರೆಗೆ ಹೋಗಿ ಬಂದ ನಂತರ ಪಂಚಾಂಗ ಶ್ರವಣ. ಆಷಾಢಮಾಸದಲ್ಲಿ ಡಂಗುರ ಬಸವೇಶ್ವರನಿಗೆ

ಅಭಿಷೇಕ ಮಾಡಿ ಕಾಯಿಕರ್ಪೂರ ಅರ್ಪಿಸಿ ಜೋಳದ ಸಂಗಟಿಯ ಪ್ರಸಾದವನ್ನು ವಿತರಿಸುತ್ತಾರೆ. ಇದಕ್ಕಾಗಿ ಊರಲ್ಲಿ ಪಟ್ಟಿ ಎತ್ತಿರುತ್ತಾರೆ. ಶ್ರಾವಣದಲ್ಲಿ ಚತುರ್ದಶಿಯಂದು ಇಡಿ ರಾತ್ರಿ ಭಜನೆ ಮಾಡಿ ಮರುದಿನ ಗ್ರಾಮದ ಎಲ್ಲ ದೈವಗಳಿಗೆ ಭಜನೆ ಮೇಳದ ಜತೆ ಹೋಗಿ ಪೂಜಿಸಿ, ಗುದ್ನೇಶ್ವರ ಗುಡಿಗೆ ಬಂದು ದೇವರು ಮೆರೆಸಿ ಮಂಗಳಾರತಿ ಮಾಡುತ್ತಾರೆ. ಪ್ರತಿ ಸೋಮವಾರ ಪಲ್ಲಕ್ಕಿ ಮೆರವಣಿಗೆ ಪಾದಗಟ್ಟೆಯವರೆಗೆ ಹೋಗಿ ಬರುವ ರೂಢಿ ಇದೆ. ಮೂರನೇ ಸೋಮವಾರ (ಶ್ರಾವಣ) 'ಕೊಡ ಹೊಂಡುವ ಸ್ವಾಮಾರ'. ರುದ್ರಮುನಿ ಸ್ವಾಮಿ ಹಿಮ್ಮಡಿಯಿಂದ ನೀರು ಬರಿಸಿದ ವರತಿಯ ಹತ್ತಿರ ಹೋಗಿ ಪೂಜಿಸಿ, ನೀರು ತಂದು ಗುಡಿಯಲ್ಲಿ ಪೂಜೆ ಮಾಡುತ್ತಾರೆ. ೫ ಮಣ್ಣಿನ ಕೊಡಗಳನ್ನು ಮೆರವಣಿಗೆಯಲ್ಲಿ ಪಾದಗಟ್ಟೆಗೆ ಒಯ್ದು, ಒಳಕಲ್ಲು ಪೂಜಿಸಿ ನೀರು ಹಾಕುವ ಸಂಪ್ರದಾಯ 'ಕೊಡ ಹೊಂಡುವ ಸ್ವಾಮಾರದ್ದು'. ಈ ನೀರು ಕೆರೆಯವರೆಗೆ ಹರಿದರೆ ಆ ವರ್ಷ ಮಳೆ ಚೆನ್ನಾಗಿ ಬರುತ್ತದೆಂಬ ನಂಬಿಗೆ. ಕರಡಿ ಮಜಲು, ಸಮಾಳ, ಸಮೇತ ಪಲ್ಲಕ್ಕಿ ೧೦೧ ಬಸವೇಶ್ವರ ಗುಡಿಗೆ ಹೋಗಿ ಬರುತ್ತದೆ. ಕಡೆ ಸೋಮವಾರ ಗುಡಿಯಿಂದ ಹೊರಡುವ ಪಲ್ಲಕ್ಕಿ ಮತ್ತು ಕಕ್ಕಿಹಳ್ಳಿಯ ಅಳಿಯಪ್ಪನ ಪಲ್ಲಕ್ಕಿ (ಅಳಿಯ ಚನ್ನಬಸವೇಶ್ವರ) ಎರಡೂ ಕೂಡಿ ಪಾದಗಟ್ಟೆಗೆ ಹೋಗಿ, ನಂತರ ಆನೆಶಂಕರ ಬಂಡೆಗೆ ಬರುತ್ತವೆ. ಅಲ್ಲಿ ದೇವರನ್ನು ಇಳಿಸಿ, ಪೂಜಿಸಿ, ಇಡಿ ಊರಿನ ಎಲ್ಲ ಮನೆಗಳಿಂದ ಬಂದ ನೈವೇದ್ಯವಾಗುತ್ತದೆ. ನಂತರ ಗವಿಗೆ ಹೋಗಿ ಕೂತು, ಕುಕನೂರ ಹೊಂಡಕ್ಕೆ ಹೋಗಿ, ಕೋಳಿಪೇಟೆಯ ಮೂಲಕ ಕುಕನೂರಿನಲ್ಲಿರುವ ಗುಡಿಗೆ ಬರುತ್ತಾರೆ. ಕುಕನೂರಲ್ಲಿ ಪಾಲಿಕಿ ಬರುವಾಗ ಭಕ್ತರು ತಮ್ಮ ಮನೆ ಮುಂದೆ ಪಾಲಿಕಿಗೆ ನೀರು ಹಾಕಿ ಕಾಯಿ ಕರ್ಪೂರ ಮಾಡಿಸುತ್ತಾರೆ. ಅಂದು ಅಲ್ಲಿ ೨೫ ಚೀಲ ಅನ್ನದ ಸಂತರ್ಪಣೆ. ರಾತ್ರಿ ಪ್ರಸಾದದ ನಂತರ ಮೆರವಣಿಗೆ ವಾದ್ಯಸಮೇತ ಬಾವಿ ಬಸವಣ್ಣನ ಹತ್ತಿರ ಬರುತ್ತದೆ ಅಲ್ಲಿ, ಜೋಳದ ಸಂಗಟಿ ಎಡೆ ಮಾಡಿ ಪ್ರಸಾದವಾಗಿ ಸ್ವೀಕರಿಸಿ ೧೦೧ ಬಸಪ್ಪನ ಮೂಲಕ ಗುದ್ನೇಶ್ವರ ಮಠಕ್ಕೆ ಬರುತ್ತದೆ. ಅಂದು ದೇವರನ್ನು ತೊಟ್ಟಿಲಲ್ಲಿಟ್ಟು ತೂಗುತ್ತಾರೆ. ಭಕ್ತರು ಮಕ್ಕಳ ಸಂತಾನ ಫಲ ಕೇಳಿ ಕಾಣಿಕೆ ನೀಡಿ ತೊಟ್ಟಿಲು ತೂಗುತ್ತಾರೆ. ಮರುದಿನ ಗುದ್ನೆಪ್ಪನ ಮಠದಿಂದ ಭಜನೆ ಮೇಳ ಮತ್ತು ದೀವಟಿಗೆಯವರು ಕಕ್ಕಿಹಳ್ಳಿ ಅಳಿಯಪ್ಪನ ಮಠಕ್ಕೆ ಬರುತ್ತಾರೆ. ಉಚ್ಚಾಯ ಎಳೆದು ಪ್ರಸಾದ ಸ್ವೀಕರಿಸುತ್ತಾರೆ. ಶಿವರಾತ್ರಿ ದಿನ ಇಡೀ ರಾತ್ರಿ ಭಜನೆ, ಐದು ಪೂಜೆ ನಡೆಯುತ್ತವೆ. ಅಮಾವಾಸ್ಯೆಯ ದಿನ ಪಲ್ಲಕ್ಕಿಯಲ್ಲಿ ದೇವರನ್ನು ಮೇಳದೊಂದಿಗೆ ಕುಕನೂರಿನ ಗುಡಿಗೆ ಒಯ್ದು ಪೂಜಿಸಿ ಬರುತ್ತಾರೆ.

ಜಾತ್ರೆಯ ಸಮಯದಲ್ಲಿ ಸೋಮಯ್ಯನವರ ನೇತೃತ್ವದಲ್ಲಿ ಬಸವೇಶ್ವರ ದೊಡ್ಡಾಟವನ್ನು ನಲ್ವತ್ತು ವರ್ಷಗಳವರೆಗೆ ಆಡುತ್ತ ಬಂದಿದ್ದಾರೆ. ಈಚೆಗೆ ಅದು ನಿಂತಿದೆ. ಈ ಬಯಲಾಟವನ್ನು ಸೋಮಯ್ಯನವರೇ ಬರೆದು ಆಡಿಸುತ್ತಿದ್ದರು.

ರುದ್ರಮುನಿಸ್ವಾಮಿ ಯಾರು? ಈತ ಗುದ್ನೆಪ್ಪ ಏಕಾದ? ಎಂದು ಕೇಳಿದರೆ ಸೋಮಯ್ಯ ಹಿರಿಯರಿಂದ ಕೇಳಿದ ದೊಡ್ಡ ಕತೆಯನ್ನೇ ಹೇಳುತ್ತಾರೆ. ಅದರ ಸಂಕ್ಷಿಪ್ತ ರೂಪ - (ಜಾತ್ರೆಯ ಪೂರ್ಣ ತಿಳುವಳಿಕೆಗೆ ಇದು ಅಗತ್ಯವೆಂದು ತಿಳಿದು ಕೊಡಲಾಗುತ್ತಿದೆ).

ಕಲ್ಯಾಣ ಕ್ರಾಂತಿಯ ನಂತರ ಚನ್ನಬಸವಣ್ಣನವರು ಶರಣರನ್ನು ಕೂಡಿಕೊಂಡು ಉಳಿವಿಯ ಮಹಾಮುನಿ ಗವಿ ಸೇರಿದರು. ಕೈಲಾಸಕ್ಕೆ ಕರೆ ಬಂದಿದೆ, ನೀನೂ ಬಾ ಎಂದು ರುದ್ರಮುನಿಯನ್ನು ಕೇಳಿದರು. ರುದ್ರಮುನೀಶ್ವರರು ನೀವು ಹೋಗಿ ಬನ್ನಿ, ದುಷ್ಟ ಸಂಹಾರ ಶಿಷ್ಟ ರಕ್ಷಣೆಗಾಗಿ ನಾವು ಇಲ್ಲೇ ಉಳಿಯುವೆವು ಎಂದರು. ಹಾವಿನ ಹಾಳು ಕಲ್ಲಯ್ಯ, ರೇಚಯ್ಯ, ಸಿದ್ದೇಶ್ವರ ಜತೆ ಸಂಚರಿಸುತ್ತ ಕುಕನೂರಿಗೆ ಬಂದರು. ಉಳಿದವರನ್ನು ಕಳಿಸಿ ತಾವು ಹಾಸುಬಂಡೆಯ ಮೇಲೆ ಕುಕ್ಕುಟಾಸನದಲ್ಲಿ ಕುಳಿತರು. ಕುಕನೂರ ಹುಡುಗರು ದನ ಮೇಯಿಸುತ್ತಿದ್ದರು. ಒಂದು ಆಕಳು ಅವರ ಕಮಂಡಲಕ್ಕೆ ಹಾಲು ಕರೆಯುತ್ತಿತ್ತು. ಮನೆಯಲ್ಲಿ ಹಿಂಡುತ್ತಿರಲಿಲ್ಲ. ಕೊನೆಗೆ ಹುಡುಗರು ರುದ್ರಮುನಿಗಳನ್ನು ಪತ್ತೆ ಮಾಡಿದರು. ಹುಡುಗರ ರೊಟ್ಟಿ ಬುತ್ತಿಯನ್ನು ಕೆಸರು ಪುಳಿದಂತೆ ತುಳಿದು ಹುಡುಗರು ಕೇಳಿದ ಹೋಳಿಗೆ, ಜಿಲೇಬಿ, ಲಾಡು ಮಾಡಿಕೊಟ್ಟರು. ಪಾದವೂರಿ ನೀರು ಬರಿಸಿದರು. (ಗುದ್ನೇಶ್ವರ ಗುಂಡವೆಂದು ಈಗಲೂ ಇದೆ). ಹಿರಿಯರಿಗೆ ಗೊತ್ತಾಗಿ ಸನ್ಯಾಸಿ ಮಾಟಗಾರನಿರಬೇಕು, ಹುಡುಗರನ್ನು ಅಪಹರಿಸಲು ಹಂಚು ಹೂಡಿದ್ದಾನೆಂದು ಭಾವಿಸಿ, ಸೆರೆ ಹಿಡಿದು ಕಲ್ಲುಮಟ್ಟಿಯ ಗವಿಗೆ ನುಗ್ಗಿಸಿ ಕಲ್ಲು ಗುಂಡು ಮುಚ್ಚಿದರು. ಮರುದಿನ ಬಂದು ನೋಡಿದರೆ ಮುನಿ ಅಲ್ಲಿರಲಿಲ್ಲ. ಮರಳಿ ಹೊರಟಾಗ ಎದುರು ಬಂದ. ಮತ್ತೆ ಹಿಡಿದುಕೊಂಡು ಕುಕನೂರಿನ ತ್ರಿಶಂತ್* ಎಂಬ ಒಡೆಯನ ಹತ್ತಿರ ಕರೆತಂದರು. ಅವನು ಕೇಳಿದ್ದಕ್ಕೆಲ್ಲ ಇವರದು ಮೌನವೇ ಉತ್ತರ. ಸೆರೆಮನೆಗೆ ತಳ್ಳಿದ. ಆದರೆ ಮುನಿಗಳು ಕೋಳಿಪೇಟೆಯಲ್ಲಿ ತಿರುಗುತ್ತಿದ್ದರು. ಮತ್ತೆ ಅದೇ ಬಂಡೆಗೆ ಬಂದು ಕೂತರು. ಒಡೆಯ ಹೇರು ತೂಕದ ಕಬ್ಬಿಣ ಸರಪಳಿಯಿಂದ ಅವರನ್ನು ಬಂಧಿಸಿದ. ಆದರೆ ಸರಪಳಿ ಕಳಚಿಬಿದ್ದವು. ಒಡೆಯನಿಗೆ ಈಗ ಅರಿವು ಮೂಡಿ, ಕ್ಷಮೆ ಕೇಳಿ ರಾಜಮರ್ಯಾದೆಯಿಂದ ಅರಮನೆಗೆ ಕರೆತಂದ. ರಂಭಾಪುರಿಯ ವೀರಸಿಂಹಾಸನಾಧೀಶ ರುದ್ರಮುನಿ ಎಂದು ಈಗ ಆತ ತನ್ನ ಪರಿಚಯ ಹೇಳಿಕೊಂಡರು. ಅಲ್ಲಿಯ ಜನರಿಗೆ ದೀಕ್ಷೆ ನೀಡಿದರು. ಅನೇಕ ಗ್ರಾಮಗಳನ್ನು ತಿರುಗಿ (ಚಿಕ್ಕ ಮ್ಯಾಗೇರಿ, ನಿಡಗುಂದಿ, ಚೌಡಿ, ಅರಹುಣಸಿ, ಹಿರೇಮಣ್ಣೂರು, ಹಾರಗೇರಿ, ಮಸಬ ಹಂಚಿನಾಳ, ಆನಿಸಂಕ್ರಬಂಡಿಗಳಲ್ಲಿ ಗುದ್ನೇಶ್ವರ ಮಠ ಸ್ಥಾಪಿಸಿದರು). ಪವಾಡ ತೋರಿಸುತ್ತ ಮಠಗಳನ್ನು ಸ್ಥಾಪಿಸಿದರು. ಕುರುಡರಿಗೆ ಕಣ್ಣು, ಕಿವುಡರಿಗೆ ಕಿವಿ ಕೊಟ್ಟ, ರೋಗಿಷ್ಟರ ರೋಗ ನಿವಾರಣೆ ಮಾಡಿದರು. ಕನಕಗಿರಿಯ ಕನಕನನ್ನು ಹಿಡಿತರಿಸಿ ವ್ಯಾಪಾರಸ್ಥರ ಸೊಕ್ಕು ಮುರಿದರು. ಒಡೆಯನಿಂದ ೧೮೮ ಎಕರೆ ಭೂಮಿ ಕಾಣಿಕೆ ಪಡೆದು ಹುಣಿಸೆ ಬೆಳೆದು ಪವಾಡ ಮಾಡಿ ಕೊನೆಗೆ ಹಾವಾಗಿ ಗುದ್ದಿನೊಳಗೆ ಮರೆಯಾದರು. ಹಾಗಾಗಿ ಗುದ್ದಿನಯ್ಯ, ಗುದ್ನೇಶ್ವರ ಎಂಬ ಹೆಸರು ನಿಂತಿತು.

ಮಹಾಮಾಯೆ

ಕುಕನೂರಿನ ಮಧ್ಯೆ ಸುಮಾರು ೫-೬ ಎಕರೆ ಪ್ರದೇಶವನ್ನು ಆವರಿಸಿರುವ ಕೋಟೆ ಗೋಡೆಯಂಥ ಆವಾರದೊಳಗೆ ಮಹಾಮಾಯೆಯ ದೇಗುಲ, ನೀರಿನ ಹೊಂಡ, ಒಂಬತ್ತು

* ಕುಕನೂರು ಪ್ರಖ್ಯಾತ ಅಗ್ರಹಾರವಾಗಿದ್ದು 'ತ್ರಿಂಶದ್ಗ್ರಾಮಾಧಿಪತಿ' ಎಂದು ಹೆಸರಾಗಿದ್ದುದನ್ನು ಶಾಸನ ಹೇಳುತ್ತವೆ.

ಲಿಂಗಗಳ ಎಂಟು ಗುಡಿಗಳ ಸಂಕೀರ್ಣ ಇವೆಲ್ಲ ಸೇರಿವೆ. ಸುಂದರ ಶಿಲ್ಪಕಲೆಯಿಂದ ಕೂಡಿರುವ ೯ ಲಿಂಗಗಳ ೮ ಗರ್ಭಗುಡಿ ಒಂದಕ್ಕೊಂದು ಸೇರಿಕೊಂಡಿರುವಂತೆ ರಚಿಸಿದ್ದು ತುಂಬ ವಿಶಿಷ್ಟವಾದ ಅಪರೂಪದ ಕಟ್ಟಡ. ಎಲ್ಲಕ್ಕೂ ಗೋಪುರಗಳಿವೆ. ಗರ್ಭಗೃಹಗಳಲ್ಲಿ ಲಿಂಗಗಳು, ನವರಂಗಗಳಲ್ಲಿ ಬೃಹತ್ ಶಿಲಾನಂದಿ ವಿಗ್ರಹಗಳಿವೆ. ೮ ಗರ್ಭಗುಡಿಗಳನ್ನು ನಾಲ್ಕು ನವರಂಗಗಳು ಒಟ್ಟುಗೂಡಿಸಿವೆ. ಎರಡು ಮಕರ ತೋರಣ ಅದ್ಭುತವಾಗಿವೆ. ಮಹಾಮಾಯೆಯ ಗುಡಿಯ ಪಶ್ಚಿಮ ಭಾಗದಲ್ಲಿ ಈ ಗುಡಿಗಳಿವೆ. ಸಂರಕ್ಷಣೆ ಇಲ್ಲದೆ ಹಾಳಾಗುತ್ತಿರುವ ಈ ಸ್ಮಾರಕಗಳು ೮೦೦ ವರ್ಷಗಳ ಚರಿತ್ರೆಯನ್ನು ಪ್ರತಿನಿಧಿಸುತ್ತಿವೆ. ಗುಡಿಗಳಲ್ಲಿರುವ ಶಾಸನಗಳಲ್ಲದೆ, ತಾಮ್ರಶಾಸನ, ಕುಕನೂರಿಗೆ ಸಂಬಂಧಿಸಿದ ಇತರೆಡೆಯ ಶಾಸನಗಳೆಲ್ಲ ಸೇರಿ ಒಟ್ಟು ೨೨ ಆಗುತ್ತವೆಂದು ಪಿ. ಬಿ. ದೇಸಾಯಿ ಹೇಳುತ್ತಾರೆ. (''ಕುಕನೂರು ಶ್ರೀ ಮಹಾಮಾಯೆ'', ೧೯೫೮) ಅವುಗಳ ಆಧಾರದಲ್ಲಿ ಅವರು ೭ನೇ ಶತಮಾನದಷ್ಟು ಹಿಂದಿನಿಂದ ಈ ಗ್ರಾಮ 'ಕುಕ್ಕನೂರು-೩೦' ಎಂಬ ಆಡಳಿತ ಕೇಂದ್ರವಾಗಿ, ಅಗ್ರಹಾರವಾಗಿ ಪ್ರಖ್ಯಾತಾಗಿತ್ತೆಂದು ವಿವರಿಸುತ್ತಾರೆ. ದೇವಿಗೆ ಮೊದಲು 'ಜ್ಯೇಷ್ಠಾ' ಎಂಬ ಹೆಸರಿದ್ದು ೧೩ನೇ ಶತಮಾನದೀಚೆಯಿಂದ 'ಮಹಾಮಾಯಾ' ಎಂಬ ಹೆಸರು ಚಲಾವಣೆಗೆ ಬಂದಿದೆ. ಶಾಕ್ತಪಂಥದ ಒಂದು ಪ್ರಖ್ಯಾತ ಶಕ್ತಿಪೀಠವಾಗಿದ್ದ ಇಲ್ಲಿ (೯ ಲಿಂಗ, ೯ ಶಕ್ತಿಪೀಠಗಳ ''ಶಿವಶಕ್ತಿ ಸುರತ್ಸಂಪುಟ'' - ಶಾಸನ) ಕಾಳಾಮುಖಯತಿಗಳು, ಸಿದ್ಧರು, ಸಹಜಾಯೋಗಿನಿಯರು, ಯೋಗಿಗಳು ವಾಸವಾಗಿದ್ದರೆಂದು ಶಾಸನಗಳು ಹೇಳುತ್ತವೆ. ರಾಜರು, ಮಾಂಡಲಿಕ ದೊರೆಗಳು, ಅಧಿಕಾರಿಗಳು ಕಾಲಕಾಲಕ್ಕೆ ಈ ದೇಗುಲಕ್ಕೆ ದಾನದತ್ತಿ ನೀಡಿದ ವಿವರಗಳು ಅಲ್ಲಿವೆ. ಮತ್ಸ್ಯ, ಸ್ಕಂದ, ದೇವಿ ಭಾಗವತ ಪುರಾಣಗಳಲ್ಲಿ ಮಹಾಮಾಯೆಯ ಪ್ರಸಕ್ತಿ ಇರುವುದನ್ನು ದೇಸಾಯಿಯವರು ನಿವೇದಿಸಿದ್ದಾರೆ. ಗುಡಿಯ ಪೂರ್ವದ ಹೆಬ್ಬಾಗಿಲು ಭವ್ಯ. ದಕ್ಷಿಣಾಭಿಮುಖವಾಗಿರುವ ದೇಗುಲಕ್ಕೆ ಉತ್ತರ, ದಕ್ಷಿಣದಲ್ಲೂ ದ್ವಾರಗಳಿವೆ. ಗರ್ಭಗುಡಿಯ ಮೇಲೊಂದು, ಗರ್ಭಗುಡಿಯನ್ನು ಸುತ್ತುವರೆದಿರುವ ಪ್ರದಕ್ಷಿಣ ಪಥದಲ್ಲಿ ಅಸಹಜವೆಂಬಂತೆ ಸ್ಥಾಪಿತವಾಗಿರುವ ಭೈರವನ ಮೂರ್ತಿಗೊಂದು, ದೇಗುಲದ ದಕ್ಷಿಣದ ಹೊರಬಾಗಿಲ ಹತ್ತಿರ ಒಂದು; ಹೀಗೆ ಮೂರು ಗೋಪುರ ಕಳಸಗಳಿವೆ. ದಕ್ಷಿಣ ಭಾಗದ ಅಂಗಳದಲ್ಲಿ ಕಟ್ಟೆಯ ಮೇಲೆ ಎರಡು ಗರುಡಗಂಭಗಳಿದ್ದು, ಅವುಗಳ ನಡುವೆ ೭ ಹೆಡೆ ಸರ್ಪದ ಕಲ್ಲಿದೆ. ಪೂರ್ವದ ದ್ವಾರಬಾಗಿಲ ಹತ್ತಿರ ನಂದಿವಿಗ್ರಹ, ವೀರಗಲ್ಲುಗಳಿವೆ.

ಗುಡಿಯ ಸುತ್ತಲೂ ವೈಷ್ಣವ ಪರಂಪರೆ ಮತ್ತು ದತ್ತ ಪರಂಪರೆಯ ಕೆಲವು ಗುಡಿಗಳಿವೆ. ವಿದ್ಯಾನಂದ ಗುರುಕುಲ ಕಿರಿಯ ಪ್ರಾಥಮಿಕ ಶಾಲೆ' ಎಂಬ ಬೋರ್ಡಿದೆ.

ಗರ್ಭಗೃಹದಲ್ಲಿ ದಕ್ಷಿಣಾಭಿಮುಖವಾಗಿರುವ ಮೂರು ಶಿಲಾವಿಗ್ರಹಗಳನ್ನು ಒಂದು ಪೀಠದ ಮೇಲೆ ಸ್ಥಾಪಿಸಿದ್ದಾರೆ. ನಡುವಿನದು ಕ್ಷೇತ್ರಪಾಲ. ಆಚೆ ಈಚೆಯವು ಮಹಾಮಾಯಾ ಮತ್ತು ಮಹಾಕಾಳಿ. ಸುಮಾರು ಎರಡಡಿ ಎತ್ತರದ ಈ ವಿಗ್ರಹಗಳಿಗೆ ಸೀರೆ, ಧೋತರ ಉಡಿಸಿದ್ದಾರೆ. ಕ್ಷೇತ್ರಪಾಲ ಅಣ್ಣ ಇವರಿಬ್ಬರು ತಂಗಿಯರು ಎಂದು ದೇಸಾಯರ ಧರ್ಮಪತ್ನಿಯವರು ಹೇಳಿದರು. ಸುಕನಾಶಿ, ಪ್ರದಕ್ಷಿಣೆ ಪಥ, ನವರಂಗ, ರಂಗಮಂಟಪಗಳಿವೆ. ನವರಂಗಕ್ಕೆ

ಪ್ರವೇಶಿಸಲು ಮೂರು ಬಾಗಿಲಿವೆ. ದ್ವಾರಪಾಲಕರ ಎತ್ತರವಾದ ಶಿಲಾವಿಗ್ರಹಗಳು ವಿಷ್ಣುಲಾಂಛನ ಹಿಡಿದಿವೆ. ಪ್ರದಕ್ಷಿಣ ಪಥದ ಒಂದೆಡೆ ಕುದುರೆಯ ಮೇಲೆ ಕೂತು ಕತ್ತಿ, ಡಮರುಗ, ತ್ರಿಶೂಲ, ಪಾನಪಾತ್ರೆ ಹಿಡಿದ ಕಾಳ ಭೈರವನ ವಿಗ್ರಹವಿದೆ. ಇದರ ಹಿಂದಿನ ಗರ್ಭಗೃಹದ ಗೋಡೆಯಲ್ಲಿ ಒಳಗವಿಯಿದ್ದು ಇದರಲ್ಲಿ ಯಾರೂ ಪ್ರವೇಶಿಸಲು ಯತ್ನಿಸಿಲ್ಲವೆಂದು ಧರ್ಮಕರ್ತರು ಹೇಳಿದರು. ಗರ್ಭಗುಡಿಯ ಹಿಂದೆ ಪ್ರದಕ್ಷಿಣ ಪಥದಲ್ಲಿರುವ ಇನ್ನೊಂದು 'ದಕ್ಷಿಣಾಮೂರ್ತಿ' ಎಂಬ ಹೆಸರಿನ ಶಿಲ್ಪವಿದೆ. ಕೂತ ಭಂಗಿಯ ಈ ವಿಗ್ರಹಕ್ಕೆ ೪ ಕೈಗಳಿವೆ. ಕಾಶಿಯಿಂದ ಬಂದು ಈ ದೇವಿಯನ್ನು ಸ್ಥಾಪಿಸಿದ ವ್ಯಕ್ತಿ ಈತ ಎಂದು ಹೇಳಲಾಗುತ್ತದೆ. ಮುಖಮಂಟಪದ ಬಾಗಿಲಿಗೆ ದೀವಟಿಗೆ ಇಡುವ ಕಲ್ಲುಕಂಬ ದಶಮಿ ದಿಂಡು, ಪಾಲಕಿಗಳಿವೆ.

ಗುಡಿಯ ಹಿಂದೆ ಎಲ್ಲ ಕಡೆ ಕಲ್ಲು ಪಾವಟಿಗೆಗಳಿರುವ ಹೊಂಡವಿದ್ದು ನೀರಿನಲ್ಲಿ ಯುವಕರು ಸ್ನಾನ ಮಾಡುತ್ತಿದ್ದರು. ಇಲ್ಲೇ ಬಾಲಮಾರುತಿ ಗುಡಿ, ಬೇವಿನಕಟ್ಟೆ, ಹೋಮಕುಂಡ, ಗುರುದತ್ತ ಮಂದಿರ, ಗುರುದತ್ತ ಸಂಸ್ಥಾನದ ಕಾರ್ಯಾಲಯ ಇವೆಲ್ಲಾ ಇವೆ. ದೇಗುಲದ ಪೂರ್ವದ ಕಡೆಯ ಮೇಲ್ಭಾಗದ ಹೊರಗೋಡೆಯಲ್ಲಿ ದಶಾವತಾರದ ಮೂರ್ತಿಗಳನ್ನು, ದೇವಿಯ ಲೀಲೆಗಳನ್ನು ಅಳವಡಿಸಿದ್ದಾರೆ.

ಗುಡಿಯಿಂದ ಸ್ವಲ್ಪ ದೂರದ ಮೇನ್ ಬಜಾರಿನಲ್ಲಿ ಬೇವಿನಕಟ್ಟೆ ಗಂಟಿ ದೇವಿಯ ಪಾದಗಟ್ಟೆ. ಇದಕ್ಕೆ ಗೋಪುರ ಕಳಸಗಳಿವೆ. ಗಿಡಕ್ಕೆ ಸೀರೆಯುಡಿಸಿದ್ದಾರೆ. ಇದರ ಅಕ್ಕಪಕ್ಕ ನಾಕಾರು ಚಪ್ಪಟೆ ಕಲ್ಲುಗಳು ಪೂಜೆಗೊಂಡಿವೆ. ಗಿಡದ ಮುಂದೆ ಪಾದಗಳಿರುವ ಕಲ್ಲಿದೆ.

ಸಿದ್ನೆಕೊಪ್ಪದ ಎಸ್. ಆರ್. ದೇಸಾಯಿ (ಬ್ರಾಹ್ಮಣರು) ಮನೆತನದವರು ದೇಗುಲದ ಧರ್ಮಾಧಿಕಾರಿಗಳು. ಹಿಂದೆ ಮಾಳೆಕೊಪ್ಪ ಮತ್ತು ಸಿದ್ನಿಕೊಪ್ಪ ದೇಸಾಯಿಗಳಿಬ್ಬರಿಗೂ ಧರ್ಮಾಧಿಕಾರಿ ಜವಾಬ್ದಾರಿಯಿತ್ತು, ಮಾಳೇಕೊಪ್ಪ ದೇಸಾಯರು ಕೈಬಿಟ್ಟಿರುವುದರಿಂದ ಸಿದ್ನಿಕೊಪ್ಪ ದೇಸಾಯರು (ಜಮೀನುದಾರರು) ಮಾತ್ರ ಜಾತ್ರೆಯ ಎಲ್ಲ ಖರ್ಚು ನೋಡಿಕೊಳ್ಳುತ್ತಿದ್ದಾರೆ. ಸರಕಾರದಿಂದ ವರ್ಷಕ್ಕೆ ಬರಿ ನಾಲ್ಕು ಸಾವಿರ ಮಾತ್ರ ಬರುತ್ತದಂತೆ. ದೇವಸ್ಥಾನ ಭೂಮಿಗಳೆಲ್ಲ ಟೆನೆನ್ಸಿ ಕಾಯಿದೆಯಲ್ಲಿ ರೈತರ ವಶವಾಗಿವೆ.

ಮಹಾಮಾಯೆಗೆ ಸಾಮಾನ್ಯ ಭಕ್ತರು "ಕುಕನೂರು ದ್ಯಾಮವ್ವ" ಎನ್ನುತ್ತಾರೆ. ಊರಲ್ಲಿ ದ್ಯಾಮವ್ವನ, ದುರಗವ್ವಗಳ ಪ್ರತ್ಯೇಕ ಗುಡಿಗಳಿದ್ದರೂ ಮಹಾಮಾಯೆಯೆ ಗ್ರಾಮದೇವಿ ಎಂಬ ಅಭಿಪ್ರಾಯವಿದೆ. ಹಿಂದೊಮ್ಮೆ ಶಾಕ್ತಪೀಠವಾಗಿದ್ದ ಇದು ಹಲವಾರು ಶತಮಾನಗಳ ಹಿಂದೆಯೆ ವೈದಿಕೀಕರಣಕ್ಕೆ ಒಳಗಾಗಿ ಹೋಗಿವೆ. ಹಾಗಾಗಿ ವಿಧಿಯಾಚರಣೆಗಳಲ್ಲಿ ವಿಚಿತ್ರ ಕಲಬೆರಕೆಗಳಿವೆ. ಮೂರು ಕಾಣ್ವ ಶಾಖೆಯ ಸ್ಮಾರ್ತ ಬ್ರಾಹ್ಮಣ ಮನೆತನಗಳು ಪ್ರತಿವರ್ಷ ಒಬ್ಬೊಬ್ಬರಂತೆ ಪೂಜೆ ಮಾಡುತ್ತಿವೆ.

ಜಾತ್ರೆ :

ಪ್ರತಿ ವರ್ಷ ಅಕ್ಟೋಬರದಲ್ಲಿ (ಭಾದ್ರಪದ-ಅಶ್ವಿನ) ಮಹಾಮಾಯೆ ಜಾತ್ರೆ.

ಪ್ರತಿಪದೆಯಂದು ಧ್ವಜಾರೋಹಣ. ಗರುಡದ ಚಿತ್ರವಿರುವ ಬಟ್ಟೆಯನ್ನು ತೂಗು ಬಿಡುತ್ತಾರೆ. ಘಟಸ್ಥಾಪನೆ ಮಾಡುತ್ತಾರೆ. ಪಂಚಮಿಯಂದು ವೆಂಕಟರಮಣನ ಲಗ್ನ. ದೇವಾಲಯದ ಆವರಣದಲ್ಲೇ ಇರುವ ಸಣ್ಣ ಗುಡಿಯಲ್ಲಿ ವೆಂಕಟರಮಣನ ಮೂರ್ತಿ ಇದೆ. ಪುರೋಹಿತರು, ಹೆಣ್ಣಿನ ಕಡೆ, ಗಂಡಿನ ಕಡೆಯವರಾಗಿ ಲಗ್ನದ ಎಲ್ಲ ವಿಧಿ ವಿಧಾನಗಳನ್ನು ಪೂರೈಸುತ್ತಾರೆ. ಈ ಕಾರ್ಯಕ್ರಮ ಎರಡು ಮೂರು ತಾಸಿನಲ್ಲಿ ಮುಗಿಯುತ್ತದೆ. ಗುಡಿಯ ಸುತ್ತಮುತ್ತಲಿರುವ ಬ್ರಾಹ್ಮಣ ಸಮಾಜವೆಲ್ಲ ಈ ಉತ್ಸವದಲ್ಲಿ ನೆರೆದಿರುತ್ತದೆ.

ಎರಡು ಗಾಲಿ ಚಕ್ಕಡಿಯನ್ನು (ಉಚ್ಚಾಯ) ಅಲಂಕಾರ ಮಾಡಿ, ಉತ್ಸವ ಮೂರ್ತಿಗಳನ್ನು ಪಾದಗಟ್ಟೆಯವರೆಗೆ ಎಳೆದುಕೊಂಡು ಹೋಗಿ ಬರುತ್ತಾರೆ. ಗರುಡ ಉಚ್ಚಾಯ, ಮಹಾಮಾಯಿಯ ಮತ್ತು ವೆಂಕಟರಮಣನ ಉತ್ಸವಗಳಾಗುತ್ತವೆ. ಅಂದು ಮಧ್ಯಾಹ್ನ 'ದಶಮಿ ದಿಂಡು' ಎಂಬ ಕಾರ್ಯಕ್ರಮ. ಮೂರೂ ದೇವರನ್ನು ಅದರಲ್ಲಿಟ್ಟು ಮೆರವಣಿಗೆಯಲ್ಲಿ ಕರಡಿ ಮಜಲು ಮೊದಲಾದ ವಾದ್ಯಮೇಳದೊಂದಿಗೆ ಪಾದಗಟ್ಟೆಯವರೆಗೆ ಹೋಗಿ ಬರುತ್ತಾರೆ. ಜಾತ್ರೆಯ ದಿನಗಳಲ್ಲಿ ಪ್ರತಿದಿನವೂ 'ಘಂಟಾಮಾಲೆ' ಇರುತ್ತದೆ. ಬಿಂದಿಗೆಯ ಮೇಲೆ ಕಾಯಿ ಇಟ್ಟು ಬಾಳೆನಾರಿನಿಂದ ಕಟ್ಟಿ ನಾನಾತರದ ಹೂಮಾಲೆ ಏರಿಸಿ ಪೂಜಿಸುವುದೇ 'ಘಂಟಮಾಲೆ'. ಪ್ರತಿ ದಿನ ನಂದಿ, ಕುದುರೆ, ಆನೆ ಮೊದಲಾದ ವಾಹನಗಳ ಮೇಲೆ ಉತ್ಸವಮೂರ್ತಿಯನ್ನಿಟ್ಟು ಪಾದಗಟ್ಟೆವರೆಗೆ ಹೋಗಿ ಬರುವ 'ಉತ್ಸವ'ಗಳಿರುತ್ತವೆ. ತಿರುಗಿ ಬಂದ ಮೇಲೆ ಒಂದೊಂದು ಮಂತ್ರ ಹೇಳಿ ಪ್ರಸಾದ ಕೊಡುತ್ತಾರೆ. ೮ನೇ ದಿವಸ ಆಯುಧಪೂಜೆ. ಗರ್ಭಗುಡಿಯಲ್ಲಿ ಕೊಡಲಿ, ಖಡ್ಗ, ಬಿಲ್ಲು, ಬಾಣ ಮೊದಲಾದ ಅಸ್ತ್ರಗಳನ್ನಿಟ್ಟು ಪೂಜೆ ಮಾಡುತ್ತಾರೆ.

೯ನೇ ದಿನ ತೇರು. ಮುಂಜಾನೆ ಮಡಿ ತೇರು. ಬ್ರಾಹ್ಮಣರು ಶಾಸ್ತ್ರೋಕ್ತವಾಗಿ ಹೋಮ ಹವನ, ಅನ್ನದ ಬಲಿ ಮಾಡಿ, ತೇರನ್ನು ಐದು ಹೆಜ್ಜೆ ಎಳೆಯುತ್ತಾರೆ. ಮೇಟಿಯವರ ದೀವಟಿಗೆ, ಮಹಾಮಾಯಿ ದೀವಟಿಗೆಗಳು ಬಂದ ಕೂಡಲೆ ಪಾಲಕಿಯಲ್ಲಿ ಉತ್ಸವಮೂರ್ತಿಗಳನ್ನು ಇಟ್ಟುಕೊಂಡು ಮೆರವಣಿಗೆಯಲ್ಲಿ ಪಾದಗಟ್ಟೆಯವರೆಗೆ ಬರುತ್ತಾರೆ. ಅಲ್ಲಿ ಕುಂಬಳಕಾಯಿ ಅನ್ನ ಬಲಿ ನೀಡುತ್ತಾರೆ. ಅದನ್ನು ದಂಡಿಗೆಯವರು (ದೀವಟಿಗೆ ಹಿಡಿಯುವ ಕೆಳಜಾತಿ ಜನ) ತೆಗೆದುಕೊಳ್ಳುತ್ತಾರೆ. ಪಾಲಿಕೆ ಪಾದಗಟ್ಟೆಗೆ ಹೋಗಿ ಬರುವಾಗಲೆಲ್ಲ ದೇವಿಯ, ವಾರದ ಒಂದೊಂದು ದಿನದ ಮಹಿಮೆಯನ್ನು ಹೇಳಿ ಪರಾಕು ಹಾಕುವ ಪದ್ಧತಿ ಇದೆ. ಉದಾಹರಣೆಗೆ "ಸೋಮವಾರ ಸತ್ಯವಂತಿ, ಮಂಗಳವಾರ ಮಾಲಗಿತ್ತಿ, ಬುಧವಾರ ಬುದ್ಧಿವಂತಿ, ಗುರುವಾರ ಗುಣವಂತಿ ನಿನ್ನ ಓಲಗ ಶಂಬೂಕೋ" ಎಂದು ಕೂಗುತ್ತಿರುತ್ತಾರೆ. ಪಾಲಕಿ ತಿರುಗಿ ಗುಡಿಗೆ ಬಂದು ಆರತಿ ನೈವೇದ್ಯವಾದ ನಂತರ ಊಟ.

ತೇರಿನ ದಿವಸ ಪಾಲಿಕಿ ಮೆರವಣಿಗೆ ರಥದ ಹತ್ತಿರ ಬರುತ್ತದೆ. ತೇರಿಗೆ ಐದು ಸುತ್ತು ಪ್ರದಕ್ಷಿಣೆ ಬಂದು ಮಂಗಳಾರತಿಯಾಗುತ್ತದೆ. ಪ್ರಮುಖರು, ಅಧಿಕಾರಿ ವರ್ಗದವರು ಸುಮಾರು ೨೫-೩೦ ಜನ ತೇರಿನ ಗಾಲಿಗೆ ಕಾಯಿ ಒಡೆಯುತ್ತಾರೆ. ಅವನ್ನು ನೆರೆದ ಜನ ತಕ್ಕೊಳ್ಳುತ್ತಾರೆ.

ತೇರಿಗೆ ಬಾಳೆಗಿಡ, ಕಬ್ಬು, ತೆಂಗಿನಗರಿ, ಚೆಂಡು ಹೂ, ಮಾವಿನ ತೋರಣಗಳಿಂದ ಅಲಂಕರಿಸಿ ತುದಿಗೆ ಕಳಸವಿಟ್ಟಿರುತ್ತಾರೆ. ಸಂಜೆ ನಾಲ್ಕು ಗಂಟೆಯಾಗುತ್ತಲೆ ಸಾರ್ವಜನಿಕರು ತೇರೆಳೆಯುತ್ತಾರೆ. ಪಾದಗಟ್ಟೆಯವರೆಗೆ ತೇರು ಬರುವುದು ತುಂಬ ಕಷ್ಟವಾಗುತ್ತವೆ. (ದಾರಿ ಸರಿಯಿಲ್ಲ) ತೇರಿನಲ್ಲಿ ಉತ್ಸವಮೂರ್ತಿಯ ಜತೆ ಪೂಜಾರಿಗಳು, ಬಾರಿಕೇರ ಕುಲದ ದೀವಟಿಗೆ ಹಿಡಿದವರು, ಲಿಂಗಾಯತ ಮೇಟಿಯವರು, ತೇರು ಕಟ್ಟುವ ಗುದ್ನೆಪ್ಪನ ಮಠದವರು, ದಂಡಿಗೇರು (ಪಾಲಿಕಿ ಹೊರುವವರು) ಮೊದಲಾದವರಿರುತ್ತಾರೆ. ಚೌರ ಹಿಡಿದ ಬ್ರಾಹ್ಮಣ ಪೂಜಾರಿ ಅದನ್ನು ಬೀಸಿದ ಕೂಡಲೆ ತೆರಳೆಯಲು ಪ್ರಾರಂಭಿಸುತ್ತಾರೆ. ಇನ್ನೊಬ್ಬ ಗಂಟೆ ಹಿಡಿದ ಪೂಜಾರಿ ಇರುತ್ತಾನೆ. ತೇರು ದೊಡ್ಡದಿದ್ದು ರಸ್ತೆ ನೇರವಿಲ್ಲದಿರುವುದರಿಂದ ಅಲ್ಲಲ್ಲಿ ನಿಂತಾಗಿ ಕಾಯಿ ಒಡೆದು ಮಂಗಳಾರತಿ ಮಾಡಿ 'ಬಹು ಪರಾಕ್' ಹೇಳುತ್ತಾರೆ. ಜನ ತೇರಿಗೆ ಉತ್ತತ್ತಿ, ಬಾಳೆಹಣ್ಣು ಎಸೆಯುತ್ತಾರೆ. ಸನ್ನೆ ಕೋಲಿಂದ ಗಾಲಿ ನೂಕುವವರು ಒಡ್ಡರು. ಈ ಜಾತ್ರೆಯಲ್ಲಿ ದಲಿತರ (ಹೊಲೆಯರು, ಮಾದಿಗರು), ಪಾತ್ರವಿಲ್ಲದಿರುವುದನ್ನು ಗಮನಿಸಬೇಕು. ಅವರು ದೇಗುಲದಲ್ಲಿ ಪ್ರವೇಶಿಸುತ್ತಿರಲಿಲ್ಲ. ತೇರು ಪಾದಗಟ್ಟೆವರೆಗೆ ಹೋಗಿ ತಿರುಗಿ ಬಂದರೆ ನೆರೆದ ಜನಕ್ಕೆ ಖುಷಿಯೊ ಖುಷಿ. ತೇರೆಳೆವಾಗ ಮುಂದೆ ವಾದ್ಯಮೇಳ, ನಂದಿಕೋಲು ಕುಣಿತಗಳಿರುತ್ತವೆ. ಅದರ ಹಿಂದೆ ಬಿಲ್ಲು ಬಾಣ ಮೊದಲಾದ ಅಸ್ತ್ರಗಳಿರುವ ಪಾಲಕಿ ಅವರ ಹಿಂದೆ ತೇರು. ತೇರು ತಿರುಗಿ ಬಂದ ಮೇಲೆ ಉತ್ಸವಮೂರ್ತಿಗಳನ್ನು ಗುಡಿದುಂಬಿಸುತ್ತಾರೆ.

ಪಾಡ್ಯದಿಂದ ದಸರೆಯವರೆಗೂ ಪುರೋಹಿತರು, ಆಶ್ರಿತರು, ಗಾಣಪತ್ಯರು, ಜೋಯಿಸರು, ಪೂಜಾರರು, ಮಧ್ಯಾಹ್ನ ಮತ್ತು ರಾತ್ರಿ ಉತ್ಸವ ಮೂರ್ತಿಗಳ ಮೇಲೆ ಮಂತ್ರ ಹೇಳಿ ಅಕ್ಕಿ ಕಾಳು (ಮಂತ್ರಪುಷ್ಪ, ಅಕ್ಷತೆ) ಹಾಕುವ ಪದ್ಧತಿ ಇದೆ.

ದಸರೆಯ ದಿವಸ ಮೇಲೆ ಹೇಳಿದವರೆಲ್ಲರ ಜತೆ ಧರ್ಮದರ್ಶಿಗಳು ಹೊಂಡದಲ್ಲಿ ('ಚಕ್ರತೀರ್ಥ' ಎಂಬ ಹೆಸರಿದೆ). ಸ್ನಾನ ಮಾಡಿ ಶ್ರೀಚಕ್ರಕ್ಕೆ, ಉತ್ಸವಮೂರ್ತಿಗಳಿಗೆ ಪೂಜೆ ಸಲ್ಲಿಸುತ್ತಾರೆ. ಧರ್ಮದರ್ಶಿಗಳಾದ ದೇಸಾಯರ ಮನೆಯಲ್ಲಿ (ಗುಡಿಯ ಹಿಂದೆ ಇದೆ) ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದ ಬಾಬುದಾರರಾದ ಶಿಬಿರ ಕೊಂಬಿನವರಿಗೆ (ಬಾರಿಗೆ ಕಡ್ಡಿಗಳಿಂದ ತೇರಿಗೆ ೫ ಸುತ್ತು ಹಗ್ಗದಂತೆ ಕಟ್ಟಿರುವವರು), ಪಾಲಕಿ ಹೊರುವವರಿಗೆ, ದೀವಟಿಗೆಯವರಿಗೆ, ವಾದ್ಯಗಾರರಿಗೆ ಮೇಟಿಯವರಿಗೆ, ಅಗಸರಿಗೆ, ಊರಿನ ಎಲ್ಲ ಗುಡಿಗಳ ಪೂಜಾರಿಗಳಿಗೆ ಅಕ್ಕಿ, ಬೇಳೆ, ಬೆಲ್ಲ, ಹಿಟ್ಟನ್ನು 'ಸೀದಾ' ಎಂದು ಕೊಡುತ್ತಾರೆ.

ಸಂಜೆ ೫ ಗಂಟೆಗೆ ವೆಂಕಟರಮಣನ ಸಣ್ಣ ತೇರನ್ನು ವೀರಭದ್ರ, ಹನುಮಪ್ಪನ ಗುಡಿಗಳವರೆಗೆ ಎಳೆಯುತ್ತಾರೆ. ಅಲ್ಲಿ ಹನುಮಪ್ಪನಿಗೆ ಮಂಗಳಾರತಿ ಮಾಡಿ ತಿರುಗಿ ಗುಡಿಯ ಸುತ್ತ (ಕೋಟೆಯ ಆವಾರದಂತಿದೆ) ಬರುತ್ತಾರೆ. ಕರಡಿ ಮಜಲಿರುತ್ತದೆ. ಎಲಬುರ್ಗಾ ರಸ್ತೆಯಲ್ಲಿರುವ ಲಕ್ಷ್ಮೀದೇವಿಯ ಗುಡಿಯವರೆಗೆ ಮಹಾಮಾಯೆಯ ಪಾಲಕಿಯನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಮಹಾಮಂಗಳಾರತಿ ಮಾಡಿ ವಾಪಸು ಬನ್ನಿಗಿಡಕ್ಕೆ

ಬರುತ್ತಾರೆ. ಅಲ್ಲಿ ಶಾನುಭೋಗರು ತಯ್ಯಾರು ಮಾಡಿದ ಯಾದಿಯನ್ನು ಓದುತ್ತಾರೆ. ನಂತರ ಹೊಂಡದ ಅನುಮಪ್ಪನ ಗುಡಿಗೆ ಹೋಗಿ ಬರುವಾಗ ಊರ ಹೊರಗಿನ ಹನುಮಪ್ಪನ ಪಾಲಕಿ ಬರುತ್ತದೆ. ಈಗ ಈ ದೇವರ ಪೂಜಾರಿಗಳು ಆ ದೇವರಿಗೆ, ಆ ದೇವರ ಪೂಜಾರಿ ಈ ದೇವರಿಗೆ (ಮಹಾಮಾಯಿ ಮತ್ತು ಹನುಮಪ್ಪ) ಮಂಗಳಾರತಿ ಮಾಡುತ್ತಾರೆ. ಅವರ ಪಲ್ಲಕ್ಕಿ ಅತ್ತ ಹೋದ ನಂತರ ಮಹಾಮಾಯಿ ಪಾಲಕಿ ತನ್ನ ಗುಡಿಗೆ ಬರುತ್ತದೆ. ಬನ್ನಿ ಮುಡಿಯುವ ಈ ಸಂದರ್ಭದಲ್ಲಿ ಎಲ್ಲ ಜಾತಿ ಜನ ಪಾಲ್ಗೊಳ್ಳುತ್ತಾರೆ. ಪಾಲಿಕಿಯ ಮೇಲೆ ಚಂಡು ಹೂ ಮಾಲೆ ಅಲಂಕಾರವಿರುವುದು ವಿಶೇಷ. ಪೂಜಾರಿ ಬನ್ನಿ ಗಿಡಕ್ಕೆ ಖಡ್ಗದಿಂದ ಬನ್ನಿ ಕಿತ್ತುಕೊಂಡು ದೇವರಿಗೆ ಅರ್ಪಿಸುತ್ತಾನೆ. ಪಾದಗಟ್ಟೆಯಿಂದ ದೊಡ್ಡ ಪೂಜಾರಿ ಬಿಲ್ಲಿಗೆ ಬಾಣ ಹೂಡಿ ಬಿಡುತ್ತ, ಬರಮಪ್ಪನ ಗುಡಿಯವರೆಗೆ ಬರುತ್ತಾನೆ. ಇದು ಮಹಿಷಾಸುರ ಮರ್ದಿನಿಯನ್ನು ಸೂಚಿಸುತ್ತೆಂದು ಹೇಳುತ್ತಾರೆ. ಬರಮಪ್ಪನಿಗೆ ಮಂಗಳಾರತಿ ಮಾಡಿದ ಕೂಡಲೆ ಎಲ್ಲರೂ 'ಶಂಭುಕೋ ಶಂಭುಕೋ' ಎಂದು ಕೂಗುತ್ತ ಗುಡಿಯವರೆಗೆ ಓಡಿ ಬರುತ್ತಾರೆ. ಈಗ ಬ್ರಹ್ಮರಾಕ್ಷಸ ಬೆನ್ನು ಹತ್ತಿರುತ್ತದೆಂದು ನಂಬಲಾಗುತ್ತದೆ. ಗುಡಿಯ ಸುತ್ತಲೂ ಕರ್ಪೂರ ಬೆಳಗಿಸುತ್ತಾರೆ. ವಾದ್ಯ ಮೇಳದೊಂದಿಗೆ ಗುಡಿಯ ಸುತ್ತ ೫ ಸಲ ಪ್ರದಕ್ಷಿಣೆ ಬರಬೇಕಾದರೆ ಮೂರ್ನಾಲ್ಕು ತಾಸಾಗುತ್ತದೆ. ನಂತರ ಉತ್ಸವಮೂರ್ತಿಯನ್ನು ಗರ್ಭಗುಡಿಗೆ ಸೇರಿಸಿ, ಮಂಗಳಾರತಿ ಮಾಡಿ ಬನ್ನಿ ಹಂಚಿಕೊಳ್ಳುತ್ತಾರೆ. ಈ ಸಂದರ್ಭದಲ್ಲೂ ಎಲ್ಲ ಜಾತಿ ಜನ ಸೇರುತ್ತಾರೆ.

೧೨ನೇ ದಿವಸ 'ಸಂಪ್ರೋಕ್ಷಣೆ'. 'ಸಿಕ್ಕ ಸಿಕ್ಕ ಜಾತಿಯವರೆಲ್ಲಾ' ದೇಗುಲ ಪ್ರವೇಶ ಮಾಡಿರುತ್ತಾರೆಂಬ ಕಾರಣಕ್ಕಾಗಿ ನೀರಿನಿಂದ ಇಡೀ ದೇಗುಲವನ್ನು ತೊಳೆಯುತ್ತಾರೆ, ಪೂಜೆ ಮಾಡುತ್ತಾರೆ. ಧರ್ಮದರ್ಶಿಗಳಾದ ದೇಸಾಯರು ತಮ್ಮ ಮನೆಯಲ್ಲಿ ನೆರೆದ ಬಾಬುದಾರರಿಗೆ ದಕ್ಷಿಣೆ ಹಂಚುತ್ತಾರೆ. ಪಾಡ್ಯದಿಂದ ಸಂಪ್ರೋಕ್ಷಣೆಯವರೆಗೆ ಆಶ್ರಿತರು, ಜೋಯಿಸರು, ಮೊದಲಾಗಿ ಗುಡಿಯ ಎಲ್ಲ ಸೇವಕ ವರ್ಗದವರು ಸುಮಾರು ೫೦ ಜನಕ್ಕೆ ಪ್ರತಿ ದಿವಸ ಧರ್ಮದರ್ಶಿ ದೇಸಾಯರ ಮನೆಯಲ್ಲಿ ಊಟವಾಗುತ್ತದೆ. ಜಾತ್ರೆಯಲ್ಲಿ ಭಕ್ತರು ತಂದು ಕೊಡುವ ಅಕ್ಕಿ, ಬೇಳೆ, ತುಪ್ಪ, ಬೆಣ್ಣೆ, ಕೊಬ್ಬರಿ, ಸೀರೆ, ಖಣ, ಬೆಲ್ಲ ಮೊದಲಾದ ಸಾಮಾನು ಬಂಡಿಗಟ್ಟಲೆ ಸೇರುತ್ತದೆ. ಅದು ಪೂಜಾರಿಗಳಿಗೆ ಸೇರುತ್ತದೆ. ಸುತ್ತಮುತ್ತಲ ಗ್ರಾಮಗಳ ಜನ, ರಾಣೆಬೆನ್ನೂರು, ಲಕ್ಷ್ಮೇಶ್ವರ, ಶಿವಮೊಗ್ಗ, ಧಾರವಾಡ ಮೊದಲಾದ ದೂರದ ಊರುಗಳ ಜನ ಜಾತ್ರೆಗೆ ನೆರೆಯುತ್ತಾರೆ. ಮೂರು ದಿನ ಅಂಗಡಿಗಳಿರುತ್ತವೆ. ಬಯಲಾಟ ಮೊದಲಾದವು ಇರುವುದಿಲ್ಲ.

ಕಾರ್ತಿಕದಲ್ಲಿ ಪಟ್ಟೆ ಹಾಕಿ ಪೂಜೆ ಮಾಡುತ್ತಾರೆ. ಭಕ್ತರು ಮನೆಗೊಬ್ಬರಂತೆ ತುಪ್ಪದ ದೀಪಗಳನ್ನು ಹಚ್ಚುತ್ತಾರೆ. ಪುರಾಣೆ, ಸಕ್ಕರೆ ಪ್ರಸಾದ ಹಂಚುತ್ತಾರೆ. ಸೀಗೆಹುಣ್ಣಿಮೆಯ ದಿನ ಇಡಿ ರಾತ್ರಿ ಚಂಡಿಯ ಕತೆ ಓದಿಸಿ ಬಾದಾಮಿ ಹಾಲನ್ನು ಚಂದ್ರನಿಗೆ ತೋರಿಸಿ ನೆರೆದ ಬ್ರಾಹ್ಮಣ ಮಹಿಳೆಯರಿಗೆ ಪ್ರಸಾದವಾಗಿ ಹಂಚುತ್ತಾರೆ. ಪ್ರತಿ ಶುಕ್ರವಾರ ಮತ್ತು ಹುಣ್ಣಿಮೆಗಳಂದು ಬಾಬುದಾರರೆಲ್ಲ ಸೇರಿ ಪಾಲಿಕಿಯನ್ನು ಗುಡಿಯ ಸುತ್ತಲೂ, ಅಮಾವಾಸ್ಯೆಗಳಂದು ಪಾದಗಟ್ಟೆಯವರೆಗೂ ಮೆರವಣಿಗೆಯಲ್ಲಿ ತರುವ ಸಂಪ್ರದಾಯವಿದೆ.

ದೇವಿ ಈ ಊರಿಗೆ ಹೇಗೆ ಬಂದಳೆಂಬ ಬಗ್ಗೆ ಒಂದು ಘಟನೆ ಹೇಳುತ್ತಾರೆ. ಕುಕನೂರಿನ ಸಮೀಪದ ಕೆಮ್ಮಣ್ಣುಗುಂಡಿ ಹತ್ತಿರ ಮಹಾಮಾಯೆ ಮಲೆನಾಡ ಕಡೆಯಿಂದ ಬಂದಳಂತೆ. ಆಗ ಮಾಘಮಾಸ, ಮಧ್ಯಾಹ್ನ. ಹಸಿದು ಬಂದಿದ್ದಳು. ನವಣಿ ಒಕ್ಕಲಾಗುತ್ತಿತ್ತು. ನವಣಿ ಅನ್ನ ಮಾಡಿಕೊಂಡು, ಬೆಲ್ಲ, ಹಾಲು, ಸೊಪ್ಪಿನ ಜತೆ ಊಟ ಮಾಡಿದಳಂತೆ. 'ಕುಲಧರ್ಮ'ವೆಂದು ಈಗಲೂ ಧರ್ಮದರ್ಶಿಗಳು ಮತ್ತು ಪೂಜಾರಿಗಳು ವರ್ಷದ ಒಂದು ದಿನ ಇದೇ ಅಡಿಗೆ ಮಾಡಿ ಊಟ ಮಾಡುತ್ತಾರೆ. ಅಲ್ಲಿದ್ದ ರೈತರು ಸಂಜೆ ಮೆರವಣಿಗೆಯಲ್ಲಿ ಆಕೆಯನ್ನು ತಂದು ಇಲ್ಲಿ ಸ್ಥಾಪಿಸಿದರಂತೆ.

ಕುಡಗುಂಟಿ :

ಯಲಬುರ್ಗಾ ತಾಲೂಕಿನ ಬಯಲುಸೀಮೆಯ ೫೦೦ ಮನೆಗಳ, ಹಲವಾರು ಜಾತಿ ಜನಗಳಿರುವ ಗ್ರಾಮ 'ಕುಡಗುಂಟಿ'. ಇಲ್ಲಿ ಪ್ರತಿ ವರ್ಷ ಗದ್ದಿ ಬಸವೇಶ್ವರ ಜಾತ್ರೆಯಾಗುತ್ತದೆ. ಊರಿಂದ ಒಂದು ಕಿಲೋಮೀಟರು ದೂರದ ಹೊಲದಲ್ಲಿ ಗೋಪುರ ಕಳಸಗಳಿಲ್ಲದ ಪೂರ್ವಾಭಿಮುಖವಾಗಿರುವ ಸಾದಾಗುಡಿ ಇದೆ. ಗರ್ಭಗುಡಿಯಲ್ಲಿ ನಂದಿ ವಿಗ್ರಹ. ಹೋದವರ್ಷ ಮುಂದಿನ ಮಂಟಪ ಕಟ್ಟಿಸಿದ್ದಾರೆ. ಅಂಗಳದಲ್ಲಿ ಗರ್ಭಗುಡಿಗೆ ಎದುರಾಗಿ ಕಟ್ಟೆಯ ಮೇಲೆ ಮತ್ತೊಂದು ನಂದಿ ವಿಗ್ರಹ. ಆಚೆ ಈಚೆ ಸಂಕಲೇಶಿ ಗಿಡ, ಹಿಂದೆ ಪತ್ರಿ ಗಿಡ, ಗುಡಿಯ ಪಕ್ಕಕ್ಕೆ ನಾಲ್ಕು ಹಳೆಗಾಲಿಗಳ ಉಚ್ಚಯ್ಯನಿರುವ ಕೋಣೆ. ಮೊದಲು ಬರಿ ಗದ್ದಿಗೆ ಕಟ್ಟೆಯಿತ್ತು. ೨೫ ವರ್ಷದೀಚೆ ಈ ಗುಡಿ ಕಟ್ಟಿದ್ದಾರೆ. ಊರಲ್ಲಿರುವ ಸಿದ್ದೇಶ್ವರ, ಹನುಮಂತ, ಕಲ್ಲಿನಾಥೇಶ್ವರಗಳನ್ನು ಪೂಜುವ ಲಿಂಗಾಯತ ಪೂಜಾರಿಯೆ ಗದ್ದಿ ಬಸವೇಶ್ವರನನ್ನು ದಿನವೂ ಪೂಜಿಸುತ್ತಾರೆ.

ಹೋಳಿ ಹುಣ್ಣಿಮೆಯಾದ ಒಂಬತ್ತು ದಿನಕ್ಕೆ ಜಾತ್ರೆ ನಡೆಯುತ್ತದೆ. ಮೊದಲದಿನ ಗದ್ದಿ ಬಸವೇಶ್ವರನಿಗೆ ರುದ್ರಾಭಿಷೇಕ ಮತ್ತು ಮಾದಲಿ, ಅನ್ನ ಸಾರಿನ ಪ್ರಸ್ತಾ. ಊರ ಜನ ಮತ್ತು ಸುತ್ತಮುತ್ತಲ ಹಳ್ಳಿಗಳ ಜನ ಸೇರುತ್ತಾರೆ. ಊರವರು ಪ್ರತಿ ಮನೆಗೂ ನೂರು, ಇನ್ನೂರು, ಐವತ್ತು ಹೀಗೆ ಪಟ್ಟಿ ಹಾಕಿ ಜಾತ್ರೆ ನಡೆಸುತ್ತಾರೆ. ಮರುದಿನ ಬೆಳಿಗ್ಗೆ ಹತ್ತು ಗಂಟೆಗೆ ಮೇಳದೊಂದಿಗೆ ಪಾಲಿಕೆ ಸಿದ್ದೇಶ್ವರ ದೇವಸ್ಥಾನದಿಂದ ಈ ಗುಡಿಗೆ ಬರುತ್ತದೆ. ಮುತ್ತೈದೆಯರು ಕಳಸ ಕನ್ನಡಿ ಹಿಡಿದು ಮೆರವಣಿಗೆಯಲ್ಲಿರುತ್ತಾರೆ. ಬೇಡಿಕೊಂಡವರು, ಕಪಾಳ, ಕೈ, ನಾಲಗೆಗಳಿಗೆ ಬೆಳ್ಳಿಯ ಸಳಿಯಿಂದ 'ಶಸ್ತ್ರ ಹಾಯುತ್ತಾರೆ'. ಇವನ್ನು ಚುಚ್ಚುವವರು ಕರಮುಡಿ ಎಂಬ ಊರಿಂದ ಬಂದಿರುವ ಪಂಚಮಸಾಲಿ ಕುಲದವರು. ಈ ಪುರವಂತರು ರುದ್ರಕುಮಾರನ ಒಡಪು ಹೇಳುತ್ತಾರೆ. ನಂತರ ಸಾಮೂಹಿಕ ವಿವಾಹ, ಮಹಾಗಣಾರಾಧನೆ, ಸಂಜೆ ಐದು ಗಂಟೆಗೆ ಗುಡಿಯಿಂದ ಊರದಾರಿಯಲ್ಲಿರುವ ಪಾದಗಟ್ಟೆಯವರೆಗೆ ಉಚ್ಚಯ್ಯ ಎಳೆಯುತ್ತಾರೆ. ಇದರಲ್ಲಿ ಉತ್ಸವಮೂರ್ತಿಯ ಜತೆ ಯಲಬುರ್ಗಿಯಿಂದ ಬರುವ ಮಠದ ಸ್ವಾಮಿಗಳಿರುತ್ತಾರೆ. ''ಸಾಂಬ ಜಯ ನಮ ಸಾರ್ವತಿ ಪತಿ ಹರಹರ ಮಾದೇವ' ಎನ್ನುತ್ತ ಎಲ್ಲ ಜಾತಿ ಜನ ಎಳೆಯುತ್ತಾರೆ. ಉಚ್ಚಯ್ಯಕ್ಕೆ ಉತ್ತತ್ತಿ, ಬಾಳೆಹಣ್ಣು, ಬೆಲ್ಲ ಹಚ್ಚು ಎಸೆಯುತ್ತಾರೆ. ೫-೬ ಸಾವಿರ ಜನ ಸೇರುವ

ಈ ಜಾತ್ರೆಗೆ ಅಂಗಡಿಗಳು ಬಂದಿರುತ್ತವೆ. ಐದನೆ ದಿನ ಸಂಜೆ ಪೂಜೆ, ಭಜನೆ, ಮಂಗಳಾರತಿ ಮಾಡಿ ಕಳಸ ಇಳಿಸುತ್ತಾರೆ. ಜಾತ್ರೆಯಲ್ಲಿ ಕುರುಬರ ಡೊಳ್ಳು, ಕೊರವರ ಸನಾದಿ, ಬ್ಯಾಂಡ್‌ಸಟ್ಟು, ಭಜನೆ ಮೇಳಗಳಿರುತ್ತವೆ. ಊರವರು ನಾಟಕಗಳನ್ನಾಡುತ್ತಾರೆ.

ಕುದುರಿಮೋತಿ :

ಈ ಊರಿನ 'ಮೊಹರಂ' ಹಿಂದಿನ ರಾಯಚೂರು ಜಿಲ್ಲೆಯಲ್ಲೇ ಖ್ಯಾತಿಯನ್ನು ಪಡೆದಿರುವಂಥದು. (ಇನ್ನೊಂದು ಮುದಗಲ್ಲಿನದು) ಜನ ಹೆಚ್ಚು ಸೇರುತ್ತಾರೆಂಬ ಕಾರಣಕ್ಕಾಗಿ ಅಷ್ಟೇ ಅಲ್ಲ ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಿಂದು-ಮುಸ್ಲಿಂ ಭೇದವನ್ನೆಣಿಸದೆ ಜನ ಪೂರ್ಣವಾಗಿ ಭಾಗಿಯಾಗುತ್ತಾರೆಂಬ ಅಂಶ ಮುಖ್ಯವಾದುದು. ಊರಲ್ಲಿರುವ ಮೂರು ಮಸೂತಿಗಳ ಮುಜಾವರರು ಸಯ್ಯದ್ ಪಂಗಡದವರು. ಊರ ಹೊರಗಿನ ಹುಸೇನ ಬಾಷಾ ಮಸೀದಿಯ ಅಕ್ಕಪಕ್ಕ ಇವರು ಸುಮಾರು ೭೦ ಜನ ವಾಸವಾಗಿದ್ದಾರೆ. ಆರು ಜನ ಸೋದರರ ನಡುವೆ ೨೫ ಎಕರೆ ಜಮೀನಿದೆ.

ಊರ ಹೊರ ಭಾಗದಲ್ಲಿ ಹುಸೇನ್‌ಬಾಷಾ ಅವರ ಪೂರ್ವಾಭಿಮುಖಿ ಮಸೂತಿ. ಒಳಗೋಣೆಯ ಕಟ್ಟೆಯ ಮೇಲೆ ಪೆಟ್ಟಿಗೆ ಬೆಳ್ಳಿಯ ಮೂರ್ತಿಗಳಿವೆ. ಹಳೆ ಮಸೀದಿ ಕೂಡ ಪೂರ್ವಾಭಿಮುಖಿ. ಇದಕ್ಕೆ ಹುಸೇನೆ ಆಲಂ ದರಗಾ ಶರೀಫ್ ಅಥವಾ ಕಂದನಕೇರಿ ದರಗಾ ಎಂದು ಕರೆಯುತ್ತಾರೆ. ಇಲ್ಲಿ ಗದ್ದಿಗೆ ಇದೆ. ಹಿಂದಿರುವ ಪ್ರತ್ಯೇಕ ಕೋಣೆಯಲ್ಲಿ ಗದ್ದಿಗೆಯ ಮೇಲೆ ಬಣ್ಣದ ಪೆಟ್ಟಿಗೆ. ತೊಟ್ಟಿಲಾಕಾರದ ಇದರಲ್ಲಿ ಪಂಚಲೋಹದ ದೇವರಿದೆ. ಪೆಟ್ಟಿಗೆಯ ಮುಂಭಾಗದಲ್ಲಿ ಹುಲಿ, ಕೈ, ಮಾನವ ಚಿತ್ರಗಳಿವೆ. ಮಸೀದಿಯ ಮುಂದೆ ಬೇವಿನ ಗಿಡದ ಕಟ್ಟೆ. ಇದರ ಹಿಂದೆ ಎರಡು ಗೋರಿಗಳು. ದೊಡ್ಡ ಕಮಾನು ಬಾಗಿಲು ಸುತ್ತಲೂ ಆವಾರ ಗೋಡೆ, ಅಲಾವಿ ಕುಣಿ ಇವೆಲ್ಲಾ ಇಲ್ಲಿವೆ.

ದೇವರ ಕೋಣೆಯಲ್ಲಿ ಸಾಲಿಗ್ರಾಮವಿದೆ. ಹಿಂದೂ ಪದ್ಧತಿಗಳಿರುವುದರಿಂದ ಭಕ್ತರು ಕಾಯಿ ಕರ್ಪೂರ ಮಾಡುತ್ತಾರೆ. ಆರತಿ ಬೆಳಗುತ್ತಾರೆ. ಊರಲ್ಲಿ ದುರಗವ್ವನ ಹಬ್ಬ ಮಾಡಲಿ, ದ್ಯಾಮವ್ವನ ಜಾತ್ರೆ ಮಾಡಲಿ ಇಲ್ಲಿಂದಲೆ ಮೆರವಣಿಗೆ ಸಾಮಾನು ಹೋಗುವುದು ಪದ್ಧತಿ. ಪ್ರತಿ ದಿನ ೫ ಗಂಟೆಗೆ ಮುಜಾವರರು ಸ್ನಾನ ಮಾಡಿ, ಪೂಜಿಸಿ, ನಗಾರಿ ಬಡಿಯುವ ಸದ್ದು ಕೇಳಿ ಊರ ಜನ ಎದ್ದು ದೈನಂದಿನ ಕಾರ್ಯಗಳಿಗೆ ತೊಡಗುತ್ತಾರೆ.

ಮೂರು ದಿನಗಳ ಜಾತ್ರೆಗೆ ಸಹಸ್ರಾರು ಜನ ನೆರೆಯುತ್ತಾರೆ. ಮೊದಲ ದಿನ ಸಂದಲ್ ರಾತ್ರಿ. ಹಿಜರಿ ೮ನೇ ತಾರೀಖಿನ ಕಾರ್ಯಕ್ರಮ. ದೇವರು ಕಂದನಕೇರಿ ಮಸೂತಿಯಿಂದ ಊರಗುಡ್ಡಿಕಲ್ಲಿನವರೆಗೆ ಸವಾರಿ ಮಾಡುತ್ತವೆ. ಪೆಟ್ಟಿಗೆಯಲ್ಲಿರುವ ದೇವರನ್ನು ತೆಗೆದು ಊರಲ್ಲಿರುವ ಎಲ್ಲ ಹೆಣ್ಣು, ಗಂಡು ದೈವಗಳ ಗುಡಿಗಳಿಗೆ ಭೇಟಿ ಕೊಟ್ಟು ಓದಿಕಿ ಮಾಡಿಸಿಕೊಂಡು ಮೆರವಣಿಗೆಯಲ್ಲಿ ಬರುತ್ತವೆ. ಈ ಮೆರವಣಿಗೆಯಲ್ಲಿ ವಾದ್ಯಗಳಿರುವುದಿಲ್ಲ. ಹೆಜ್ಜೆ ಮಜಲಿರುತ್ತದೆ. ಜಾತ್ರೆಯ ಮೂರು ದಿನ ಊರ ರೈತರು ಹೊಲಗಳಿಗೆ ಹೋಗುವುದಿಲ್ಲ, ಇಡೀ ರಾತ್ರಿ ಹೆಜ್ಜೆ ಮೇಳ ಮಾಡುವುದೇ ಕೆಲಸ.

ಎರಡನೆ ದಿವಸ ಹಿಜರಿ ೯ನೇ ತಾರೀಖಿನ 'ಕತ್ತಲರಾತ್ರಿ' ಹಸೇನ ಹುಸೇನರ ಯುದ್ಧ. ಮೊದಲ ದಿನದಂತೆ ದೇವರು ಹಿರೇಮಸೂತಿಯಿಂದ ಹೊರಟು ಕಡೆ ಮಸೂತಿಯವರೆಗೆ ಬಂದು ಹೋಗುತ್ತವೆ. ಈ ಮಧ್ಯೆ ಈಶ್ವರ ಗುಡಿಯ ಹತ್ತಿರ ಸವಾರಿ ಒಂದು ತಾಸು ನಿಂತು ಭಕ್ತರಿಗೆ ಆಶೀರ್ವದಿಸುತ್ತದೆ. ಜನ ಹೆಜ್ಜೆ ಹಾಕುತ್ತಾರೆ. 'ಹೇಳಿಕಿ ಕೇಳಿಕಿ' ಮಾಡಿಕೊಳ್ಳುತ್ತಾರೆ. ಮುಜಾವರರು ಏನೂ ಹೇಳುವುದಿಲ್ಲ. ಆದರೆ ಭಕ್ತರೆ ತಮ್ಮ ತಮ್ಮ ಇಚ್ಛಾನುಸಾರ ಒಳ್ಳೆಯದು, ಕೆಟ್ಟದ್ದನ್ನು ಕಲ್ಪಿಸಿಕೊಳ್ಳುತ್ತಾರೆ.

ಮೂರನೇ ದಿನ ಮೊಹರಂ. ಹಿಜರಿ ದಿನಾಂಕ ೧೦, ಶಹದತ್ ರಾತ್ರಿ. ಮೂರು ಮಸೂತಿ ದೇವರು ಹನುಮಂತ ದೇವರ ಗುಡಿಯ ಹತ್ತಿರ ಕೂಡಿ ದ್ಯಾಮವ್ವನ ಅಗಸಿ ಹತ್ತಿರ ಸಲಾಮು ತೆಗೆದುಕೊಂಡು ಭಕ್ತರಿಗೆ ಆಶೀರ್ವಾದ ಮಾಡಿ ಹೊಳೆಗೆ ಹೋಗುವವು. ಅಲ್ಲಿ ಅವುಗಳ ಬಟ್ಟೆ, ಇತ್ಯಾದಿ ತೆಗೆದು ಸಾಮಾನುಗಳನ್ನು ವಾಪಸು ತಂದು ಪೆಟ್ಟಿಗೆಯಲ್ಲಿಡುತ್ತಾರೆ.

ಜಿಯಾರತ್‌ನಂದು ('ಜಾರಾತ್') ಪೆಟ್ಟಿಗೆಯಿಂದ ದೇವರು ತೆಗೆದು ಹೊರಗಿಟ್ಟು ಸಕ್ಕರೆ ಓದಿಸುತ್ತಾರೆ. ಇದು ಸತ್ತ ನಂತರ ತಿಥಿ ಮಾಡುವ ಆಚರಣೆ. ಹತ್ತು ದಿನದ ನಂತರ ದೇವರು ಪುನಃ ಹುಟ್ಟಿ ಬರುತ್ತಾನೆ. ಆ ದಿನ ಇಡಿ ರಾತ್ರಿ ದೇವರ ಹತ್ತಿರ ಸವಾಲು ಪದ ಹಾಡುತ್ತಾರೆ. ಬೆಳಿಗ್ಗೆ ಪೆಟ್ಟಿಗೆಯಲ್ಲಿ ದೇವರನ್ನಿಟ್ಟು ಬಿಡುತ್ತಾರೆ. ಮರುವರ್ಷದವರೆಗೆ ಅದನ್ನ ತೆಗೆಯುವಂತಿಲ್ಲ. ಪೆಟ್ಟಿಗೆಗೇ ಪ್ರತಿ ಗುರುವಾರ ಸಕ್ಕರೆ ಓದಿಸಲಾಗುತ್ತದೆ.

ಕತ್ತಲ ರಾತ್ರಿಯಂದು ಭಕ್ತರು ಹಾಕುವ ಹೂವಿನ ಹಾರಗಳಿಗೆ ಲೆಕ್ಕವಿರುವುದಿಲ್ಲ. ದೇವರು ಹಿಡಿಯುವವರು ೧೦ ದಿವಸ ಉಪವಾಸವಿರಬೇಕಾಗುತ್ತದೆ. ಈ ಜಾತ್ರೆಯಲ್ಲಿ ಪಾಲ್ಗೊಳ್ಳುವ ಮುಕ್ಕಾಲು ಪಾಲು ಜನ ಹಿಂದುಗಳೆ. ಮುಸ್ಲಿಂರು ಮತ್ತು 'ಕಪ್ಪು ಜನ' ಬೇಟೆ ಮಾಡುತ್ತಾರೆ. ಅಯ್ಯನವರು, ಲಿಂಗಾಯತರು, ಚೊಂಗೆ, ಮಾದಲಿ ಎಡೆ ಮಾಡುತ್ತಾರೆ. ಅಲಾಯಿ ಕುಣಿ ತೆಗೆದು ರಾಶಿಯಂತೆ ಮಣ್ಣು, ಒಟ್ಟಿ ಅದರ ಸುತ್ತ ಹೆಜ್ಜೆ ಕುಣಿಯುತ್ತಾರೆ. ದೇವರು ಕೂಡ ಸುತ್ತುವರಿಯುತ್ತವೆ.

ಹೊಸಪೇಟೆ, ಗಂಗಾವತಿ ಮೊದಲಾದ ದೂರದ ಊರುಗಳಿಂದ ಜನ ಬರುತ್ತಾರೆ. ಸಾಕಷ್ಟು ಅಂಗಡಿಗಳಿರುತ್ತವೆ. ಈ ಜಾತ್ರೆಯ ಒಂದು ಮುಖ್ಯ ಸಂಗತಿ ಎಂದರೆ ವೇಷಗಾರರು (ಜಾತಿಗಾರರು). ರಾಮಕೊಂಡಿಯರು, ಸಿದ್ಧರು, ದುರಗಮುರುಗೇರು ಪ್ರತಿ ಮೂರು ವರ್ಷಕ್ಕೊಮ್ಮೆ ಈ ಮೊಹರಂ ಸಂದರ್ಭದಲ್ಲಿ ಕಡ್ಡಾಯವಾಗಿ ಬಂದು ಸೇರುವುದು. ೫-೬ ಸಾವಿರದಷ್ಟಿರುವ ಈ ಜನಕ್ಕೆ ಇದೇ 'ಮೆಟ್ಟು'. ತಮ್ಮ ತಮ್ಮಲ್ಲಿ ನ್ಯಾಯ ನಿಗಾದಿಯಿದ್ದರೆ, ಮದುವೆ ಮುಂತಾದ ಕಾರ್ಯಗಳಿದ್ದರೆ ಇಲ್ಲೇ ತೀರಿಸಿಕೊಳ್ಳುತ್ತಾರೆ. ನಾಡಿನ ಒಳ ಹೊರಭಾಗದಲ್ಲಿ (ಮುಂಬೈವರೆಗೆ) ಮೂರು ವರ್ಷ ಸದಾ ಸಂಚಾರದಲ್ಲಿರುವ ಈ ಜನ ಇಲ್ಲಿ ಸೇರಿ ಕೂಡಿಟ್ಟ ಹಣ ಕರಗುವಂತೆ ಮಜಾ ಉಡಾಯಿಸುತ್ತಾರೆ. ಬೇಟೆಯಾಡಿ, ಸಕ್ಕರೆ ಓದಿಸಿ, ಕುಡಿದು, ತಿಂದು ಮೋಜು ಮಾಡುತ್ತಾರೆ. ಇನ್ನೂ ವಿಶೇಷವೆಂದರೆ ಈ ಸಂದರ್ಭದಲ್ಲಿ ಅವರು ತಮ್ಮ ಕಲೆಗಳನ್ನು

ಪ್ರದರ್ಶಿಸುವುದಿಲ್ಲ. "ಡೊಂಬಲಿ ಆಯಮೋದಿನ್" ಎಂದು 'ಅಜ್ಜ' ಮೈಮೇಲೆ ಬಂದಂತೆ ಕುಣಿಯುತ್ತಾರೆ.

ಜಾತ್ರೆಯಲ್ಲಿ ಸಕ್ಕರೆ ಓದಿಸುವುದು ಮಾತ್ರ ಫಕೀರ ಸಾಬರು. ಉಳಿದಂತೆ ಎಲ್ಲ ವಿಧಿ ವಿಧಾನಗಳನ್ನು ಪೂರೈಸುವವರು ಜಾತಿ ಭೇದವಿಲ್ಲದಂತೆ ಹಿಂದುಗಳೇ. ಹುಸೇನ ಆಲಂ ಯಾರು? ಇಲ್ಲೇಕೆ ಬಂದು ನಿಂತರು ಎಂದು ಮುಜಾವರ ರೋಷನ್‌ಸಾಬ ಮಕಾನದಾರ ಅವರನ್ನು ಕೇಳಿದರೆ ಅವರು ಒಂದು ಘಟನೆ ಹೇಳಿದರು.

ಆಂಧ್ರದ ಆದವಾನಿ ತಾಲೂಕು ಹಾಲವಿಯಿಂದ ಗುಡೇಸಾಬ ಮತ್ತು ಅವನ ಮಗ ಗರೀಬ ನವಾಜರ ಮೂಲಕ ಹುಸೇನ ಆಲಂ ಇಲ್ಲಿ ಬಂದರು. ತಂದೆ ಮಗ ಈ ಊರ ಈಶ್ವರ ಗುಡಿಯಲ್ಲಿ ವಸ್ತಿಯಿದ್ದರು. ಬೆಳಿಗ್ಗೆ ಚಂದ್ರದರ್ಶನ ಮಾಡಿಕೊಂಡು ಮುಂದೆ ಪ್ರಯಾಣ ಮಾಡಲು ಅಣಿಯಾದರು. ಊರ ಹಿರಿಯರು ಅವರನ್ನು ನಿಲ್ಲಿಸಿಕೊಂಡು ಏಳ್ಳುಗಂಟಿನಲ್ಲಿ ದೇವರಿರುವುದನ್ನು ತಿಳಿದು 'ಮುಂದಿನೂರಿಗೆ ಹೋಗಬೇಡಿ, ಇಲ್ಲೇ ಇರಿ' ಎಂದು ದೇವರು ಇಳಿಸಿ ಉಳಿಸಿಕೊಂಡರು. ೯ನೇ ದಿವಸ ಕತ್ತಲ ರಾತ್ರಿ. ಬೆಳಿಗ್ಗೆ ದೇವರು ಹೊಂದಿಸಲು ಹೋದಾಗ ರಾತ್ರಿ ಮೂರು ಗಂಟೆಗೆ ಬನ್ನಿ ಎಂದು ಆದೇಶವಾಯಿತು. ಇಡೀ ರಾತ್ರಿ ಹೆಜ್ಜೆ ಆಡಿ ಮೂರು ಗಂಟೆಗೆ ಬಂದರೆ ಮನೆಗೊಬ್ಬರಂತೆ ಮುಸಲ್ಮಾನರೆಲ್ಲರನ್ನು ಕರೆಯಿರಿ ಎಂದರು. ಊರ ಹಿರಿಯರು ಎಲ್ಲರನ್ನು ಕರೆತಂದರು. ಐವತ್ತು ವರ್ಷದ ಹುಟ್ಟು ಹೆಳವನೊಬ್ಬ ಮಾತ್ರ ಬಾದಿರಲಿಲ್ಲ. 'ಇನ್ನೂ ಒಬ್ಬರು ಬಂದಿಲ್ಲ' ಎಂದಾಗ 'ಹೌದು ಸ್ವಾಮಿ, ಆತ ಹುಟ್ಟು ಕುಂಟ, ಬರಲಿಲ್ಲ', 'ಮಡಿ ನೀರು ಹಾಕಿ ಅವನನ್ನು ಕರೆತನ್ನಿ' ಎಂದು ಆದೇಶವಾಯಿತು. ಅದರಂತೆ ಮಾಡಿದಾಗ ಆತ ಎದ್ದು ಬಂದ. ಈಶ್ವರ ಗುಡಿಯಿಂದ ಈಗ ಇರುವ ಕಂದನಕೇರಿಗೆ ಬಂದರು. ಆಗ ಇದೆಲ್ಲಾ ಡಬಗಳ್ಳಿ, ಸ್ಮಶಾನ, ಊರ ಹಿರಿಯರೆಲ್ಲ ಸ್ವಚ್ಛ ಮಾಡಿ ದರಗಾ ಕಟ್ಟಿದರು. ಇದಾದ ನಾಕಾರು ವರ್ಷಕ್ಕೆ ಯಜಮಾನ ('ಗುಡೆಸಾಬ') ತೀರಿದ. ಜನ ನೆರೆದರು. ಸಮಾಧಿ ಎಲ್ಲಿ ಮಾಡುವುದು? ಮಗ, 'ದೈವದವರ ಕೆಲಸ, ಎಲ್ಲಿಯಾದರೂ ಮಾಡಿರಿ' ಎಂದ. ದರಗಾದ ಅಂಗಳದಲ್ಲಿ ಸಮಾಧಿ ಮಾಡಿ ಗೋರಿ ಕಟ್ಟಿಸಿದರು. ಮೊಹರಂ ಮುಗಿದು ೭-೮ ತಿಂಗಳು ಕಳೆದಿತ್ತು, ಒಂದು ಸಲ ಸಮಾಧಿ ಹತ್ತಿರ ದೇವರು ಹೋಗಿ ನಿಂತಾಗ 'ಸಮಾಧಿ ಕಿತ್ತು ನೋಡಿರಿ' ಎಂದು ಆದೇಶವಾಯಿತು. ಕಿತ್ತು ನೋಡಿದರೆ ಹೆಣ ಕೊಳೆತಿರಲಿಲ್ಲ. ಇಟ್ಟ ಹೂ ಯಥಾರೀತಿಯಿದ್ದವು. ತಿರುಗಿ ಕಟ್ಟಡ ಮಾಡಿಸಿದರು.

ಲಿಂಗನಬಂಡಿ :

ಬೃಹತ್ ಹಾಸುಬಂಡೆ ಗುಡ್ಡದ ಮಗ್ಗುಲಲ್ಲಿ ಮಲಗಿರುವ ಊರು ಲಿಂಗನಬಂಡಿ. ಬಂಡೆಗುಡ್ಡದ ತುದಿಯಲ್ಲಿ ದೂರದಿಂದಲೇ ಗುಮ್ಮಟ ಕಾಣಿಸುತ್ತದೆ. ಬಂಡೆಯ ತಪ್ಪಲಲ್ಲಿರುವ ಕೆರೆಯ ಬದಿಯಿಂದ ತುದಿಗೆ ಹೋದರೆ ಅಲ್ಲಿರುವ ವಿಶಾಲ ಸ್ಥಳದಲ್ಲಿ, ದೊಡ್ಡ ದ್ವಾರ ಬಾಗಿಲೊಳಗೆ, ಗುಹಾ ದೇವಾಲಯಗಳು, ತೇರು ಮನೆ, ಹೊಂಡ, ಬೇರೆ ಗುಡಿಗಳು ಮೊದಲಾದ ಸ್ಮಾರಕಗಳಿವೆ.

ಕಲ್ಲಾಸರೆಯ ಗುಹೆಯಲ್ಲಿ ಮೌನೇಶ್ವರ ದೇಗುಲ. ದಕ್ಷಿಣಾಭಿಮುಖವಾಗಿರುವ ಕಲ್ಲುಗದ್ದಿಗೆಯ ಮೇಲೆ ತೆಂಬಿಗೆಗೆ ಕಾಯಿಯಿಟ್ಟು ಹೂಗಳಿಂದ ಪೂಜೆ ಸಂದಿದೆ. ಕಲ್ಲುಗದ್ದಿಗೆಗೇ ಅಂಟಿಸಿದ ಬೆಳ್ಳಿ ಕಣ್ಣು. ಪೂಜಾರಿಣಿ ಗದ್ದುಗೆಯ ಹತ್ತಿರ ಕೂತಿದ್ದ ದಿವಂಗತ ಎಚ್ಚರಸ್ವಾಮಿಯವರ ಪತ್ನಿ ಗಂಗಮ್ಮ. (ಗಂಗಮ್ಮ ಎಚ್ಚರಸ್ವಾಮಿ ಮೌನೇಶ್ವರ ಮಠ). ಗದ್ದುಗೆಯ ಕೆಳಗೆ ಒಳಗವಿ. ಮೌನೇಶ್ವರರು ಅನುಷ್ಠಾನಕ್ಕೆ ಕೂರುತ್ತಿದ್ದ ಚಿಕ್ಕ ಕಟ್ಟೆ. ಅದರ ಮೇಲೆ ಲಿಂಗ, ಫೋಟೋ, ಹೂಜಿ, ಚಪಗೊಡಲಿಗಳು. ಕಟ್ಟೆ ಎದುರು ಮೌನೇಶ್ವರರು ಆಲಾವಿ ಆಡಿದ ಕುಣಿ. ಕತ್ತಲಿರುವುದರಿಂದ ದೀಪದ ನೆರವಿಲ್ಲದೆ ಇಲ್ಲಿ ಇಳಿಯುವುದು ಕಷ್ಟ. ಗದ್ದುಗೆಯ ಮೇಲ್ಭಾಗದಲ್ಲಿ ಪೈಗಂಬರರ ಗದ್ದುಗೆ. 'ಪೈಗಂಬರನನ್ನು ತಲೆಯ ಮೇಲೆ ಇಟ್ಟುಕೊಂಡಿದ್ದಾನೆ ಮೌನೇಶ್ವರ; ಎಂದರು ಗಂಗಮ್ಮ. ಈ ಗದ್ದುಗೆಯ ಮೇಲೆ ದೂರದಿಂದ ಕಾಣುವ ಗುಮ್ಮಟ ಕಮಾನು ಕಂಬಗಳು.

ತೇರಿನ ಮನೆಯ ಎದುರು ದಾರಿಯಲ್ಲಿ ಬಸವಣ್ಣನ ಗುಡಿ, ಪೂಜಾರಿ ಮನೆತನದ ಮೂಲಪುರುಷ ಲಿಂಗಯ್ಯನ ಗದ್ದಿಗೆ, ದುರಗಮ್ಮ ಹುಲಿಗೆಮ್ಮಗಳಿವೆ. ಗುಡ್ಡದ ಕೆಳಗೆ, ಕೆರೆಯ ಪಕ್ಕ ಪೂಜಾರಿ ವಂಶಸ್ಥರ ಗದ್ದುಗೆಗಳು. ಗುಡ್ಡದ ಇನ್ನೊಂದು ಪಕ್ಕದಲ್ಲಿ ಮೌನೇಶ್ವರರು ದರ್ಶಿಸಿದ ವೆಂಕಟೇಶ್ವರ ಗುಡಿ, ಉಳಿವಿ ಬಸವಣ್ಣನ ಗುಡಿ. ಮೌನೇಶ್ವರ ಗುಡಿಗೆ ಪ್ರವೇಶಿಸುವ ದಾರಿಯಲ್ಲಿ ವೀರಭದ್ರ, ಕಾಳಿಕಾದೇವಿಯವರ ಪ್ರತ್ಯೇಕ ಗುಹಾ ಗುಡಿಗಳು. ತುಂಬ ಪ್ರಶಸ್ತವಾದ ಈ ಸ್ಥಳದಿಂದ ಸುತ್ತಲ ದೂರದವರೆಗಿನ ದೃಶ್ಯ ನಯನಮನೋಹರವಾಗಿದೆ.

ಮೌನೇಶ್ವರರು ತಿಂತಿಣಿಗೆ ಹೋಗುವಾಗ ಇಲ್ಲಿ ವಾಸವಾಗಿದ್ದು ವರವಿನ ಕೂಸಿಗೆ ಜನ್ಮವಿತ್ತರಂತೆ. ಈತನ ವಂಶಸ್ಥರೇ ಪೂಜಾರಿಗಳು. ಗುಡ್ಡದ ಕೆಳಗಿನ ಊರಲ್ಲಿರುವ ಪೂಜಾರಿಗಳ ಮನೆಯಲ್ಲಿ ಗಾಜು ಹಾಕಿಸಿಟ್ಟಿರುವ 'ಪೂಜಾರಿ ವಂಶಾವಳಿ'ಯಲ್ಲಿ, 'ಶ್ರೀ ಜಗದ್ಗುರು ವಿಶ್ವಬ್ರಹ್ಮ ತ್ವಷ್ಟ್ರ ಬ್ರಹ್ಮ, ಅಹಭುವನಸ್ಯೆ ಗೋತ್ರ, ದ್ರಾಯ್ಯಾಯನ ಸೂತ್ರ, ಅಘೋರ ಪ್ರವರ, ಸಾಮವೇದ ಶಾಖಾ, ಸ್ಮಾರ್ತ ಸಂಪ್ರದಾಯ, ಅದ್ವೈತ ತತ್ತ್ವ, ಧರ್ಮಶಾಸ್ತ್ರ ಬೋಧನ' ಎಂದು ಬರೆದಿದ್ದು ವರವಿನ ಲಿಂಗಯ್ಯಸ್ವಾಮಿಯಿಂದ ೮-೧೦ ತಲೆಮಾರಿನ ವಂಶಾವಳಿಯಿದೆ. ಅಡಿಗೆಮನೆಯ ಗದ್ದಿಗೆಯ ಮೇಲೆ ಬೆಳ್ಳಿಯ ಕೈ, ಚಪಗೊಡಲಿಗಳು ಮತ್ತು ಚಿತ್ರಗಳಿವೆ. ಇವರು ಪಂಚಾಳ ಕುಲದವರು.

ಗುಡ್ಡದಲ್ಲಿ ಪ್ರತಿದಿನ ಮೌನೇಶ್ವರ ಮತ್ತು ಪೈಗಂಬರ ಗದ್ದುಗೆಗಳಿಗೆ ಪೂಜೆ ಇದೆ. ಪೈಗಂಬರರ ಗದ್ದುಗೆಯನ್ನು ಮೌನೇಶ್ವರ ಪೂಜಾರಿಗಳೇ ಪೂಜುತ್ತಾರೆ. ಸಕ್ಕರೆ ಓದಿಸುತ್ತಾರೆ, ಕಾಯಿ ಒಡೆಯುವುದಿಲ್ಲ. ಈ ವರ್ಷ ೨೯-೩-೯೯ರಿಂದ ೩-೪-೯೯ರವರೆಗೆ ಜಾತ್ರೆಯಾಗಿದೆ.

ಅದರ ವಿವರಗಳು :

೨೯-೩-೯೯ ಬಸವಪಟ ಕಟ್ಟುವುದು, ೩೦-೩-೯೯ ಕಳಸ ಪೂಜೆ.

೩೧-೩-೯೯ ಮಹಾರಥೋತ್ಸವ, ೧-೪-೯೯ ಕಡುಬಿನ ಕಾಳಗ

೨-೪-೯೯ ಕಾಳಿಕಾ ಕಲ್ಯಾಣೋತ್ಸವ, ೩-೪-೯೯ ಮಹಾ ಪ್ರಸಾದ.

ಪಟ ಕಟ್ಟುವ ದಿನ ಅರಿವಿಯಲ್ಲಿ ನಂದಿಯನ್ನು ಬರೆದು ಪೂಜೆ ಮಾಡಿ ಮೌನೇಶ್ವರ ಗುಡಿಯ ಎದುರು ಅಂಗಳದಲ್ಲಿ ಬಂಡೆಯ ಮೇಲಿರುವ ಕಂಬಕ್ಕೆ ಕಟ್ಟುತ್ತಾರೆ. ಅಂದೇ ತೇರು ಕಟ್ಟುವ ಕೆಲಸವೂ ಪ್ರಾರಂಭ. ಮೌನೇಶ್ವರರ ಎಲ್ಲ ಜಾತಿಯ ಭಕ್ತರು ಸೇರಿ ತೇರು ಸಜ್ಜುಗೊಳಿಸುತ್ತಾರೆ.

ಮರುದಿನ ಕಳಸ ಪೂಜೆಯಂದು ಪೂಜಾರಿಯ ಮನೆಯಲ್ಲಿರುವ ತೇರಿನ ಕಳಸವನ್ನು ಸನಾಯಿ, ಡೊಳ್ಳು, ಭಜನೆಗಳ ಮೇಳದೊಂದಿಗೆ ಮೆರವಣಿಗೆಯಲ್ಲಿ ಗುಡ್ಡದ ಮೇಲೆ ತಂದು ಪೂಜಿಸಿ ತೇರಿಗೆ ಏರಿಸುತ್ತಾರೆ.

ಸಂಜೆ ಪಾಲಿಕಿಯಲ್ಲಿ ದೇವರನ್ನು, ನಂದಿ, ಆದಿಲಿಂಗೇಶ್ವರ, ಕುದುರೆ, ಸರ್ಪ, ಆನೆಗಳ ವಾಹನಗಳ ಜತೆ ತೇರಿನ ಹತ್ತಿರ ತರುವುದು. ತೇರಿಗೆ ೫ ಸುತ್ತು ಪ್ರದಕ್ಷಿಣೆ ಬಂದು ದೇವರನ್ನು ತೇರಿಗೆ ಏರಿಸುವುದು. ಜತೆಗೆ ಗಂಗಮ್ಮನವರ ಮಕ್ಕಳಾದ ಉಳವೇಂದ್ರಸ್ವಾಮಿ, ಮೌನೇಶ್ವರಸ್ವಾಮಿ ತೇರೇರುವುದು. ಅವರು ಗಂಟೆ, ಧೂಪಾರತಿ ಹಿಡಿದಿರುತ್ತಾರೆ. ತೇರನ್ನು ಎದುರು ಬೀದಿಯುದ್ದಕ್ಕೂ (ಗುಡ್ಡದ ಮೇಲೆಯೆ) ಲಿಂಗಯ್ಯನ ಗದ್ದುಗೆಯ ಹತ್ತಿರದ ಪಾದಗಟ್ಟೆಯವರೆಗೆ ಎಳೆಯುತ್ತಾರೆ.

ಇಲ್ಲಿ ನಡೆಯುವ ಕಡುಬಿನ ಕಾಳಗದ ಕ್ರಮ - ಐದು ಮಂದಿ ಮುತ್ತೈದೆಯರು ಹೊಸ ಮಣ್ಣಿನ ಬಿಂದಿಗೆ ಹೊತ್ತು ಹೊಂಡಕ್ಕೆ ಬರುವುದು. ಗಂಗಮ್ಮನ ಪೂಜೆ ಮಾಡಿ, ದಂಡೆ ಹಾಕಿ, ಉಡಿ ತುಂಬಿಸುವುದು. ಹೊಂಡದ ನೀರನ್ನು ಗುಡ್ಡದ ಮೇಲಿರುವ ಕೊಂಡಕ್ಕೆ ಐದು ಸಲ ತಂದು ಹಾಕುವುದು. ಕೊಂಡದಲ್ಲಿ ಉತ್ಸವಮೂರ್ತಿ ಇರುತ್ತದೆ. ಗೋದಿ ಹಿಟ್ಟಿನ ಸಣ್ಣ ಕಡುಬುಗಳನ್ನು ಕೊಂಡಕ್ಕೂ, ಮೌನೇಶ್ವರ ಗದ್ದುಗೆಗೂ 'ಹಾರಿಸುತ್ತಾರೆ'. (ಎಸೆಯುವುದು) ನೆರೆದ ಜನರೂ ಕೂಡ ಅಕ್ಕಿ ಕಾಳು ಹಾಕಿದಂತೆ ಕಡಬು ಹಾಕುತ್ತಾರೆ.

ಮರುದಿನ ಭದ್ರಿ ಕಾಳಮ್ಮ ಮತ್ತು ವೀರಣ್ಣನ (ವೀರಭದ್ರ) ಲಗ್ನ. ಕಾಳಮ್ಮನ ಗುಡಿಯ ಮುಂದೆ ಪೂಜಾರಿಗಳೆ ಹೆಣ್ಣಿನ ಮತ್ತು ಗಂಡಿನ ಕಡೆಯವರಾಗಿ ಲಗ್ನದ ಎಲ್ಲ ವಿಧಿ ವಿಧಾನಗಳನ್ನು ಮಾಡುತ್ತಾರೆ. ಮಧ್ಯಾಹ್ನ ೧ರಿಂದ ೪ರವರೆಗೆ ಪುರವಂತರ ಸೇವೆ. ಬೇಡಿಕೊಂಡವರು ಶಸ್ತ್ರ ಹಾಯುವುದು. ಜಾತ್ರೆಗೆ ನೆರೆದ ಸಹಸ್ರಾರು ಜನ ಕಾಯಿ ಒಡೆಸುತ್ತಾರೆ. ನೆರೆದ ಅಂಗಡಿಗಳಲ್ಲಿ ಸಾಮಾನು ಖರೀದಿಸುತ್ತಾರೆ.

ಮಹಾಪ್ರಸ್ತಾದಂದು ನೆರೆದ ಜನಕ್ಕೆಲ್ಲ ಮಾಲೇದಿ (ಮಾದಲಿ) ಅನ್ನ ಸಾರಿನ ಊಟ ಹಾಕಿಸುತ್ತಾರೆ. ಕಳಸ ಇಳಿಸುತ್ತಾರೆ.

ತಿಂತಿಣಿ ಮೌನೇಶ್ವರರ ಚರಿತ್ರೆ ಪ್ರಸಿದ್ಧವಿದ್ದು ಅದರ ಹಲವು ಪವಾಡಗಳನ್ನು ಇಲ್ಲಿಯೂ ಹೇಳುತ್ತಾರೆ. ಲಿಂಗನ ಬಂಡಿಗೇ ಸಂಬಂಧಪಟ್ಟ ವಿಷಯಗಳೆಂದರೆ -

ಪಂಚಾಳದವರನ್ನು ಕರೆದು ಊಟ ಕೊಟ್ಟಾಗ ಅವರು ನಿರಾಕರಿಸಿದರಂತೆ. ಮೌನೇಶ್ವರರು

ಸಿಟ್ಟಾಗಿ ಶಾಪ ಕೊಟ್ಟರು. ಅದರ ಸ್ಮಾರಕವಾಗಿ ರಥದ ಬೀದಿಯಲ್ಲಿ ಪಾನ ಬಟ್ಟಲವಿದೆ. ಮೌನೇಶ್ವರರು ಈ ಊರಲ್ಲಿರುವವರೆಗೆ ಪ್ರತಿ ದಿನವೂ ಜಾತ್ರೆ. ಅವರು ತಿರುಪತಿ ವೆಂಕಟೇಶ್ವರನನ್ನು ಇಲ್ಲಿಗೇ ಕರೆಸಿಕೊಂಡರು. ಅದರ ಗುರುತಾಗಿ ಗುಡ್ಡದ ಒಂದು ಬದಿಗೆ ಇರುವ ಗುಡಿ. ವರವಿನ ಲಿಂಗಯ್ಯನನ್ನು ಪಡೆದ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಲಿಂಗಯ್ಯನೇ ಮೊದಲು ತೇರು ಮಾಡಿಸಿದ.

ವರ್ಷದ ಇತರ ಉತ್ಸವವೆಂದರೆ ಕಾರ್ತಿಕ ಮಾಸದಲ್ಲಿ ಒಂದು ತಿಂಗಳು ದೀಪ ಹಾಕುವುದು ಮತ್ತು ಅನ್ನ ಸಂತರ್ಪಣೆ.

ವಜ್ರ ಬಂಡಿ :

ಯಲಬುರ್ಗಾದಿಂದ ೧೨ ಕಿಲೋಮೀಟರು ದೂರದಲ್ಲಿರುವ ವಜ್ರ ಬಂಡಿ ಹಾಸುಬಂಡೆಗಳ ದಿಬ್ಬದ ಪಕ್ಕದ ಗ್ರಾಮ. ಅಂತೆಯೆ ಇದಕ್ಕೆ 'ವಜ್ರಬಂಡಿ' ಎಂಬ ಹೆಸರು. ಸುಮಾರು ೨,೦೦೦ ಜನರಿರುವ ಇಲ್ಲಿ ಬ್ರಾಹ್ಮಣರ ೧೫ ಮನೆಗಳಿವೆ. ವಾಲ್ಮೀಕಿ ಕುಲದವರು ಹೆಚ್ಚು. ಉಳಿದಂತೆ ಕುರುಬರು, ಮಾದಿಗರು, ಲಿಂಗಾಯತರು, ಒಡ್ಡರಿದ್ದಾರೆ.

ಈ ಊರಲ್ಲಿ ಹನುಮಂತ, ದುರಗಮ್ಮ, ಮಳೆ ಮಲ್ಲೇಶ್ವರ ಜಾತ್ರೆಗಳಾಗುತ್ತವೆ.

ಹನುಮಪ್ಪನ ಜಾತ್ರೆ :

ಸುಮಾರು ೧೦-೧೧ನೇ ಶತಮಾನದ ಹಾಳಾದ ಕಲ್ಲೇಶ್ವರ ಗುಡಿಯ ರಂಗಮಂಟಪದ ಮೆಟ್ಟಿಲಿನ ಎರಡೂ ಬದಿಯ ಕಲ್ಲುಗಳಲ್ಲಿ ಮಾನವ ವಿಗ್ರಹಗಳಿವೆ. ಬಲಭಾಗದ ಮಾನವ ಪ್ರತಿಮೆಯನ್ನೆ ಹನುಮಂತನನ್ನಾಗಿ ಪರಿವರ್ತಿಸಿ ಅದಕ್ಕೆ ಪ್ರತ್ಯೇಕ ಗುಡಿ ಮಾಡಿದ್ದಾರೆ. ಈ ಹನುಮಪ್ಪ ಹಾಗಾಗಿ ಮಂಡಿಯೂರಿ ಕೂತ, ಎದುರು ಮುಖದವ. ಅಂಗಳದಲ್ಲಿ ಅರಳಿ, ಹುಣಸಿ ಮರಗಳಿವೆ. ಕಲ್ಲೇಶ್ವರ ಲಿಂಗವನ್ನು ಮಠಪತಿಗಳು ಪೂಜಿಸುತ್ತಾರೆ. ಹನುಮಂತನನ್ನು ಶನಿವಾರ ಬೇಡ ಕುಲದವರು, ಉಳಿದ ದಿನ ಬ್ರಾಹ್ಮಣರು ಪೂಜಿಸುತ್ತಾರೆ.

ಹೊಸ್ತಿಲು ಹುಣ್ಣಿಮೆಯ ಮೂರು ದಿನ ಜಾತ್ರೆ. ಹನುಮಂತನ ವಿಶೇಷ ಪೂಜೆ, ಸಾರ್ವಜನಿಕರಿಗೆ ಲಾಡು, ಅನ್ನ ಸಾರುಗಳ ಊಟ. ಎರಡನೆ ದಿನ ಒಕ್ಕಲಿಗರ ೧೦೧ ಮುತ್ತೈದೆಯರಿಗೆ ಊಟ. ಸಂಜೆ ಉಚ್ಚಯ್ಯ, ಚಕ್ಕಡಿಯಲ್ಲಿ ಚಟ್ಟ ಕಟ್ಟಿ ಮೂರ್ತಿಯನ್ನಿಟ್ಟು, ಊರ ಅಗಸಿಯಿಂದ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಉಚ್ಚಾಯದ ಮುಂದೆ ೯ ಜನ ಮುತ್ತೈದೆಯರು ಆರತಿ (ಕಳಶ) ಹಿಡಿದಿರುತ್ತಾರೆ. ಸುತ್ತಮುತ್ತಲ ಗ್ರಾಮಸ್ಥರು ಈ ಜಾತ್ರೆಗೆ ಬರುತ್ತಾರೆ.

ದುರಗವ್ವನ ಜಾತ್ರೆ :

ಉತ್ತರಾಭಿಮುಖವಾದ ಈ ಗುಡಿಯಲ್ಲಿ ಸಿಂಹದ ಮೇಲೆ ಕೂತ ಕಟ್ಟಿಗೆಯ ಸ್ತ್ರೀ ವಿಗ್ರಹ. ಸೀರೆಯುಟ್ಟಿರುವ ಬೆಳ್ಳಿಯ ಮೂರ್ತಿ ಕಳಸಗಳಿವೆ. ಸೀರೆಯ ಪರದೆ ಇಳಿಬಿಟ್ಟಿದ್ದಾರೆ. ಭಕ್ತರು

ಕೊಟ್ಟ ಚಿಕ್ಕ ಬೆಳ್ಳಿಯ ಕುದುರೆ ವಿಗ್ರಹಗಳಿವೆ. ಗೋಪುರ ಕಳಸ ಇವೆಲ್ಲ ಈಚೆಗೆ ಕಟ್ಟಿಸಿದವು. ಪಾಲಿಕಿ ಇದೆ. ಅಂಗಳದಲ್ಲಿ ದೀಪದ ಕಂಬವಿದೆ. ಪಂಚಾಳರು ಇದರ ಪೂಜಾರಿಗಳು.

ಹೋಳಿ ಹುಣ್ಣಿಮೆಯಾದ ೯ ದಿನಕ್ಕೆ ೧ ದಿನದ ಜಾತ್ರೆ. ೫ ಜನ ಪೂಜಾರಿಗಳು ಮತ್ತು ರೈತರು ಕಂಕಣ ಕಟ್ಟಿಕೊಳ್ಳುವರು. ರಾತ್ರಿ ಅಗ್ನಿಕುಂಡ. ೩-೪ ಚಕ್ಕಡಿ ಕಟ್ಟಿಗೆ ಒಟ್ಟಿ ಬೆಂಕಿ ಇಡುತ್ತಾರೆ. ಕೆಂಡದಲ್ಲಿ ೫ ಜನ ಪೂಜಾರಿಗಳು ದಾಟಿ ಬರುತ್ತಾರೆ. ಅಕ್ಕಿಯ ಅನ್ನ ಕುದಿಯುವಾಗ ಪೂಜಾರಿ ಕೈ ಹಾಕಿ ತೆಗೆದು ಎಡೆಯನ್ನು ಊರಲ್ಲಿ ಹಂಚುತ್ತಾರೆ. ಬೇಡಿಕೊಂಡವರು ಕುರಿ ಬೇಟೆ ಮಾಡಿಕೊಳ್ಳುತ್ತಾರೆ. ಸಂಜೆ ಉಚ್ಚಾಯದಲ್ಲಿ ದೇವಿಯ ಮೂರ್ತಿ ಇಟ್ಟು ಗುಡಿಯಿಂದ ಪಾದಗಟ್ಟೆವರೆಗೆ ಎಳೆಯುತ್ತಾರೆ.

ಮಳೆ ಮಲ್ಲೇಶ್ವರ ಜಾತ್ರೆ :

ಊರಿಂದ ಆಚೆ ಹಾಸುಗಲ್ಲು ಗುಡ್ಡದಲ್ಲಿರುವ ಗವಿಯನ್ನು ಗುಡಿಯನ್ನಾಗಿ ಪರಿವರ್ತಿಸಿದ್ದಾರೆ. ಗದ್ದುಗೆಯ ಮೇಲೆ ಹಾವುಗೆ ಇವೆ. ಗುಡಿಯ ಮೇಲ್ಭಾಗ ಮುಸ್ಲಿಂ ವಾಸ್ತು ರಚನೆ. ಅಂಗಳದಲ್ಲಿ ನಂದಿ ವಿಗ್ರಹ, ಬೇವಿನ ಮರ, ವಜ್ರಬಂಡಿ ಮತ್ತು ಸುತ್ತಲ ಗ್ರಾಮಗಳ ಜನ ಮುಂಜಾನೆ ಇಲ್ಲಿ ಬಂದು ಸಾಯಂಕಾಲ ಉಚ್ಚಾಯ ಎಳೆಯುತ್ತಾರೆ. ಪತ್ತಾರರು ಪೂಜಾರಿಗಳು. ಮುಂಜಾನೆ ಕುಸ್ತಿ ಪಂದ್ಯಾಟವಿರುತ್ತವೆ.

ಊರಲ್ಲಿ ಪಂಚಾಳರು ಪೂಜಾರಿಗಳಾಗಿರುವ ದ್ಯಾಮವ್ವನ ಗುಡಿಯೂ ಇದೆ. ೪ ವರ್ಷಕ್ಕೊಮ್ಮೆ ಇದಕ್ಕೆ ಬಣ್ಣ ಕೊಡಿಸುತ್ತಾರೆ. ಕುದುರೆಯ ಮೇಲೆ ಕೂತ ಹೆಣ್ಣು ವಿಗ್ರಹ ಎಡಬಲಗಳಲ್ಲಿ ಕೂತ ಸ್ತ್ರೀ ವಿಗ್ರಹಗಳಿವೆ. ಕಟ್ಟಿಗೆಯ ಪ್ರಭಾವಳಿ ಇದೆ. ದೇವಿಗೆ ೮ ಕೈಗಳಿವೆ.

ಕುಷ್ಟಗಿ ತಾಲೂಕಿನ ಜಾತ್ರೆಗಳು

ಹಿನ್ನೆಲೆ :

ಕೊಪ್ಪಳ ಜಿಲ್ಲೆಯ ಬಯಲು ಪ್ರದೇಶದ ಎರಡು ತಾಲೂಕುಗಳಲ್ಲಿ ಕುಷ್ಟಗಿ ದೊಡ್ಡ ಗ್ರಾಮದಂತಿರುವ ತಾಲೂಕು ಕೇಂದ್ರ. ಹಿರಿಯ ವಕೀಲರಾದ 'ಆಶ್ರಿತ' ಅವರ ಪ್ರಕಾರ ಈ ಊರು ಮುಸ್ಲಿಂ ಅರಸರ ರಾಯಚೂರು ದಾಳಿಯ ಮಾರ್ಗದಲ್ಲಿತ್ತು ಮತ್ತು ನಿಜಾಮ ಆಡಳಿತದ ಕೊನೆಯ ಗಡಿಯಲ್ಲಿದುದರಿಂದ, 'ಕೊನೆಯ ಗಡಿ' ಎಂಬ ಅರ್ಥದ ಫಾರಸಿಪದ 'ಕುಷ್ಟಗಿ'. ಬೆಟಗೇರಿ ಕೃಷ್ಣಶರ್ಮ ಅವರು ಕೆರೆಯ ಕೆಳಗಿನ ಕುಂಟೆಯಿಂದ ಕುಂಟಗಿ>ಕುಷ್ಟಗಿ ಆಗಿರಬಹುದೇನೊ ಎಂದಿದ್ದರಂತೆ. ಊರ ಈಶಾನ್ಯ ಭಾಗದಲ್ಲಿ ಬಹುದೊಡ್ಡ ಕೆರೆಯಿತ್ತು. ಅದೆಲ್ಲ ಹುಗಿದುಹೋಗಿ ಊರು ಬೆಳೆಯುತ್ತಿದೆ. ಗ್ರಾಮದ ಮೂರು ಮೂಲೆಗೆ ಮೂರು ಗುಮ್ಮಜ, ಮಿನಾರಿನಂಥ ವಾಸ್ತುಗಳಿವೆ. ಸಮೀಪ ಹೋಗಿ ನೋಡಿದರೆ ಹಿಂದು ದೇಗುಲಗಳೆದು ಗೊತ್ತಾಗುತ್ತದೆ. ಗರ್ಭಗುಡಿಯಲ್ಲಿ ದೇವರಿಲ್ಲದಿದ್ದರೂ ಗೋಪುರ ಶಿಖರ, ಗೋಡೆಯ ಉಬ್ಬುಚಿತ್ರಗಳು ಮೇಲಿನ ಅಭಿಪ್ರಾಯವನ್ನು ಖಚಿತಪಡಿಸುತ್ತವೆ. ಊರಲ್ಲಿರುವ ಸುಂದರವಾದ ಮತ್ತು ವಿಶಾಲವಾದ ಕಲ್ಲು ಬಾವಿಯ ಮುಸ್ಲಿಂ ಶೈಲಿಯ ಕಟ್ಟಡ. ಆನೆ, ಒಂಟೆಗಳೂ ಇಳಿದು ನೀರು ಕುಡಿಯುವಂತೆ ಇರುವ ಈ ಬಾವಿಯ ಪಕ್ಕಕ್ಕೆ ಕಲ್ಮಠವಿದೆ. ರಾಮಲಿಂಗೇಶ್ವರ, ಸಂಗಮೇಶ್ವರ ಮೊದಲಾದ ಹಳೆಯ ಶೈವ ದೇಗುಲಗಳು, ಶಾಸನಗಳು ಈ ಗ್ರಾಮದ ಸ್ವಲ್ಪಮಟ್ಟಿನ ಪ್ರಾಚೀನತೆಗೆ ಸಾಕ್ಷಿಗಳಾಗಿದ್ದರೂ ವಿಜಯನಗರ ಕಾಲದ ಕದನ ಕ್ಷೇತ್ರವಾದ ದೋಆಬ್ ಪ್ರದೇಶದ ಈ ಅರಕ್ಷಿತ ಗ್ರಾಮ ನಿರಂತರ ದಾಳಿಗೆ ಸುಲಭವಾಗಿ ಸಿಗುವ ಸ್ಥಿತಿ ಇತ್ತು. ಕೋಟೆಯಲ್ಲಿ ಈಚೆಗೆ ಜಿನಮೂರ್ತಿ ದೊರತಿರುವುದು ಗ್ರಾಮದ ಪ್ರಾಚೀನತೆಗೆ ಇನ್ನೊಂದು ಕುರುಹಾಗಿದೆ. ಬ್ರಾಹ್ಮಣರು ಈ ಊರಿಗೆ ಹಿಂದೆ 'ಕೃಷ್ಣಗಿರಿ' ಎನ್ನುತ್ತಿದ್ದರು.

ಕುಷ್ಟಗಿಯ ಬಸ್‌ಸ್ಟ್ಯಾಂಡ್ ಹಿಂದೆ ಕುರುಚಲಿದ್ದ (ಈಗಿಲ್ಲ) ಪ್ರದೇಶದಲ್ಲಿ ಒಂದುಕಟ್ಟೆ, ಅದರ ಮೇಲೆ ನಂದಿ ವಿಗ್ರಹ. ಅದೇ ಈಗ ಮುದ್ದಿ ಬಸವೇಶ್ವರ ದೇಗುಲವಾಗಿ ವಾರ್ಷಿಕ ಜಾತ್ರೆಯಾಗುತ್ತಿದೆ. ಇಲ್ಲಿಂದ ಪಶ್ಚಿಮ ದಿಕ್ಕಿಗೆ ಒಂದೆರಡು ಕಿಲೋಮೀಟರು ದೂರದ ಗುಮ್ಮಟದ ಹತ್ತಿರ ಹೊಲದಲ್ಲಿ ಅಡವಿರಾಯನೆಂದು ಖ್ಯಾತವಾಗಿರುವ ಹನುಮಪ್ಪನ ಸಾದಾಗುಡಿ. ಮೂರೂ ಕಡೆ ಕಲ್ಲುಗೋಡೆ, ಉತ್ತರದ ಕಡೆ ಕಟಾಂಜನ ಹಾಕಿರುವ ಈ ಗುಡಿಯೂ ತೀರ ಹಳೆಯದಲ್ಲ. ಊರಿಂದ ಸ್ವಲ್ಪ ದೂರದಲ್ಲಿರುವ ಇದಕ್ಕೆ 'ಅಡವಿರಾಯ' ಎಂಬ ಹೆಸರಿದ್ದರೂ ಈಗ 'ಅಡವಿ' ಇಲ್ಲ. ಅಂಗಳದಲ್ಲಿ ಮತ್ತು ಗುಡಿಯ ಸುತ್ತ ಹುಣಸೆ, ಬೇವು, ನೀಲಗಿರಿ ಮರಗಳಿವೆಯಷ್ಟೇ. ಪ್ರತಿವರ್ಷ ಹೆಚ್ಚಾಗಿ ಬ್ರಾಹ್ಮಣರೇ ಸೇರಿ ಮಾಡುವ ದೊಡ್ಡ

ಜಾತ್ರೆ ಈ ದೇವರದ್ದೇ. ಇವೆರಡನ್ನು ಬಿಟ್ಟರೆ ಊರ ಮಧ್ಯೆ ಇರುವ ಕಟ್ಟೆ ದುರಗಮ್ಮನ ಸಾಧಾರಣ ಮಟ್ಟದ ಜಾತ್ರೆಯಾಗುತ್ತದೆ. ಕುರುಬರ ಬೀದಿಗಂಟಿ ಕಟ್ಟಿದ ಒಂದೇ ಕೋಣೆಯ ನೆಲದ ಮೇಲೆ ಚಿಕ್ಕಕಟ್ಟೆ. ಅದರ ಮೇಲೆ ಕರಿಯ ದುಂಡುಕಲ್ಲು. 'ಗದ್ದುಗೆ' ಮೇಲೆ ಐದು ಚಿಕ್ಕ ಕುದುರೆ ಪ್ರತಿಮೆಗಳು, ಉತ್ಸವಮೂರ್ತಿ, ಮುಖ, ಕೈ, ಹಸಿರುಬಳೆಗಳು. ಹಿಂದಲ ಗೋಡೆಗೆ ಆನಿಸಿಟ್ಟ ತ್ರಿಶೂಲ, ಎಣ್ಣೆಯುಂಡಿರುವ ನಾಗನಕಲ್ಲುಗಳು. ನೊಣ ಜೇನುಹುಟ್ಟಿನಂತೆ ಮುತುರಿದ್ದವು. ಗೋಪುರ ಕಳಸಗಳೂ ಇವೆ. ಕೊನೆಯದಾಗಿ ಹತ್ತಾರು ವರ್ಷಕ್ಕೊಮ್ಮೆ ಜಾತ್ರೆಯಾಗುವ ದ್ಯಾಮವ್ವನ ಗುಡಿ. ಯಾವ ಜಾತ್ರೆಗಳನ್ನೂ ಕಾಣದ ರಾಘವೇಂದ್ರ, ವೆಂಕಟರಮಣ, ದುರಗಮ್ಮ, ಬೀರಲಿಂಗೇಶ್ವರ ಮೊದಲಾದ ದೈವಗಳಿವೆ. ಶೈವ ಮತ್ತು ಅಮ್ಮಂದಿರ ಗುಡಿಗಳ ವಾಸ್ತುವಿನ ಒಂದು ವಿಶೇಷವೆಂದರೆ ಗೋಪುರಗಳಲ್ಲಿ ಒಂದಲ್ಲ ಹತ್ತಾರು ಕಳಸಗಳನ್ನು ಅಳವಡಿಸಿದ್ದು. ಕುಷ್ಟಗಿ, ಯಲಬುರ್ಗಾ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಈ ಪದ್ಧತಿ ಇದೆ.

ಕುಷ್ಟಗಿಯ ಸುಮಾರು ೨೦ ಸಾವಿರ ಜನಸಂಖ್ಯೆಯಲ್ಲಿ ಕುರುಬರು ಅರ್ಧ ದಷ್ಟು. ಬ್ರಾಹ್ಮಣ, ಲಿಂಗಾಯತರು ಸಮಸಮ. ಚಲವಾದಿ, ಬೇಡರು, ಮಾದಿಗರು, ಒಡ್ಡರು, ಉಪ್ಪಾರರು, ಕ್ಷೌರಿಕರು, ಅರಸರು, ಮುಸ್ಲಿಂರು ಇಲ್ಲಿರುವ ಇತರ ಜನಕುಲಗಳು.

ಈ ಹಿನ್ನೆಲೆಯಲ್ಲಿ ಈ ಊರಿನ ನಾಲ್ಕು ಜಾತ್ರೆಗಳ ವಿವರಗಳನ್ನು ಗಮನಿಸುವಾ:

ಅಡವಿರಾಯನ ಜಾತ್ರೆ :

ಊರ ನೈಋತ್ಯಕ್ಕೆ ಹೊಲಗಳ ನಡುವೆ ಶಕಾಪುರ ರಸ್ತೆಗಂಟಿ ಅಡವಿರಾಯನ್ನ ಗುಡಿ. ಗರ್ಭಗುಡಿ, ಹೊರಕೋಣೆಗಳಿರುವ ಈ ಕಟ್ಟಡಕ್ಕೆ ಮೂರು ಕಡೆ ಕಲ್ಲುಗೋಡೆ. ಗರ್ಭಗುಡಿಯಲ್ಲಿ ಎರಡಡಿ ಎತ್ತರ, ಮೂರಡಿ ಅಗಲದ ಶಿಲೆಯಲ್ಲಿ ನಿಂತ ಹನುಮನ ಕೊರೆದ ಚಿತ್ರ. ಮುಖದ ಮುಂದೆ ಬಂದ ಬಾಲಕ್ಕೆ ಕಮಂಡಲ ಅಂಟಿದೆ. ಅದರ ಕೆಳಗೆ ಲಿಂಗ, ಲಿಂಗದ ಕೆಳಗೆ ನಂದಿ, ಹನುಮನ ಹಿಂದೆ ನವಿಲ ಮೇಲೆ ಕೂತ ಗಣಪತಿ, ಕಾಲ ಹತ್ತಿರ ಎರಡೂ ಕಡೆ ಗರುಡಗಳು. ಟೊಂಕಕ್ಕಿಟ್ಟ ಕೈಯ್ಯಲ್ಲಿ ಎರಡು ಬಾಳೆಗಿಡ ಹಿಡಿದದ್ದು. ಮುಖದೆದುರು ೭ ಹೆಡೆ ಸರ್ಪ- ಈ ಎಲ್ಲ ಕೆತ್ತನೆ ಇದೆ. ಹನುಮನಿಗೆ ಬೆಳ್ಳಿಕಣ್ಣು, ಗರ್ಭಗುಡಿಯ ಬಾಗಿಲ ಚೌಕಟ್ಟಿನಲ್ಲಿ 'ಶ್ರೀ ಅಡವಿ ಮುಖ್ಯ ಪ್ರಾಣೇಶ ಪ್ರಸನ್ನ' ಎಂದು ನಾಗರಿಲಿಪಿಯಲ್ಲಿ ಬರೆದಿದೆ. ಅಂಗಳದಲ್ಲಿ ಕಂಪೌಂಡ್ ಹೊರಗೆ ಓಕುಳಿಹೊಂಡ, ದೀಪಸ್ಥಂಭಗಳು, ಗಣೇಶನ ಗುಡಿ ತೇರಿನ ಮನೆ, ಗುಡಿಯ ಹಿಂದೆ ಹೊಕ್ಕು ತುಂಬುವ ಹಾಳಾದ ಕಲ್ಲುಬಾವಿ ರೂಮುಗಳು, ಕಲ್ಯಾಣ ಮಂಟಪಗಳಿವೆ. ಗರ್ಭಗುಡಿಗೆ ಗೋಪುರ ಕಳಸಗಳಿವೆ. ಕಟಾಂಜನದ ಮೇಲೆ ಆರ್.ಆರ್. ದೇಸಾಯಿ ಇವರ ಸೇವಾ ಕಾಟಾಪುರ ೨೪-೮-೯೫ ಎಂದು ಬರೆದಿದೆ. ಪೂರ್ವದ ಹೊರ ಗೋಡೆಗೆ ಸಮುದ್ರ ಹಾರುತ್ತಿರುವ ಹನುಮನ ಬಣ್ಣದ ಚಿತ್ರ ಬರೆಸಿದ್ದಾರೆ.

ವೈಶಾಖ ಶುದ್ಧ ನವಮಿಯಿಂದ ೯ ದಿನಗಳವರೆಗೆ ನಡೆವ ಜಾತ್ರೆಯ ವಿವರಗಳು :

ವೈಶಾಖ ಶುದ್ಧ ನವಮಿ ಬೆಳಿಗ್ಗೆ ೮ ಗಂಟೆಗೆ ಅಡವಿರಾಯನ ಬೆಳ್ಳಿ ಉತ್ಸವಮೂರ್ತಿಯನ್ನು ಅರ್ಚಕರ ಮನೆಯಿಂದ ದೇವಸ್ಥಾನದವರೆಗೆ ಭಜನೆ ಮತ್ತು ಮೆರವಣಿಗೆಯೊಂದಿಗೆ ತೆಗೆದುಕೊಂಡು ಬರುತ್ತಾರೆ. ಮಧ್ಯಾಹ್ನ ವಿಧಿವತ್ತಾಗಿ ವೇದಮಂತ್ರ ಪಠಣದೊಂದಿಗೆ ಗರುಡನ ಚಿತ್ರವನ್ನು ಬಟ್ಟೆಯ ಮೇಲೆ ಬರೆದು ಗರುಡಗಂಭದ ತುದಿಗೆ ಕಟ್ಟುವದು. ೯ ದಿವಸ ಉಪವಾಸವಿರುವ ಪೂಜಾರಿಗೆ ಕಂಕಣ ಕಟ್ಟುವರು. ತೀರ್ಥಪ್ರಸಾದ, ರಾತ್ರಿ ಏಳೂ ಮೂವತ್ತಕ್ಕೆ ಬಲಿಹರಣ, ಅನ್ನದಲ್ಲಿ ಕುಂಕುಮ ತೊಪ್ಪಲ ಬೆರಸಿ ಗುಡಿಯ ಸುತ್ತಮುತ್ತ ಎಲ್ಲಾ ದಿಕ್ಕುಗಳಿಗೂ ಹಾಕುತ್ತಾರೆ. ಪಲ್ಲಕ್ಕಿ ಉತ್ಸವದೊಂದಿಗೆ ಈ ದಿನದ ಕಾರ್ಯ ಮುಗಿಯುತ್ತವೆ.

ವೈಶಾಖ ಶುದ್ಧ ದಶಮಿ ದಿವಸ ಬೆಳಿಗ್ಗೆ ಪುರಾಣ ವೇದಪಠಣ ಪಂಚಾಮೃತ ಸೇವೆ. ಮಧ್ಯಾಹ್ನ ಬಲಿಹರಣ ನಂತರ ತೀರ್ಥಪ್ರಸಾದ. ರಾತ್ರಿ ಬಲಿಹರಣ ಪಲ್ಲಕ್ಕಿ ಉತ್ಸವ, ತೊಟ್ಟಿಲು ಸೇವೆ. ವೈಶಾಖ ಶುದ್ಧ ಏಕಾದಶಿಯಂದು ಬೆಳಿಗ್ಗೆ ಪಂಡಿತರಿಂದ ಪುರಾಣ ಪ್ರವಚನ, ಮಧ್ಯಾಹ್ನ ಪಲ್ಲಕ್ಕಿ ಉತ್ಸವ ರಾತ್ರಿ ಹರಿವಾಣ ಸೇವಾ ಮತ್ತು ಪತ್ತಾಸೇವಾ, ದ್ವಾದಸಿಯಂದು ಬೆಳಿಗ್ಗೆ ಪಂಚಾಮೃತ ಸೇವೆ, ಪಾಲಿಕಿ ಉತ್ಸವ, ಬಲಿಹರಣ, ತೀರ್ಥಪ್ರಸಾದ. ರಾತ್ರಿ ಬಲಿಹರಣ ಪಲ್ಲಕ್ಕಿ ಮತ್ತು ತೊಟ್ಟಿಲು ಸೇವೆ. ತ್ರಯೋದಶಿಯಂದು ನೃಸಿಂಹಜಯಂತಿ, ಬೆಳಿಗ್ಗೆ ಪಂಚಾಮೃತಸೇವೆ, ಮಧ್ಯಾಹ್ನ ಬಲಿಹರಣ, ನರಸಿಂಹಜಯಂತಿ ಉತ್ಸವ, ತೀರ್ಥಪ್ರಸಾದ. ರಾತ್ರಿ ಎಂದಿನಂತೆ ಬಲಿಹರಣ ಪಲ್ಲಕ್ಕಿ ಮತ್ತು ತೊಟ್ಟಿಲು ಸೇವೆ. ಚತುರ್ದಶಿಯಂದು ಬೆಳಿಗ್ಗೆ ೯ಕ್ಕೆ ಪಂಚಾಮೃತ ಸೇವಾ, ಮಧ್ಯಾಹ್ನ ಬಲಿಹರಣ-ಪಲ್ಲಕ್ಕಿ ಸೇವಾ ತೀರ್ಥಪ್ರಸಾದ. ರಾತ್ರಿ ೮ಕ್ಕೆ ದಂಡಬಲಿ ಉತ್ಸವ, ಹರಿವಾಣ ಸೇವಾ, ಪತ್ತಾಸೇವಾ ಹಾಗೂ ತೊಟ್ಟಿಲು ಸೇವಾ. ಹುಣ್ಣಿಮೆಯಂದು ಬೆಳಿಗ್ಗೆ ವ್ಯಾಸಪೂಜೆ, ೧೦ ಗಂಟೆಗೆ ರಥಾಂಗ ಹೋಮ ಮಧ್ಯಾಹ್ನ ಪವಮಾನ ಹೋಮ ಮತ್ತು ಸತ್ಯನಾರಾಯಣಪೂಜೆ. ಸಂಜೆ ೬ ಗಂಟೆಗೆ ರಥೋತ್ಸವ. ಅದಾದ ನಂತರ ಯಥಾಪ್ರಕಾರ ಹರಿವಾಣ, ಸೇವಾ, ಪತ್ತಾಸೇವಾ ಮಹಾನೈವೇದ್ಯ ತೀರ್ಥಪ್ರಸಾದ. ವೈಶಾಖ ಬಹುಳ ಪ್ರತಿಪದೆಯಂದು ಬೆಳಿಗ್ಗೆ ಪಲ್ಲಕ್ಕಿ ಸೇವೆ ಸಂಜೆ ಅವಭೃತಸ್ನಾನ ಕೊಂಡ. ಹರಿವಾಣ ಮತ್ತು ಪತ್ತಾಸೇವಾ ಕಂಕಣ ವಿಸರ್ಜನೆ, ತೀರ್ಥಪ್ರಸಾದ. ದ್ವಿತೀಯೆಯಂದು ಸಮಿತಿಯ ವತಿಯಿಂದ ಧರ್ಮಾರ್ಥ ವಿವಾಹಗಳು. ಮಧ್ಯಾಹ್ನ ಮಹಾನೈವೇದ್ಯ, ತೀರ್ಥಪ್ರಸಾದ. ಸಂಜೆ ದೇವಸ್ಥಾನದಿಂದ ಅರ್ಚಕರ ಮನೆಗೆ ಮೆರವಣಿಗೆಯೊಂದಿಗೆ ಉತ್ಸವಮೂರ್ತಿಯನ್ನು ಕೊಂಡೊಯ್ಯುವದು.

'ಕುಷ್ಟಗಿ ಶ್ರೀ ಅಡವಿರಾಯನ ಚರಿತ್ರೆ' ಎಂಬ ಕಿರುಹೊತ್ತಿಗೆಯನ್ನು ಶ್ರೀಸಿದ್ಧಾರ್ಥನಾಮ ಸಂವತ್ಸರದಲ್ಲಿ ಕೃಷ್ಣಾಚಾರ್ಯ ಜಹಗೀರದಾರ ತೆಗ್ಗಿಹಾಳ ಇವರು ಪ್ರಕಟಿಸಿದ್ದಾರೆ. ಅದರಲ್ಲಿ ಈ ಗುಡಿಯ ಸ್ಥಾಪನೆ ಮತ್ತು ಜಾತ್ರೆಗೆ ಸಂಬಂಧಪಟ್ಟ ಕೆಲವು ಉಪಯುಕ್ತ ಮಾಹಿತಿಗಳಿವೆ.

ಕುಷ್ಟಗಿ ಹತ್ತಿರದ ವಜ್ರಬಂಡಿ ಎಂಬ ಗ್ರಾಮದಲ್ಲಿ ಸುಮಾರು ೩೦೦ ವರ್ಷಗಳ ಹಿಂದೆ ಅಪ್ಪಣ್ಣ ಭಟ್ಟನೆಂಬ ಬ್ರಾಹ್ಮಣನ ಕನಸಿನಲ್ಲಿ ಮುಖ್ಯ ಪ್ರಾಣ ಕಾಣಿಸಿಕೊಂಡು ಕುಷ್ಟಗಿ ಗ್ರಾಮದ

ಹುಣಶೀತೋಪಿನ ಮರದಡಿಯ ಹುತ್ತದಲ್ಲಿ ನನ್ನ ವಿಗ್ರಹವಿದೆ ತೆಗೆದು ಪೂಜಿಸು ಎಂದು ಹೇಳಿದನಂತೆ. ಕುಷ್ಟಗಿಯ ಬ್ರಾಹ್ಮಣರೊಂದಿಗೆ ಹುತ್ತ ಅಗಿದು ವಿಗ್ರಹ ಹೊರತೆಗೆದು ಸಣ್ಣ ಗುಡಿ ಕಟ್ಟಿಸಿ ಅಪ್ಪಣ್ಣಭಟ್ಟ ಅರ್ಚಕನಾಗಿ ನಿಂತ. ಅವನ ವಂಶಜರೇ ಈಗಲೂ ಪೂಜಾರಿಗಳು, ಕಾಲಾಂತರದಲ್ಲಿ ಗುಡಿಯ ಬೇರೆಬೇರೆ ಭಾಗಗಳನ್ನು, ಅಧಿಕಾರಿಗಳು, ಭಕ್ತರು ಕಟ್ಟಿಸುತ್ತ ಬಂದರು. ವಿಶೇಷವೆಂದರೆ ಸುಜಾತಲಿ ಎಂಬ ಮುಸ್ಲಿಂ ಕಲೆಕ್ಟರ್ ಈ ದೇಗುಲಕ್ಕೆ ಫಲವತ್ತಾದ ಭೂಮಿಯನ್ನು ಇನಾಮಾಗಿ ಕೊಟ್ಟದ್ದು. ಅದು ಈಗಲೂ 'ಎಣ್ಣೆಮಾನ್ಯ'ವೆಂದು ಹೆಸರಾಗಿದೆ.

ಅಪ್ಪಣ್ಣಭಟ್ಟನ ಕನಸಿನಲ್ಲಿ ಮುಖ್ಯ ಪ್ರಾಣ ಮತ್ತೊಮ್ಮೆ ಕಾಣಿಸಿಕೊಂಡು ಜಾತ್ರೆ ಮಾಡಲು ತಿಳಿಸಿದನಂತೆ. ಈಗ, 'ಶ್ರೀ ಅಡವಿ ಮುಖ್ಯ ಪ್ರಾಣೇಶ ದೇವಸ್ಥಾನ ವಿಶ್ವಸ್ಥ ಟ್ರಸ್ಟ್' ಇದ್ದು ೧೯ ವರ್ಷಗಳಿಂದ ಜಾತ್ರೆಯನ್ನು ಮಾಡುತ್ತ ಬಂದಿದೆ. ವೈಶಾಖ ಶುದ್ಧ ನವಮಿಯಂದು ಧ್ವಜಾರೋಹರಣ (ಗರುಡಪಟ), ದಶಮಿ ದಿವಸ ದಶಮಿದಿಂಡು, ಏಕಾದಶಿಯಂದು ಸಿಂಹವಾಹನ, ದ್ವಾದಸಿ ದಿವಸ ಮಯೂರ ವಾಹನ, ತ್ರಯೋದಸಿಯಂದು ಗಜವಾಹನ, ಚತುರ್ದಶಿ ದಿವಸ ಅಶ್ವವಾಹನ, ಹುಣ್ಣಿವೆದಿನ ರಥಗಳ ಕಾರ್ಯಕ್ರಮವಿರುತ್ತಿದ್ದವು. (ಇವು ಕೆಲವು ಈಗಿನ ಕರಪತ್ರಗಳಲ್ಲಿ ಕಾಣುವುದಿಲ್ಲ)

ಕುಷ್ಟಗಿಯಲ್ಲಿ ಯಾರೊ ಒಬ್ಬರ ಮನೆಯಲ್ಲಿ ನಡೆಯುತ್ತಿದ್ದ ವಿವಾಹದ ಸಂದರ್ಭದಲ್ಲಿ ಅಂಬಾಭವಾನಿಗೆ ಗೊಂದಲಿಗರು ಪತ್ತಾ ಆಡುವುದನ್ನು ನೋಡಿದ ಪೂಜಾರಿ ಅಪ್ಪಣ್ಣಭಟ್ಟ ತಾವೂ ಅಡವಿರಾಯ ಕನಸಿನಲ್ಲಿ ಬಂದುಹೇಳಿದ ಪ್ರಕಾರ ಜಾತ್ರೆಯ ನಾಲ್ಕುದಿನ ಹರಿವಾಣಸೇವೆ, ಪತ್ತಾಸೇವೆ ಮಾಡತೊಡಗಿದರು. ಎರಡು ಧೋತರಗಳನ್ನು ಲಡ್ಡಿನಂತೆ ಸುತ್ತಿ ಉರಿಹಚ್ಚಿ ಬೆನ್ನಿಗೆ ಬಡಿದುಕೊಳ್ಳುವದೇ ಪತ್ತಾಸೇವಾ. ತಟ್ಟೆಯಲ್ಲಿ ಕೆಂಡ ಹಾಕಿಕೊಂಡು ದೇವಸ್ಥಾನದ ಸುತ್ತ ಕುಣಿಯುವುದು ಹರಿವಾಣ ಸೇವಾ. ''ವೈಶಾಖ ಶುದ್ಧ ಚತುರ್ದಶಿ ದಿವಸ ದೊಡ್ಡದೊಂದು ಉತ್ಸವಕ್ಕೆ ಪ್ರಭಾವಳಿಯಿಂದ ಅಲಂಕರಿಸಿ ಅಶ್ವವಾಹನದ ಮೇಲೆ ಸ್ವಾಮಿಯನ್ನು ಪಾದಗಟ್ಟೆಯವರೆಗೆ ಕರೆದುಕೊಂಡು ಹೋಗುವುದು **''ದಂಡಬಲಿ''** (ಮೇಲೆ ಹೇಳಿದ ಪುಸ್ತಿಕೆ ೫ನೇ ಪುಟ) ನಾಲ್ಕು ಕಲ್ಲುಗಾಲಿಗಳ ೩೦'-೪೦' ಎತ್ತರದ ಸುಂದರವಾದ ರಥವನ್ನು (೧೯೬೦ರಲ್ಲಿ ಮಾಡಿಸಿದ್ದಾರೆ) ಹುಣ್ಣಿವೆಯಂದು ಸುಮಾರು ಒಂದು ಫರ್ಲಾಂಗು ದೂರ ಹೊಲದಲ್ಲಿರುವ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಅಂದು ಸಹಸ್ರಾರು ಜನ ಸೇರುತ್ತಾರೆ.

ಮರುದಿನ ದೇವಸ್ಥಾನದ ಮುಂದಿರುವ ಕೊಂಡಕ್ಕೆ ನೀರು ತುಂಬಿಸಿ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ತಂದು ಪ್ರದಕ್ಷಿಣೆ ಹಾಕಿಸಿ ಅಷ್ಟದಿಕ್ಕುಗಳಿಗೂ ಬಲಿನೀಡಿ, ಕೊಂಡದಲ್ಲಿ ಓಕುಳಿ ಹಾಕುತ್ತಾರೆ. ಕೆಲವರಿಗೆ ಕೊಂಡದ ನೀರು ಸಿಂಪಡಿಸುತ್ತಾರೆ. ನಂತರ ತರುಣರು ಕೊಂಡದ ನೀರಿನಲ್ಲಿ ಕುಣಿದಾಡುತ್ತಾರೆ. ಸಂಜೆ ದೇವರನ್ನು ಗುಡಿಯ ಹಿಂದಿನ ಹೊಕ್ಕು ತುಂಬುವ ಬಾವಿಗೆ ತಂದು ಅವಭೃತ ಸ್ನಾನ ಮಾಡಿಸುತ್ತಾರೆ. ಆ ದಿನ ಬ್ರಾಹ್ಮಣರು ಮನೆಗೊಬ್ಬರಂತೆ ಉಪವಾಸವಿರುತ್ತಾರೆ. ಹೀಗೆ ಉಪವಾಸವಿರುವವರೆ ಅವಭೃತ ಸ್ನಾನ ಮಾಡುವುದು. ದೇವರಿಗೆ

ತೈಲಸ್ನಾನ ಮಾಡಿಸಿ ಪೂಜಾರಿ ಭಕ್ತರ ತಲೆಗೂ ಎಣ್ಣೆ ಹಚ್ಚುತ್ತಾರೆ. ಸ್ನಾನವಾದ ನಂತರ ದೇವರಿಗೆ ಅಭಿಷೇಕ. ಹರಿವಾಣ, ಪತ್ರಾಸೇವೆಗಳ ನಂತರ, ಅಡವಿರಾಯ, ಉತ್ಸವಮೂರ್ತಿ, ಗರುಡ, ಅರ್ಚಕ, ಪಟಕ್ಕೆ ಕಟ್ಟಿದ ೫ ಕಂಕಣಗಳನ್ನು ವಿಸರ್ಜಿಸಿ ಬ್ರಹ್ಮಚಾರಿಗಳ ಕೈಗೆ ಕಟ್ಟುತ್ತಾರೆ. ಅದರಿಂದ ಶೀಘ್ರದಲ್ಲಿ ಅವರ ಕಲ್ಯಾಣ ವಾಗುತ್ತದೆಂಬ ನಂಬುಗೆ.

ಹಿಂದೆ ಛತ್ರ ಎಂಬ ಊರಿನಿಂದ ಬಂದು (ಅಲ್ಲಿ ಹನುಮಂತನಿಗೆ 'ಛತ್ರದಯ್ಯ' ಎನ್ನುತ್ತಾರೆ) ಕುಷ್ಟಗಿ ಗೊಲ್ಲರ ಓಣಿಯಲ್ಲಿದ್ದ ಕೋನೇರಪ್ಪ ಕನಸಿನಲ್ಲಿ ದೇವರು ಹೇಳಿದ ಪ್ರಕಾರ ಕಾವಡಿಯಲ್ಲಿ ಹಾಲು ಮಜ್ಜಿಗೆ ತಂದು ಕೊಂಡದಲ್ಲಿ ಹಾಕುತ್ತಿದ್ದನಂತೆ. ಇಂದಿಗೂ ಗೊಲ್ಲರ ಈ ಪದ್ಧತಿ ನಡೆಯುವುದೆಂದು ಪುಸ್ತಕ ಹೇಳುತ್ತದೆ. (ಪು. ೧೧) ಕೋನೇರಪ್ಪ ಕೋನೇರಿಗೌಡನಾದ ನಂತರ ಕುಷ್ಟಗಿಯ ಗೊಲ್ಲರ ಓಣಿಯಲ್ಲೂ ಹನುಮಂತನ ಗುಡಿ ಕಟ್ಟಿಸಿದ.

ರಾಮನ ಕಾಲದ ಹನುಮಂತ, ಕೃಷ್ಣನ ಕಾಲದಲ್ಲಿ ಭೀಮನಾಗಿ, ಕಲಿಯುಗದಲ್ಲಿ ಮಧ್ವಾಚಾರ್ಯನಾದನೆಂದು ನಂಬುವ ಮಾಧ್ವಬ್ರಾಹ್ಮಣರು, ಆಂಜನೇಯನನ್ನು ಮುಖ್ಯ ಪ್ರಾಣನೆಂದು ಪೂಜುತ್ತಾರೆ. ಒಂದೆಡೆ ಅಡವಿರಾಯನಿರುವ ಶಿಲೆಯಲ್ಲಿ ನಂದಿ ಲಿಂಗ ಮೊದಲಾದ ಆಕೃತಿಗಳು ಹಲವು ಮತಗಳ ಸಮನ್ವಯವನ್ನು ಹೇಳುತ್ತಿದ್ದರೆ ಇನ್ನೊಂದೆಡೆ ಜಾತ್ರೆಯಲ್ಲಿ ಜನಪದ ಪರಂಪರೆಯ ಪತ್ರಾಸೇವೆಯಂಥ ಆಚರಣೆಗಳು ಪ್ರವೇಶಿಸಿರುವುದನ್ನು ಗಮನಿಸಬಹುದು. ಹನುಮಂತನಿಗೆ ಊರಪ್ಪ, ಲಂಕಪ್ಪ, ಭೋಗಾಪುರೇಶ, ಯಲಗುರೇಶ, ಕುಚ್ಚಿರಾಯ, ಹುಲಿ ಕುಂಟಿಸ್ವಾಮಿ, ಹಾಳೂರಪ್ಪ, ಘಟಿಕಾ ಚಲಪತಿ, ತುಪದೂರವಾಸ, ಸಂತಿಕೆಊರನಿಲಯ, ಬಲ್ಲಟ್ಟಿ ಹನುಮಶೆಟ್ಟಿ, ಕೊರವಿಯ ವಾಸ, ಹುಚ್ಚರಾಯ, ಅಡವಿರಾಯ, ವಡಕರಾಯ, ಮಂಗರಾಯ, ತೊಂಡೇತೆವರಪ್ಪ ಮೊದಲಾದ ಹೆಸರುಗಳಿರುವುದನ್ನು ಗಮನಿಸಬಹುದು. (ಪೂರ್ವೋಕ್ತ ಪುಸ್ತಿಕೆಃ ಪ್ರಸ್ತಾವನೆ).

ಕುಷ್ಠಗಿ ಅಡವಿರಾಯನಿಗೆ ಪ್ರತಿದಿನ ಪೂಜೆ ಇದೆ. ಜಾತ್ರೆಗೆ ಎಲ್ಲ ಜಾತಿ ಜನ ಸೇರಿದರೂ ಆಚರಣೆಗಳು ಹೆಚ್ಚಾಗಿ ಬ್ರಾಹ್ಮಣರಿಗೆ ಸಂಬಂಧಿಸಿವೆ. ಜಾತ್ರೆಯ ಮೂರು ದಿನ ಅಂಗಡಿ ಬಂದಿರುತ್ತವೆ. ದೂರದ ಊರುಗಳ ಭಕ್ತರು ಜಾತ್ರೆಗೆ ಬರುತ್ತಾರೆ.

ಬುತ್ತಿ ಬಸವೇಶ್ವರ ಜಾತ್ರೆ :

ಕುಷ್ಠಗಿಯ ಬಸ್‌ಸ್ಟ್ಯಾಂಡ್ ಹಿಂದೆ ಹೊಸಬಡಾವಣೆ 'ಬುತ್ತಿ ಬಸವೇಶ್ವರ ನಗರ'. ಇಲ್ಲಿ ಪೂರ್ವಾಭಿಮುಖವಾಗಿರುವ ಗುಡಿ, ಕಲ್ಯಾಣ ಕ್ರಾಂತಿಯ ನಂತರ ಚನ್ನಬಸವೇಶ್ವರರು ಉಳಿವಿಗೆ ಹೋಗುವಾಗ ಇಲ್ಲಿ ಬಂದು ವಸ್ತಿ ಇದ್ದು ಬುತ್ತಿ ಬಿಚ್ಚಿ ಊಟಾಮಾಡಿ ಒಂದು ಕುರುಹು ಮಾಡಿದ್ದರಿಂದ ಇದು ಬುತ್ತಿ ಬಸವೇಶ್ವರವಾಯಿತೆಂದು ನಂಬಲಾಗುತ್ತಿದೆ. ೧೦ ವರ್ಷದೀಚೆ ಗುಡಿಯ ಕಟ್ಟಡವಾಗಿದೆ. ಹಿಂದೆ ಈ ಪ್ರದೇಶವೆಲ್ಲ ಅಡವಿಯಾಗಿದ್ದು ಒಂದು ಕಟ್ಟೆಯ ಮೇಲೆ ನಂದಿ ವಿಗ್ರಹವಿತ್ತಂತೆ. ವಾರ್ಷಿಕ ಜಾತ್ರೆಗೆ ಮಾತ್ರ ಜನ ಸೇರುತ್ತಿತ್ತು. ಗರ್ಭಗುಡಿಯಲ್ಲಿ ಗದ್ದಿಗೆಯ ಮೇಲೆ ನಂದಿಯ ವಿಗ್ರಹ. ಧಾರಾಪಾತ್ರೆ ತೂಗು ಬಿಟ್ಟಿದ್ದಾರೆ. ಚಿಕ್ಕಮಂಟಪದಲ್ಲಿ ಉತ್ಸವಮೂರ್ತಿ ಇದೆ. ಮೂಲೆಯಲ್ಲಿ ಕಳಸ, ತೂಗು ದೀಪವಿದೆ. ಗರ್ಭಗೃಹದ ಬಾಗಿಲಿಗೆ

ಮುರಿದ ಒಣಿಕೆಯಂಥ ಕಟ್ಟಿಗೆ ತುಂಡಿನ ತುದಿಗೆ ಸ್ತ್ರೀ ಮುಖದ ಕೆತ್ತನೆ ಇದೆ. ಪೂಜಾರರ ಹುಡುಗಿ, ಇದು ನೀಲಾಂಬಿಕೆಯ ವಿಗ್ರಹ ಎಂದಳು. ಮಹಿಳೆಯರು ಮಾತ್ರ ಇದನ್ನು ಪೂಜಿಸುತ್ತಾರೆ. ಇನ್ನೊಂದು ವಿಶೇಷವೆಂದರೆ ಮುಂಗೋಣೆಯ ಕಟ್ಟೆಯ ಕೆಳಗೆ ಅಂಗಳದಲ್ಲಿ ಧ್ವಜ ಎತ್ತಿಹಿಡಿದ ಮಹಿಳೆಯ ಶಿಲ್ಪವಿರುವ ಕಲ್ಲು. ಇಲ್ಲೇ ನಾಗನಕಲ್ಲು ಬರಮಪ್ಪನ ಕಂಬಗಳಿವೆ. ವಿಸ್ತಾರವಾದ ಬಯಲಲ್ಲಿದೆ ಗುಡಿ. ಲಕ್ಷ ರೂಪಾಯಿ ಖರ್ಚು ಮಾಡಿ ಕಬ್ಬಿಣದಿಂದ ಮಾಡಿಸಿದ ಹೊಸ ರಥವಿದೆ. ಗರ್ಭಗೃಹದ ದ್ವಾರಬಾಗಿಲಿಗೆ ದ್ವಾರಪಾಲಕರಲ್ಲ ಸ್ತ್ರೀ ವಿಗ್ರಹಗಳಿವೆ. ಗೋಪುರದ ಮೇಲೆ ತುದಿಯಲ್ಲಿರುವ ಕಳಸವಲ್ಲದೆ ಹಲವಾರು ಕಳಸಗಳನ್ನು ಅಲ್ಲಲ್ಲಿ ಅಳವಡಿಸಿದ್ದಾರೆ. ಗುಡಿಯ ಪಕ್ಕದಲ್ಲಿ ಹುಣಿಶೆಮರಗಳ ಕಟ್ಟೆ, ಪೂಜಾರಿಯ ಮನೆ. "ಕುಷ್ಟಗಿ ತಾಲೂಕು ವೀರಶೈವ ಗ್ರಾಮೀಣ ವಿದ್ಯಾವರ್ಧಕ ಸಂಘ"ದ ಆಫೀಸು, "ಬುತ್ತಿ ಬಸವೇಶ್ವರ ಕಿರಿಯ ಪ್ರಾಥಮಿಕ ಶಾಲೆ", "ಪೂರ್ವ ಪ್ರಾಥಮಿಕ ಶಾಲೆ"ಗಳಿವೆ. ಇವು ೧೯೯೨-೯೩ರಲ್ಲಿ ಸ್ಥಾಪನೆಯಾಗಿವೆ.

ವೀರಶೈವ ಜಂಗಮರು ಪೂಜಾರಿಗಳು. ದಿನವೂ ಒಂದು ಹೊತ್ತು ಪೂಜೆ, ಪ್ರತಿವರ್ಷ ಭಾರತ ಹುಣ್ಣಿಮೆಯ ದಿವಸ ಜಾತ್ರೆ, ಮೊದಲ ದಿವಸ ಶಾಲಾ ಶಿಕ್ಷಕರು ಸ್ಕೂಲಿನ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ವಚನಗಾಯನ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ನೀಡುತ್ತಾರೆ. ಎರಡನೆ ದಿನ ತೇರು, ಕುಷ್ಟಗಿಯ ಸುತ್ತ ಮುತ್ತಲ ಲಿಂಗನಮರಡಿ, ಸಾಕಾಪುರ, ರಿಳ್ಳಿಳ್ಳಿ, ಟಕ್ಕಳಕಿ, ಮೊದಲಗಟ್ಟ, ಹೊಂಡಕೇರಿ, ಬ್ಯಾಹಾಳು, ಕುರನಾಳು ಮೊದಲಾದ ಗ್ರಾಮಗಳ ಭಕ್ತರು ಜಾತ್ರೆಗೆ ಬರುತ್ತಾರೆ. ಬೆಳಿಗ್ಗೆ ದೇವರಿಗೆ ಅಭಿಷೇಕ. ಊರಲ್ಲಿರುವ ಹಳೆಯ ಮಲ್ಲಿಕಾರ್ಜುನ ಗುಡಿಯಿಂದ ಬಸವಣ್ಣನ ಮೂರ್ತಿಯನ್ನು ಮತ್ತು ಕಳಸವನ್ನು ಮೆರವಣಿಗೆಯಲ್ಲಿ ತಂದು ತೇರಿಗೇರಿಸುತ್ತಾರೆ. ಚಳ್ಳಗೆರೆ, ಹನುಮಸಾಗರದ ರೈತರು ತಂದ ಹಗ್ಗವನ್ನು ರಥಕ್ಕೆ ಕಟ್ಟುತ್ತಾರೆ. ತೇರಿನಲ್ಲಿ ಉತ್ಸವಮೂರ್ತಿಯೊಂದಿಗೆ ಪೂಜಾರಿಗಳಿರುತ್ತಾರೆ. ಬನ್ನಿಕಟ್ಟೆಯ ವರೆಗೆ ತೇರೆಳೆಯುತ್ತಾರೆ. ಮರುದಿನ ಬಸವಣ್ಣನಮೂರ್ತಿ ಮತ್ತು ಕಳಸಗಳನ್ನು ಮಲ್ಲಿಕಾರ್ಜುನ ಗುಡಿಗೆ ತಂದಿಡುತ್ತಾರೆ.

ದನಗಳ ಪ್ರದರ್ಶನ ಏರ್ಪಡಿಸಿ ಟ್ರಸ್ಟಿನವರು ಉತ್ತಮ ರಾಸುಗಳಿಗೆ ಬಹುಮಾನ ನೀಡುವ ಕಾರ್ಯಕ್ರಮದ ಜತೆಗೆ ರೇಶಿಮೆ ಮೀನುಗಾರಿಕೆ ಇಲಾಖೆಗಳು ಪ್ರದರ್ಶನ ಏರ್ಪಡಿಸುತ್ತವೆ. ನಾನಾ ವಿಧದ ಅಂಗಡಿಗಳು ಜಾತ್ರೆಯ ವ್ಯಾಪಾರದಲ್ಲಿ ತೊಡಗಿರುತ್ತವೆ. ಎಲ್ಲ ಜಾತಿ ಜನಾಂಗದ ಜನ ಜಾತ್ರೆಯಲ್ಲಿರುತ್ತಾರೆ.

ಕಟ್ಟೆ ದುರಗಮ್ಮನ ಜಾತ್ರೆ :

ಕುಷ್ಟಗಿಯ ಕುರುಬರ ಓಣಿಯಲ್ಲಿ ರಸ್ತೆಯಂಚಿಗೆ ಇರುವ ದುರಗಮ್ಮನ ವಾಸ್ತುವಿನ ಬಗ್ಗೆ ಹಿಂದೆ ಹೇಳಲಾಗಿದೆ. ಈ ಗುಡಿಯ ಹಿಂದೆ ಬೇವಿನ ಮರವಿದೆ.

ಪ್ರತಿವರ್ಷ ಶ್ರಾವಣದಲ್ಲಿ ದೇವಿಯ ಉಡಿ ತುಂಬುವ ಕಾರಣ. ದ್ಯಾಮವ್ವ ದುರಗವ್ವರಿಬ್ಬರಿಗೂ ಉಡಿ ತುಂಬುತ್ತಾರೆ. ಸಂಪ್ರದಾಯದಂತೆ ೯ ಅಥವಾ ೧೧ ದಿವಸ ಊರಿನ

ಎಲ್ಲ ದೇವರಿಗೆ ದೀವಿಗೆ ಹಾಕಲಾಗುತ್ತದೆ. •ಯಾವ ಗುಡಿಯಲ್ಲೂ ಈ ದಿನಗಳಲ್ಲಿ ಕಾಯಿ ಒಡೆಯುವ ಹಾಗಿಲ್ಲ. ಈ ಉತ್ಸವದ-ಮುಖ್ಯ ಕಾರ್ಯಕ್ರಮವೆಂದರೆ ಮೇಳದೊಂದಿಗೆ ಹತ್ತು ಕಿಲೋಮೀಟರು ದೂರದಲ್ಲಿರುವ ಬನ್ನಿಗೋಳದಿಂದ ದೇವಿಯರನ್ನು ಪಲ್ಲಕ್ಕಿಯಲ್ಲಿ ತಂದು ಊರ ಹೊರಗಿರುವ ದೇಸಾಯರ ಬಾವಿಯಲ್ಲಿ ಗಂಗೆ ಪೂಜೆ ಮಾಡಿ ಕೊಡ ತುಂಬಿಕೊಂಡು ದ್ಯಾಮವ್ವನ ಗುಡಿಗೆ ಬರುವುದು. ಕೊಡಗಳಲ್ಲಿ ಲಿಂಬೆಹಣ್ಣಿರುತ್ತವೆ. ದ್ಯಾಮವ್ವ, ದುರಗವ್ವರಿಗೆ ಉಡಿತುಂಬುವುದು. ಊರ ದೈವ ಪಟ್ಟಿ ಎತ್ತಿ ಸೀರೆ, ಹೂವಿನ ದಂಡೆ ಮೊದಲಾದುವನ್ನು ಗೌಡರ ಮನೆಯಲ್ಲಿಟ್ಟು ಪೂಜೆಮಾಡಿ ಮೆರವಣಿಗೆಯಲ್ಲಿ ತಂದು ಉಡಿತುಂಬುತ್ತಾರೆ. ನಂತರ ಎಲಗುರ್ತಿ ಎಂಬ ಊರಿನ ದ್ಯಾಮವ್ವನ ಪೂಜಾರಿ (ಕುರುಬರವ) ಹೇಳಿಕೆ ನೀಡುತ್ತಾನೆ. ಬರುವ ವರ್ಷದ ಮಳೆ ಬೆಳೆಯ ಮುನ್ ಸೂಚನೆಯನ್ನು 'ಹೇಳಿಕೆ' ಒಳಗೊಂಡಿರುತ್ತದೆ. ಡೊಳ್ಳು, ಬಾಜಾ ಬಜಂತ್ರಿಯ ಗದ್ದಲದಲ್ಲಿ ಪೂಜಾರಿ ಆವೇಶಕ್ಕೆ ಒಳಗಾಗಿ ದೇವಿ ಮೈದುಂಬಿ ಈ ಹೇಳಿಕೆ ನೀಡುತ್ತಾನೆಂದು ಜನರ ಭಾವನೆ. ದ್ಯಾಮವ್ವನ ಗುಡಿ ಮುಂದೆ ಹೇಳಿಕೆಯಾದ ನಂತರ, ದುರಗಮ್ಮನ ಗುಡಿಗೆ ಬಂದು ಅಲ್ಲಿಯೂ ಹೇಳಿಕೆಯಾಗುತ್ತದೆ. ಬನ್ನಿಗೋಳದಲ್ಲಿ ದ್ಯಾಮವ್ವನ ಅಕ್ಕ ಇದ್ದಾಳೆ ಅದಕ್ಕಾಗಿ ಅಲ್ಲಿ ಹೋಗಿ ಬರುತ್ತಾಳೆ ಎಂದು ಒಬ್ಬ ಮುದುಕಿ ಹೇಳಿದಳು. ಆಕೆಯ ಪ್ರಕಾರ ದ್ಯಾಮವ್ವ ಕಾಟಾಪುರ ದೇಸಾಯರ ಮಗಳು.

ಪ್ರತಿವರ್ಷ ಯುಗಾದಿಯಂದು ದುರಗವ್ವನ ಒಂದು ದಿನದ ಜಾತ್ರೆಯಾಗುತ್ತದೆ. ನಗರದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಮೊದಲಾದ ವಾದ್ಯಗಳೊಂದಿಗೆ ಗುಡಿಯ ಕಳಸದ ಮೆರವಣಿಗೆ ನಡೆಯುತ್ತದೆ. ಗುಡಿಗೆ ಬಂದು ಕಳಸ ಏರಿಸುತ್ತಾರೆ. ಸಂಜೆ 'ಉಚ್ಚಾಯ್ಯ' ಗುಡಿಯಿಂದ ಕನಕದಾಸ ವೃತ್ತದ ಬಳಿ ಇರುವ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಎರಡು ಗಾಲಿ ಚಕ್ಕಡಿಯನ್ನು ಅಲಂಕರಿಸಿ ದೇವಿಯ ಫೋಟೊ ಇಟ್ಟು ಎಳೆಯುವುದೇ 'ಉಚ್ಚಾಯ್ಯ'. ಇವರಲ್ಲಿ ಎಲ್ಲ ಜಾತಿ ಜನಾಂಗದವರೂ ಭಾಗಿಯಾಗುತ್ತಾರೆ. ಈ ಸಂದರ್ಭದ ಕಲಾಪ್ರದರ್ಶನಗಳೊಂದಿಗೆ ಕುದುರೆಕೀಲು ಕುಣಿತ, ನವಿಲು ಕುಣಿತ, ಮರಗಾಲು. ಕೆಲವರು ವೇಷ ಹಾಕುತ್ತಾರೆ, ಇವೆಲ್ಲವನ್ನೂ ಹೆಚ್ಚಾಗಿ ಕುರುಬರೇ ಮಾಡುತ್ತಾರೆ. ರಾತ್ರಿ ಬಸವಂತ ಬಲವಂತ, ಟಿಕೆಟ ಮಾಸ್ತರ ಮೊದಲಾದ ಡಪ್ಪಿನಾಟಕ, ಲವಕುಶ ಕಾಳಗ, ಕರ್ಣಾರ್ಜುನ ಕಾಳಗದಂಥ ಬಯಲಾಟಗಳಿರುತ್ತವೆ. ಬೇಡಿಕೊಂಡ ಭಕ್ತರು ಅಳವಡಿಸಿರುವ ೧೫ ಕಳಸಗಳು ದೇವಿಯ ಗುಡಿಯ ಗೋಪುರದಲ್ಲಿವೆ. ದೇವಿಗೆ ಆಗಾಗ ಚಟ್ಟಿಗೆ ಎಲೆಕಟ್ಟಿ ಪೂಜಿಸುವ ವಾಡಿಕೆ ಇದೆ. ಕುಷ್ಟಗಿಯವರಲ್ಲದೆ ಸುತ್ತಲ ಗ್ರಾಮಗಳ ಜನ ಈ ದೇವಿಗೆ ಕಾಯಿ ಕರ್ಪೂರ ಮಾಡಿಸುತ್ತಾರೆ. ಕಟ್ಟೆಯ ಮೇಲಿರುವ ಗುಂಡುಕಲ್ಲಿನ ಕೆಳಗೆ ಪಾದಗಳಿರುವ ಹಾಸುಗಲ್ಲಿದೆ. ಹೊಸ್ತಿಲಲ್ಲಿರುವ 'ಅಮ್ಮ'ನನ್ನು ಎತ್ತಿ ಭಕ್ತರು ಪ್ರಶ್ನೆ ಕೇಳುತ್ತಾರೆ. ಎರಡೂ ಗುಂಡು ಬಡಿದಾಡುತ್ತಿದ್ದುದರಿಂದ ಒಂದನ್ನು ಹೊಸ್ತಿಲ ಹೊರಗೆ ಇಟ್ಟಿದ್ದಾರೆಂದು ಕುರುಬರ ಹಿರಿಯರೊಬ್ಬರು ಹೇಳಿದರು. ಗರ್ಭಗುಡಿಯಲ್ಲಿರುವ ನಾಗನಕಲ್ಲುಗಳಿಗೆ ಶ್ರಾವಣದಲ್ಲಿ ಹಾಲೆರೆಯುತ್ತಾರೆ. ಕುರುಬರ ಪೂಜಾರಿ ಪ್ರತಿದಿವಸ ಅಮ್ಮನನ್ನು ಪೂಜಿಸುತ್ತಾನೆ. ರಾತ್ರಿ ಭಜನೆ ಇರುತ್ತದೆ.

ದ್ಯಾಮವ್ವನ ಜಾತ್ರೆ :

ಊರ ಮಧ್ಯದ ತೆಗ್ಗಿನ ಓಣಿಯ ದ್ಯಾಮವ್ವನ ಗುಡಿ ಪಕ್ಕದ ಮನೆಯ ಒಬ್ಬ ಮುದುಕಿ ತನ್ನ ಜೀವಮಾನದಲ್ಲಿ ಎರಡು ಸಲ ಮಾತ್ರ ದ್ಯಾಮವ್ವನ ಜಾತ್ರೆಯಾದುದನ್ನು ನೆನಿಸಿಕೊಂಡಳು.

ಎತ್ತರದ ಕಟ್ಟೆಯ ಮೇಲೆ ಚಿಕ್ಕ ಗರ್ಭಗೃಹ. ಮುಂದಿನ ಭಾಗವನ್ನು ಊರ ಜನ ಸೇರಿ ತಾರಸಿ ಮಾಡಿಸಿದ್ದಾರೆ. ಗುಡಿಯಿಂದ ಸ್ವಲ್ಪದೂರದಲ್ಲಿ ಅಮ್ಮ ಜಾತ್ರೆಯಲ್ಲಿ ಕೂರುವ ಸುಂದರವಾದ ಕಟ್ಟೆಯಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಕುದುರೆ ಮೇಲೆ ಕೂತ ಕಾಷ್ಠಸ್ತ್ರೀ ವಿಗ್ರಹ 'ದ್ಯಾಮವ್ವ' ೮ ಕೈ. ತ್ರಿಶೂಲ, ಹಾವು, ಹಸಿರು ಬಳೆ ತೊಡಿಸಿರುವ ಕತ್ತಿ ಮೊದಲಾದ ಅಸ್ತ್ರಗಳನ್ನು ಹಿಡಿದಿದ್ದಾಳೆ. ಕಟ್ಟಿಗೆಯ ಕಂಬದ ಮೇಲೆ ಈಕೆಯನ್ನು ಅಕ್ಕಪಕ್ಕದಲ್ಲಿ ಜಕ್ಕವ್ವ, ಲಕ್ಕವ್ವರೆಂಬ ಈಕೆಯ ಮಕ್ಕಳನ್ನು ಕೂರಿಸಿದ್ದಾರೆ. ದೇವಿಗೆ ಹಸಿರುಸೀರೆ ಉಡಿಸಿದ್ದಾರೆ. ತಾಳಿ, ಕಿರೀಟ, ಸಿಂಹ ಲಲಾಟ ಪ್ರಭಾವಳಿ ಇವೆ. ಆಕೆಯ ಮಕ್ಕಳೂ ಚಿಕ್ಕ ಕುದುರೆಗಳ ಮೇಲೆ ಕೂತಿವೆ. ಹೊರ ಭಾಗದ ಕಟ್ಟೆಯ ಮೇಲೆ ಅಕ್ಕಪಕ್ಕದ ಜನ ರೌದಿ, ರಗಟೆ, ಹಾಸಿಗೆ ಚಲ್ಲಾಡಿ ಗಲೀಜು ಮಾಡಿದ್ದಾರೆ. ಪತ್ತಾರರು ಪ್ರತಿದಿವಸ ಪೂಜೆ ಮಾಡುತ್ತಾರೆ.

ಪ್ರತಿವರ್ಷ ನವರಾತ್ರಿಯಲ್ಲಿ ೯ ದಿವಸ ಪತ್ತಾರ ಗುರುಗಳು ದೇವಿ ಪುರಾಣ ಹೇಳುತ್ತಾರೆ. ಕೊನೆಗೆ ಮಾದಲಿ ಅನ್ನಸಾರಿನ ಪ್ರಸ್ತಾ, ಜಾತ್ರೆಯಿದ್ದಾಗ ಗುಡಿ ಗುಂಡಾರಗಳನ್ನು ಸಾರಿಸಿ, ಊರೆಲ್ಲ ಚಳ್ಳ ಹೊಡೆದು ನೂರಾರು ಡೊಳ್ಳು, ಸನೇವು ಮೊದಲಾದ ವಾದ್ಯ ಮೇಳದೊಂದಿಗೆ ಅಮ್ಮನ ಕೋಣವನ್ನು ಹಗ್ಗ ಹಚ್ಚಿ ಹಿಡಿದುತಂದು ಕುಂಕುಮ ಬಟ್ಟಿಟ್ಟು ಪೂಜಿಸಿ ಬೇವಿನ ತಳಿರುಕಟ್ಟಿ ಗುಡಿಯ ಸುತ್ತು ಐದು ಸಲ ಸುತ್ತಿಸಿ ಮಾದಿಗರ ಕೇರಿಗೆ ಕೊಡುತ್ತಾರೆ. ಅಲ್ಲಿ ಅದು ೯ ದಿವಸ ಇರುತ್ತದೆ. ಚಟ್ಟ ಕಟ್ಟಿ ಅಮ್ಮನನ್ನು ಮೆರವಣಿಗೆಯಲ್ಲಿ ಗುಡಿಯಿಂದ ಊರಿನ ಇನ್ನೊಂದು ಭಾಗದಲ್ಲಿರುವ ಕಟ್ಟೆಗೆ ತಂದು ೯ ದಿವಸ ತೂರಿಸುತ್ತಾರೆ. ಬೆಲ್ಲ ಮಾಡುವ ಕೊಪ್ಪರಿಕೆಯಲ್ಲಿ ಹಲವು ಚೀಲ ಜೋಳದ ನುಚ್ಚು ಕುದಿಸಿ ಬಸಿದು ರಾಶಿ ಹಾಕುತ್ತಾರೆ. ಮಾದಿಗರು ಕಡಿದ ಕೋಣದ ಮಾಂಸವನ್ನು ಅದರಲ್ಲಿ ಬೆರೆಸಿ ಊರ ಸುತ್ತ ಚರಗ ಚಲ್ಲುತ್ತಾರೆ. ಚರಗ ಚಲ್ಲುವವರೂ ಮಾದಿಗರೇ. ಹಾಗೆ ಚಲ್ಲುವಾಗ ಯಾರೇ ಅಡ್ಡಬಂದರೂ ಕಡಿದು ತುಂಡು ಮಾಡುವ ಪದ್ಧತಿಯಿತ್ತು. 'ಬೂಚಿ ಬಿಲ್ಲಿ ಹರಿ ಪೋತರಾಜ' ಆಡುಮರಿಯ ಗಾವು ಸಿಗಿಯುತ್ತಾನೆ. ಚರಗ ಚಲ್ಲುವಾಗ ಮೂರ್ಚೆ ಹೋದ ಆತನನ್ನು ಇಬ್ಬರು ಹೊತ್ತಿರುತ್ತಾರೆ. ಆತ ಬತ್ತಲೆ ಇರುತ್ತಾನೆ. ಈ ಆಚರಣೆ ಬರುವ ಮೊದಲು ಆತನ ಹೆಂಡತಿ ತಾಳಿ ಹರಿದು ವಿಧವೆಯಾಗಿ ಮನೆಯಲ್ಲಿರು ತ್ತಾಳೆ. ಊರ ಸುತ್ತ ಚರಗ ಚಲ್ಲಿ ಬಂದನಂತರ ಮತ್ತೆ ಅವರ ಲಗ್ನ ಮಾಡುತ್ತಾರೆ. ಜಾತ್ರೆಯ ಮುಖ್ಯ ನೇತಾರರು ಕಾಟಾಪುರ ದೇಸಾಯರು. ಅವರಿಲ್ಲದೆ ಯಾವ ಕಾರ್ಯವೂ ನಡೆಯುವಂತಿಲ್ಲ. ಜಾತ್ರೆಯ ಸಂದರ್ಭದಲ್ಲಿ ಬ್ಯಾಗಾರ ಮಹಿಳೆಯರು (ಬಸಿವೆಯರು) ದ್ಯಾಮವ್ವನ ಹಾಡು ಹೇಳುತ್ತಾರೆ.

ಕಟ್ಟೆಯ ಹತ್ತಿರ ಕೋಣನ ಬಲಿ. ಆಗ ಅಮ್ಮ ರಂಡೆಯಾದಳೆಂದು ಭಾವಿಸಿ ಕೀಲು ಕೀಲು ಬಿಚ್ಚಿ ಜಲ್ಲಿಯಲ್ಲಿ ತುಂಬಿ ತುಗ್ಗಲಿ ಗಿಡದ ಹತ್ತಿರ ಹೋಗಿ ಮತ್ತೆ ಮುತ್ತೈದೆಯನ್ನಾಗಿ ಮಾಡಿ

ಮುಖಕ್ಕೆ ಬಟ್ಟೆ ಕಟ್ಟಿಕೊಂಡು 'ಊರು ಮೆರೆದು' ಗುಡಿ ದುಂಬಿಸುತ್ತಾರೆ. ಆಗ ಬೇರೊಂದು ಕೋಣವನ್ನು ದೇವಿಗೆ ಬಿಡುತ್ತಾರೆ. ಕೋಣನ ಜತೆ ನೂರಾರು ಕುರಿಗಳ ಬಲಿಯಾಗುತ್ತದೆ.

ನಿಡಸೇಶಿ :

ಕುಷ್ಟಗಿಯಿಂದ ೩ ಕಿಲೋಮೀಟರು ದೂರದಲ್ಲಿರುವ ಈ ಗ್ರಾಮದಲ್ಲಿ ಹುಲಿಗೆಮ್ಮನ ಮತ್ತು ಚನ್ನಬಸವಸ್ವಾಮಿ ಜಾತ್ರೆಯಾಗುತ್ತವೆ.

ನಿಡಸೇಶಿ, ಕುಷ್ಟಗಿ, ಗೆಜ್ಜೆಬಾವಿಯ ಪಶ್ಚಕಂಥಿ ಹಿರೇಮಠದ ಚನ್ನಬಸವಸ್ವಾಮಿಗಳ ಜಾತ್ರೆ ಪ್ರತಿವರ್ಷ ಫೆಬ್ರುವರಿಯಲ್ಲಿ ಭಾರತ ಹುಣ್ಣಿವಿಯಿಂದ ೫ ದಿನಕ್ಕೆ ನಡೆಯುತ್ತದೆ. ಬಳ್ಳಾರಿಯ ವೈ. ನಾಗೇಶಶಾಸ್ತ್ರಿಗಳು ಚನ್ನಬಸವಸ್ವಾಮಿಗಳ ಪುರಾಣವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದು ಅವರ ಪವಾಡಗಳನ್ನು ನಿರೂಪಿಸಿದ್ದಾರೆ.

೨೫ ದಿನಗಳ ಪುರಾಣ ಪ್ರವಚನವಿಟ್ಟು ಕೊನೆಯದಿನ ಅಡ್ಡಪಲ್ಲಕ್ಕಿ ಉತ್ಸವ ಮಾಡುತ್ತಾರೆ. ಮಠದಿಂದ ಪಲ್ಲಕ್ಕಿ ಊರಲ್ಲಿ ಸುತ್ತಿ ಬರುತ್ತದೆ. ಪಲ್ಲಕ್ಕಿಯಲ್ಲಿ ಚನ್ನಬಸವಸ್ವಾಮಿಗಳ ಫೋಟೋ ಇಡುತ್ತಾರೆ. ಡೊಳ್ಳು ಕರಡಿಮಜಲು, ಭಜನೆ ಮೇಳವಿರುತ್ತವೆ. ಪಲ್ಲಕ್ಕಿ ತಿರುಗಿ ಮಠಕ್ಕೆ ಬಂದನಂತರ ಸಾಮೂಹಿಕ ಉಚಿತ ವಿವಾಹ ಮತ್ತು ಸಾರ್ವಜನಿಕರಿಗೆ ಭೋಜನ. ಸಂಜೆ ಉಚ್ಚಾಯ, ಬಂಡಿಯಲ್ಲಿ ಫೋಟೋ ಇಟ್ಟು ಬಜಾರದ ವೀರಭದ್ರ ಗುಡಿಯ ಮೂಲಕ ಮಠಕ್ಕೆ ಎಳೆದು ತರುತ್ತಾರೆ.

ಹುಲಿಗೆಮ್ಮನ ಜಾತ್ರೆ :

ಈ ಗ್ರಾಮದ ಮಧ್ಯೆ ಪೂರ್ವಾಭಿಮುಖವಾಗಿರುವ ಸಣ್ಣ ಗುಡಿಯಲ್ಲಿ ಉರುಟುಕಲ್ಲಿನ ಮುಖದ ಹುಲಿಗೆಮ್ಮ ವಿಗ್ರಹ. ಅದಕ್ಕೆ ಕೈ ಅಂಟಿಸಿದ್ದಾರೆ. ಮುಖದ ತುಂಬ ಅರಿಶಿಣ ಲೇಪಿಸಿ ಸೀರೆಯುಡಿಸಿದ್ದಾರೆ. ಪೂಜಾರಿ ರಜಪೂತ ಕುಲದವರು. ಕಟ್ಟಿಗೆಯ ಹಲಗೆಯ ಮೇಲೆ ಈ ಮೂರ್ತಿ ಇದೆ. ಹದಿನೈದು ವರ್ಷದೀಚೆ ಆರಾಧನೆ, ಜಾತ್ರೆ ಪ್ರಾರಂಭವಾಗಿವೆ. ಗುಡಿ ಮೊದಲು ಯಾರದೋ ಮನೆಯಾಗಿತ್ತು. ಹುಲಿಗೆಮ್ಮ ದನದ ಗೋದಲಿಯಲ್ಲಿ (ಕೊಟ್ಟಿಗೆ) "ನೆನೆದಳು" ಹಾಗಾಗಿ ಮನೆಯವರು ಮನೆಬಿಟ್ಟು ಹೊರಟು ಹೋದರು. ಇದಾಗಿ ಎರಡು ಮೂರು ತಲೆಯಾಯಿತೆಂದು ಹೇಳುತ್ತಾರ ಪೂಜಾರಿ.

ಆಗಿಹುಣ್ಣಿವಿಯಾದ ೧೦ ದಿವಸಕ್ಕೆ ಹುಲಿಗಿಯಲ್ಲಿ ಜಾತ್ರೆಯಾಗುವ ದಿನವೇ ಇಲ್ಲಿ ಒಂದೇ ದಿನ ಅಲ್ಲಿಯ ಪ್ರಮುಖ ವಿಧಿಗಳನ್ನು ಪೂರೈಸುತ್ತಾರೆ. ಇಡೀ ರಾತ್ರಿ ಬಾಳೆದಂಡಿಗಿ, ಅಕ್ಕಿಪಾಯಸ, ಅಗ್ನಿಕೊಂಡವಾಗುತ್ತವೆ.

ಹತ್ತು-ಹನ್ನೆರಡು ಮುಳ್ಳುಗಬ್ಬನ್ನು ಉಪ್ಪಾರರ ಮೂಲಕ ಕುಂಬಳಾವತಿಯಿಂದ ತರಿಸುತ್ತಾರೆ. ಹತ್ತಿಯ ಐದೆಳೆದಾರದಿಂದ ಅವನ್ನು ತೊಟ್ಟಿಲಂತೆ ರಚಿಸುತ್ತಾರೆ. ಪೂಜಾರಿ ೫ ದಿವಸ ಉಪವಾಸವಿರುತ್ತಾನೆ. ಕುಷ್ಟಗಿಯ ಬ್ರಾಹ್ಮಣರು ಬಂದು ಅವನಿಗೆ ಕಂಕಣ ಕಟ್ಟುತ್ತಾರೆ.

ಬಾವಿಗೆ ಹೋಗಿ ಸ್ನಾನ ಮಾಡಿ ಬಂದು ಪೂಜಾರಿ ಕುಂಬಾರ ಕೊಟ್ಟ ಹೊಸ ಐರಣಿಯಲ್ಲಿ ೫ ಸೇರು ಅಕ್ಕಿಯನ್ನು ಹಾಲಿನಲ್ಲಿ ಕುದಿಸುತ್ತಾನೆ. ಕುದಿಯುವ ಅನ್ನವನ್ನು ಬರಿಗೈಯ್ಯಿಂದ ೫ ಹರಿವಾಣಗಳಲ್ಲಿ ತೆಗೆಯುತ್ತಾನೆ. ಅಮ್ಮನಿಗೆ ಎಡೆಮಾಡಿ ನೆರೆದ ಜನಕ್ಕೆ ಪ್ರಸಾದವಾಗಿ ಹಂಚುತ್ತಾನೆ. ಪೂಜೆಯ ನಂತರ ರಾಜಪೂತರು ಬಾಳೆದಂಡಿಗಿ ಹೊರುತ್ತಾರೆ. ಪೂಜಾರಿ ಕೈಯ್ಯಲ್ಲಿ ಕಠಾರ ಹಿಡಿದು ಕೂತಿರುತ್ತಾನೆ. ಗುಡಿಯ ಸುತ್ತ ೫ ಸಲ ಪ್ರದಕ್ಷಿಣೆ ಬರುತ್ತಾರೆ. ನಂತರ "ನುಡಿ" ಆಗುತ್ತದೆ. ಈ ವರ್ಷ "ಮುಂಗಾರ ಹಿಂಗಾರಿ ಸವನಾಗಲೆ ಪರಾಕ್" ಎಂದು ಹೇಳಿದ್ದಾನೆ. ನೆರೆದ ಜನ ಉಧೋ ಉಧೋ ಎಂದು ಕೂಗುತ್ತಿರುವಾಗ ನಾಲ್ವರು ಪೂಜಾರಿಗಳು ಅಗ್ನಿಕೊಂಡ ತುಳಿಯುತ್ತಾರೆ. ಈ ಜಾತ್ರೆಗೆ ಒಂದು ಕುದುರೆ ತಂದಿರುತ್ತಾರೆ. ಅದರ ಮೇಲೆ ಕೂತು ಹನುಮಂತ ದೇವರ ಗುಡಿಗೆ ಬರುತ್ತಾರೆ. ಅಲ್ಲಿ ತಲಾಠಿ (V.I) ಪೂಜಾರಿಗೆ ಹೊಸ ಪಟಗಾ ಶಲ್ಲೆ ಕಾಣಿಕೆ ನೀಡುತ್ತಾನೆ. ಜಾತ್ರೆಯಾದ ಮೂರು ದಿನಕ್ಕೆ ಕಣಕದಿಂದ ಕೋಳಿ ಮಾಡಿ ಅದನ್ನು ಒಡೆದು ಎಡೆಮಾಡಿ ಕಂಕಣ ಬಿಚ್ಚುತ್ತಾರೆ. ಇಲ್ಲಿ ಪ್ರಾಣಿಬಲಿ ಇಲ್ಲ.

ದೋಟಿಹಾಳ

ಸುತಮುನಿಯಪ್ಪನ ಜಾತ್ರೆ :

ಕುಷ್ಠಗಿಯಿಂದ ೧೨ ಕಿಲೋಮೀಟರು ದೂರದಲ್ಲಿರುವ ದೋಟಿಹಾಳಿನಲ್ಲಿ ಅವಧೂತ ಸುಕಮುನಿಗಳ ಗುಡಿ ಇದೆ. ೧೮ ವರ್ಷಗಳ ಹಿಂದೆ ಕಟ್ಟಿಸಿದ್ದಾರೆ. ಗರ್ಭಗುಡಿ ಯಲ್ಲಿ ಸುಕಮುನಿ ಕೂತ ಭಂಗಿಯ ವಿಗ್ರಹ. ಹಿಂದೆ ನಾಗರಿ ಲಿಪಿಯಲ್ಲಿ ಓಂ ಅಕ್ಷರ ಪ್ರಭಾವಳಿ. ಪ್ರದಕ್ಷಿಣ ಪಥದ ಒಂದು ಕಡೆ ತೇರಿನಲ್ಲಿಡುವ ಫೋಟೊ, ಪ್ರಭಾವಳಿ, ಪಲ್ಲಕ್ಕಿಗಳು. ದೊಡ್ಡ ಹಾಲ್, ಸಿಂಹಗಳಿರುವ ದೊಡ್ಡ ದ್ವಾರಬಾಗಿಲು, ಕನಕದಾಸ, ರಾಘವೇಂದ್ರ, ಬಸವಣ್ಣ, ಶರೀಫ ಸಾಹೇಬ ಮೊದಲಾದ ಮಹನೀಯರುಗಳ ಪ್ರತಿಮೆಗಳನ್ನು ಒಳಗೊಂಡ ದೊಡ್ಡ ಗೋಪುರಸ ಹಲವಾರು ಕಳಸಗಳು. ಗುಡಿಯ ಬಲಭಾಗದ ಕೋಣೆಯಲ್ಲಿ ತೇರು.

ಶುಕಮುನಿ ಯಾರು, ಎಲ್ಲಿಂದ ಬಂದರೊ ಯಾರಿಗೂ ಗೊತ್ತಿಲ್ಲ. ಈ ಪ್ರದೇಶವೆಲ್ಲಾ ಆಗ ಡಬಗಳ್ಳಿ-ಬಯಲು ಬಸವೇಶ್ವರ ಗುಡಿ ಇತ್ತು. ಇಲ್ಲೆ ಸುಕಮುನಿ ದಿಗಂಬರರಾಗಿ ೧೦ ವರ್ಷ ಇದ್ದರು. 'ಕುಟ್ಲೆ' ಎಂಬ ಒಂದೇ ಪದ ಅವರಾಡುತ್ತಿದ್ದುದು. ಈ ಊರಿಗೆ ಮೊದಲು ಬಂದಾಗ ಕಳ್ಳನಿರಬಹುದೆಂದು ಹೊಡೆದು ಚಾವಡಿಗೆ ಹಾಕಿದರು. ಗೌಡನ ಸೋದರಮಾವ ಕಾಸೀಂಸಾಬ, ಶರೀಫರ ಸಂಪ್ರದಾಯದ ಸಜ್ಜನ. ಇವರನ್ನು ಬಿಡಿಸಿದ. ಮಠದಲ್ಲಿ ಸಿದ್ಧಲಿಂಗ ಅವಧೂತರು ಅಂತಿದ್ದರು. ಅವರು ಮತ್ತು ಊರ ಹಿರಿಯರು ಈತನಿಗೆ 'ಸುಕಮುನಿ' ಅಂತ ನಾಮಕರಣ ಮಾಡಿದರು. ಊರಲ್ಲಿ ತನ್ನ ಇಚ್ಛಾನುಸಾರ ತಿರುಗುತ್ತಿದ್ದ "ಕೆಲವೊಂದು ಲೀಲಾ ಮಾಡಿದ. ಹಸ್ತದಿಂದ ಕೊಟ್ಟಿರುವಂಥವು ಸಿದ್ಧಿಯಾಗಿವೆ." ಒಂದುಸಲ ಇಳಕಲ್ಲಿನಲ್ಲಿ ಒಂದು ಬಾಟಲಿ ವಿಷ ಕುಡಿದ. ಡಾಕ್ಟರು ಹೌಹಾರಿದರು. ಊರಿಗೆ ಬಂದು ಮರುದಿನ ಮತ್ತೆ ಡಾಕ್ಟರ ಹತ್ತಿರ ಹೋದ. ಈತ ಪವಾಡ ಪುರುಷ ಅಂತ ಅವರು ನಂಬಿದರು.

ದೇವಾಂಗ ಕುಲದ ಪೂಜಾರಿ ಎರಡೂ ಹೊತ್ತು ಪೂಜೆ ಮಾಡುತ್ತಾನೆ. ಶಿವರಾತ್ರಿ ಅಮವಾಸ್ಯೆಯಂದು ಜಾತ್ರೆ. ಮೊದಲ ೭ ದಿವಸ ಸಪ್ತಭಜನೆ, ಹಗಲು ರಾತ್ರಿ "ಓಂ ನಮಃ ಶಿವಾಯ" ಎಂಬ ಷಡಕ್ಷರಿ ಮಂತ್ರ ಪಠಣ. ಹತ್ತೊ, ಇಪ್ಪತ್ತೊ ಜನ ತಾಳ, ತಂಬೂರಿ, ತಮ್ಮಡಿ, ಪೇಟಿ ಸಹಿತ ಪಾಳಿಪ್ರಕಾರ ಹೇಳುತ್ತಾರೆ. ಸಜ್ಜಕ ಅನ್ನಸಾರಿನ ಪ್ರಸ್ತಾ. ಮುಂಜಾನೆ ಮತ್ತು ಸಂಜೆ ಉತ್ಸವಮೂರ್ತಿ ಇರುವ ಪಲ್ಲಕ್ಕಿ ಇಚ್ಛಾನುಸಾರ ಊರಲ್ಲಿ ತಿರುಗಾಡುವುದು. ಬೇಕಾದವರು ಪಲ್ಲಕ್ಕಿ ಹೊರುತ್ತಾರೆ; ಇವರೇ ಆಗಬೇಕೆಂದಿಲ್ಲ. ಅಮವಾಸ್ಯೆಗೆ ಸಪ್ತಾಹ ಮುಕ್ತಾಯ. ಸಂಜೆ ತೇರು, ಸುಕಮುನಿಯಪ್ಪನ ಫೋಟೊ ಇಟ್ಟು ಗುಡಿಯಿಂದ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಬಲಿ ಅನ್ನ ಚಲ್ಲಲು ಪಂಚಾಳರವನು ತೇರಿನಲ್ಲಿರುತ್ತಾನೆ. ಸುತ್ತಲ ಗ್ರಾಮಗಳ ಹತ್ತಿಪ್ಪತ್ತು ಸಾವಿರ ಜನ ಸೇರುತ್ತಾರೆ. ಅಂಗಡಿಗಳು ಬಂದಿರುತ್ತವೆ. ನಾಟಕ ಪ್ರದರ್ಶನವಿರುತ್ತದೆ. ಬೇಡಿಕೊಂಡವರು ದೀಡ ನಮಸ್ಕಾರ ಹಾಕುತ್ತಾರೆ. ಜವುಳ ತೆಗೆಸುತ್ತಾರೆ. ತಹಶೀಲದಾರರ ಅಧ್ಯಕ್ಷತೆಯಲ್ಲಿ ದೇಗುಲದ ಟ್ರಸ್ಟ್ ಕಮಿಟಿ ಇದೆ. ಎಲ್ಲ ಜಾತಿ ಕೋಮುಗಳ ಜನ ಈ ದೈವಕ್ಕೆ "ನಡಕೊಳ್ಳುತ್ತಾರೆ".

ಶುಕಮುನಿಯಪ್ಪ ಲಿಂಗದಲ್ಲಿ ಆದದ್ದು ೧೯೩೮ರಲ್ಲಿ ಭಾದ್ರಪದ ಪಾಡ್ಯ. ಆದಿನ ಸಾಯಂಕಾಲ ಪಲ್ಲಕ್ಕಿ ಉತ್ಸವ. ರಾತ್ರಿ ಭಜನೆ.

ಮುದೇನೂರು

ಮಹಿಳೆಯರ ತೇರು :

ಕುಷ್ಠಗಿಯಿಂದ ಸುಮಾರು ೨೪ ಕಿಲೋಮೀಟರು ದೂರದ ಈ ಊರಲ್ಲಿ ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ 'ಉಮಾಚಂದ್ರಮೌಳೇಶ್ವರನ' ತುಂಬ ವಿಶಿಷ್ಠವಾದ ಜಾತ್ರೆಯಾಗುತ್ತದೆ.

ಆಯುರ್ವೇದ ವೈದ್ಯರಾಗಿದ್ದ ಡಾ|| ಚಂದ್ರಶೇಖರ ಮಹಾಸ್ವಾಮಿಗಳು ಸಾರ್ವಜನಿಕರ ಸೇವೆಯಿಂದ ಕಟ್ಟಿಸಿದ 'ವರದ ಉಮಾಚಂದ್ರಮೌಳೇಶ್ವರ ಮಂದಿರ' ಅವರ ಕಲ್ಪನೆಯ ವಾಸ್ತು. ರಾಮಲಿಂಗೇಶ್ವರ ಗುಡಿ ಇದ್ದ ಈ ಸ್ಥಳದಲ್ಲಿ ಜಿನಮೂರ್ತಿ, ಶಿಲಾಶಾಸನ, ವೀರಗಲ್ಲುಗಳಿವೆ. ಕೋಟೆ, ಹುಡೇವು, ಈ ಪ್ರದೇಶದ ಪ್ರಾಚೀನತೆಗೆ ಸಾಕ್ಷಿ. ಗರ್ಭಗುಡಿಯನ್ನು ಬಂದ್ ಮಾಡಲಾಗಿದ್ದು ಶುಕನಾಶಿಯಲ್ಲಿ ಲಿಂಗದ ಎದುರು ನಂದಿಗಳಿವೆ. ಲಿಂಗದ ಮೇಲ್ಭಾಗದಲ್ಲಿ ಶಿವಪಾರ್ವತಿಯರ ಸಂಗಮವರಿ ಕಲ್ಲಿನ ವಿಗ್ರಹಗಳು. ರಂಗಮಂಟಪದ ಗೋಡೆಗಳ ಮೇಲೆ ಸೂಕ್ತಿಗಳನ್ನು ಬರೆಸಿದ್ದಾರೆ. ಐದು ಕಡೆ ಪಂಚಾಚಾರ್ಯರ ಫೋಟೊ ತೂಗುಹಾಕಿದ್ದಾರೆ. ಅವರು ಲಿಂಗದಲ್ಲಿ ಪ್ರಕಟವಾಗಿರುವಂತೆ ತೋರಿಸಲಾಗಿದೆ. ಹೊರಗಿನ ಮಂಟಪದಂಥ ಕೋಣೆಯ ಸುತತಲೂ "ನಮಸ್ತೆ ಜಯಚಂದ್ರಮಾಲೆ", "ತ್ವಾಮೇವ ಶರಣಂ ಪ್ರಪದ್ಯೆ", "ವಂದೇ ವಿಶ್ವಮಾತಾ ಪಿತರಂ", "ಅನನ್ಯ ಗತಿಕಾನಾಂ ತ್ವ ಯೋಗಕ್ಷೇಮಂ ಸದಾವಹ" ಎಂಬ ಸೂಕ್ತಿಗಳಿವೆ. ಶಕ ೧೮೭೧ರಲ್ಲಿ ಸ್ಥಾಪಿಸಿದ ಸೂಚನೆ ಇದೆ.

ಈ ಗುಡಿಯ ಹತ್ತಿರ ಡಾ|| ಚಂದ್ರಶೇಖರ ಸ್ವಾಮಿಗಳ ಕರ್ತೃ ಗದ್ದಿಗೆ ಕಟ್ಟಡವಿದೆ.

ಗದ್ದಿಗೆಯ ಮೇಲೆ ಫೋಟೊ, ಬೆಳ್ಳಿಲಿಂಗ, ಆರತಿ, ಟೆಂಗಿನಕಾಯಿಗಳಿವೆ. ಜನನ ಮಾಘ ಶುದ್ಧ ೧೭೯೮ (ಕ್ರಿ.ಶ. ೧೮೭೬) ಲಿಂಗೈಕ್ಯ ಜೇಷ್ಠ ಶುದ್ಧ ೧೫ ೧೮೯೪ (ಕ್ರಿ.ಶ. ೧೯೭೨) ಎಂದು ಕೆತ್ತಿದೆ. ಡಾ|| ಚಂದ್ರಶೇಖರ ಸ್ವಾಮಿಗಳು ಹುನಗುಂದ ತಾಲೂಕು ಅಮರಾವತಿಯ ರುದ್ರಯ್ಯ ಮತ್ತು ಸಂಗಮ್ಮನವರ ಮಗ. ಬಡನತವಿದ್ದುದರಿಂದ ಹುನಗುಂದದಲ್ಲಿ ಕಂತೆಭಿಕ್ಷೆ ಎತ್ತಿ ಕನ್ನಡ ಶಾಲೆ ಓದಿದರು. ಸಂಸ್ಕೃತ ಕಲಿಯಲು ಸೊಲ್ಲಾಪುರಕ್ಕೆ ಹೋದರು. ಮುಂದೆ ಸಾತಾರಾದಲ್ಲಿ ವೈದ್ಯಕೀಯ ಅಭ್ಯಾಸ ಮಾಡಿ ಇಳಕಲ್ಲಿಗೆ ಬಂದು ನೆಲಸಿದರು. ಊರೂರು ಸಂಚಾರ ಮಾಡುತ್ತ ಕಾರ್ಯಕ್ರಮಗಳನ್ನು ಏರ್ಪಡಿಸಿ, ಬಡವ ಬಲ್ಲಿದರು, ಆ ಜಾತಿ, ಈ ಜಾತಿ ಎನ್ನದೆ ಚಿಕಿತ್ಸೆ ಮಾಡಿದರು. ಆ ಕಾಲದಲ್ಲಿ ಅವರು ಧಾರವಾಡ, ವಿಜಾಪುರ, ರಾಯಚೂರು ಜಿಲ್ಲೆಗಳ ಹಳ್ಳಿಗಳಲ್ಲಿ ಸಂಚರಿಸಿದರು. ಸ್ತ್ರೀರೋಗ ತಜ್ಞರಾಗಿದ್ದ ಅವರು ನಿಸರ್ಗ ಚಿಕಿತ್ಸೆಗೆ ಒತ್ತುನೀಡುತ್ತಿದ್ದರು. ಬ್ರಹ್ಮಚಾರಿಯಾಗಿ ಉಳಿದು, ಬಿಳಿಯ ಬಟ್ಟೆ ಧರಿಸುತ್ತಿದ್ದರು. ಅವರ ಭಕ್ತರು ಅವರನ್ನು 'ಹಠಯೋಗಿಗಳು', 'ವಾಕ್‌ಸಿದ್ಧಿ ಪುರುಷರು', 'ನಿಷ್ಠುರವಾದಿಗಳು' ಎಂದು ಬಣ್ಣಿಸುತ್ತಾರೆ. ಮುದೇನೂರು, ಹೊಳೆಯಾಲೂರು (ರೋಣ ತಾಲೂಕು), ಮುದ್ದಲಗುಂದಿ (ಕುಷ್ಟಗಿ ತಾ) ಇದ್ಲಾಪುರ, ಗುಮ್ಮಗೇರಿ, ಹಗಲದಾಳ (ಎಲ್ಲವೂ ಕುಷ್ಟಗಿ ತಾ) ತಾವರೆಗೆರೆಗಳಲ್ಲಿ ಕ್ರಮವಾಗಿ ಉಮಾಚಂದ್ರಮೌಳೇಶ್ವರ ಮಾಂಗಲ್ಯ ಮಂದಿರ, ಪಾರ್ವತಿ ಪರಮೇಶ್ವರ, ನಂದೀಶ್ವರ, ಸರ್ವೇಶ್ವರ, ಓಂ ಕಾರೇಶ್ವರ, ಗೋಮುಖ ಜಲಧಾರೇಶ್ವರ, ತ್ರಿವೀರಭದ್ರೇಶ್ವರಗಳನ್ನು ಸ್ಥಾಪಿಸಿ ಕೆಲವು ಕಡೆ ಜಾತ್ರೆಗಳನ್ನು ಪ್ರಾರಂಭಿಸಿದರು. ಹೊಳೆಯಾಲೂರು ಹಗಲದಾಳಗಳಲ್ಲಿ ಶಿವರಾತ್ರಿ ಮತ್ತು ವೈಶಾಖ ಶುದ್ಧ ಅಷ್ಟಮಿಗೆ ರಥೋತ್ಸವ ಮತ್ತು ಸಾಮೂಹಿಕ ವಿವಾಹ, ತಾವರಗೆರೆ, ಗುಮ್ಮಗೇರಿಗಳಲ್ಲಿ ರಥೋತ್ಸವಗಳು ನಡೆಯುತ್ತ ಬಂದಿವೆ. ಸ್ವಾಮಿಗಳು ಧಾರ್ಮಿಕ ಮತ್ತು ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿ ೨೬ ಗ್ರಂಥಗಳನ್ನು ರಚಿಸಿದರು. ಪ್ರತಿವರ್ಷ ತಾವು ನಡೆಸುತ್ತಿದ್ದ ಜಾತ್ರೆಯ ಆಯವ್ಯಯ ಪತ್ರಿಕೆ ಪ್ರಕಟಿಸಿ ಹಂಚುತ್ತಿದ್ದರು. ೧೯೭೨ರಲ್ಲಿ ಅವರು ತೀರಿದ ನಂತರ ಗದುಗಿನ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದ ಶಶಿಧರ ಸ್ವಾಮಿಗಳು ಈಗ ಪೀಠಾಧಿಕಾರಿ ಗಳಾಗಿದ್ದಾರೆ. ಡಾ|| ಅವರು ಮುದೇನೂರು ಜಾತ್ರೆಯಲ್ಲಿ ಸ್ತ್ರೀಯರಿಂದ ತೇರು ಎಳೆಸುವ ವಿನೂತನ ಸಂಪ್ರದಾಯವನ್ನು ಪ್ರಾರಂಭಿಸಿದರು. ಇದು ನಾಡಿನಲ್ಲೇ ಪ್ರಪ್ರಥಮ ಪ್ರಯೋಗವೆಂದು ತೋರುತ್ತದೆ. ಈ ಪದ್ಧತಿ ಈಗಲೂ ಮುಂದುವರೆದಿದೆ.

ಫಾಲ್ಗುಣ ಶುದ್ಧ ಪ್ರತಿಪದೆಯಂದು ಉಮಾಚಂದ್ರಮೌಳೇಶ್ವರನಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ದೀಪೋತ್ಸವ, ಮಾಹೇಶ್ವರ ವಟುಗಳಿಗೆ ದೀಕ್ಷಾಸಂಸ್ಕಾರ, ಗಣಾರಾಧನೆ ನಡೆಯುತ್ತವೆ. ಮಧ್ಯಾಹ್ನ ಚಂದ್ರಶೇಖರ ಸ್ವಾಮಿಗಳ ಭಾವಚಿತ್ರದ ಮೆರವಣಿಗೆ. ಶಿವಪಾರ್ವತಿಯರ ಲಗ್ನದ ಜತೆ ಬಡಜನರ ಉಚಿತ ವಿವಾಹಗಳು. ಕರ್ನಾಟಕದಲ್ಲಿ ಮೊಟ್ಟ ಮೊದಲು ಉಚಿತ ಸಾಮೂಹಿಕ ವಿವಾಹ ಪ್ರಾರಂಭಿಸಿದ್ದು ಡಾ|| ಅವರೇ ಎಂದು ಶಶಿಧರ ಸ್ವಾಮಿಗಳು ಹೇಳುತ್ತಾರೆ. ಸಂಜೆ ನಡೆಯುವ ಜೋಡಿರಥೋತ್ಸವದಲ್ಲಿ ಗಂಡಸರು

ಪಾಲ್ಗೊಳ್ಳುತ್ತಾರೆ. ಆದರೆ ಮರುದಿನ ಮಹಿಳೆಯರಿಗಾಗಿಯೆ 'ಪಾರ್ವತಿ ರಥ'. ಎಲ್ಲಿ ನೋಡಿದರೂ ತೇರೆಳೆಯುವವರು ಗಂಡಸರೇ, ಮಹಿಳೆಯರು ಯಾಕೆ ಎಳೆಯಬಾರದು ಎಂದು ಯೋಚಿಸಿ ನಾಡಿನಲ್ಲೇ ಮೊಟ್ಟಮೊದಲ ಬಾರಿ ಡಾ|| ಅವರು ಮಹಿಳೆಯರು ಮಾತ್ರ ತೇರೆಳೆಯುವ ಸಂಪ್ರದಾಯ ಪ್ರಾರಂಭಿಸಿದರು. ಆ ಮೂಲಕ ಸಮಾನತೆಯ ತತ್ತ್ವವನ್ನು ಜಾರಿಗೆ ತಂದರು. ಮದುವೆಯಾದ ಮಹಿಳೆಯರು ಈ ರಥೋತ್ಸವದ ಎಲ್ಲ ಕೆಲಸ ಮಾಡುತ್ತಾರೆ. ಮಧ್ಯಾಹ್ನ ಈ ಎಲ್ಲ ಮುತ್ತೈದೆಯರಿಗೆ ಕುಂಕುಮ, ಅರಿಶಿನ ಕೊಟ್ಟು ಹಸಿರುಬಳೆ, ಎಲೆ ಅಡಿಕೆ, ಅಕ್ಕಿಗಳಿಂದ ಉಡಿ ತುಂಬಿಸುತ್ತಾರೆ. ಸಾಯಂಕಾಲ ಮಹಿಳೆಯರೇ ಛತ್ರಿ, ಚಾಮರ, ಗ್ಯಾಸು, ನಂದಿಕೋಲು ಹಿಡಿಯುತ್ತಾರೆ. ಡೊಳ್ಳು ಬಾರಿಸುತ್ತಾರೆ. ರಥ ಎಳೆಯುತ್ತಾರೆ. ಪುರುಷರು ಬರೀ ಪ್ರೇಕ್ಷಕರು ಮಾತ್ರ. ಪುರುಷರು ಮಹಿಳೆಯರಲ್ಲಿ ಪಾರ್ವತಿಯ ಅಂಶವನ್ನು ಕಾಣಬೇಕೆಂದು ಸ್ವಾಮಿಗಳು ಹೇಳುತ್ತಿದ್ದರು. ಜಾತಿ ಭೇದವಿಲ್ಲದಂತೆ ಎಲ್ಲ ಮಹಿಳೆಯರು ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಮರುದಿನ ಮದುವೆಯಾಗದಿರುವ ಯುವತಿಯರು ಇದೇ ರೀತಿ ಗೌರಿರಥ ಎಂದು ಉಚ್ಚಯ್ಯನನ್ನು ಗುಡಿಯಿಂದ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಅಂದಿನ ಎಲ್ಲ ಕೆಲಸಗಳೂ ಕುಮಾರಿಯರದ್ದೇ.

ಹಳ್ಳಿಯ ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂಬ ಉದ್ದೇಶದಿಂದ ಜಾತ್ರೆಯಲ್ಲಿ ಚಂದ್ರಶೇಖರಸ್ವಾಮಿಗಳು ಕೃಷಿ ಪ್ರದರ್ಶನ ದನಗಳ ಪ್ರದರ್ಶನ ಏರ್ಪಡಿಸುತ್ತಿದ್ದರು. ನೈಸರ್ಗಿಕ ಸ್ಥಿತಿಗೆ ಹೊಂದಿಕೊಳ್ಳುವ ಅಗತ್ಯ; ರಸಾಯನಿಕ ಗೊಬ್ಬರ ಬಳಸುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ರೈತರಿಗೆ ತಿಳುವಳಿಕೆ ನೀಡುತ್ತಿದ್ದರು. ಬೋರ್ ಹಾಕಿಸುವುದರಿಂದ ಅಂತರ್‌ಜಲ ಬತ್ತುವ ಬಗ್ಗೆ ವಿವರಿಸುತ್ತಿದ್ದರು. ಈ ಭಾಗದ ಜನ ಸಂತೆಗೆ ಕುಷ್ಟಗಿ, ಇಳಕಲ್ಲಿನವರೆಗೆ ಹೋಗಬೇಕಾಗುತ್ತಿತ್ತು. ಈ ಕಷ್ಟ ಕಂಡು ಸ್ವಾಮಿಗಳು ಮುದೇನೂರಲ್ಲಿ ಸೋಮವಾರ ಸಂತೆ ಪ್ರಾರಂಭಿಸಿದರು. ಈಚೆಗೆ ಊರಲ್ಲಿ ಬ್ಯಾಂಕ್, ದವಾಖಾನೆ, ಶಾಲೆ ಮುಂತಾದ ಸೌಲಭ್ಯಗಳಾಗಿವೆ.

ಈ ಊರು ಹೈದ್ರಾಬಾದ್ ನವಾಬನ ಪ್ರದೇಶದಲ್ಲಿದ್ದರೂ ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕದಿನ ಸ್ವಾಮಿಗಳು ರಾಷ್ಟ್ರಧ್ವಜ ಹಾರಿಸಿದ್ದರು.

ಮುದೇನೂರು ಮಹಿಳಾ ತೇರು ಸುಮಾರು ೬೦ ವರ್ಷದಿಂದ ನಡೆದುಕೊಂಡು ಬಂದಿದೆ.

ಬೆನಕನ ಹಾಳು :

ಈ ಗ್ರಾಮದಲ್ಲಿ ಪ್ರತಿವರ್ಷ ಹೊಸ್ತಲಹುಣ್ಣಿವೆಯಾದ ನಂತರ ಐದು ದಿನಗಳವರೆಗೆ ಎಲ್ಲ ದೇವರುಗಳ ಜಾತ್ರೆಯಾಗುತ್ತದೆ. ಇವುಗಳಲ್ಲಿ ಹನುಮಪ್ಪನದು ಪ್ರಮುಖ. ಪೂರ್ವಾಭಿಮುಖವಾಗಿರುವ ಗರ್ಭಗುಡಿಯಲ್ಲಿ ೫' ಎತ್ತರದ ಹನುಮಪ್ಪನ ಶಿಲಾವಿಗ್ರಹ. ಇದರ ಸುತ್ತಲೂ ಕಲ್ಲಿನ ಕಮಾನು. ಹೊರಗಿನ ಕೋಣೆಯಲ್ಲಿ ಗೋಡೆ ಗಂಟಿರುವ ಕಟ್ಟೆಯ ಮೇಲೆ ನಂದಿ ವಿಗ್ರಹ ಪೂಜೆಗೊಂಡ ಗುಂಡುಕಲ್ಲುಗಳು. ಛಾವಣಿಗೆ ಪಾಲಕಿ ಕಟ್ಟಿದ್ದಾರೆ.

ಅಂಗಳದ ಕಟ್ಟೆಯ ಮೇಲೆ ದೀಪಸ್ಥಂಭ ನಾಗನಕಲ್ಲುಗಳು. ನಾರಾಯಣ ದೇವರೆಂದು ಜನ ಹೇಳುವ ಉಬ್ಬುಕೆತ್ತನೆ ಇರುವ ಶಿಲೆ, ಗುಡಿಯ ಮೇಲ್ಛಾವಣಿಯ ನಾಲ್ಕು ಮೂಲೆಗೆ ಕಳಸ, ಗರ್ಭಗುಡಿಗೆ ಗೋಪುರ, ಕಳಸ. ಗಮನಾರ್ಹವಾದ ಸಂಗತಿ ಎಂದರೆ ಗುಡಿಯ ಹೊರಗೋಡೆಯಲ್ಲಿ ಬಿಡಿಸಿರುವ ದೊಡ್ಡ ಸರ್ಪದ ಉಬ್ಬು ಶಿಲ್ಪ. ಆವಾರ. ಈಚೆಗೆ ಕಟ್ಟಲಾಗಿರುವ ದ್ವಾರಗೋಪುರ. ಊರಿನ ದ್ಯಾಮವ್ವ, ಹನುಮಪ್ಪ, ಬಸವಣ್ಣಗಳ ಐದು ದಿನಗಳ ಜಾತ್ರೆಯಲ್ಲಿ ದ್ಯಾಮವ್ವನ ಪ್ರಭಾವಳಿಯನ್ನು ಉತ್ಸವಮೂರ್ತಿಯೊಂದಿಗೆ ಹೊರಡಿಸಿ ಊರಿನ ಎಲ್ಲ ದೇವರಿಗೆ ಭೇಟಿಕೊಟ್ಟು, ಕಾಯಿಕರ್ಪೂರ ಮಾಡಿಸಿ, ಸೀಮೆಯ ಹತ್ತಿರ ಇರುವ ಕಟ್ಟೆಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಮಹಿಳೆಯರು ಆರತಿಯೊಂದಿಗಿರುತ್ತಾರೆ. ವಾದ್ಯಮೇಳವಿರುತ್ತದೆ. ಕಾರ್ತಿಕ ಹಚ್ಚಿ ಕಾಯಿಕರ್ಪೂರ ಮಾಡಿಕೊಂಡು ಬರುತ್ತಾರೆ.

ಎರಡನೆ ದಿವಸ ಹನುಮಪ್ಪನ ಕಳಸವನ್ನು ಮಜಲು ಮೆರವಣಿಗೆಯೊಂದಿಗೆ ಪೂಜಾರಿಗಳ ಮನೆಯಿಂದ ಗುಡಿಗೆ ತರುವುದು. ಪೂಜೆ ಮಾಡಿ ಅದನ್ನು ಗುಡಿಯ ಗೋಪುರದ ತುದಿಗೆ ಏರಿಸುವುದು. ಮೂರನೆ ದಿವಸ 'ಸುತ್ತಗಾಯಿ', 'ದೀಡನಮಸ್ಕಾರ', 'ಉಚ್ಚಯ್ಯ' , 'ರಾಶಿಗಿಚಡಿ'. ಇವೆಲ್ಲ ಹನುಮಂತನ ಗುಡಿಯ ಆವರಣದಲ್ಲಿ ನಡೆದ ವಿಧಿಗಳು. ಬೇಡಿಕೊಂಡ ಜನ ದೀಡನಮಸ್ಕಾರ ಹಾಕುತ್ತಾರೆ. ಪಾಲಿಕಿ ಗುಡಿಯ ಸುತ್ತು ಐದು ಸಲ ಪ್ರದಕ್ಷಿಣೆ ಹಾಕುವಾಗ ಬೇಡಿಕೊಂಡವರು ೫, ೧೦ ಟೆಂಗಿನಕಾಯಿಗಳನ್ನು ನೆಲದ ಮೇಲೆ ಒಡೆಯುತ್ತಾರೆ. ಹೋಳುಗಳನ್ನು ಗತಿಗೇಡಿ ಜನ, ಹುಡುಗರು ಆಯ್ದುಕೊಳ್ಳುತ್ತಾರೆ. ಮಧ್ಯಾಹ್ನ ಸಾರ್ವಜನಿಕರಿಗೆ ಅನ್ನಸಂತರ್ಪಣೆ. ಅನ್ನಸಾರು ಊಟ, ಸಂಜೆ ೫ ಗಂಟೆಗೆ 'ಉಚ್ಚಯ್ಯ' ಚಕ್ಕಡಿಯಲ್ಲಿ ಉತ್ಸವಮೂರ್ತಿ ಮತ್ತು ಫೋಟೊ ಇಟ್ಟು ಸ್ವಾಮಿಗಳ ಮಠದ ಹತ್ತಿರ ಇರುವ ಪಾದಗಟ್ಟೆಯವರೆಗೆ ಜನ ಎಳೆದು ಹಿಂದೆ ತರುತ್ತಾರೆ. ಪುರವಂತರು ಬೇಡಿಕೊಂಡವರಿಗೆ ಶಸ್ತ್ರ ಚುಚ್ಚುತ್ತಾರೆ. ಕರಡಿ ಮಜಲು, ಬೆಂಡಬಾಜಿ ವಾದ್ಯ ಮೇಳವಿರುತ್ತದೆ. ಇದಾದನಂತರ "ರಾಶಿಗಿಚಡಿ", ಹನುಮಂತ ದೇವರ ಗುಡಿಯ ಅಂಗಳದ ದೀಪದ ಕಂಬದ ಎದುರು ಹಾಸುಗಲ್ಲಿನ ಮೇಲೆ ಊರ ಜನ ಜೋಳದ ನುಚ್ಚಿನ ಕಿಚಡಿ, ಹಾಲು ತುಪ್ಪ ತಂದು ಹಾಕುತ್ತಾರೆ. ಅದು ರಾಶಿಯಾಗುತ್ತದೆ. ಪೂಜೆಯ ನಂತರ ಅದನ್ನು ಔಡಲ ಎಲೆಯಲ್ಲಿ ನೆರೆದವರಿಗೆ ಹಂಚುತ್ತಾರೆ. ಜನ ಇದನ್ನು ತಿನ್ನುವುದಿಲ್ಲ, ತಮ್ಮ ಹೊಲಗಳಲ್ಲಿ ಹಾಕುತ್ತಾರೆ. ಇದರ ಮರುದಿನ ಬಸವಣ್ಣನ 'ಉಚ್ಚಯ್ಯ' ಜಾತ್ರೆಯಲ್ಲಿ ಆಟ, ನಾಟಕಗಳ ಮನರಂಜನಾ ಕಾರ್ಯಕ್ರಮವಿರುತ್ತವೆ.

ತಳವಗೇರಾ :

ಕುಷ್ಟಗಿಯಿಂದ ಹನುಮಸಾಗರಕ್ಕೆ ಹೋಗುವ ದಾರಿಯಲ್ಲಿ ಸುಮಾರು ೩,೦೦೦ ಜನಸಂಖ್ಯೆಯಿರುವ ತಳವಗೇರೆಯಲ್ಲಿ ಪ್ರತಿವರ್ಷ ಮಾರ್ಚ ತಿಂಗಳಲ್ಲಿ ಶರಣಬಸವೇಶ್ವರ ಜಾತ್ರೆ, ಪುರಾಣ ಮಂಗಲ ಮತ್ತು ಸಾಮೂಹಿಕ ವಿವಾಹಗಳಿರುತ್ತವೆ. ದಕ್ಷಿಣಾಭಿಮುಖವಾದ ಗುಡಿಯನ್ನು ೧೯೫೪ರಲ್ಲಿ ಕಟ್ಟಿಸಿದ್ದಾರೆ. ಗರ್ಭಗುಡಿಯಲ್ಲಿ ಗದ್ದುಗೆಯ ಮೇಲೆ ಗುಲಬರ್ಗಾ ಶರಣ ಬಸವೇಶ್ವರರ ಜೋಡಿ ಮುಖಗಳ ಶಿಲಾ ವಿಗ್ರಹಗಳಿವೆ. ಎರಡಕ್ಕೂ ರುಮಾಲಿವೆ. ಧಾರಾಪಾತ್ರೆ

ತೂಗುಬಿಟ್ಟಿದ್ದಾರೆ. ತಲೆಯ ಮೇಲೆ ಏಳುಹೆಡೆ ಹಾವಿನ ಸಿಂಬೆ, ಗರ್ಭಗುಡಿಗೆ ಗೋಪುರ ಕಳಸಗಳಿವೆ. ಶರಣ ಬಸವೇಶ್ವರರ ಮೂರ್ತಿ ಮತ್ತು ಗುಡಿ ಇಲ್ಲೇಕೆ ಸ್ಥಾಪನೆಗೊಂಡವು ಎಂದು ಕೇಳಿದರೆ ಹಿರಿಯರು ನಿರುತ್ತರರಾದರು, ಜಾತ್ರೆಯ ಕಾರ್ಯಕ್ರಮಗಳು : ಶರಣ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ. ಜಂಗಮ ವಟುಗಳಿಗೆ ರಿಯ್ಯಾಚಾರ (ದೀಕ್ಷೆ) ಮತ್ತು ಮಹಾಗಣಾರಾಧನೆ. ಮರುದಿನ ಉಚಿತ ಸಾಮೂಹಿಕ ವಿವಾಹ. ಸಂಜೆ ಮಹಾ ಉತ್ಸವ, ಹೊಸದಾಗಿ ರಥವನ್ನು ಮಾಡಿಸುತ್ತಿದ್ದಾರೆ. ಒಂದೂವರೆ ತಿಂಗಳವರೆಗೆ ಶರಣ ಬಸವೇಶ್ವರ ಪುರಾಣ ಪ್ರವಚನವಿಟ್ಟುಕೊಳ್ಳುತ್ತಾರೆ. ಅದಕ್ಕೂ ಮೊದಲು 'ಚೋರ ಬಸವೇಶ್ವರ ಪುರಾಣ' ಪ್ರವಚನವಿರುತ್ತಿತ್ತು. ಚಕ್ಕಡಿಯ ಮೇಲೆ ಉತ್ಸವಮೂರ್ತಿ ಇಟ್ಟು ಪಾದಗಟ್ಟೆಯವರೆಗೆ 'ಉಚ್ಚಯ್ಯ' ಎಳೆಯುತ್ತಾರೆ. ಈ ಕಾರ್ಯಕ್ರಮಕ್ಕೆ ಸುತ್ತಲ ಗ್ರಾಮಗಳ ಜನ ಸೇರುತ್ತಾರೆ. ಅಂಗಡಿಗಳು ವ್ಯಾಪಾರದಲ್ಲಿ ನಿರತವಾಗಿರುತ್ತವೆ.

ಜಾತ್ರೆಯಲ್ಲಿ ಅಕ್ಕಪಕ್ಕದ ಗ್ರಾಮಗಳ ವೀರಶೈವ ಸ್ವಾಮಿಗಳು ಹಾಜರಿರುತ್ತಾರೆ. ಈ ಪ್ರದೇಶದ ಹಲವಾರು ಗ್ರಾಮಗಳಲ್ಲಿ ಸಂಸ್ಥಾನಗಳಾಗಿರುವ 'ಹಿರೇಮಠ'ಗಳು, ಅಲ್ಲಿ ವಿರಕ್ತಸ್ವಾಮಿಗಳಿರುವುದು ಮಾಮೂಲು. ತಳವಗೇರಾದ ೧೯೯೯ರ ಜಾತ್ರೆ ತಳವಗೇರಾ ಮತ್ತು ಚಳಗೇರಾ ಅರಳೆಲೆ ಕಟ್ಟಿಮನಿ ಹಿರೇಮಠದ ವಿರುಪಾಕ್ಷ ಶಿವಾಚಾರ್ಯರು ಮತ್ತು ನಿಡಸೇಶಿ, ಕುಷ್ಟಗಿ, ಗೆಜ್ಜೆಬಾವಿಗಳ ಪಶ್ಚಕಂಥಿ ಹಿರೇಮಠದ ಶಾಂತಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನಡೆದಿದೆ. ಈ ಜಾತ್ರೆಯಲ್ಲೇ ಶಿಗ್ಗಾವಿ ತಾಲೂಕಿನ ಹಿರೇಮಣ ಕಟ್ಟಿಯ ವಿಶ್ವಾರಾಧ್ಯ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವವೂ ಜರುಗಿದೆ.

ಕುಂಬಳಾವತಿ ದ್ಯಾಮವ್ವ :

ಕುಷ್ಟಗಿಯಿಂದ ಹನುಮಸಾಗರ ಸುಮಾರು ೨೫ ಕಿ.ಮೀ. ಹನುಮಸಾಗರದಿಂದ ಕುಂಬಳಾವತಿ ೧೦ ಕಿ.ಮೀ. ಈ ಗ್ರಾಮದ ದ್ಯಾಮವ್ವನ ಜಾತ್ರೆ ತಾಲೂಕಿನ ಪ್ರಮುಖ ಜಾತ್ರೆಗಳಲ್ಲೊಂದು. ಮಾಹಿತಿ ಕೇಳಲು ಈ ಊರಿಗೆ ಹೋದರೆ ಜನ ವಿಷಯ ತಿಳಿಸಲು ಹಿಂದೇಟು ಹಾಕುವುದು, 'ಹೇಳುವುದಿಲ್ಲ' ಎನ್ನುವುದು ಕೇಳಿ ಅಚ್ಚರಿ. ಕಷ್ಟಪಟ್ಟು ಊರ ಹಿರಿಯರ ಮನವೊಲಿಸಿ ಪಡೆದ ಮಾಹಿತಿಯೂ ಅಪೂರ್ಣ. ಆದರೆ ಊರ ಹೊರಗಿನ ಗುಡಿಯಲ್ಲಿ ಪೂಜಿಸುತ್ತಿದ್ದ ಒಬ್ಬ ಹೆಂಗಸು ಮತ್ತು ಹುಡುಗರು ಜನ ಹೇಳಲು ಹೆದರುತ್ತಿದ್ದ ವಿಷಯಗಳನ್ನು ವಿವರಿಸಿದರು. ಪ್ರತ್ಯಕ್ಷ ನಿದರ್ಶನಗಳೂ ದೊರಕಿದವು.

ಈ ಊರಲ್ಲಿ ದ್ಯಾಮವ್ವನ ಎರಡು ಗುಡಿಗಳಿವೆ. ಒಂದು ಊರ ನಡುವೆ, ದಕ್ಷಿಣಾಭಿಮುಖವಾಗಿರುವ ಈ ಸಾದಾ ಗುಡಿಯಲ್ಲಿ ಕಟ್ಟೆಯ ಮೇಲೆ ಎರಡು ಚಪ್ಪಟೆಕಲ್ಲುಗಳೇ ದೈವಗಳು. ಗರ್ಭಗುಡಿಯಲ್ಲಿ ಸೇಬಿನಕಟ್ಟೆ ಎಂಬ ಊರಿನ ಹನುಮಪ್ಪನ ತೇರಿನ ಹಗ್ಗಗಳಿವೆ. ಅಂಗಳದಲ್ಲಿ ಬೇವಿನಮರ ಕಟ್ಟೆ ಇದೆ.

ಊರ ಹೊರಗೆ ಸುಮಾರು ಎರಡು ಕಿಲೋಮೀಟರು ದೂರದಲ್ಲಿ ಸಾಮಾನ್ಯಮಟ್ಟದ

ಎರಡು ಗುಡಿಗಳು. ಪೂರ್ವಾಭಿಮುಖವಾದ ಈ ಗುಡಿಗಳು ಪ್ರತ್ಯೇಕವಾಗಿವೆ. ನಡುವೆ ಹಾಸುಗಲ್ಲಿದೆ. ಅಂಗಳದಲ್ಲಿ ಮತ್ತು ಸುತ್ತಲೂ ಬೇವು, ಹುಣಿಸೆ ಮೊದಲಾದ ಮರಗಳು. ಒಂದು ಮಾಂಕಾಳಮ್ಮನ ಗುಡಿ, ಇನ್ನೊಂದು ದ್ಯಾಮವ್ವನದು. ಎರಡಕ್ಕೂ ಗರ್ಭಗುಡಿ ಮತ್ತು ಹೊರಗಿನ ಚಿಕ್ಕ ಕೋಣೆಗಳು ಮಾತ್ರ ಇದ್ದು ಮೂರ್ತಿಗಳು ತುಂಬ ಹಳೆಯವಾಗಿ ಕಂಡವು. ಮಾಂಕಾಳಮ್ಮನ ಮೂರ್ತಿ ಒಡೆದ ಶಿಲೆಯಾಗಿದ್ದು ಹಲವಾರು ಆಕೃತಿಗಳಿವೆ. ಜನ ಇದಕ್ಕೆ ಒಂದು ಕತೆ ಹೇಳಿದರು. ಮೊದಲು ಇಲ್ಲಿ ನರಬಲಿ ಇತ್ತು. ಒಂದುಸಲ ಬಡಿಗೇರವನಪಾಳಿ ಬಂತು. ಆತ ದೇವಿಯ ಮೇಲೆ ಸಿಟ್ಟಾಗಿ, ಬಯ್ಯುತ್ತ ಉಳಿಯಿಂದ ತಲೆಗೆ ಹೊಡೆದ, ಮೂರು ತುಂಡಾದವು. ದೇವಿ ಹೆದರಿ "ಮನಿಸೇರ ಹಾರಾ ಬೇಡ, ಪ್ರಾಣಿಬಲಿ ಸಾಕು" ಎಂದಳಂತೆ. ಆಗಿನಿಂದ ಮಾನವಬಲಿ ನಿಂತಿತಂತೆ. ಈ ಗುಡಿಗಳಿರುವ ಹೆಬ್ಬಂಡೆ ಗುಂಡು, ಕುರುಚಲು ಪ್ರದೇಶ, ವಾಸ್ತು ರಚನೆ ಇವೆಲ್ಲ ತಾಂತ್ರಿಕ ಪಂಥದವರ ಒಂದು ನೆಲೆಯಂತೆ ಕಾಣುವುದರಿಂದ; ಮತ್ತು ಈಗಲೂ ಜಾತ್ರೆಯಲ್ಲಿ ಸಹಸ್ರಾರು ಕುರಿ ಮತ್ತು ಕೋಣದ ಬಲಿ ಇರುವುದರಿಂದ ಜನರು ಹೇಳುವ ಐತಿಹ್ಯ ಸತ್ಯವಿರುವಂತೆ ತೋರಿತು. ದ್ಯಾಮವ್ವನೆಂದು ಹೇಳುವ ಸ್ತ್ರೀ ಶಿಲಾ ವಿಗ್ರಹ ಮೊಳಕಾಲೂರಿ ಕುಳಿತಿದೆ, ಅರೆನಗ್ನವಿದೆ, ನಾಲ್ಕು ಕೈಗಳಿವೆ. ನಾವು ಹೋದಾಗ ಕುರುಬರ ಪೂಜಾರಿ ವೃದ್ಧೆ ಹೊನ್ನವರೆ (ತಂಗಟೆ) ತೊಪ್ಪಲು ಹೂಗಳಿಂದ ಪೂಜಿಸುತ್ತಿದ್ದಳು. ವಿಗ್ರಹದ ಕೈಯ್ಯಲ್ಲಿ ಪಾನಪಾತ್ರೆ, ಶಂಖ, ಆಯುಧಗಳಿವೆ. ಈ ಗುಡಿಗೆ ಗೋಪುರ ಕಳಸಗಳಿಲ್ಲ. ಮಾಂಕಾಳಮ್ಮನ ಗುಡಿಗೆ ಸಾಮಾನ್ಯಮಟ್ಟದ ಗೋಪುರ ಕಳಸಗಳಿವೆ. ದ್ಯಾಮವ್ವನ ಗುಡಿಯ ಮುಂದೆ ಮಾತಂಗಿ ಗುಡಿ. ನಾಲ್ಕು ಕಲ್ಲುಗಳ ಸಾದಾ ಗೂಡು, ವಿಶೇಷವೆಂದರೆ ಇದರ ಮೇಲ್ಛಾವಣಿಯಲ್ಲಿ ಬಲಿಯಾದ ಕೋಣಗಳ ತಲೆಯ ಅಸ್ಥಿಪಂಜರಗಳಿದ್ದುದು. ಮಾದಿಗ ಕುಲದ ಪೂಜಾರಿಗಳು ಪ್ರತಿ ಶುಕ್ರವಾರ, ಮಂಗಳವಾರ ಮಾತಂಗಿ ಪೂಜೆ ಮಾಡುತ್ತಾರೆ. ಗುಡಿ ಎದುರು ಅಂಗಳದಲ್ಲಿ ಪಾದಗಟ್ಟೆ, ಬಾವಿ, ಹುಲಿಗೆಮ್ಮನ ಚಿಕ್ಕಗೂಡು ನಾಗಪ್ಪನಕಲ್ಲು, ನಿಂತಪುರುಷ ವಿಗ್ರಹದ ಕಲ್ಲುಗಳಿವೆ. ಜಾತ್ರೆಯಲ್ಲಿ ಈ ಗುಡಿಯ ಸುತ್ತಲ ನಾಕಾರೆಕರೆ ಹೊಲದಲ್ಲಿ ದೂರದ ಊರುಗಳಿಂದ ಬಂದ ಜನ ಬೀಡಾಗುತ್ತಾರೆ.

ಪೂಜಾರಿ ಮತ್ತು ಊರ ಹಿರಿಯರು ಕೊಟ್ಟ ಜಾತ್ರೆಯ ಮಾಹಿತಿ :

ಮೂರು ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ. ೮ ದಿನಗಳ ಜಾತ್ರೆಯ ಈ ಅವಧಿಯಲ್ಲಿ ಊರಲ್ಲಿ ಯಾರೂ ರೊಟ್ಟಿ ಸುಡುವಂತಿಲ್ಲ. ಮೊದಲದಿನ "ಅಂಕಿ ಹಾಕುವುದು" ಊರಲ್ಲಿರುವ ಗುಡಿಯಲ್ಲಿ ಪೂಜಾರಿ ಜಾತ್ರೆಯ ಪ್ರಾರಂಭದ ಗುರುತಾಗಿ ನಂದಾದೀವಿಗೆ ಹಚ್ಚುತ್ತಾನೆ. ಡೊಳ್ಳು ಹಲಗೆ ಬಾಜಾ ಮೊದಲಾದ ವಾದ್ಯಗಳ ಮಜಲಿರುತ್ತದೆ. ಮರುದಿನ ಮೂರು ಕಿಲೋಮೀಟರು ದೂರದಲ್ಲಿರುವ ಬೆನಕನಹಾಳಿನ ದೈವದವರು ಮಾಲೆ ತರುತ್ತಾರೆ. ಏಕೆಂದರೆ ಅದು ದ್ಯಾಮವ್ವನ ತವರುಮನೆ. ಇದು ಗಂಡನಮನೆ. ಅವರು ಮೆರವಣಿಗೆಯಲ್ಲಿ ಮಜಲಿನೊಂದಿಗೆ ಬರುತ್ತಾರೆ. ಊರ ಹೊರಗಿನ ಗುಡಿಯ ಮುಂದೆ 'ರಂಗ' ಹೊಯ್ಯುತ್ತಾರೆ. ಬಣ್ಣಬಣ್ಣದ ಹಿಟ್ಟಿನಿಂದ ರಂಗೋಲಿಯಂತೆ ಒಂದೂವರೆ ಅಡಿ, ಎರಡಡಿ ಅಗಲದ 'ರಂಗ' ಅದು. ಬೇಡಿಕೊಂಡವರು

ದೀಡ ನಮಸ್ಕಾರ ಹಾಕುತ್ತಾರೆ. ಮರುದಿನ ಗುಡಿಯ ಸುತ್ತ ಬೇಕಾದವರು ಕುರಿಬಲಿ ಕೊಡುತ್ತಾರೆ. ೧೫೦೦ ಕ್ಕಿಂತ ಹೆಚ್ಚು ಬೇಟೆ ಬೀಳುತ್ತವೆ. "ಆದರೆ ದೇವಿಗೆ ಮಾಂಸದಡೆ ಇಲ್ಲ" ಹೋಳಿಗಿ ಅನ್ನಸಾರು ಮಾತ್ರ ಎಡೆ. ಹದಿನೈದು ಇಪ್ಪತ್ತು ಸಾವಿರ ಜನ ಸೇರುವ ಈ ಜಾತ್ರೆಗೆ ದೂರದ ಗಂಗಾವತಿ, ಕುಷ್ಠಗಿ, ಮೊದಲಾದ ನಗರಗಳಿಂದಲೂ ಬಂದಿರುತ್ತಾರೆ. ಊರ ದೈವದವರೆಲ್ಲ ಸೇರಿ ಪಟ್ಟಿಹಾಕಿ ಜಾತ್ರೆ ಮಾಡುತ್ತಾರೆ.

ಊರ ಹೊರಗಿನ ದ್ಯಾಮವ್ವನ ಗುಡಿಯ ಪಕ್ಕದಲ್ಲಿರುವುದು ಅವಳ ಅಕ್ಕ 'ಮಕಾಳಮ್ಮ'. ಈ ಅಮ್ಮನಿಗೆ ಬೇಡಿಕೊಂಡು ಬೇಟೆ ಮಾಡಿದವರು ಪಿ.ಎಸ್.ಐ., ಡಿ.ಸಿ. ಹೀಗೆಲ್ಲಾ ಆಗಿದ್ದಾರೆ.

ಮಂಗಳವಾರ, ಶುಕ್ರವಾರ ಮಾತ್ರ ಪೂಜೆ. ಅಮವಾಸ್ಯೆಯಂದು ಅಮ್ಮನ ಹೇಳಿಕೆಗೆ ಬಹಳ ಜನ ಸೇರುತ್ತಾರೆ. ಜಾತ್ರೆಯಲ್ಲಿ ಎಲ್ಲ ವಿಧದ ಅಂಗಡಿಗಳು ಸೇರುತ್ತವೆ ಊರವರು ಸಾಮಾಜಿಕ, ಪೌರಾಣಿಕ ನಾಟಕಗಳನ್ನಾಡುತ್ತಾರೆ.

ಊರ ಹೊರಗಿನ ಗುಡಿಯಲ್ಲಿ ಪೂಜಲು ಬಂದಿದ್ದ ಮಹಿಳೆ ಮತ್ತು ಹುಡುಗರು ನೀಡಿದ ಮಾಹಿತಿ :

ಜಾತ್ರೆಯ ಒಂದು ದಿನ ಬೆಳಿಗ್ಗೆ ೫ ಗಂಟೆ ಸುಮಾರು ಗುಡಿಯ ಮುಂದೆ ಕೋಣನ ಬಲಿ ಮಾಡುತ್ತಾರೆ. ಊರ ಪ್ರಮುಖರೆಲ್ಲ ಅದನ್ನು ಹಿಡಿದಿರುತ್ತಾರೆ. ಬಲಿಯಾಗುವ ಮುನ್ನ ಬ್ರಾಹ್ಮಣರು ಅದನ್ನು ಮುಟ್ಟುತ್ತಾರೆ. ಏಕೆಂದರೆ ದೇವಿ ಅವರ ಮಗಳು. ಮಾದಿಗ ಕುಲದವರು ಕೋಣವನ್ನು ಕಡಿದು ಗುಡಿಯ ಹಿಂದೆ ಇರುವ ಹುಣಿಶೆಯ ಮರದಡಿ ಹಾಕುತ್ತಾರೆ. ೫ ದಿನಗಳವರೆಗೆ ಅದಕ್ಕೆ ಇರುವಿ ಕೂಡ ಹತ್ತಿರುವುದಿಲ್ಲ. ನಾಯಿ ನರಿ ಮುಟ್ಟುವುದಿಲ್ಲ. ನಂತರ ಅದಕ್ಕೆ ಚರ್ಮ ಸುಲಿದು ಮುಂದೆ ಬಿಡಲಾಗುವ ಕೋಣಕ್ಕೆ ಮಿಣಿ ಮಾಡುತ್ತಾರೆ. ಅದರ ಮಾಂಸವನ್ನು ಯಾರೂ ಬಳಸುವುದಿಲ್ಲ. ಜೋಳದ ನುಚ್ಚಿನಲ್ಲಿ ಕೋಣನ ಕರಸು ರಕ್ತ ಬೆರಸಿ ಗುಡಿಯ ಸುತ್ತ ಚರಗ ಚಲ್ಲುತ್ತಾರೆ. ಐದನೆಯ ದಿನ ರಂಡೆಯಾಗಿದ್ದ ಅಮ್ಮನಿಗೆ ಉಡಿ ತುಂಬಿ ಬಳೆ ಇಡಿಸಿ ಪೂಜುತ್ತಾರೆ. ಬೇಡಿಕೊಂಡ ಭಕ್ತರು ಮುಂದಿನ ಜಾತ್ರೆಗೆಂದು ಕೋಣವನ್ನು ಬಿಡುತ್ತಾರೆ.

ಈ ಊರಲ್ಲಿ ಕುರುಬರು ಮತ್ತು ಬೇಡರ ಸಂಖ್ಯೆ ಹೆಚ್ಚಿವೆ. ಮಳೆ ನೀರಾವರಿ ಆಶ್ರಯದ ಹಿಂದುಳಿದ ಪ್ರದೇಶದ ಎಲ್ಲ ಕಗ್ಗಾಡು ಲಕ್ಷಣಗಳು ಈ ಗ್ರಾಮಕ್ಕಿವೆ.

ಕುಷ್ಠಗಿ ತಾಲೂಕಿನ ದೋಣ್ಣೆಗುಡ್ಡದ ದುರಗಮ್ಮನ ಜಾತ್ರೆಯೂ ಜೋರಾಗಿ ನಡೆಯುತ್ತದೆ. ಮೂರು ವರ್ಷಕ್ಕೊಮ್ಮೆ ನಡೆವ ಜಾತ್ರೆಯಲ್ಲಿ ಪ್ರಾಣಿಬಲಿ ಇದೆ. ಶಿವರಾತ್ರಿ ಅಮವಾಸ್ಯೆಯ ಸುತ್ತ ಜಾತ್ರೆ ನಡೆಯುತ್ತದೆ. ಇದೇ ರೀತಿ ಒಕ್ಕಂದುರ್ಗ, ನವಲಳ್ಳಿ, ಜೂಲಕಟ್ಟಿಗಳಲ್ಲಿ ದುರಗಮ್ಮನ ಜಾತ್ರೆಗಳಾಗುತ್ತವೆ. (ವಿವರಗಳನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲ.)

ಚಂದಾಲಿಂಗೇಶ್ವರ ಜಾತ್ರೆ :

ಕುಷ್ಟಗಿ ತಾಲೂಕಿನ ದೊಡ್ಡಗ್ರಾಮ ಹನುಮಸಾಗರ. ಗುಡ್ಡಗಳ ಸಾಲಿನ ತಪ್ಪಲಲ್ಲಿ ಈ ಊರಿದೆ. ಇಲ್ಲಿಂದ ೩-೪ ಕಿಲೋಮೀಟರು ಕುರುಚಲು ಕಲ್ಲುಗುಡ್ಡದಲ್ಲಿ ೧೦-೧೨ ಎಕರೆ ಪ್ರದೇಶವನ್ನು ಆವರಿಸಿರುವ ಹಾಳಾದ ಕೋಟೆಯ ಆವಾರದಲ್ಲಿ ಹಿಂದೊಮ್ಮೆ ರಾಜಧಾನಿ ಇದ್ದಿರಬಹುದಾದ ಲಕ್ಷಣಗಳಿವೆ. ಸರಿಯಾದ ಸಂಶೋಧನೆಯಾದರೆ ಈ ಪ್ರದೇಶದ ಇತಿಹಾಸ ಗೊತ್ತಾಗಬಹುದು. ಚಂದಾಲಿಂಗೇಶ್ವರ ಗುಡಿ ಮತ್ತು ಇದರ ಸುತ್ತಮುತ್ತಲ ಕೆಲವು ಸ್ಮಾರಕಗಳು ಇದ್ದುದರಲ್ಲೇ ಸುಸ್ಥಿತಿಯಲ್ಲಿವೆ. ಗರ್ಭಗುಡಿ, ಸುಕನಾಶಿ, ರಂಗಮಂಟಪಗಳಿರುವ ಚಂದಾಲಿಂಗೇಶ್ವರ ಗುಡಿಯಲ್ಲಿ ಪಾಣಿಪೀಠದ ಮೇಲೆ ಲಿಂಗ, ಪಂಚಲೋಹದ ಮುಖವಾಡವಿದೆ. ತಲೆ ಮೇಲೆ ಏಳುಹೆಡೆ ಸರ್ಪ. ಹಿಂದೆ ಕಳಸವಿಟ್ಟಿದ್ದಾರೆ. ರಂಗಮಂಟಪದ ಹೊರಭಾಗದಲ್ಲಿರುವ ದ್ವಾರಪಾಲಕ ಶಿಲಾವಿಗ್ರಹಗಳು ಅಸ್ತ್ರಧಾರಿಗಳು. ಪೂಜಾರಿಯ ಮಗ ಅವು "ಯಮದೂತರು" ಎಂದ. ೬೦ ಕಂಬಗಳ ಅಗಸಿ, ೨೨ ಗೂಡುಗುಡಿ, ಬಿಸಿಲು ಬೀಳದ ಬಾವಿ, ಹೊಂಡ, ಗಂಗಿಮಾಳಮ್ಮನ ಗುಡಿ, "ಪಂಚಪೀಠದವರ" ಐದು ಲಿಂಗಗಳ ಐದು ಗುಡಿ, ಸಂಗಮೇಶ್ವರ, ವೀರಭದ್ರ, ದ್ಯಾಮವ್ವ, ಭರಮಪ್ಪ, ಹನುಮಂತ, ಸಪ್ತಮಾತೃಕೆಯರು, ಹೀಗೆ ಅನೇಕ ದೈವಗಳ ಗುಡಿಗಳು ಚಂದಾಲಿಂಗೇಶ್ವರ ಗುಡಿಯ ಸುತ್ತಮುತ್ತಲಲ್ಲಿವೆ. ಹೊಂಡದ ಆಚೆ ಈಚೆ ಸುಖದ ಕಟ್ಟೆ, ಬರಗಾಲ ಕಟ್ಟೆಗಳಿವೆ. ಚಂದಾಲಿಂಗಪ್ಪನ ತಾಯಿ ಮದ್ದಮ್ಮ, ನಂದಿ ವಿಗ್ರಹ, ಈಶ್ವರ ಗುಡಿ ಹೀಗೆ ಈ ಪಟ್ಟಿ ಬೆಳೆಯುತ್ತದೆ. ಗಂಗಿ ಮಾಳಮ್ಮನ ಗುಡಿಗೆ ಗೋಪುರ ಶಿಖರಗಳಿವೆ. ಕರಿಯ ಶಿಲಾ ವಿಗ್ರಹಕ್ಕೆ ಸೀರೆಯುಡಿಸಿದ್ದಾರೆ. ಒಂದೆಡೆ ಆಶೀರ್ವಾದ ಭಂಗಿಯ ಲಾಕುಳಯೋಗಿ, ಪಕ್ಕಕ್ಕೆ ಕೈ ಮುಗಿದು ನಿಂತ ಸ್ತ್ರೀ ವಿಗ್ರಹಗಳ ಕಲ್ಲಿದೆ. ಚಂದಾಲಿಂಗೇಶ್ವರನಿಗೆ ಪ್ರತಿದಿನ ಜಂಗಮ ಕುಲದ (ಐನೇರು) ಪೂಜಾರಿ ಮೂರು ಹೊತ್ತು ಪೂಜಿಸುತ್ತಾನೆ. ವರ್ಷದಲ್ಲಿ ಎರಡು ಸಲ ಜಾತ್ರೆಯಾಗುತ್ತದೆ.

ಮೊದಲ ಜಾತ್ರೆ :

ಆಗಿಹುಣ್ಣಿವಿಯಾದ ಮೂರು ದಿನದಿಂದ ಐದು ದಿನ ನಡೆಯುವ ಜಾತ್ರೆಗೆ ೨೦-೩೦ ಸಾವಿರ ಜನ ಸೇರುತ್ತಾರೆ. ಸಾಕಷ್ಟು ಅಂಗಡಿಗಳಿರುತ್ತವೆ. ಗುಡ್ಡದ ಸುತ್ತಮುತ್ತಲ ಹಲವು ಗ್ರಾಮಗಳಿಂದ ಜಾತ್ರೆಯ ಸಾಮಾನು ಬರುತ್ತವೆ. ಮನ್ನೇರಹಾಳದಿಂದ ಖಡ್ಗ, ಗುಡೂರು ಐಹೊಳೆಯಿಂದ ಕೊಂತ (ತ್ರಿಶೂಲ) ಬರುತ್ತವೆ. ಗುಡೂರಿಂದ ನುಡಿ ಹೇಳುವ ಮರುಳಜ್ಜ, ಕಬ್ಬರಗಿಯಿಂದ ಸರಪಣಿ ಹರಿಯುವವರು, ಯಲಬುರ್ಗಿಯಿಂದ ಕೊಂತ ಹಿಡಿಯುವವರು ಬರುತ್ತಾರೆ. ಇವರೆಲ್ಲ ಹಾಲಮತದ (ಕುರುಬರು)ವರು. ಇವರು ಬಂದನಂತರ ದೇವರಿಗೆ ಅಭಿಷೇಕ.

ಮರುದಿನ ಸಾಯಂಕಾಲ "ನುಡಿ". ದಮ್ಮೂರಿನ ಹಾಲುಮತದ ಮಳ್ಳಯ್ಯಜ್ಜ (ಮರುಳಯ್ಯ), ಕಂಬಳಿ ಕಪನಿ (ಶಿಲೇವು) ಧರಿಸಿರುತ್ತಾನೆ. ಗುಡಿಯಿಂದ ಸುಮಾರು ಕಿಲೋಮೀಟರು ದೂರದಲ್ಲಿರುವ ಬಸವಣ್ಣನ ಹತ್ತಿರ ಮೆರವಣಿಗೆ ಬರುತ್ತದೆ. ಪಾಲಿಕಿ,

ನಂದಿಕೋಲು, ಕೊಂತಗಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡುತ್ತಾರೆ. ಮರುಳಯ್ಯ ಬಸವಣ್ಣನಿಗೆ ಕಿವಿಹಚ್ಚಿ ಕೇಳುತ್ತಾನೆ. ಸಮೀಪದ ಗಿಡ ಹತ್ತಿ ನುಡಿ ಹೇಳುತ್ತಾನೆ. "ಮುಂಗಾರಿ ಹಿಂಗಾರಿ ಪರಾಕ್" ಎಂದು ಈ ವರ್ಷದ ನುಡಿ. ಡೊಳ್ಳು, ಹಲಗೆ ಮೇಳಗಳಿರುತ್ತವೆ. ನಂತರದ ಕಾರ್ಯಕ್ರಮವೂ ತುಂಬ ವಿಶಿಷ್ಟವಾದುದು. ಇದಕ್ಕೆ "ಬರಗಾಲ ಕೊಂತ, ಸುಕಾಲ ಕೊಂತ ಮಿಂಚತಾವು" ಎನ್ನುತ್ತಾರೆ. ಕೊಂತವನ್ನು (ತ್ರಿಶೂಲ) ಹಿಡಿದುಕೊಂಡು ಗುಡಿಯ ಎದುರಿಗೆ ಸ್ವಲ್ಪ ದೂರದಲ್ಲಿರುವ ಹೊಂಡದ ಹತ್ತಿರದ ಬರಗಾಲ ಕಟ್ಟೆ ಮತ್ತು ಸುಕಾಲ ಕಟ್ಟೆಗಳಿಗೆ ಇಬ್ಬರು ಹಾಲುಮತದವರು ಓಡಿ ಹೋಗುತ್ತಾರೆ. ಇವರ ಮುಂದೆ ದಮ್ಮೂರಿನ ಬಾಬುದಾರರು ಹಿಡಿದ ಎರಡು ಪಂಜುಗಳಿರುತ್ತವೆ. ಯಾರು ಮೊದಲು ಯಾವ ಕಟ್ಟೆ ಮುಟ್ಟುತ್ತಾರೆ, ಅದರ ಆಧಾರದ ಮೇಲೆ ಆ ವರ್ಷ ಸುಖದ ಕಾಲವಾಗುತ್ತದೆ, ಅಥವಾ ಬರಗಾಲವಾಗುತ್ತದೆ ಎಂದು ಜನ ತಿಳಿಯುತ್ತಾರೆ.

ನಂತರ ಒಗ್ಗಯ್ಯನವರು ಕಲ್ಲಿಗೆ ದೊಡ್ಡ ಸರಪಳಿ ಹಾಕಿ ಕೊರಳಿಗೆ ಕಟ್ಟಿಕೊಂಡು ಹರಿಯುವ ವಿಧಿಯಾಚರಣೆ. ಬೆಳಿಗ್ಗೆ ಚಂದಾಲಿಂಗಪ್ಪನ ಪತ್ನಿ ಗಂಗಿಮಾಳಮ್ಮನ ಉಡಿತುಂಬುವ ಕಾರ್ಯಕ್ರಮ. ಗುಡಿಗೆ ಟ್ರಸ್ಟ್ ಕಮಿಟಿ ಇದ್ದು ಅವರೇ ಈ ಕಾರ್ಯ ನೆರವೇರಿಸುತ್ತಾರೆ. ಸೀರೆ, ಕೊಬ್ಬರಿ ಬಟ್ಟಲ, ಉತ್ತತ್ತಿ, ಬಾಳೆಹಣ್ಣು ಮೊದಲಾದ ಮಂಗಲದ್ರವ್ಯಗಳಿಂದ ಉಡಿ ತುಂಬುತ್ತಾರೆ. ದೇವರಿಗೆ ಅಭಿಷೇಕ ಮಾಡಿಸಿ ಕಾಯಿ ಕರ್ಪೂರ ಮಾಡುತ್ತಾರೆ. ಬಾಬುದಾರರಿಗೆ ಮಾಮೂಲು ಹಂಚುತ್ತಾರೆ. ಮಳ್ಳಪ್ಪಜ್ಜನಿಗೆ ಮತ್ತು ಇಬ್ಬರು ವಗ್ಗಯ್ಯಗಳಿಗೆ ಅಕ್ಕಿ, ಬೆಲ್ಲ, ಹಿಟ್ಟು ಮೊದಲಾದ 'ಸೀದಾ' ಕೊಡುತ್ತಾರೆ.

ಇದೇ ವಿಧದ ಎರಡನೆಯ ಜಾತ್ರೆ ದಸರಾದಲ್ಲಿ. ಒಂದೇ ವ್ಯತ್ಯಾಸವೆಂದರೆ ಚಂದಾಲಿಂಗೇಶ್ವರ ಮತ್ತು ಗಂಗಿಮಾಳಮ್ಮನ ಲಗ್ನ. ಚಂದಾಲಿಂಗೇಶ್ವರ ಗುಡಿಯ ಅಂಗಳದಲ್ಲಿ ಇರುವ ಎದುರು ಬಸವಣ್ಣನ ಹತ್ತಿರ ಜನ ಸೇರಿ ಲಗ್ನ ಮಾಡುತ್ತಾರೆ. ಬೀಳಿಗಿ ಮತ್ತು ಗುಡೂರವರು ಹೆಣ್ಣಿನ ಕಡೆ, ಗಂಡಿನ ಕಡೆ ಆಗಿ ಲಗ್ನದಲ್ಲಿ ಮಾಡುವ ಎಲ್ಲ ವಿಧಿಯಾಚರಣೆ ಮಾಡುತ್ತಾರೆ. ಈ ಜಾತ್ರೆಯಲ್ಲೂ "ನುಡಿ ಆಗ್ತದೆ,", "ಸರಪಳಿ ಹರೀತದೆ", "ಕೊಂತ ಮಿಂಚತದೆ". ಒಗ್ಗಯ್ಯಗಳು ಉಕ್ಕಿನ ಗುಂಡು ಬಡಿದುಕೊಳ್ಳುತ್ತಾರೆ.

ಕಬ್ಬರಗಿ ಮಾಸ್ತೆಮ್ಮನ ಜಾತ್ರೆ :

ಹನುಮಸಾಗರದಿಂದ ಗುಡ್ಡಸುತ್ತಿ ೮-೯ ಕಿಲೋಮೀಟರು ಬಂದರೆ ಕಬ್ಬರಗಿ ಎಂಬ ಗ್ರಾಮ. ಊರ ಹೊರಗೆ ಅರ್ಧ ಕಿಲೋಮೀಟರು ಹೊಲಗಳ ಮಧ್ಯೆ ಮಾಸ್ತೆಮ್ಮನ ಗುಡಿ. ಪೂರ್ವಾಭಿಮುಖವಾಗಿರುವ ಗುಡಿಯಲ್ಲಿ ನಿಂತ ಕರಿಯ ಶಿಲಾವಿಗ್ರಹ. ಹಣೆಗೆ ('ತಲೆತೋಪು') ಬೆಳ್ಳಿಪಟ್ಟಿ, ಕಣ್ಣಿಗೆ ಕಣಬಟ್ಟು, ಕೊರಳಲ್ಲಿ ಸರ, ನಡುಪಟ್ಟಿ, ಕೈಗೆ ಬಳೆಗಳಿವೆ. ಸೀರೆಯುಡಿಸಿದ್ದಾರೆ. ಪ್ರತಿ ಶುಕ್ರವಾರ ತುಪ್ಪ, ಹಾಲು, ಮೊಸರು, ಬಿಸಿನೀರಿಂದ ತೊಳೆದು ಕುಂಕುಮ ಭಂಡಾರ ಹಚ್ಚಿ ಸೀರೆಯುಡಿಸಿ ಪೂಜುತ್ತಾರೆ. ಗರ್ಭಗುಡಿಯ ಮೂಲೆಯಲ್ಲಿ

ನವಿಲುಗರಿಗಳ ಸಿವುಡು. ಗರ್ಭಗುಡಿಯ ಬಾಗಿಲ ಚೌಕಟ್ಟಿಗೆ "ಮಹಾ ಶಕ್ತಿದೇವಿ" ಎಂದು ಬರೆದಿದ್ದಾರೆ. ಗರ್ಭಗುಡಿಯ ಎಡಭಾಗದ ಕೋಣೆಯಲ್ಲಿ ಕುದುರೆಯ ಮೇಲೆ ಕೂತ ವ್ಯಕ್ತಿಯ ಶಿಲೆಯ ಉಬ್ಬುಶಿಲ್ಪ. ಕೈಯ್ಯಲ್ಲಿ ಎತ್ತಿಹಿಡಿದ ಭರ್ಚಿ. ಈ ಕೋಣೆಯಿಂದ ಅಂಗಳದ ವರೆಗೆ ಸುಮಾರು ೯೦' ಉದ್ದದ ಎರಡು ಕಂಬಗಳು. ಅಂಗಳದಲ್ಲಿ ಅವುಗಳಿಗೆ ಕಲ್ಲುಕಂಬಗಳ ಆಸರೆ. ಈ ಶಿಲಾವಿಗ್ರಹಕ್ಕೆ ಸ್ಥಳೀಯರು ಪರಶುರಾಮ ಎನ್ನುತ್ತಾರೆ. ಹಾಗಾಗಿ ಮಾಸ್ತೆಮ್ಮ ರೇಣುಕೆಯ ಅವತಾರವೆಂದು ಅವರ ಕಲ್ಪನೆ. ಪರಶುರಾಮನ ಗುಡಿಯಲ್ಲಿ ಚಿಗರೆಯ ಮುಖ ಎಲೆಚಟ್ಟುಗಳಿವೆ. ಬಲಗಡೆಯ ಕೋಣೆಯಲ್ಲಿ ದೇವಿಯ ಸ್ನಾನಕ್ಕೆ ನೀರು ಕಾಯಿಸುವ ಒಲೆ, ಹಂಡೆಗಳಿವೆ. ನವರಂಗದಲ್ಲಿ ಆರು ಅಂಕಣ. ಮುಖ ಮಂಟಪದ ಗೋಡೆಗೆ ವೀರಭದ್ರನ ಮೂರ್ತಿ ಕೆತ್ತಿದ್ದಾರೆ. ಪಕ್ಕಕ್ಕೆ ಸುರುಳಿಗೊಂಡ ಹಾಲಿನ ಶಿಲ್ಪ, ಪಕ್ಕದ ಗೋಡೆಯ ಗೂಡಿನಲ್ಲಿ ಭರಮದೇವರ ಕಲ್ಲು. ಮುಖ ಮಂಟಪದ ಮೇಲ್ಛಾವಣಿಯಲ್ಲಿ ತೊಟ್ಟಿಲಾಕಾರದ ಬಣ್ಣದ ಕಾಗದ, ಬೇಗಡೆ, ಬಿದಿರಿನಿಂದ ಮಾಡಿದ "ಮಾಲಿ" ೧೫-೨೦ರಷ್ಟು. "ನನಗ ಬಂದ ಕಂಟಮಾಲಿ ನಿನಗ ಕಟ್ಟತೀವಿ" ಎಂದು ಬೇಡಿಕೊಂಡವರು ಇವನ್ನು ಕಟ್ಟುತ್ತಾರೆ. ನಗಾರಿ ತೂಗುಬಿಟ್ಟಿದ್ದಾರೆ. ನಾವು ಹೋದಾಗ ಈ ಭಾಗದ ಹೊಲಗಳ ರೈತರು ಶೇಂಗಾಚೀಲ ಒಟ್ಟಿಕೊಂಡು ಕಾಯುತ್ತಿದ್ದರು. ಗುಡಿ ಎದುರು ಅಂಗಳದಲ್ಲಿ ದೀಪದ ಕಂಬ, ಹೊಂಡ. ಗುಡಿಗೆ ಗೋಪುರ ಕಳಸಗಳಿವೆ. ಕಂಪೌಂಡ್ ಹೊರಗೆ ಮತ್ತು ಒಳಗೆ ನಂದಿ ವಿಗ್ರಹದ ಮಂಟಪಗಳು. ಅಂಗಳದಾಚೆ 'ಚಂದ್ರಪಡಶಾಲೆ' ಎಂದು ಕರೆಯಲ್ಪಡುವ ಮಂಟಪ. ದೀಪದ ಕಂಬದ ಕಟ್ಟೆಯ ಮೇಲೆ ಎರಡು ನಂದಿ ವಿಗ್ರಹಗಳು, ಅವುಗಳ ಕೆಳಗೆ ಮೂವರು ಕೂತಿರುವ ಉಬ್ಬುಶಿಲ್ಪ, ಮಧ್ಯದಲ್ಲಿ ಪುರುಷ, ಎಡಬಲ ಸ್ತ್ರೀಯರು ಕೈಮುಗಿದಿದ್ದಾರೆ. ಇಲ್ಲಿಂದ ಸ್ವಲ್ಪದೂರದ ಹೊಲದಲ್ಲಿ ಹನುಮಂತನ ಗುಡಿ ಇದೆ. ಗುಡಿಯ ಹಿಂದೆ ಅನತಿ ದೂರದಲ್ಲಿ ಕಪಿಲಮುನಿ ಗುಡ್ಡದ ಸಾಲು, ಆವಾರದಲ್ಲಿ ಬೇಟು ಮೊದಲಾದ ಹಲವು ಗಿಡಗಳು.

ಜಾತ್ರೆ :

ಪ್ರತಿ ಮೂರು ವರ್ಷಕ್ಕೊಮ್ಮೆ ಏಪ್ರೀಲ ತಿಂಗಳಲ್ಲಿ (ದವನದ ಹುಣ್ಣಿವೆಯಾದ ನಂತರ ಬರುವ ಶುಕ್ರವಾರ) ಜಾತ್ರೆ ಪ್ರಾರಂಭ. ಧೋತರ ಮಾತ್ರ ಉಟ್ಟ ಪೂಜಾರಿಗಳು ರಾತ್ರಿ ಹಾಲುತುಪ್ಪ ಬೆರಸಿ ಕಬ್ಬರಗಿ ಸೀಮೆಯ ಸುತ್ತ ಚಲ್ಲುತ್ತ ಬರುತ್ತಾಳೆ. ಅವರ ಜತೆ ಡೊಳ್ಳಿನ ಮೇಳವಿರುತ್ತದೆ. ಇಡೀ ರಾತ್ರಿ ಜಾಗರಣೆ ಮಾಡಿ ಬೆಳಿಗ್ಗೆ ದೇವಿಗೆ ಸ್ನಾನ ಮಾಡಿಸುವುದು. ಈ ಸಂದರ್ಭದಲ್ಲಿ ಪೂಜಾರಿ, ದೈವದವರು, ಬಾಬುದಾರರು, ವಾದ್ಯ ಮೇಳದವರು ಹಾಜರಿರಬೇಕು. ಪೂಜೆಯಾದ ನಂತರ ಪಾಲಿಕಿಯಲ್ಲಿ ದೇವಿಯ ಉತ್ಸವಮೂರ್ತಿ ಇಟ್ಟುಕೊಂಡು ಮೆರವಣಿಗೆಯಲ್ಲಿ ಊರಲ್ಲಿ ಬರುವುದು. ಭಕ್ತರು ತಮ್ಮ ಮನೆಯ ಮುಂದೆ ಪಾಲಿಕಿ ಬಂದಾಗ ದೇವಿಗೆ ಉಡಿತುಂಬುತ್ತಾರೆ. ವಾಲ್ಮೀಕಿ ಕುಲದ ಪೂಜಾರಿಗಳೆ ಪಾಲಿಕಿ ಹೊರುವುದು. ಸಂಜೆ ೪ ಗಂಟೆಯವರೆಗೆ ಅಕ್ಕಪಕ್ಕದ ಹಳ್ಳಿಗಳಿಂದ ಬಂದ ಜನ, ಬೇಡಿಕೊಂಡವರು ದೀಡನಮಸ್ಕಾರ ಹಾಕುತ್ತಾರೆ. ತಾಯಿ ಕರ್ಪೂರ ಮಾಡಿಸುತ್ತಾರೆ. 'ಬಾನ', 'ಗಂಡಾರತಿ' ಕೊಡುವ ಕೆಲಸ ರಾತ್ರಿ

೯ರ ವರೆಗೂ ಚಾಲೂ ಇರುತ್ತದೆ. ಕಣಕದ ಆರತಿ ಮಾಡಿ, ದೀಪವಿಟ್ಟುಕೊಂಡು ಗಂಡಸರು ಅದನ್ನು ತಲೆಯ ಮೇಲೆ ಹೊತ್ತು ('ಗಂಡಾರತಿ') ಗುಡಿಗೆ ಐದು ಸುತ್ತು ಪ್ರದಕ್ಷಿಣೆ ಬರುತ್ತಾರೆ. ರಾತ್ರಿ ಊರಲ್ಲಿ ನಾಟಕ ಪ್ರದರ್ಶನ.

ಮರುದಿನದ ವಿಶೇಷ ಕಾರ್ಯಕ್ರಮವೆಂದರೆ ಗೊಲ್ಲರು ಹಾಲುಗಂಬ ಏರುವುದು. ಊರೊಳಗಿಂದ ಮೆರವಣಿಗೆಯಲ್ಲಿ ಹಗ್ಗವನ್ನು ಗುಡಿಗೆ ತರುತ್ತಾರೆ. ಮಧ್ಯಾಹ್ನ ಒಂದು ಗಂಟೆಗೆ ಟಗರು ಬಲಿ. ದೈವದವರೆಲ್ಲ ಸೇರಿ ಅಂಗಳದಲ್ಲಿ ೯೦' ಎತ್ತರದ ಹಾಲುಗಂಬ ನಿಲ್ಲಿಸುವುದು. ತಗ್ಗು ತಗೆದು ಹುಗಿದು ಹಗ್ಗ ಕಟ್ಟಿ ನಿಲ್ಲಿಸುತ್ತಾರೆ. ಹಗ್ಗದ ಆಧಾರದಿಂದ ಬಡಿಗೇರವನು ಕಂಬದ ತುದಿಗೇರಿ ಸುರಮ, ಒಳ್ಳೆಣ್ಣೆ, ರಾಳ, ಬಾಳೆಹಣ್ಣು, ಲೋಳಸರಗಳನ್ನು ಬೆರೆಸಿ ಮಾಡಿದ ರಸಾಯನವನ್ನು ಕಂಬಕ್ಕೆ ಚನ್ನಾಗಿ ಮೆತ್ತುವಂತೆ ಸುರಿಯುತ್ತಾನೆ. ಈ ರಸಾಯನವನ್ನು ಹಂಡೆಯಲ್ಲಿ ಕಲಸಿಟ್ಟು ಕೊಂಡಿರುತ್ತಾರೆ. ಕಬ್ಬರಗಿಯಿಂದ ೧೦ ಕಿಲೋಮೀಟರು ಅಂತರದಲ್ಲಿರುವ ಮನ್ನೇರಾಳು, ಮಾನುಟಗಿ, ಗುಡದೂರುಕಲ್ಲಿನ ಸುಮಾರು ೬೦ ಜನ ಗೊಲ್ಲಯುವಕರು ಧೋತರು, ಬನಿಯನ್ನು ಮಾತ್ರ ಉಟ್ಟು ಎರಡು ಗುಂಪುಗಳಾಗಿ ಪೈಪೋಟಿಯಿಂದ ಕಂಬವೇರುತ್ತಾರೆ. ಜನ ಉಧೋ ಉಧೋ ಎಂದು ಕೂಗುತ್ತಾರೆ. ಯಾವ ತಂಡದವರು ಕಂಬದ ತುದಿಗೆ ಕೂತ ಬಡಿಗೇರವನ ಹತ್ತಿರದ ಕೊಬ್ಬರಿಬಟ್ಟಲ ಹೂವಿನಹಾರ ಮುಟ್ಟುವರೊ ಅವರು ಗೆದ್ದಂತೆ. ಮುಟ್ಟಿದವನಿಗೆ ಕಬ್ಬರಗಿ ದೈವದವರು ಧೋತರ, ಶರ್ಟ, ಪಟಗಾ ಕಾಣಿಕೆ ನೀಡುತ್ತಾರೆ. ಗೊಲ್ಲರು ಬಡಿಗೇರವನಿಗೆ ಕುರಿಮರಿ ಖುಷಿ ಕೊಡುತ್ತಾರೆ. ಕಬ್ಬರಗಿಯಲ್ಲಿ ಗೊಲ್ಲ ಜಾತಿ ಜನರಿಲ್ಲ. ವಾಲ್ಮೀಕಿ ಮತ್ತು ಕುರುಬರ ಸಂಖ್ಯೆ ಹೆಚ್ಚು. ಇತರ ಜಾತಿಯವರೆಂದರೆ ಬ್ರಾಹ್ಮಣರು (೫ ಮನೆ) ಲಿಂಗಾಯತರು (೬ ಮನೆ) ಮುಸ್ಲಿಂ (೧೦), ಮಾದಿಗರು, ಬಜಂತ್ರಿಗಳು ಮುಂತಾಗಿ ೧೫೦೦ ಮನೆಗಳಿವೆ. ಅಂದು ರಾತ್ರಿ ಮನರಂಜನಾ ಕಾರ್ಯಕ್ರಮಗಳಿರುತ್ತವೆ. ಮರುದಿನ ಕಲ್ಲು ಎತ್ತುವ, ಚೀಲ ಎತ್ತುವ ಶಕ್ತಿಪ್ರದರ್ಶನ. ಗೊಲ್ಲರೇ ಏಕೆ ಕಂಬ ಏರಬೇಕು ಎಂದು ಕೇಳಿದರೆ ಮಾಸ್ತೆಮ್ಮ ಗೊಲ್ಲರವಳು ಎಂದು ಒಬ್ಬರು ಹೇಳಿದರು. ಆದರೆ ಪೂಜಾರಿ ಮನೆತನದ ಹಿರಿಯರೊಬ್ಬರು (ಬೇಡರು) ಆಕೆ ತಮ್ಮ ಕುಲದವಳೆಂದು ಸಾಧಿಸಲು ಕತೆಯೊಂದನ್ನು ಹೇಳಿದರು. (ಅಪ್ರಸ್ತುತವೆಂದು ಕೈಬಿಟ್ಟಿದೆ).


ಪೂಜಾರಿಗಳು ಕೆಲವು ನಿಷೇಧಗಳನ್ನು ಅನುಸರಿಸುತ್ತಾರೆ. ಗಿಣ್ಣ ಊಟ ಮಾಡುವಂತಿಲ್ಲ. ಮಕ್ಕಳಿಗೆ ಹೆಜ್ಜೆ ಡಾಬು ಹಾಕುವಂತಿಲ್ಲ. ಎತ್ತಿನ ಕೊರಳಲ್ಲಿ ಜಂಗು ಕಟ್ಟುವಂತಿಲ್ಲ. ಮಕ್ಕಳಿಗೆ 'ಮಾಸ್ತೆಮ್ಮ' ಎಂಬ ಹೆಸರಿಡುತ್ತಾರೆ.

ಊರಿನ ಜನ ಎಮ್ಮೆ, ಆವು ಈದಾಗ ದೇವಿಗೆ ಮೀಸಲು ಹಾಲು ಅರ್ಪಿಸುತ್ತಾರೆ. ಪ್ರತಿ ಶುಕ್ರವಾರ ಕೇಳಿಕೆ ಹೇಳಿಕೆಗೆಂದು ಜನ ಹೆಚ್ಚು ಸಂಖ್ಯೆಯಲ್ಲಿ ಗುಡಿಗೆ ಬರುತ್ತಾರೆ. ಅಮ್ಮ ಪೂಜಾರಿಯ ಮೈಯ್ಯಲ್ಲಿ ಬರುವಳೆಂದು ನಂಬಲಾಗಿದೆ.

ಪ್ರತಿ ವರ್ಷ ಶ್ರಾವಣದ ಕಡೆ ಸೋಮವಾರ ದೇವಿಯನ್ನು ಪಾಲಿಕಿಯಲ್ಲಿ ಮೆರವಣಿಗೆ

ಬಾಜಾ ಬಜಂತ್ರಿಯೊಂದಿಗೆ ಕಪಿಲಮುನಿ ಗುಡ್ಡಕ್ಕೆ ಒಯ್ಯುತ್ತಾರೆ. ರೈತರು ಬುತ್ತಿಕಟ್ಟಿಕೊಂಡು ಜತೆಗೆ ಹೋಗುತ್ತಾರೆ. ಅಲ್ಲಿ ಗುಡಿಗೆ ಹೋಗಿ ಸ್ನಾನಮಾಡಿ ಊಟ ಮಾಡಿ ಸಂಜೆ ಹಿಂದಿರುಗುತ್ತಾರೆ. ಯುಗಾದಿ ಪಾಡ್ಯದಂದು ಪೂಜಾರಿ ಸಮೇತ ಹಲವರು ಕಪಿಲಮುನಿಗೆ ಹೋಗಿ ೫ ಕೊಡ ನೀರು ತಂದು ದೇವಿಗೆ ಸ್ನಾನ ಮಾಡಿಸಿ ಪೂಜಿಸುತ್ತಾರೆ. ಇಂಥ ಹಲವಾರು ವಿಧಿಯಾಚರಣೆಗಳು ಈ ದೇವಿಗೆ ಸಂಬಂಧಿಸಿವೆ.


●



ಪಂಪಾಪತಿ, ಹಿರೇಜಂತಕಲ್ಲು




ಮಹಾಮಾಯಿ ಉಚ್ಚಾಯ (ಉತ್ಸವ), ಕುಕನೂರು



'ದಶಮಿ ದಿಂಡು', ಕುಕನೂರು




ಹಂಪಮ್ಮ, ಹಿರೇಜಂತಕಲ್ಲು




'ಕನಕಗಿರಿ' ಕನಕರಾಯನ ತೇರು



'ಕುಮ್ಮಟ'ದ ಕುಮಾರರಾಮನ ಜಾತ್ರೆ



'ಕುದರಿಮೋತಿ'ಯ ಮೊಹರಂ



ರಥ, ಅಪೂರ್ವ ಮಾದರಿ



ಹುಲಿಗೆಮ್ಮನ ಜಾತ್ರೆ



‘ಕುಂಬಳಾವತಿ’ಯ ದ್ಯಾಮವ್ವ

ಗ್ರಾಮ ಸಂಸ್ಕೃತಿ ಮಾಲೆಯ ಒಂದು ಭಾಗವಾಗಿ ನಮ್ಮ ಗ್ರಾಮೀಣ ಸಾಮುದಾಯಿಕ ಬದುಕಿಗೆ ಚೇತನವನ್ನು, ಹೊಳಪನ್ನು ಮತ್ತು ಸಮೂಹಶೀಲವಾದ ಸೌಹಾರ್ದ ಜೀವನವನ್ನು ದರ್ಶನ ಮಾಡಿಸುವ ಗ್ರಾಮೀಣ ಜಾತ್ರೆಗಳ ಬಗೆಗಿನ ಅಧ್ಯಯನಗಳನ್ನು ಕೊಡಲಾಗುತ್ತಿದೆ. ಈಗ ಪ್ರಕಟವಾಗುತ್ತಿರುವ 'ಕೊಪ್ಪಳ ಜಿಲ್ಲೆಯ ಜಾತ್ರೆಗಳು' ಇಂತಹ ಒಂದು ಅತ್ಯುತ್ತಮ ಪ್ರಯತ್ನದ ಫಲವಾಗಿದೆ. ಇದರ ಲೇಖಕರಾದ ಪ್ರೊ.ಎಸ್.ಎಸ್. ಹಿರೇಮಠ ಅವರು ನಮ್ಮ ಗಂಭೀರ ಅಧ್ಯಯನಶೀಲ ಪ್ರಾಧ್ಯಾಪಕರಲ್ಲಿ ಮತ್ತು ಸಂಶೋಧಕರಲ್ಲಿ ಪ್ರಸಿದ್ಧ ಹೆಸರು. ಆಧುನಿಕ ಜ್ಞಾನ-ವಿಜ್ಞಾನಗಳ ಅಭ್ಯಾಸದೊಡನೆ ತಮ್ಮ ದೇಶೀಯ ಸಂಸ್ಕೃತಿಯ ಅಧ್ಯಯನವನ್ನು ವೈಜ್ಞಾನಿಕವಾಗಿ ಮೇಳೈಸಿಕೊಂಡು, ಅವುಗಳ ಫಲಿತವನ್ನು ಆಧುನಿಕ ದೃಷ್ಟಿಕೋನದಿಂದ ವಿಚಾರ ಮಾಡಬಲ್ಲ ಚಿಂತನಶೀಲರು. ಇವರ ಅಧ್ಯಯನ ವ್ಯಾಪ್ತಿ, ಸೂಕ್ಷ್ಮ ಒಳನೋಟಗಳು, ಸಂಶೋಧನೆಯ ವಿಶಿಷ್ಟತೆ ಮತ್ತು ನಿರೂಪಣೆಯ ಪಾರದರ್ಶಕತೆ ಈ ಕೃತಿಯಲ್ಲಿ ನಿಚ್ಚಳವಾಗಿ ಕಂಡುಬರುತ್ತವೆ ಮತ್ತು ಈ ರೀತಿಯ ಅಧ್ಯಯನಕ್ಕೆ ಅಚ್ಚುಕಟ್ಟಾದ ಭೂಮಿಕೆಯನ್ನು ಸಿದ್ಧಗೊಳಿಸುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು



ISBN 81-7713-045-5